
ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು

ಮಹಾದೇವ ಮಾ.ಜಗತಾಪ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು

ಮಹಾದೇವ ಮಾ.ಜಗತಾಪ

ಶುಭವಾಗಲಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

KARNATAKA JANAPADA CHITTARAGALU & SHILPAGALU
by : Mahadeva Maa. Jagataapa
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 93+v Price : Rs. 30=00 : 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಮೂವತ್ತು ರೂಪಾಯಿಗಳು

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಾಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

'ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ದತ್ತಿನಿಧಿ' ನೆರವಿನಿಂದ 'ಕರ್ನಾಟಕ ಜನಪದ ಚಿತ್ತಾರಗಳು ಮತ್ತು ಶಿಲ್ಪಗಳು' ಎಂಬ ಈ ಕೃತಿ ಪ್ರಕಟವಾಗಿದೆ. ದತ್ತಿ ದಾನಿಗಳಾದ ಶ್ರೀಮಠದ ಪೂಜ್ಯ ಸ್ವಾಮೀಜಿಯವರಿಗೆ ಪ್ರಣಾಮಗಳು. ಈ ಗ್ರಂಥವು ಕನ್ನಡ ಸಾಹಿತ್ಯ ಸಂಶೋಧನಾಸಕ್ತರಿಗೂ, ವಿದ್ಯಾರ್ಥಿಗಳಿಗೂ, ಅತ್ಯಂತ ಉಪಯುಕ್ತವಾಗಿದೆ. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ.

ಈ ಕೃತಿಯನ್ನು ಸಿದ್ಧಪಡಿಸಿರುವ ಶ್ರೀ ಮಹಾದೇವ ಮಾ. ಜಗತಾಪ ಅವರಿಗೆ ಧನ್ಯವಾದಗಳು. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಲೇಖಕರ ಮಾತು

ನಮ್ಮ ಭವ್ಯ ಭಾರತದಲ್ಲಿ ಭವ್ಯತೆ ಮೆರೆದ ನಮ್ಮ ಹಿರಿಯರಿಂದ ಅನೇಕ ರೀತಿಯ ಕಲಾಚಟುವಟಿಕೆ ನಡೆದಿವೆ. ಅದರಲ್ಲೂ ದಕ್ಷಿಣ ಭಾರತದ ಗಂಡು ಮೆಟ್ಟಿನ ಭೂಮಿ ಕನ್ನಡ ನಾಡಿನಲ್ಲಿ ಕೆಲವು ಜಾನಪದ ಲಲಿತಕಲಾ ಪಂಥಗಳು ಜೀವನದ ನಿಜವಾದ ತಿರುಳನ್ನೇ ಜನತೆಯ ಮುಂದಿಡುತ್ತವೆ.

ಪ್ರಸ್ತುತ ಕಿರು ಪುಸ್ತಕ 'ಕರ್ನಾಟಕದ ಜಾನಪದ ಚಿತ್ತಾರಗಳು ಹಾಗೂ ಶಿಲ್ಪಗಳು' ತಮ್ಮ ಕಲಾಪ್ರಜ್ಞೆಯ ಕ್ಷಿತಿಜವನ್ನೆ ದಾಟಲು ಪ್ರಯತ್ನಿಸಿದರೆ ನನ್ನ ಪ್ರಯತ್ನ ಸಾರ್ಥಕ ಈ ಜಾನಪದ ಚಿತ್ತಾರ ಶಿಲ್ಪಗಳು ಹೊಂದಿರುವ ಆಧ್ಯಾತ್ಮಿಕ ತಿರುಳು ರಚನಾ ಶೈಲಿ ಹಿರಿಯರಿಂದ ತಿಳಿದುಕೊಂಡು, ಪ್ರಾದೇಶಿಕ ಪ್ರಾತಿನಿಧಿಕ ಆಕರಗಳನ್ನು ಲೇಖನಗಳ ಮೂಲಕ ಅನೇಕ ಪತ್ರಿಕೆಗಳಿಗೆ ಕಳಿಸಿ; ಅವುಗಳಿಂದ ತಮ್ಮ ಕೈಸೇರುವ ಪ್ರಯತ್ನ ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ಪುಸ್ತಗ ಮಾಡುತ್ತಿರುವುದು ನಾಡಿನ ನರನಾಡಿಗಳ ಬಡಿತ ಹಾಗೂ ಓತಪ್ರೋತವಾಗಿ ಹರಿಯುವ ರಕ್ತದ ಒತ್ತಡದ ಪ್ರಖರ ಬೆಳಕನ್ನು ತೋರಿಸುವಂತಾಗಿದೆ. ನಾನು ಋಣಿಯಾಗಿದ್ದೇನೆ.

ಕೆಲ ಜಾನಪದ ಚಿತ್ತಾರಗಳನ್ನು ಮರುಪ್ರತಿಮಾಡಿ ಅದರ ಅಲಂಕಾರವನ್ನು ತಮಗೆ ತೋರ್ಪಡಿಸಲು ಪ್ರಯತ್ನ ಮಾಡಿದ್ದಾಗಿದೆ. ಸಮಾಜ ಸುಧಾರಣೆಯ ಸನಾತನ ಕಲಾ ಪಂಥಗಳು ಮುಂದಿನ ಪೀಳಿಗೆಯವರೆಗೆ ಹೊತ್ತೊಯ್ಯಲು ಈ ಕಿರು ಪುಸ್ತಕ ಸಹಾಯಕವಾಗಲಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಸದಸ್ಯರುಗಳ ದಿವ್ಯ ದೃಷ್ಟಿಗೆ ಅನೇಕ ನಮನಗಳು.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಶಿಲ್ಪಕಲಾ ಪ್ರಪಂಚದಲ್ಲಿ ಕೆಲ ಲೇಖನಗಳನ್ನು ಆಯ್ದು ಪ್ರಕಟಿಸಿ ಪ್ರೋತ್ಸಾಹಿಸಿದೇ ನನಗೆ ಸ್ಫೂರ್ತಿಯಾಗಿದೆ. ಶ್ರೀ ಶಿವಯೋಗೆಪ್ಪ ಮಲ್ಲಪ್ಪ ಮುರನಾಳ ಶಾಸ್ತ್ರಿಗಳು, ಶ್ರೀಮತಿ ಚೆನ್ನವ್ವಮ್ಮಾ ಬೂಗಾರ, ಸೀತಮ್ಮ ಹಂಚಾಟೆ, ಹಣಮವ್ವ ದಾಸರ ಅಂಬಿಗೇರ ಹೆಣ್ಣುಮಕ್ಕಳು, ನರಸಿಂಹರಾವ ಕಾರಕೂನ, ಶೇಷಪ್ಪ ದೇವಾಂಗಮಠ ಶಾಸ್ತ್ರಿಗಳು, ಕೋಟಿಕಲ್ಲ ನಿಂಗಪ್ಪ, ಪುಸಾರಾಮ ಬೆವಾಡಿ, ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೆಟ್ಟದ ಶ್ರೀ ಘನಶ್ಯಾಮದಾಸ ರಾಠಿ, ಪಕೀರಪ್ಪ ಹೆಬ್ಬಳಿ ಮುಂತಾದವರಿಂದ ಅನೇಕ ಸಲ ನನಗೆ ಮಾಹಿತಿ ಒದಗಿಸಿದ್ದಾರೆ. ನನ್ನ ಕಿರಿಕಿರಿಯನ್ನು ಸಹಿಸಿದ್ದಾರೆ. ಎಲ್ಲರಿಗೂ ಧನ್ಯವಾದಗಳು.

ಈ ಜಾನಪದ ಪಂಥಗಳೇ ಶಿಷ್ಟಪದ ಲಲಿತಕಲೆಗಳ ಜಗಲಿಗಳೆಂದು ಬೇರೆ ಹೇಳಬೇಕಾಗಿಲ್ಲ. ನನ್ನ ಚೊಚ್ಚಲ ಪುಸ್ತಕ 'ಕಸೂತಿ ಚಿತ್ರಕಲೆ' ಮರ್ಚಲ ಪುಸ್ತಕ ಕೃತಿ 'ಜಾನಪದ ಶಿಲ್ಪ ಹಾಗೂ ಚಿತ್ತಾರಗಳು' ಆಗಿದೆ.

ಮಹಾದೇವ ಮಾ. ಜಗತಾಪ

ಅನುಕ್ರಮಣಿಕೆ

****

ಗುಳೇದಗುಡ್ಡದ ಭಿತ್ತಿ ಚಿತ್ರಗಳು



ಈ ಪೃಥ್ವಿಯ ಮೇಲೆ ಸಕಲಪ್ರಾಣಿ, ಜೀವಿಗಳಲ್ಲಿ ಮನುಷ್ಯ ಜೀವಿ ಒಂದು ವಿಶೇಷವಾದ ಜೀವಿ ಎಂಬುದಾಗಿ ಮಾನವಕುಲ ತೋರುತ್ತಾ ಬಂದಿದೆ. ಉತ್ತರ ಕರ್ನಾಟಕದ ಕೆಲಭಾಗಗಳಲ್ಲಿ ಸೂಕ್ಷ್ಮ ಶಿಲಾಯುಗದ, ಬೃಹತ್ ಶಿಲಾಯುಗದ ಹಾಗೂ ಐತಿಹಾಸಿಕ ಅವಧಿಗಳಲ್ಲಿ ಕಲಾ ಚಟುವಟಿಕೆ ಬೆಳೆದಿರುವುದನ್ನು ಡಾ. ಶ್ರೀ.ಸುಂದರ ಅವರು ಗುರುತಿಸಿದ್ದಾರೆ.

ಪ್ರಾಗೈತಿಹಾಸಿಕ ಹಾಗೂ ಬೃಹತ್ ಶಿಲಾಯುಗದ ಕಾಲದಲ್ಲಿ ನೈಸರ್ಗಿಕ ಗವಿಯೊಳಗೆ ನಿರ್ಮಾಣವಾದ ಕಲ್ಲಾಸರೆಯ ಚಿತ್ರಗಳು; ಗಟ್ಟಿಗಲ್ಲಿನ ಮೇಲೆ ಕಬ್ಬಿಣದ ಉಳಿ ಅಥವಾ ಗಟ್ಟಿಗಲ್ಲಿನಿಂದ ಕುಟ್ಟಿ ಕುಟ್ಟಿ ಮಾಡಿದ ಗೀರು ಚಿತ್ತಾರಗಳು, ಜಾನಪದ ಜಾಡಿನ ಚಿತ್ರಗಳಾದರೆ ಇತಿಹಾಸಕುಲದಲ್ಲಿ ಒಂದೊಂದು ಶೈಲಿಯ ಚಿತ್ರ ಬಿಡಿಸುವ ಪಂಥಗಳು ಶಿಷ್ಟ ಸಂಪ್ರದಾಯವಾಗಿ ಬೆಳೆದು ಬಂದವು. ಆದರೆ (ಶಿಷ್ಟಕ್ಕೆ ಜಾನಪದವೇ ಮೂಲ). 'ಶಿಷ್ಟ ಶೈಲಿಗೆ ಜಾನಪದವೇ ಜಗಲಿ' ಎಂಬುದನ್ನು ಮರೆಯುವ ಹಾಗಿಲ್ಲ. ದಕ್ಷಿಣಭಾರತದಲ್ಲಿಯೇ ಕರ್ನಾಟಕದ ಶೈಲಿ ದಕ್ಷಿಣ ಶೈಲಿ ಎಂದೇ ಹೆಸರಾಗಿದೆ. ಆಯಾಮ(ಒನ್ ಡೈಮೆನ್‌ಶನ್) ಅಥವಾ ದ್ವಿ ಆಯಾಮ (ಟು ಡೈಮೆನ್‌ಶೆನ್) ಬಣ್ಣ ಲೇಪಿಸಿ ನೀಟಾಗಿ ಸೂಕ್ಷ್ಮವಾಗಿ ಹೊರರೇಖೆ ಹಾಕಿ ಅಲಂಕಾರಿಕ ಶೈಲಿಯಲ್ಲಿ ಪೂರ್ತಿಗೊಳ್ಳುವ ಚಿತ್ರಗಳು ಶ್ರೀಸಾಮಾನ್ಯನಿಂದ ನೋಡಿಸಿಕೊಳ್ಳುತ್ತದೆ. ನೋಡುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತವೆ. ಚಿತ್ರಕರು ಆಧ್ಯಾತ್ಮವನ್ನು ಬೋಧಿಸಿ ಮಾನವನ ವಿಕಾರಗಳನ್ನು ದೂರ ಮಾಡಿ ಶಾಂತಿ ಸ್ಥಾಪಿಸುತ್ತಿವೆ.

ಕರ್ನಾಟಕದ ಉತ್ತರ ಭಾಗದಲ್ಲಿರುವ ಬಾದಾಮಿ ತಾಲ್ಲೂಕಿನ ಗುಳೇದಗುಡ್ಡದಲ್ಲಿ ಹಂಪೆ, ಮೈಸೂರಿನ ಮೇಲ್ಮಹಡಿಯ, ನರಗುಂದದ ವಾಡೆದ ಮೇಲ್ಮಹಡಿಯ ಚಿತ್ರಕೃತಿಗಳನ್ನೇ ಹೋಲುವ ಗೋಡೆಯ ಮೇಲಿನ ಚಿತ್ರಗಳು ನಗರದ ಮಧ್ಯದಲ್ಲಿರುವ ಶ್ರೀ ಶೇಖರಪ್ಪಾ, ಶಂಕ್ರಪ್ಪಾ, ಹೊಸಮನಿಗೌಡ್ರ ಎಂಬವರ ಮನೆಯ ಮೇಲ್ಮಹಡಿಯ ಗೋಡೆಗಳ ಮೇಲೆ ಕಾಣಸಿಗುತ್ತವೆ. ಇವರ ಅಜ್ಜ ನಾಗಣೆಪ್ಪಾ ಅವರ ಹೇಳಿಕೆಯ ಪ್ರಕಾರ ಪ್ರಾಯಃ ಎರಡು ಶತಮಾನದಷ್ಟು ಹಳೆಯ ಚಿತ್ರಗಳು ಇವಾಗಿವೆ. ಆದರೆ ಸದ್ಯ ಒಂದು ಗೋಡೆಯ

ಮೇಲಿನ ಅಲ್ಪ ಸ್ವಲ್ಪ ಕಾಣುವ ಚಿತ್ರಗಳನ್ನು ಮಾತ್ರ ನೋಡಬಹುದು. ಉಳಿದ ಮೂರು ಗೋಡೆಗಳ ಮೇಲಿನ ಚಿತ್ರಗಳನ್ನು ಮದುವೆಯ ಸಮಾರಂಭದಲ್ಲಿ ಗೋಡೆಯ ಗಚ್ಚನ್ನು ಕೆತ್ತಿ ತೆಗೆದು ಸುಣ್ಣ ಸಾರಿಸಲಾಗಿದೆ. ಪದ್ಯ ಕಾಣುತ್ತಿರುವ ಚಿತ್ರಕೃತಿಗಳು ಎಂದು ಮಾಯವಾಗುತ್ತಿವೆಯೋ ಗೊತ್ತಿಲ್ಲ. ಹದಿನಾಲ್ಕು ವರ್ಷಗಳ ಹಿಂದೆಯೇ ನಾನು ಎರಡು ಚಿತ್ರಕೃತಿಗಳನ್ನು ಪೋಸ್ಟರ್ ಬಣ್ಣಗಳಿಂದ ಮರುಪ್ರತಿ ಮಾಡಿಕೊಂಡಿರುವೆ. ಚಿತ್ರ ನಂ.೧ ಹಾಗೂ ಚಿತ್ರ ನಂ.೨ ಎಂದು ಇಲ್ಲಿ ತೋರಿಸಲಾಗಿದೆ. ಇನ್ನುಳಿದ ಚಿತ್ರಗಳನ್ನು ಕ್ಯಾಮೆರಾ ಮಾಧ್ಯಮದಿಂದ ಸೆರೆಹಿಡಿಯಲಾಗಿದೆ.

ಚಿತ್ರಗಳು ಧಾರ್ಮಿಕ ಗ್ರಂಥಗಳ ತಳಹದಿಯ ಮೇಲೆ ರಚಿಸಲ್ಪಟ್ಟಿವೆ. ಮಯೂರರೂಢಳಾದ ವೀಣಾಧಾರಿ ಸರಸ್ವತಿ; ಗುಡಿಯಲ್ಲಿ ಪ್ರತಿಷ್ಠಿತ ಆಂಜನೇಯ; ರಾಕ್ಷಸರ ಸಂಹಾರ ಮಾಡುವ ದೇವಿ; ರಾಕ್ಷಸನನ್ನು ವಧೆ ಮಾಡುತ್ತಿರುವ ಹನುಮಂತ; ಶ್ರೀಕೃಷ್ಣಲೀಲೆಯ ಚಿತ್ರಗಳು; ಶೇಷಶಯನ ವಿಷ್ಣು ಹಾಗೂ ಲಕ್ಷ್ಮಿ; ಗಣಪತಿ ನಾಗಗಳನ್ನು ಹಿಡಿದಿರುವ ಗರುಡ ಇವುಗಳಲ್ಲಿ ಕೆಲವು ಚಿತ್ರಗಳನ್ನು ಇಂದು ಸಹ ಸ್ಪಷ್ಟವಾಗಿ ನೋಡಬಹುದು. ಪ್ರತಿ ಚಿತ್ರಕ್ಕೂ ಬಾರ್ಡರ್ ಹಾಕಲಾಗಿದೆ. ಸೂಕ್ಷ್ಮ ಕಪ್ಪು ವರ್ಣದ ರೇಖೆಯಿಂದ ಹೊರರೇಖೆಗಳನ್ನು ಹಾಕಲಾಗಿದೆ. ಬಾರ್ಡರ್‌ಗಳಲ್ಲಿ ಸುಂದರ ನಕ್ಷೆಗಳನ್ನು ಹಾಕಲಾಗಿದೆ. ಚಿತ್ರದಿಂದ ಚಿತ್ರಕ್ಕೆ ಮಧ್ಯದಲ್ಲಿ ಬರುವ ಸ್ಥಳವನ್ನು ಹೂದಾನಿ ಎಲೆಬಳ್ಳಿ ನಕ್ಷೆಗಳಿಂದ ಮತ್ತು ಆನೆ ಸವಾರಿ; ಕುದುರೆ ಸವಾರಿ; ನಂದಿಸವಾರಿ ಅಲ್ಲದೆ ಅನೇಕ ಕಾಲ್ಪನಿಕ ಪ್ರಾಣಿಗಳ ಮೇಲೆ ಸವಾರಿ ಮಾಡುವ ಚಿಕ್ಕಗಾತ್ರದ ಚಿಕಣಿ ಚಿತ್ರಗಳನ್ನು ನೋಡುತ್ತಾ ನಿಂತರೆ, ಪ್ರಾಚೀನ ಹಸ್ತಗ್ರಂಥಗಳ ಚಿತ್ರಕೃತಿಗಳನ್ನು ನೋಡಿದಷ್ಟು ಆನಂದವಾಗುತ್ತದೆ.

ಮನೆಯ ಮೇಲ್ಮಹಡಿಯ ಗಾತ್ರ ಅಂದಾಜು ೧೨ x ೨೨ ಫೂಟುಗಳು. ಅದಕ್ಕೆ ಚಿಕ್ಕ ಚಿಕ್ಕ ಗಾತ್ರದ ಸುಂದರ ಕಿಟಕಿಗಳಿವೆ. ಅವುಗಳಿಂದಲೇ ಪ್ರಕಾಶ ಚಿತ್ರ ಕೃತಿಗಳ ಮೇಲೆ ಬೀಳುವಂತೆ ಇವೆ. ಈ ಕಲಾ ಕೋಣೆಗೆ ಪ್ರವೇಶಿಸಲು ಪಶ್ಚಿಮಕ್ಕೆ ಚಿಕ್ಕದಾದ ಬಾಗಿಲು, ಈ ಬಾಗಿಲಿಗೆ ಬರಬೇಕಾದರೆ ಬಾದಾಮಿಯ ಮೇಣಬಸದಿಗಳ ಮೆಟ್ಟಿಲುಗಳನ್ನು ಹತ್ತುವಂತೆ ದೊಡ್ಡ ದೊಡ್ಡ ಮೆಟ್ಟಿಲುಗಳನ್ನು ಹತ್ತಿ ಒಳಗೆ ಪ್ರವೇಶಿಸಬೇಕು. ಚಿತ್ರರಚನಾತಂತ್ರ ಪುರಾತನದಂತಿದೆ. ಗೋಡೆಗೆ ಬಿಳಿ ನಯವಾದ ಗಾರೆ (ಗಚ್ಚು) ಲೇಪಿಸಿ, ಅದರ ಮೇಲೆ ಕಂದಿ ಬಣ್ಣದಿಂದ ಚಿತ್ರಗಳನ್ನು ರಚಿಸಿಕೊಂಡು, ಒಂದೇ ಆಯಾಮ ಕಾಣುವಂತೆ ಬಣ್ಣ ಹಚ್ಚಿದಂತೆ ಕಾಣುತ್ತದೆ. ಪ್ರತಿ ಆಕೃತಿಗೂ ಬಣ್ಣ ಲೇಪನದ ನಂತರ ಕೆಂಪು ಮಿಶ್ರಿತ ಕಪ್ಪು ಬಣ್ಣದಿಂದ ಹೊರ ರೇಖೆಗಳನ್ನು ಹಾಕಿದ್ದಾರೆ. ಅಲಂಕಾರಿಕ ರೇಖಾವಿನ್ಯಾಸಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಪ್ರಮಾಣ ಬದ್ಧತೆಯಲ್ಲಿ ಕೊರತೆ ಕಂಡುಬಂದರೂ ಕಲಾಕೃತಿಯ ಆನಂದ ಅನುಭವಿಸುವಾಗ ಗೊತ್ತಾಗುವುದಿಲ್ಲ. ಪ್ರತಿ ಚಿತ್ರದಲ್ಲಿಯು ಆಭರಣಗಳನ್ನು ಹೇರಳವಾಗಿ ತೊಡಿಸಿದ್ದಾರೆ. ಅವುಗಳಲ್ಲಿ ಸೂಕ್ಷ್ಮವಾದ ನಕ್ಷೆಗಳಿವೆ. ಚಿತ್ರಕೃತಿಗಳಲ್ಲಿ ಎದ್ದು ಕಾಣುವ ವಿಶೇಷತೆ ಎಂದರೆ ಪ್ರತಿ ಚಿತ್ರದ ಮಧ್ಯ ಅಲ್ಲಲ್ಲಿ ಹೂವು ಎಲೆಗಳ ಅಲಂಕಾರಿಕ ರೂಪಗಳನ್ನು ಸಂಯೋಜಿಸಲಾಗಿದೆ. ಪ್ರತಿ ಚಿತ್ರಗಳ ಅಂಚನ್ನು ಕೆಂಪು, ನೀಲಿ ಬಣ್ಣಗಳಿಂದ ಬಾರ್ಡರ್ ಹಾಕಿ ಮಧ್ಯದಲ್ಲಿ ಸೂಕ್ಷ್ಮ ಹೂವು ಎಲೆಗಳ ನಕ್ಷೆಗಳನ್ನು ಹಾಕಿದ್ದಾರೆ. ಆದರೆ ಯಾವ ಚಿತ್ರಕ್ಕೂ ಕಲಾವಿದನ ಹೆಸರಾಗಲಿ ರುಜುವಾಗಲಿ ಕಂಡುಬರುವುದಿಲ್ಲ. ಅಲೌಕಿಕ ಆಧ್ಯಾತ್ಮವಾದಿ

ಚಿತ್ರಕಲಾವಿದನಾಗಿರಬಹುದು. ಈ ಚಿತ್ರಗಳು ಮಬ್ಬಾಗಿರುವುದನ್ನು ಕಂಡರೆ ಚಿತ್ರಗಳ ರಕ್ಷಣೆಗಾಗಿ ಅವುಗಳ ಮೇಲೆ ಪಾರದರ್ಶಕ ತೈಲ ಲೇಪಿಸಿದಂತೆ ಕಾಣುತ್ತದೆ.

ಚಿತ್ರ ನಂ.೧ ರ ಗಣಪತಿಯ ಚಿತ್ರವನ್ನು ನೋಡಿದರೆ, ಅದರಲ್ಲಿಯ ಆಭರಣಗಳಾದ ಕಿರೀಟ, ತೋಳಬಂದ, ಕೈಯಾಭರಣಗಳು, ಕಂಠಾಭರಣಗಳು ತೀಕ್ಷ್ಣ ಹಳದಿ ಬಣ್ಣಗಳಿಂದ ರಚಿಸಿ ಹಾಕಿದೆ. ಸೂಕ್ಷ್ಮತೆಯ ನಕ್ಷಾರೇಖೆಗಳು ಅದರಲ್ಲಿವೆ. ವಸ್ತ್ರಗಳಲ್ಲಿ ಶಾಂತವರ್ಣ, ಗಣಪತಿಗೆ ಪೇಶ್ವೆ ಮನೆತನದ ಜಾಕೀಟಿನಂತೆ ವಸ್ತ್ರ ತೊಡಿಸಿದ್ದು ಆ ವಸ್ತ್ರಗಳ ಮೇಲೆ ನಿರ್ಮಿಸಿದ ಅತೀ ಸೂಕ್ಷ್ಮ ವರ್ಣ ಬಿಂದುಗಳು, ವಸ್ತ್ರದ ಅಂಚಿನಲ್ಲಿ ಬಳಸಿದ ಸುವರ್ಣದ ಸುನೇರಿ ಬಣ್ಣ, ಹಾಗೂ ಕೈಕಾಲು ಬೆರಳು, ಕಿವಿ, ಕಣ್ಣುಗಳಿಂದ ಅಲಂಕಾರ ಶೈಲಿಯ ಕಲ್ಪನೆ ಬರುತ್ತದೆ. ಅಕ್ಕ ಪಕ್ಕದಲ್ಲಿ ಒಂದೊಂದು ಟೆಂಗಿನ ಗಿಡಗಳು ಹಾಗೂ ಮೋದಕಧಾರಿಮೂಷಕ, ಪೀತಾಂಬರವಸ್ತ್ರದ ಮೇಲೆ ಸೂಕ್ಷ್ಮ ಅಲಂಕಾರಿಕ ರೇಖೆಗಳು, ಪೀಠದ ಮೇಲೆ ಅನೇಕ ಸೂಕ್ಷ್ಮ ನಕ್ಷೆಗಳನ್ನು ಸುಂದರ ವರ್ಣ ಸಂಯೋಜನೆಯೊಂದಿಗೆ ಗಣಪತಿಯ ಒಂದು ಕೈಯಲ್ಲಿ ಶಿವಲಿಂಗವಿರುವುದು ಕಂಡುಬರುತ್ತದೆ. ಚಿತ್ರದ ಗಾತ್ರ ಅಂದಾಜು ಎರಡು ಫೂಟು ಚೌರಸಾಕಾರದಲ್ಲಿದೆ.

ಭಾಗವತ ಪುರಾಣದ ಶ್ರೀ ಕೃಷ್ಣಲೀಲೆಯ ಚಿತ್ರಗಳಲ್ಲಿ ಗೋಪಾಲ ಶ್ರೀ ಕೃಷ್ಣನ ಅಂಗಾಲು ನೆಕ್ಕುತ್ತಿರುವ ಶ್ವೇತ ಬಣ್ಣದ ಆಕಳು, ಅಕ್ಕ ಪಕ್ಕದಲ್ಲಿ ಸಖಿಯರು ನಿಂತಿದ್ದಾರೆ. ಸಖಿಯರ ವಸ್ತ್ರಗಳಲ್ಲಿ ಅತೀ ಸೂಕ್ಷ್ಮವಾದ ನಕ್ಷೆಗಳು ಹಾಗೂ ವರ್ಣ ಬಿಂದುಗಳು ಹಾಗೂ ಕೇಶಾಲಂಕಾರ ಅಲಂಕಾರಾತ್ಮಕವಾದ ಅವಯವಗಳು; ವಿಶೇಷ ರೂಪದಲ್ಲಿ ತೊಟ್ಟುಕೊಂಡಂಥ ಕಚ್ಚೆ ಸೀರೆಯನ್ನು ನೋಡಬಹುದು. ಚಿತ್ರ ನಂ.೨ ರಲ್ಲಿ ಪ್ರಣಯ ಸಂದರ್ಭ ಅಲಂಕಾರ ಶೈಲಿಯಲ್ಲಿ ನೋಡಬಹುದು. ಚಿತ್ರ ನಂ.೨ ಕ್ಕೆ ಕಮಾನಿನ ಆಕಾರ ಹಾಕಿ ವಿಶೇಷ ಭಿತ್ತಿಚಿತ್ರ ಎನ್ನುವಂತೆ ಮಾಡಿದ್ದಾರೆ. ಆ ಕಮಾನಿನ ಮೂಲೆಯಲ್ಲಿ ತೀಕ್ಷ್ಣವಾದ ಸುಂದರ ಅಲಂಕಾರಿಕ ರೂಪಗಳನ್ನು ಒಂದೇ ಬಣ್ಣದಲ್ಲಿ ರಚಿಸಿದ್ದಾರೆ.

ಅನೇಕ ಹೆಡೆಗಳುಳ್ಳ ನಾಗ ಜಲದಲ್ಲಿ ದೀರ್ಘ ವೃತ್ತಾಕಾರದಲ್ಲಿ ಸುತ್ತಿಕೊಂಡಿರುವುದು ಅದಕ್ಕೆ ತಿಳಿಗೋದಿ ಬಣ್ಣ ಲೇಪಿಸಲಾಗಿದೆ. ಅದರ ಮೈಮೇಲಿನ ಸೂಕ್ಷ್ಮ ಚಿಕ್ಕೆಗಳನ್ನು ನೋಡಿದರೆ ವಾಸ್ತವಿಕ ಸರ್ಪದ ಕಲ್ಪನೆ ಬರುತ್ತದೆ. ಅದರ ಮೇಲೆ ವಿಷ್ಣು ಶಯನಾಸನದಲ್ಲಿದ್ದಾನೆ. ಪಾದದ ಹತ್ತಿರ ಲಕ್ಷ್ಮೀ- ವಿಷ್ಣುವಿನ ನಾಭಿಯಿಂದ ಹಸಿರು ಬಣ್ಣದ ದೇಟು ಅದರ ತುದಿಗೆ ಗುಲಾಬಿವರ್ಣದ ಕಮಲ, ಅದರಲ್ಲಿ ಬ್ರಹ್ಮದೇವನಿರುವುದು ಸುಂದರ ವರ್ಣಚಿತ್ರವಾಗಿದೆ. ನೀರಿಗೆ ಆಕಾಶಕ್ಕೆ ಉತ್ತಮ ವರ್ಣ ಸಂಯೋಜನೆಯಾಗಿದೆ.

ಹನುಮಂತನ ಮಹಿಮೆಯನ್ನು ತೋರುವಂತಿರುವ ಇನ್ನೊಂದು ಚಿತ್ರದಲ್ಲಿ ಒಬ್ಬ ಅರ್ಚಕರ ಎದುರುಗಡೆ ಏನೋ ಹೇಳುತ್ತಿರುವ ಒಬ್ಬಳು ತಾಯಿ ತನ್ನ ಮಗುವಿನೊಂದಿಗೆ ನಿಂತಿದ್ದಾಳೆ. ವಿಕಾರ ರೂಪದಲ್ಲಿ ತಲೆಗೂದಲುಗಳು, ಕಪ್ಪು ಮೈ ಬಣ್ಣವುಳ್ಳ ಒಬ್ಬ ರಾಕ್ಷಸ ತನ್ನ ವಿಕೃತ ಹೋರೆ ಹಲ್ಲುಗಳನ್ನು ಹಾಗೂ ಕಣ್ಣುಗಳನ್ನು ಹೊರತೆಗೆದು, ಖಡ್ಗ ಢಾಲುಧಾರಿಯಾಗಿ ಕೆಳಗೆ ಬಿದ್ದಿದ್ದಾನೆ. ಆ ರಾಕ್ಷಸನನ್ನು ಹನುಮಂತ ವಧೆ ಮಾಡುತ್ತಿರುವ ಚಿತ್ರ ನೋಡುಗರಿಗೆ ಏನೋ ಕಥೆ ಹೇಳುವಂತಿದೆ. ಹನುಮನಿಗೆ ಆಭರಣ ಅಲಂಕಾರ ಹಾಗೂ ಬಾಲಕ್ಕೆ ಪ್ರಾಣದೇವರಿಗೆ ಗಂಟೆಕಟ್ಟಿರುವಂತೆ ಗಂಟೆ ಇದೆ. ಹನುಮನ

ಮುಖದ ಕೆಲಭಾಗ ಕೆಂಪುವರ್ಣ ಲೇಪಿಸಲ್ಪಟ್ಟಿದೆ. ಈ ಕೆಂಪುವರ್ಣದ ಸಂಯೋಜನೆ ಆ ಹೆಣ್ಣುಮಗಳ ರವಿಕೆಗೂ ಹಾಗೂ ಹನುಮನ ಚಡ್ಡಿಗೂ ಆಗಿದೆ. ಈ ಚಿತ್ರದ ವಾದ್ಯ ಗಿಡಗಳನ್ನು ಹಾಗೂ ತೆಂಗಿನಗಿಡಗಳನ್ನು ಒಳ್ಳೆಯ ಅಲಂಕಾರಿಕ ರೀತಿಯಲ್ಲಿ ಸಂಯೋಜಿಸಲಾಗಿದೆ.

ಗರುಡನ ಚಿತ್ರದಲ್ಲಿ ಗರುಡ ತನ್ನ ಕೈಯಲ್ಲಿ ನಾಗಗಳನ್ನು ಹಿಡಿದಿದ್ದಾನೆ. ನಾಗಗಳು ಹೆಡೆ ಎತ್ತಿವೆ. ನಾಟ್ಯ ಭಂಗಿಯಲ್ಲಿರುವ ಗರುಡನ ಮೂಗು ಚೂಪಾಗಿದೆ. ಸುಂದರ ವರ್ಣಸಂಯೋಜನೆ, ಅಲಂಕಾರಿಕ ರೇಖೆಗಳಿಂದೊಡಗೂಡಿದೆ ಈ ಚಿತ್ರ.

ದೇವಿಯು ಕೋಣದ ಮೇಲೆ ಕುಳಿತುಕೊಂಡು ರಾಕ್ಷಸರ ಸಂಹಾರ ಮಾಡುತ್ತಿರುವ ಚಿತ್ರ ಚೆನ್ನಾಗಿ ಮೂಡಿ ಬಂದಿದೆ. ತೀಕ್ಷ್ಣ ರೇಖೆಗಳು, ದೇವಿಗೆ ಅನೇಕ ಕೈಗಳು, ರಾಕ್ಷಸರ ಭಯಾನಕ ಕೇಶಾಲಂಕಾರ ಹಾಗೂ ರಕ್ತ ಸಿಕ್ತನಾಗಿ ಬಿದ್ದ ರಾಕ್ಷಸರನ್ನು ನೋಡಿದರೆ ಕೆಟ್ಟದರ ಕೊನೆಗಾಣಿಸಲು ಒಂದು ಶಕ್ತಿ ಇದೆ ಎನ್ನುವುದನ್ನು ಈ ಚಿತ್ರ ತೋರಿಸುತ್ತದೆ.

ನವಿಲಿನ ಮೇಲೆ ಸರಸ್ವತಿ ವೀಣಾಧಾರಿಯಾಗಿ ಕುಳಿತಿರುವುದು ಒಳ್ಳೆಯ ಸಂಯೋಜನೆಯಾಗಿದೆ. ನವಿಲಿನ ಕಾಲು, ಗರಿ, ಬೆರಳುಗಳು ಹಾಗೂ ಚುಂಚ ಅಲಂಕಾರಿಕ ಶೈಲಿಯಲ್ಲಿವೆ. ದೇವಿ ಸರಸ್ವತಿ ಹಿಡಿದಿರುವ ವೀಣಾ ಜ್ಞಾನದ ಸಂಕೇತವಾಗಿದೆ. ಎಲ್ಲರಿಗೂ ಜ್ಞಾನ ಕೊಡುವುದಕ್ಕಾಗಿ ಹೊರಟ ಸರಸ್ವತಿಯ ವಸ್ತ್ರ ಶಾಂತ ತಿಳಿನೀಲಿಯದಾಗಿದೆ. ಸುಂದರ ಮುಕುಟವಿದೆ.

ಬೇಡಿದ್ದನ್ನು ಕೊಡುವ ಕಾಮಧೇನುವಿನ ಚಿತ್ರದಲ್ಲಿ ಸ್ತ್ರೀಮುಖ, ಆಕಳದೇಹ, ಸ್ತನಪಾನ ಮಾಡುತ್ತಿರುವ ಕರು, ಆಕಳಿಗೆ ಮೂರು ಬಾಲ, ಕುಣಿಯುತ್ತಿರುವ ಕರು, ಸುಂದರ ಹೆಣ್ಣಿನ ಮುಖ ಇದೆಲ್ಲವೂ ಒಂದು ಕಾಲ್ಪನಿಕ ಕಾಮಧೇನುವಿನ ಚಿತ್ರ ಇದಾಗಿದೆ. ಕಾಮಧೇನುವಿನ ಚಿತ್ರ ನೋಡಿದರೆ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ.

ಈ ಚಿತ್ರಕಲಾ ಮಹಲಿನ ಮೇಲ್ಛಾವಣಿಯ ಕಟ್ಟಿಗೆ ಹಲಗೆಗಳ ಮೇಲೆಯೂ ಇದೇ ಶೈಲಿಯಿಂದ ಬಿಡಿಸಲ್ಪಟ್ಟ ಚಿತ್ರಗಳಿದ್ದವಂತೆ. ಅವುಗಳು ಮಳೆ ನೀರಿನಿಂದ ಹಾಳಾದಾಗ ಅವುಗಳನ್ನು ತೆಗೆಸಿ ಬಿದಿರಿನಿಂದ ಮೇಲ್ಮುದ್ದಿಯನ್ನು ಹಾಕಿಸಲಾಗಿದೆ.

ತೂಗುಹಾಕುವ ಮದ್ರಾಸ ಗಾಜಿನ ಚಿತ್ರಗಳು:- ಇಲ್ಲಿನ ಕೆಲವು ಪ್ರತಿಷ್ಠಿತ ಮನೆಗಳಲ್ಲಿ ಗ್ಲಾಸ್ ಪೇಂಟಿಂಗ್ಸ್ ಕಂಡು ಬರುತ್ತವೆ. ಇವು ಬಹುಶ: ತಮಿಳ್ನಾಡಿನ ತಂಜಾವೂರು ಅಥವಾ ಮದ್ರಾಸ್‌ಗಳಿಂದ ಇಲ್ಲಿಗೆ ಶತಮಾನ ಪೂರ್ವವೇ ಆಗಮಿಸಿದೆ.

ಶ್ರೀ ಶಿವಲಿಂಗಪ್ಪಾ. ಲಿಂಗಪ್ಪಾ. ತಿಪ್ಪಾ, ಶ್ರೀ ಗೊಗ್ಗಲ, ಶ್ರೀ ವೀರಪ್ಪಾ. ವಿರುಪಾಕ್ಷಪ್ಪಾ. ಶೀಲವಂತರ, ಶ್ರೀ ಸಂಗಪ್ಪಾ. ಮುಪ್ಪಣ್ಣಾಪ್ಪಾ. ಶೀಲವಂತರ, ಶ್ರೀ ಈರಪ್ಪಾ ಬಸಲಿಂಗಪ್ಪಾ ಕರಡಿ, ಶ್ರೀ ಬಸವಪ್ರಭು ಗಂಗಾವತಿ, ಶ್ರೀ ಚಂದ್ರಶೇಖರಯ್ಯ ತಟ್ಟೀಮಠ, ಶ್ರೀ ಸೋಮಶೇಖರ ಭಾವಿ, ಶ್ರೀ ಫಕೀರಪ್ಪಾ ಪವಾರ, ಜಗದೀಶ ಗುಡಿಯ ಪೂಜಾರಿಗಳಾದ ಶ್ರೀ ಪುರೋಹಿತ ಎಂಬವರ ಮನೆಗಳಲ್ಲಿ ಗಾಜಿನ ಮೇಲೆ ಬಿಡಿಸಿದ ಸುಂದರ ಚಿತ್ರಕೃತಿಗಳು ಇಂದಿಗೂ ನೋಡಲು ಸಿಗುತ್ತವೆ. ಕೆಲವೊಂದು ಸಣ್ಣಗಾತ್ರದ ಪೇಂಟಿಂಗ್ಸ್‌ಗಳನ್ನು

ಶ್ರೀ ಕರಡಿ, ಶ್ರೀ ಭಾವಿ, ಶ್ರೀ ಗೊಗ್ಗಲಿ, ಶ್ರೀ ಗಂಗಾವತಿ ಮತ್ತು ದೊಡ್ಡಗಾತ್ರದ ಚಿತ್ರಕೃತಿಗಳನ್ನು ಶ್ರೀ ತಿಪ್ಪಾ ಅವರ ಮನೆಯಲ್ಲಿ ನೋಡಬಹುದು. ಬಂಗಾರ ಬಣ್ಣದ ದೊಡ್ಡ ಚೌಕಟ್ಟಿನಿಂದ ಅಲಂಕೃತಗೊಂಡ ಕೃತಿಗಳನ್ನು ಶ್ರೀ ತಟ್ಟಿಮಠರವರಲ್ಲಿ ನೋಡಲು ಸಿಗುತ್ತವೆ.

ಚಿತ್ರಕೃತಿಗಳ ನಿರ್ಮಾಣದ ಮಾಧ್ಯಮ ತೈಲ ಅಥವಾ ಜಲವರ್ಣವಾಗಿದೆ. ಚಿತ್ರಕೃತಿಗಳನ್ನು ಬೆಲ್ಜಿಯಂ ಗ್ಲಾಸುಗಳ ಮೇಲೆ ಬಿಡಿಸಿದ್ದಕ್ಕೆ ನಾಜೂಕಿನ ಚಿತ್ರಗಳೆಂದು ಹೇಳಬೇಕು. ಈ ಚಿತ್ರಗಳನ್ನು ಮಣಿ ಗಾತ್ರದಲ್ಲಿ ನೋಡಬಹುದು. ದೊಡ್ಡ ಗಾತ್ರ ಅಂದಾಜು ೩ x ೨ ಫೂಟು, ಮಧ್ಯಮ ೧೧ x ೭ ಹಾಗೂ ಚಿಕ್ಕ ಗಾತ್ರದವೆಂದರೆ ೧ x ೮ ಹೀಗೆ ಇವೆ. ಗಾಜಿನ ಹಿಂಬದಿಗೆ ಬಿಡಿಸಲ್ಪಟ್ಟ ರೇಖಾವಿನ್ಯಾಸ ಆಕರ್ಷಕವಾಗಿದೆ. ಗಾಜಿನಲ್ಲಿ ಎದುರಿಗೆ ಕಾಣುವಂತೆ ಹಿಂಬದಿಯಿಂದ ಚಿತ್ರಿಸಲಾಗಿದೆ. ಕಲಾವಿದನ ಕೈಚಳಕವಾಗಿದೆ.

ಚಿತ್ರಿಸಲ್ಪಟ್ಟ ವಿಷಯಗಳೆಂದರೆ ಕೃಷ್ಣಲೀಲೆ, ನಂದಿಯೊಂದಿಗೆ ಶಿವ, ಪಾರ್ವತಿ, ಗಣೇಶ ಹಾಗೂ ಸ್ತ್ರೀ ಪುರುಷರ ಭಾವಚಿತ್ರಗಳು. ನವಿಲು ಹಾಗೂ ಪುಷ್ಪಗಳೊಂದಿಗೆ ಸುಂದರಿಯರು, ಸಿತಾರ ಹಾಗೂ ವೀಣಾವಾದನವನ್ನು ಮಾಡುತ್ತಿರುವ ಸಂಗೀತಗಾರ್ತಿಯರು, ಸುಂದರ-ಸುಂದರಿಯ ಸಂಯೋಜನೆಯೊಂದು ನೋಡುಗರನ್ನು ಆಕರ್ಷಿಸದೇ ಬಿಡದು. ವಿಶೇಷ ಉಡುಪುಧಾರಿಯೊಬ್ಬ ಸುಂದರಿಯರೊಡನೆ ಸರಸ ಸಲ್ಲಾಪದಲ್ಲಿ ತೊಡಗಿದ್ದಾನೆ. ಇವುಗಳು ಶೃಂಗಾರ ಚಿತ್ರಗಳೆಂದು ಹೇಳಬಹುದು. ಇನ್ನುಳಿದ ಚಿತ್ರಗಳನ್ನು ಧಾರ್ಮಿಕ ಚಿತ್ರಗಳೆನ್ನಬಹುದು. ಈ ಕೃತಿಗಳಲ್ಲಿ ಬೆಳ್ಳಿ, ಬಂಗಾರದ ಆಭರಣಗಳ ಸ್ಥಾನದಲ್ಲಿ ಬೆಳ್ಳಿಬಂಗಾರದ ಬರಗ(ಅಂಶದ) ಹಾಳೆಯನ್ನೇ ಬಳಸಿದ್ದಾರೆ. ಅಕ್ಕ ಪಕ್ಕದಲ್ಲಿ ನಕ್ಷೆಗಳಲ್ಲಿಯು ಬರಗ ಬಳಸಿರುವುದರಿಂದ ಚಿತ್ರಗಳು ನೋಡಿಸಿಕೊಳ್ಳುತ್ತವೆ. ಎಲ್ಲ ಕೃತಿಗಳಿಗೂ ದಪ್ಪ ಕಟ್ಟಿಗೆಯ ಫ್ರೇಂ ಅಂದರೆ ಹಿಂದೆ ಕಟ್ಟಿಗೆಯ ಹಲಗೆ ಅಥವಾ ದಪ್ಪ ರಟ್ಟು ತಗಡನ್ನು ಚಿತ್ರಗಳ ರಕ್ಷಣೆಗಾಗಿ ಹಾಕಲಾಗಿದೆ. ಚಿತ್ರಕೃತಿಗಳಲ್ಲಿ ನೆರಳು ಬೆಳಕಿನ ಕಲ್ಪನೆಯನ್ನು ಸಹ ನೋಡಬಹುದು, ಈ ಚಿತ್ರಕೃತಿಗಳು ಭವ್ಯ ವಾಸ್ತುಶಿಲ್ಪಕ್ಕೆ ಹೊಳಪು ಕೊಡದೇ ಇರಲಾರವು.

ರಾಜಸ್ಥಾನಿ ಬಂಧುಗಳ ಮನೆಯಲ್ಲಿಯು ಕೈಯಿಂದ ಬಿಡಿಸಿದ ಧಾರ್ಮಿಕ ಚಿತ್ರಗಳು ಕಂಡು ಬರುತ್ತವೆ. ಶ್ರೀ ರಾಂ ದಯಾಳ್ ಮೋಹನಲಾಲ ಕಾಬರಾ ಇವರ ಮನೆಯಲ್ಲಿ 'ಅಳಂದ್ವಾರ್' ಎಂಬ ವಿಶಿಷ್ಟಾದ್ವೈತ ಗುರು ಪರಂಪರೆಯ ಸಾಂಪ್ರದಾಯಿಕ ಚಿತ್ರವಿದೆ. ಶಾಂತ ವರ್ಣಗಳಿಂದ ಬಿಡಿಸಿದ್ದಾಗಿದೆ. ಅಲ್ಲಲ್ಲಿ ಸುವರ್ಣ ವರ್ಣವನ್ನು ಉಪಯೋಗಿಸಿದ್ದಾರೆ. ಧೂತ, ರಾಠಿ, ಇನ್ನಾಣಿ: ಇನ್ನು ಕೆಲವು ಮನೆಗಳಲ್ಲಿ ಭಾಗವತ ಹಾಗೂ ಜಗದೀಶ ಭಗವಾನಗೆ ಸಂಬಂಧಪಟ್ಟ ಚಿತ್ರಕೃತಿಗಳು ಮೂಲ ಹಾಗೂ ಪ್ರಿಂಟ್ ಪ್ರತಿಗಾಗಿ ಕಾಣಸಿಗುತ್ತವೆ. ಆದರೆ ಇವೆಲ್ಲಾ ಕೈಯಾರೆ ಬಿಡಿಸಿದ ಚಿತ್ರಕೃತಿಗಳಾಗಿವೆ.

ಗರಡಿ ಮನೆಗಳ ಗೋಡೆಯ ಮೇಲಿನ ಚಿತ್ರಗಳು:- ಈ ಊರಿನಲ್ಲಿ ನಾಲ್ಕು ಗರಡಿ ಮನೆಗಳಿವೆ. ೧. ಕಂಠೀಪೇಟೆಯ ಗರಡಿಮನೆ. ೨. ಶಿವಪ್ಪಯ್ಯನ ಗರಡಿ ಮನೆ. ೩. ಹೊಸಗರಡಿಮನೆ. ೪. ಹೊಸಪೇಟೆಯಲ್ಲಿರುವ ಸಾಲೇಶ್ವರ ಗರಡಿಮನೆ. ಇವುಗಳಲ್ಲಿ ಕಂಠಿಪೇಟೆಯ ಗರಡಿ ಮನೆಯ ಬಾಗಿಲದ ಎಡ ಬಲಕ್ಕಿರುವ ಗೋಡೆಗಳ ಮೇಲೆ ದೊಡ್ಡ ಗಾತ್ರದ ತೈಲ ಚಿತ್ರಗಳಿವೆ. ಇವು ಬಹಳ ಹಳೆಯ ಚಿತ್ರಗಳಿದ್ದವಂತೆ.

ಗೋಡೆಗೆ ಗಾರೆ ಗಚ್ಚಿದೆ. ಅದರ ಮೇಲೆ ಬಲಗಡೆ ಖಡ್ಗವರಸೆ ಚಿತ್ರವಿದ್ದರೆ ಎಡಗಡೆ ಗದಾಯುದ್ಧದ ಚಿತ್ರಗಳಿವೆ. ಇವು ಬಹಳ ಹಳೆಯ ಚಿತ್ರಗಳಿದ್ದವಂತೆ. ಇವುಗಳ ಕ್ಷೀಣತೆ ಕಂಡು ಪದ್ಯದ ಸ್ಥಳೀಯ ಪೇಂಟರರೊಬ್ಬರಿಂದ ಮರು ಬಣ್ಣ ಲೇಪನ ಮಾಡಿಸಿದ್ದಾರೆ. ಅವುಗಳು ಕೂಡಾ ತಮ್ಮ ಅಸ್ತಿತ್ವವನ್ನು ಕಳೆದಕೊಳ್ಳಹತ್ತಿವೆ. ಇನ್ನುಳಿದ ಗರಡಿ ಮನೆಯ ಎದುರುಗಡೆಯ ಗೋಡೆಗಳ ಮೇಲೆ ಆಗಾಗ ಸುಣ್ಣಸಾರಿಸಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಅಲ್ಲಿ ಬಿಡಿಸುವ ಚಿತ್ರಗಳೆಂದರೆ ಕುಸ್ತಿ ಆಡುತ್ತಿರುವ ಜಟ್ಟಿಗಳು, ಪರ್ವತವನ್ನು ಹೊತ್ತುನಿಂತ ಆಂಜನೇಯ (ಹನುಮಂತ) ಮುಂತಾದವುಗಳು. ಈ ದೊಡ್ಡಗಾತ್ರದ ಚಿತ್ರಗಳು ದುಷ್ಟಶಕ್ತಿಗಳನ್ನು ಸಂಹಾರ ಮಾಡಲು ಹಾಗೂ ಶಕ್ತಿ ಸಂಪಾದಿಸುವ ಕುಸ್ತಿ ಕಲೆಯನ್ನು ಪ್ರದರ್ಶಿಸುವ ಸಂಕೇತಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು.

ತೈಲ ಬಣ್ಣಗಳಿಂದ ಬಿಡಿಸಿದ ಇತ್ತೀಚಿನ ಚಿತ್ರಗಳು:– ಶ್ರೀ ಠಾಕೂಸಾ ಪದಾರ ಅವರ ಮನೆಯ ಗೋಡೆಗಳ ಮೇಲೆ ದೇವಿ ದೇವತೆಯರ ಹಾಗೂ ಪ್ರಕೃತಿ ಚಿತ್ರಗಳು ಕಂಡುಬಂದರೆ, ಶ್ರೀ ಘನಶ್ಯಾಮ್‌ಜಿ ರಾಠಿಯವರ ಮನೆಯಲ್ಲಿ ಸನಾತನ ಸಂಸ್ಕೃತಿಯಾದ ಹಿಂದೂಧರ್ಮಕ್ಕೆ ಸಂಬಂಧಿಸಿದ ದೊಡ್ಡ ಗಾತ್ರದ ಚಿತ್ರಕೃತಿಗಳು ಕಂಡುಬರುತ್ತವೆ. ಶ್ರೀ ಪರ್ವತಿಕರ ಮನೆಯಲ್ಲಿ ಶ್ರೀ ರಾಘವೇಂದ್ರರ ಭಿತ್ತಿ ಚಿತ್ರವಿದೆ. ಶ್ರೀ ಝುಂವರ ಹಾಗೂ ಶ್ರೀ ರಾಠಿ, ಶ್ರೀ ಘಟ್ಟಿ, ಶ್ರೀ ಸಂಪಗಾವಿಯವರ, ಶ್ರೀ ಶಿವಮೂರ್ತೆಪ್ಪಾ ನಿಲವಾಣಿಯವರ ಮನೆಗಳ ಗೋಡೆಗಳ ಮೇಲೆ ದೇಶ ಭಕ್ತರ ಭಾವಚಿತ್ರಗಳಿಂದೊಡಗೂಡಿರುವ ಬಾರ್ಡರ್ ಡಿಝಾಯಿನ್‌ಗಳು, ಹಾಗೂ ಶಬರ ಶಂಕರ ವಿಲಾಸ ಗ್ರಂಥವನ್ನಾಧರಿಸಿದ ಶಿವ ಪಾರ್ವತಿಯರ ೩x೨ ಫೂಟಿನ ಚಿತ್ರಗಳಿವೆ. ಶ್ರೀ ರಾಮಬಿಲಾಸಜಿ ಧೂತ ಅವರ ಮನೆಯ ಗೋಡೆಗಳ ಮೇಲ್ತುದಿಗೆ ಮೂಲೆಗೆ ತಾಗಿ ಕೈಯಾರೆ ಬಿಡಿಸಿದ ಜಲವರ್ಣ ಮಾಧ್ಯಮದ ಧಾರ್ಮಿಕ ಚಿತ್ರಗಳನ್ನು ಚೆನ್ನಾಗಿ ಫ್ರೇಮ್‌ಮಾಡಿ ತೂಗುಹಾಕಲ್ಪಟ್ಟಿದೆ. ತಮ್ಮ ವಂಶದ ಚಿತ್ರ 'ವಂಶವೃಕ್ಷ' ಇಲ್ಲಿ ಒಂದೆ ವೃಕ್ಷದ ಕಲ್ಪನೆಯಲ್ಲಿ ಚಿತ್ರಿಸಿದ್ದು ಕಂಡುಬರುತ್ತದೆ. ಶ್ರೀ ನಥಮಲ್ ಹಸ್ತಿಮಲ್ ಗುಂದೇಚಾ ಅವರ ಮನೆಯಲ್ಲಿ ಜೈನ ಶ್ವೇತಾಂಬರ ಧರ್ಮಕ್ಕೆ ಸಂಬಂಧಪಟ್ಟ ಚಿತ್ರಗಳು ಕಂಡುಬರುತ್ತವೆ. ಇವೆಲ್ಲ ಇತ್ತೀಚಿನ ತೈಲ ಬಣ್ಣಗಳನ್ನು ಉಪಯೋಗಿಸಿ ಇತ್ತೀಚೆಗೆ ರಚಿಸಲ್ಪಟ್ಟವುಗಳಾಗಿವೆ. ಪೆಂಟರ್ ಸೋನಾರ, ಎರಿಕೋಳ, ಬಸವರಾಜ ಎಂಬುವರ ಹೆಸರುಗಳಿವೆ.

ಗುಳೇದಗುಡ್ಡದ ' ಮನೆ–ಮಹಲು, ಗುಡಿ–ಗುಂಡಾರ, ಮಠ–ಮಂದಿರಗಳಲ್ಲಿ ಆಸ್ತಿಕನ ಪವಿತ್ರ ಭಾವನೆಗಳಿಗೆ ಪ್ರೋತ್ಸಾಹನೆ ದಯಪಾಲಿಸುತ್ತಿರುವ ಈ ಸಾಂಪ್ರದಾಯಿಕ ಚಿತ್ರಕೃತಿಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

***

- **ಅಮ್ಮಿನಭಾವಿಯ ಅಪರೂಪದ ಚಿತ್ರಗಳು**
- **ಅಮ್ಮಿನ ಭಾವಿಯ ಅಲಂಕಾರಿಕ ಚಿತ್ರಗಳು**
- **ಅಮ್ಮಿನಭಾವಿಯ ಚಿತ್ತಾರಗಳು**
- **ವಾಸ್ತು ಶಿಲ್ಪಕ್ಕೆ ಮೆರಗು ಕೊಟ್ಟಿರುವ ಚಿತ್ತಾರಗಳು**

ಧಾರವಾಡದಿಂದ ಇಪ್ಪತ್ತು ಕಿ.ಮೀ ದೂರದಲ್ಲಿರುವ ಅಮ್ಮಿನಭಾವಿ ಊರಲ್ಲಿ ಅದ್ಭುತವಾದ ವ್ಯಾಸ ಹೊಂದಿದ ಗೋಲಾಕಾರದ ಭಾವಿಯೊಂದು ಪ್ರೇಕ್ಷಕರನ್ನು ಊರಿಗೆ ಸ್ವಾಗತಿಸುತ್ತದೆ. ಈ ಊರಿನಲ್ಲಿ ಕರ್ನಾಟಕದ ಅನೇಕ ಕಡೆಗಳಲ್ಲಿ ಕಾಣಸಿಗುವ ಅವಿಭಕ್ತ ಕುಟುಂಬ ಆನಂದದಿಂದ ಜೀವಿಸುವ 'ಚೌಸಷ್ಟಿ' ಮನೆಯನ್ನೇ ಹೋಲುವ ಬೃಹತ್ ಗಾತ್ರದ ಒಂದು ವಾಸ್ತುಶಿಲ್ಪವಿದೆ. ಈ ಚೌಸಷ್ಟಿ ಮನೆಯಲ್ಲಿ ನೂರಾರು ಜನರುಗಳಿರುವ ಅವಿಭಕ್ತ ಕುಟುಂಬ ವಾಸಿಸುವಂತಿದೆ. ಈ ಕಟ್ಟಡಕ್ಕೆ ಮೆರಗು ಕೊಡುವಲ್ಲಿ ಹಲಗೆಯ ಮೇಲೆ, ತಗಡಿನ ಮೇಲೆ ಹಾಗೂ ಗೋಡೆಯ ಮೇಲಿನ ಚಿತ್ರಗಳು ಮುಖ್ಯ ಪಾತ್ರವಹಿಸಿವೆ. (ಸದ್ಯ ಇದು ಪಂಚಪೀಠದಲ್ಲಿ ಒಂದೆನಿಸಿಕೊಂಡ ರಂಭಾಪುರಿ (ಬಾಳೆಹೊನ್ನೂರು) ಶಾಖಾ ಮಠವಾಗಿದೆ.) ಇಲ್ಲಿ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ವಾಸಿಸುತ್ತಿದ್ದಾರೆ. ಪ್ರಾಯ: ಹದಿನೇಳನೆಯ ಶತಮಾನದಲ್ಲಿ ವಾಸ್ತು-ಕಲೆ, ಮರದ ಕೆಲಸ, ಮೇಲ್ಛಾವಣಿಯ ಚಿತ್ರಗಳು ಎಕಕಾಲದಲ್ಲಿಯೇ ಆಗಿವೆ ಎಂದು ಊಹಿಸಬಹುದು. ಏಕೆಂದರೆ ಅಲ್ಲಿ ರಚನೆಗೊಂಡ ಅಲಂಕಾರಿಕ ರೂಪಗಳು ಕಟ್ಟಿಗೆಯ ಕಲೆಯಲ್ಲಿಯು ಹಾಗೂ ಚಿತ್ರದಲ್ಲಿಯೂ ಇವೆ.

ಹೆಚ್ಚಾಗಿ ಕಂದಿ ಬಣ್ಣದ ಹಿನ್ನೆಲೆಯನ್ನು ಹೊಂದಿದ ಈ ಚಿತ್ರಗಳು ಜಾನಪದ ಜಾಡಿನ ಕೊನೆಯ ಹಾಗೂ ಶಿಷ್ಟ ಕಲಾ ಕೃತಿಗಳ ಪ್ರಾರಂಭದ ಕಾಲದ ಕಲಾಕೃತಿಗಳೆಂದು ಹೇಳಬಹುದು. (ಇಲ್ಲಿನ ಕಲಾಕೃತಿಗಳು ವಾಸ್ತುಶಿಲ್ಪದ ಅಲಂಕಾರದ ವಸ್ತುವಾಗಿ ಮಾತ್ರ ಉಳಿದಿಲ್ಲ. ಶೈವ ಹಾಗೂ ವೈಷ್ಣವ (ಹರಿ, ಹರ) ಏಕತೆಯ ಭಾವೈಕ್ಯತೆಯ ಸಂಕೇತಗಳಾಗಿವೆ. ಐತಿಹಾಸಿಕ, ಪೌರಾಣಿಕ ವಿಷಯವನ್ನಾಧರಿಸಿ ರಚಿಸಿದ ಚಿತ್ರಕೃತಿಗಳಿವೆ.) (ಇಲ್ಲಿಯೂ ಯಾವ ಕಲಾವಿದರುಗಳ ಹೆಸರುಗಳು ಕಂಡುಬರುತ್ತಿಲ್ಲ). ಅನಾಮಧೇಯ ಕಲಾವಿದರಿರಬಹುದು, ಹೆಸರುಗಳಿರದೇ ಹೋಗಿರುವುದಕ್ಕೆ ಇವುಗಳನ್ನು ಜಾನಪದ ಜಾಡಿನ ಕೊನೆಯ ಚಿತ್ರಗಳೆಂದೂ; ಸೌಂದರ್ಯ ಹಾಗೂ ಧಾರ್ಮಿಕವಾಹಕದ ರೂವಾರಿ, ಚಿತ್ರಕಲಾವಿದ ಮಾತ್ರ ಆಗಿದ್ದಾನೆಂಬ ವಿಶಾಲತೆಯನ್ನು ಬೀರುವುದಕ್ಕೆ, (ಅಥವಾ ರಾಜರ ಆಶ್ರಯದ ಕಲಾವಿದನಾಗಿದ್ದ ಕಾರಣಕ್ಕಾಗಿ ಹೆಸರಿಸಬೇ ಹೋಗಿರಲಿಕ್ಕೇ ಬೇಕು)

ಈ ಅಮ್ಮಿನಭಾವಿಯ ಮಠಕ್ಕೆ ಬರಲು ಪೂರ್ವದಲ್ಲಿ ಇತ್ತೀಚಿಗಿನ ಕಟ್ಟಲ್ಪಟ್ಟ ಕಲ್ಲಿನ ಮಹಾದ್ವಾರವಿದೆ. ಹಾಗೂ ದಕ್ಷಿಣೋತ್ತರವಾಗಿ ಮಠವನ್ನು ಕಟ್ಟಲ್ಪಟ್ಟಿದೆ. ಇದರ ಕ್ಷೇತ್ರಫಲ ಅಂದಾಜು ೧೦೦ x ೧೫೦ ಅಡಿ ಇದೆ. ಮಠದ ಒಳಗಡೆಗೆ ಕೇವಲ ಎರಡೇ ಭಿತ್ತಿ ಚಿತ್ರಗಳು ಗೋಚರಿಸುತ್ತವೆ. ಗೋಡೆಗೆ ಗಚ್ಚು ಗಾರೆ ಲೇಪಿಸಿ, ಅದರ ಮೇಲೆ ಮೊದಲನೆಯ ಚಿತ್ರದಲ್ಲಿ 'ರಾಜಾ ಹಾಗು ಅಕ್ಕಪಕ್ಕದಲ್ಲಿ ಕಾರಭಾರಿಗಳು',

ಎರಡನೆಯದು 'ಅಷ್ಟದಿಕ್ಪಾಲಕರು' ಎಂಬ ಚಿತ್ರಗಳಿವೆ. ಚಿತ್ರಗಾತ್ರಗಳು ಅಂದಾಜು ೯ x ೩ ಅಡಿ ಇವೆ. ಇಲ್ಲಿಯ ಚಿತ್ರಗಳು ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಆಸನದಲ್ಲಿ ಆಸೀನನಾದ ರಾಜನ ಚಿತ್ರಕ್ಕೆ ಸ್ಥಳೀಯರು ಹೇಳುವ ಪ್ರಕಾರ ಇದು ರಾಜಾ 'ನರಗುಂದ ಬಾಬಾ ಸಾಹೇಬನ' ಭಾವಚಿತ್ರವಾಗಿದೆ. ನಡುವೆ ಕುಳಿತಿರುವ ರಾಜನ ಅಕ್ಕಪಕ್ಕದಲ್ಲಿ ಕರಬಾರಿಗಳು ಹಾಗೂ ಪ್ರಧಾನಿ ನಿಂತಿದ್ದಾರೆ. ತ್ರಿಆಯಾಮದ ಕಲ್ಪನೆ ಮೂಡುವ ಹಾಗೆ ಬಣ್ಣ ಲೇಪಿಸಿದ್ದಾರೆ. ಸಂಯೋಜನೆ ಹಾಗೂ ರೇಖಾ ವಿನ್ಯಾಸ ತಕ್ಕಮಟ್ಟಿಗೆ ಇದೆ. ರೇಖೆಗಳಲ್ಲಿ ಅಷ್ಟೊಂದು ಸೂಕ್ಷ್ಮತೆ ಕಾಣುವುದಿಲ್ಲ ಹೊರಭಾಗದಲ್ಲಿ ದಕ್ಷಿಣ ಭಾರತದ ಬಹಮನಿ ಹಾಗೂ ಉತ್ತರ ಭಾರತದ ಮೊಗಲ ಶೈಲಿಯ ವಾಸ್ತುಶಿಲ್ಪಕಲೆಯನ್ನು ಹೋಲುವ ಗುಂಬಜಗಳು ಚಿತ್ರಿತವಾಗಿವೆ. ಇನ್ನೊಂದು ಚಿತ್ರದಲ್ಲಿ ನಡುವೆ 'ಶಿವನ ಕುಟುಂಬ ನಂದಿಯೊಂದಿಗೆ' ಚೆನ್ನಾಗಿ ಮೂಡಿ ಬಂದಿದೆ. ನಾರದ ತನ್ನ ಏಕತಾರಿ ವಾದ್ಯದೊಂದಿಗೆ ಇದ್ದಾನೆ. ಮಧ್ಯದಲ್ಲಿ ಈ ಸಂಯೋಜನೆ ಸಂಯೋಜಿಸಲ್ಪಟ್ಟಿದ್ದರೆ ಅಕ್ಕ ಪಕ್ಕದಲ್ಲಿ ನಾಲ್ಕು ನಾಲ್ಕು ಕಮಾನುಗಳಿವೆ. ಅದರಲ್ಲಿ ಒಂದೊಂದು ಕಮಾನಿನಲ್ಲಿ ಒಂದೊಂದು ವಾಹನವೇರಿದ ಒಬ್ಬೊಬ್ಬ ದಿಕ್ಪಾಲಕನ ಚಿತ್ರಗಳಿವೆ. ರೇಖಾ ವಿನ್ಯಾಸ ತಕ್ಕಮಟ್ಟಿಗೆ ಇದೆ.

ಮೇಲ್ಛಾವಣಿಯ ಚಿತ್ರಗಳು:- ಈ ಚೌಸಪ್ಪಿ ಮನೆಯಂತಿರುವ ಮಹಲಿನ ಒಳಭಾಗದಲ್ಲಿ ಮೇಲ್ಛಾವಣಿಗೆ ೧ x ೫ ಅಡಿ ಗಾತ್ರದ ಹಲಗೆಯ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ಚಿತ್ರಕೃತಿಗಳ ನಿರ್ಮಾಣ ಮೊದಲು ಮಾಡಿಕೊಂಡು ನಂತರ ಆ ಹಲಗೆಯನ್ನು ಕಟ್ಟಡ ಕಟ್ಟುವಾಗ ಅಲ್ಲಿ ಹೊಂದಿಸಿಕೊಂಡಿದ್ದಾರೆ.

ಸರಸ್ವತಿ ಹಾಗೂ ಗಣಪತಿ ಚಿತ್ರದಲ್ಲಿ ಸರಸ್ವತಿ ಚಿತ್ರವನ್ನು ವಾಸ್ತವಿಕ ಪದ್ಧತಿಯಲ್ಲಿ ಚಿತ್ರಿಸಲು ಪ್ರಯತ್ನಿಸಲಾಗಿದೆ. ಗಣಪತಿಯ ಚಿತ್ರದಲ್ಲಿ ಪೇಶ್ವೆ ಕಾಲದ ಉಡುಪುಗಳು ಹಾಗೂ ಅಲಂಕಾರ ಶೈಲಿ ಕಾಣುತ್ತವೆ. ವಸ್ತ್ರಾಲಂಕಾರ ಹಾಗೂ ಆಭರಣಗಳು ಹೇರಳವಾಗಿವೆ. ಚಿತ್ರಗಳು ಸುಂದರವಾಗಿವೆ.

ಕಮಲದಲ್ಲಿ ಕುಳಿತ ದೇವಿ ಚಿತ್ರದಲ್ಲಿ, ಒಂದು ಕಮಲವಿದೆ. ಅದರಲ್ಲಿ ಹದಿನೆಂಟು ಭುಜಗಳನ್ನು ಹೊಂದಿದ ಒಬ್ಬಳು ದೇವಿ ಕುಳಿತಿದ್ದಾಳೆ. ಅಕ್ಕಪಕ್ಕದಲ್ಲಿ ಪೂಜೆ ಸಲ್ಲಿಸುವ ಮಹಿಳೆಯರ ಕೈಯಲ್ಲಿ ಪೂಜಾಸಾಧನಗಳನ್ನು ಹಿಡಿದುಕೊಂಡು ನಿಂತಿದ್ದಾರೆ.

ಕೃಷ್ಣಲೀಲೆಯ ಚಿತ್ರದಲ್ಲಿ ಗೋಪಾಲಕೃಷ್ಣ ತನ್ನ ಕೈಗಳಲ್ಲಿ ಕೊಳಲಿನೊಂದಿಗೆ ನಿಂತಿದ್ದಾನೆ. ಅಂಗಾಲು ನೆಕ್ಕುತ್ತಿರುವ ಶ್ವೇತ ಆಕಳು ಇದೆ.

ಇನ್ನೊಂದು ಸಂಯೋಜನೆಯಲ್ಲಿ ಒಂದೆಡೆ ಮೂರು ಮತ್ತೊಂದೆಡೆ ನಾಲ್ಕು ವ್ಯಕ್ತಿಗಳು ಕರೆ ಕೋಟಧಾರಿ ಚೌಕಿದಾರರು ಇರುವ ಒಂದು ಸಂಯೋಜನಾಚಿತ್ರ ಏನೋ ಕಥೆ ಹೇಳುವಂತಿದೆ.

ಋಷಿಮುನಿಗಳಾದ ಜಮದಗ್ನಿ ಕಾರ್ತೆಯವೀರ (ಕಾಮಧೇನುಗಳ) ಚಿತ್ರವು ಚೆನ್ನಾಗಿ ಮೂಡಿ ಬಂದಿವೆ. ಅದರಂತೆ ಶಿವನ ಒಡ್ಡೋಲಗದ ಚಿತ್ರದಲ್ಲಿ ಪಂಚಮುಖದ ಶಿವಪಾರ್ವತಿ, ಬೃಂಗಿ, ನಾರದ, ಆಕಳುಮುಖದ ವ್ಯಕ್ತಿ, ಮೃದಂಗ ಬಾರಿಸುವವ, ಟಗರಿನ ಮುಖದವನು, ತಾಳಗಳೊಂದಿಗೆ ಒಬ್ಬ ಪುಟ್ಟ ವ್ಯಕ್ತಿ, ಅವನ ಪಕ್ಕದಲ್ಲಿ ಪಿಟೀಲುವಾದಕನಿದ್ದಾನೆ. ಅವನಿಗೆ ಕಪ್ಪು ಬಣ್ಣವನ್ನು ಲೇಪಿಸಿದ್ದಾಗಿದೆ.

ಶೇಷಶಯನ ವಿಷ್ಣು, ರಾಮ, ಸೀತೆ, ಹನುಮ, ಕೃಷ್ಣನ ರಾಸಲೀಲಾಚಿತ್ರಗಳು ನೋಡಲು ಸಿಗುತ್ತವೆ. ಇವುಗಳಲ್ಲಿ ಇನ್ನೊಂದು ಕಾಲ್ಪನಿಕ ಚಿತ್ರ ಇಲ್ಲಿದೆ. ಒಬ್ಬ ರಾಜ ನಮಸ್ಕರಿಸಿ ಏನೋ ಬೇಡುತ್ತಿದ್ದಾನೆ.

ಕಾಲ್ಪನಿಕ ಪ್ರಾಣಿ ಅದಕ್ಕೆ ಮನುಷ್ಯರ ಕೈ, ಆನೆಯ ಕಾಲುಗಳು. ಆದರೆ ಆಕಾರ ಹುಲಿಯದು, ಪಕ್ಷಿಯ ಮುಖ, ಪಂಚ ಹೆಡೆಯ ಸರ್ಪ. ಈ ರೀತಿಯ ಕಾಲ್ಪನಿಕ ಪ್ರಾಣಿಯ ಮೇಲೆ ಶ್ರೀಕೃಷ್ಣನ ಚಿತ್ರವಿದೆ.

ಸಂಯೋಜನೆಗಳು ಬ್ರಿಟಿಷ್ ಅಧಿಕಾರಿಗಳಂತಿರುವ ದಬ್ಬಾಳಿಕೆಯನ್ನು ತೋರಿಸುವ ಚಿತ್ರಗಳಿವೆ. ಸಾಮಾನ್ಯ ಜನರು ಅವರಿಂದ ಶಿಕ್ಷೆಯನ್ನು ಅನುಭವಿಸುತ್ತಿರುವುದು.

(ಆನೆಯ ಮೇಲೆ ಅಂಬಾರಿ, ಅಂಬಾರಿಯಲ್ಲಿ ರಾಣಿಯರು ಅವರ ಹಿಂದೆ ನೆಲದ ಮೇಲೆ ನಡೆಯುತ್ತಿರುವ ಸೈನಿಕರು ಹಾಗೂ ನರಸಿಂಹಾವತಾರ, ಲಕ್ಷ್ಮಿಯ ಚಿತ್ರಗಳನ್ನು ನೋಡಿದಾಗ ಕರ್ನಾಟಕ ಶೈಲಿಯ ರೇಖಾವಿನ್ಯಾಸ ಎದ್ದು ಕಾಣುತ್ತದೆ.) ಎಲ್ಲಾ ಚಿತ್ರಗಳಿಗೂ ಹಿನ್ನೆಲೆ ದಟ್ಟಕಪ್ಪು ವರ್ಣ ಕಾಣಿಸುತ್ತದೆ.

ಮಠದ ಹೊರಾಂಗಣದ ಮೇಲ್ಛಾವಣಿಯ ಚಿತ್ರಗಳು:– ಹೊರಬದಿಗೆ ಕಾಣಬರುವ ಚಿತ್ರಗಳು ಹಲಗೆ ಹಾಗೂ ತಗಡಿನ ಫಲಕಗಳ ಮೇಲಿವೆ. ದೇವಿ ದೇವತೆಯರ ಚಿತ್ರಗಳು, ಶೈವಧರ್ಮದ ಚಿತ್ರಗಳು, ರಾಕ್ಷಸ ಸಂಹಾರದ ಚಿತ್ರಗಳು, ಮತ್ತು ಕೃಷ್ಣಲೀಲೆಯ ಚಿತ್ರಗಳಾದ ಗೋಪಿಯರೊಂದಿಗೆ ಶ್ರೀಕೃಷ್ಣ ಹಾಗೂ ಕಾಳಿಂಗನಾಗನನ್ನು ಮರ್ದಿಸುತ್ತಿರುವ ಶ್ರೀ ಕೃಷ್ಣನ ಚಿತ್ರಗಳಿವೆ.

ಗಿರಿಜಾ ಕಲ್ಯಾಣವೆಂಬ ದೊಡ್ಡಾಟವನ್ನಾಧರಿಸಿದ ಹಾಗೂ ಪ್ರಸೂತಿ, ಶಿವ, ವೀರಭದ್ರ, ಯಜ್ಞಕುಂಡ ಇವುಗಳ ನಡುನಡುವೆ ಹೂವಿನ ನಕ್ಷೆಗಳನ್ನು ಚಿತ್ರಿಸಿದ್ದಾರೆ.

ತ್ರಿಪುರ ಸಂಹಾರ:– ತ್ರಿಪುರ ಸಂಹಾರವೆಂಬ ಮೂರು ರಾಕ್ಷಸರ ಸಂಹಾರದ ಪೌರಾಣಿಕ ಕಥೆಯನ್ನಾನಾಧರಿಸಿ ಮೂಡಿದ ಚಿತ್ತಾರ ಉತ್ತಮ ಸಂಯೋಜನೆ ಹಾಗೂ ವರ್ಣವಿನ್ಯಾಸದಿಂದೊಡಗೂಡಿದೆ.

ರಥದಲ್ಲಿ ಚಿಕ್ಕಗಾತ್ರದ ಒಂದು ಹೆಣ್ಣು ಆಕೃತಿಯಿದೆ. ಇದನ್ನು ಭೂಮಿ, ಪಾರ್ವತಿಯ ಆಕಾರ, ಭೂಮಿಯ ಪ್ರತೀಕವೆಂದೂ, ಈ ರಥದ ನಾಲ್ಕು ಕುದುರೆಗಳು ನಾಲ್ಕು ವೇದದ ಸಂಕೇತಗಳು ಹಾಗೂ ರಥದ ಭಾಗ ಮತ್ತು ಹಗ್ಗವನ್ನು ಆದಿಶೇಷನಿಂದ (ಹಾವಿನಿಂದ), ಸೂರ್ಯ– ಚಂದ್ರರನ್ನು ಗಾಲಿಗಳನ್ನಾಗಿ ಈ ರಥದ ಸಾರಥಿ ಬ್ರಹ್ಮನನ್ನಾಗಿಸಿದ್ದಾರೆ. ಈ ಮೂವರು ರಾಕ್ಷಸರನ್ನು ಸಂಹಾರ ಮಾಡಲಿರುವ ವ್ಯಕ್ತಿ ರಥದಲ್ಲಿ ಕುಳಿತಿದ್ದಾನೆ. ಇವನು ಶಿವನು. (ಅದರೆ ಬಾಣದ ತುದಿಯಲ್ಲಿ ಶ್ರೀ ಕೃಷ್ಣ ಪರಮಾತ್ಮನ ಚಿತ್ರ ರಚಿತವಾಗಿದೆ. ಇವೆಲ್ಲವುಗಳು ಸಾಂಕೇತಿಕವಾಗಿ ಚಿತ್ರಿಸಲ್ಪಟ್ಟಿವೆ.)

ಈ ಸುಂದರ ಸಂಯೋಜನೆಯ ಎದುರಿಗೆ ಮೂವರು ರಾಕ್ಷಸರಿಗೆ ಕಂದಿ ಮತ್ತು ಕಪ್ಪು ಮೈಬಣ್ಣಗಳಿವೆ. ದೊಡ್ಡದಾದ ಮೀಸೆಗಳು, ಹಣೆಗೆ, ಮೈಗೆ ದಪ್ಪನಾಗಿ ವಿಭೂತಿ ಹಚ್ಚಿಕೊಂಡಿದ್ದಾರೆ. ಕೈಯಲ್ಲಿ ಖಡ್ಗ, ಕಠಾರಿಗಳನ್ನು ಹಿಡಿದು, ಕೆಕ್ಕರಗಣ್ಣಿನಿಂದ ಯುದ್ಧಕ್ಕೆ ಸನ್ನದ್ಧರಾಗಿ ಎದುರು ಜಿಗಿದಾಡುತ್ತ ಬರುತ್ತಿದ್ದಾರೆ. ಇವರ ಸಂಹಾರದ ಚಿತ್ರ ನೋಡಿದರೆ ಹರಿಹರರ ಸಾಮರಸ್ಯದ ಸಾಂಕೇತಿಕ ಚಿತ್ರ ಇದಾಗಿದೆ. ದುಷ್ಟ ಶಕ್ತಿಯ ಸಂಹಾರಕ್ಕೆ ಎಲ್ಲರೂ ಒಂದಾಗುತ್ತಾರೆ ಎನ್ನುವುದರ ಸಂಕೇತವೂ ಇದಾಗಿದೆ. ಈ ಚಿತ್ರದ ಅಂಚುಗಳನ್ನು ಸುಂದರ ನಕ್ಷೆಗಳಿಂದ ಪೂರ್ತಿ ಮಾಡಿದ್ದಾರೆ. ನಡುವೆ ಸುಂದರವಾದ ಹೂವಿನ ಅಲಂಕಾರಿಕ ರೂಪವಿದೆ. ಹಿನ್ನೆಲೆ ಕಂದ ಬಣ್ಣ. ಇದರ ಮಧ್ಯದಲ್ಲಿ ಏನಾದರೂ ತೂಗು ಹಾಕಲು ಒಂದು ಹುಕ್ಕು ಇದೆ. ಚಿತ್ರದ ಅಗಲ ಹೆಚ್ಚಾಗಿದೆ.

ಕರ್ಣಾರ್ಜುನರ ಯುದ್ಧ– ಮಹಾಭಾರತವನ್ನಾಧರಿಸಿದ ಕರ್ಣಾರ್ಜುನರ ಯುದ್ಧದ ಸಂಯೋಜನೆ ತ್ರಿಪುರ ಸಂಹಾರದ ಎದುರಿಗಿನ ಭಾಗದಲ್ಲಿ ರಚಿತಗೊಂಡಿದೆ.

ಅರ್ಜುನನ ಸಾರಥಿ ಶ್ರೀಕೃಷ್ಣನಾಗಿದ್ದಾನೆ. ಮುಕುಟ ಹಾಗೂ ನಾಲ್ಕು ಕೈಗಳನ್ನು ಹೊಂದಿದ್ದಾನೆ. ಕರ್ಣ ಹಾಗೂ ಅರ್ಜುನರ ಯುದ್ಧದ ರಥಗಳನ್ನು ಒಂದೇ ತೆರನಾಗಿ ಚಿತ್ರಿಸಲಾಗಿದೆ. ಇಬ್ಬರೂ ಧನುರ್ಧಾರಿಗಳಾಗಿದ್ದಾರೆ. ವೀರಾವೇಶ ಮುಖದಲ್ಲಿ ವ್ಯಕ್ತವಾಗಿದೆ. ಆವೇಶದ ಬಾಣಗಳನ್ನು ಬಿಡುತ್ತಿದ್ದಾರೆ ಎಂಬುವುದಕ್ಕೆ ಹಿನ್ನೆಲೆಯ ಕಂದಿಬಣ್ಣದ ಮೇಲೆ ಬಿಳಿ ಬಣ್ಣದ ಬಾಣಗಳು ಶರವೇಗದಲ್ಲಿ ಹೋಗುತ್ತಿರುವುದು ಕಾಣುತ್ತಿದೆ. ಪ್ರತಿ ರಥಕ್ಕೆ ನಾಲ್ಕು ನಾಲ್ಕು ಕುದುರೆಗಳಿವೆ. ಇದಕ್ಕೂ ಮಧ್ಯ ಭಾಗದಲ್ಲಿ ಹೂವಿನ ಅಲಂಕಾರಿಕ ರೂಪ, ಅದರ ಮಧ್ಯದಲ್ಲಿ ಏನಾದರೂ ತೂಗುಹಾಕಲು ಅಥವಾ ಬೆಳಕಿನ ವ್ಯವಸ್ಥೆ ಮಾಡಲು ಒಂದು ಹುಕ್ಕು ಇದೆ. ಈ ಚಿತ್ರಗಳ ಅಂಚಿನಲ್ಲಿ ಸುಂದರ ನಕ್ಷೆಗಳಿವೆ. ಅಂಚಿಗೆ ದಟ್ಟ ಹಾಗೂ ತಿಳಿ ಹಸಿರು ಬಣ್ಣಗಳನ್ನೇ ಉಪಯೋಗಿಸಿದ್ದಾರೆ.

ಇದೇ ರೀತಿಯಲ್ಲಿ ಶಿವನ ತಪಸ್ಸು ಭಂಗ ಮಾಡುತ್ತಿರುವ ರತಿ–ಮನ್ಮಥ, ಕುಮಾರ ಸಂಭವ, ಮುಂತಾದ ಚಿತ್ರಗಳು ಮೂಡಿಬಂದಿವೆ. ನಡುನಡುವೆ ಸುಂದರ ಅಲಂಕಾರಿಕ ರೂಪಗಳು ಇವೆ.

ವಾಸ್ತುಶಿಲ್ಪದಲ್ಲಿ ಚಿತ್ತಾರ ಹೊಳಪುಕೊಡುವ ಕಾರ್ಯವನ್ನು ಅವಶ್ಯವಾಗಿ ಮೂಡಿದೆ. ಈ ವಾಸ್ತುಶಿಲ್ಪಕ್ಕೆ ಒಂದು ವಿಶೇಷವಾದ ಗಮನ ಹರಿಸಲು ಚಿತ್ರ ಸಹಾಯಕಾರಿಯಾಗಿದೆ.

ಮುಖ್ಯಾಧಿಕಾರಿ ಇನ್‌ಟ್ಯಾಚ್(Intach) ಚಿತ್ರಕಲಾ ಪರಿಷತ್ ಬೆಂಗಳೂರು, ಇವರಿಗೆ ಕರ್ನಾಟಕ ಸರಕಾರ ಆರ್ಥಿಕ ನೆರವು ನೀಡಿ, ಕೊನೆಯ ಉಸಿರೆಳೆಯುತ್ತಿರುವ ಇಂತಹ ಭಿತ್ತಿ ಚಿತ್ರಗಳು, ಮೇಲ್ಛಾವಣಿಯ ಚಿತ್ರಗಳನ್ನು ಸಂರಕ್ಷಿಸಲು ಆದೇಶಿಸಬೇಕು. ಮುಂಬರುವ ಜನಾಂಗ ನೋಡಿ ಅನುಸರಿಸಬೇಕು, ಸಾಂಪ್ರದಾಯಿಕ, ನವ್ಯಶೈಲಿಯ ಚಿತ್ರಕೃತಿಗಳನ್ನು ನಮ್ಮ ಮನೆಯ ಗೋಡೆ ಮೇಲ್ಛಾವಣಿಗೆ ತೂಗುಹಾಕಿ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವುದರೊಂದಿಗೆ ಕಲಾ ಸಂಸ್ಕೃತಿ ಕಾಪಾಡೋಣ.

***

- ನಯನ ಮನೋಹರ ನರಗುಂದ ಚಿತ್ತಾರಗಳು
- ನರಗುಂದ ಚಿತ್ರಗಳು
- ಧಾರವಾಡ ಜಿಲ್ಲೆಯ ನರಗುಂದ ಚಿತ್ರಗಳು

ಈ ಪೃಥ್ವಿಯ ಮೇಲೆ ಸಕಲಪ್ರಾಣಿ ಜೀವಿಗಳಲ್ಲಿ ಮನುಷ್ಯ ಜೀವಿ ಒಂದು ವಿಶೇಷವಾದ ಜೀವಿ ಎಂಬುದಾಗಿ ಮಾನವಕುಲ ತೋರಿಸುತ್ತಾ ಬಂದಿದೆ. ಕರ್ನಾಟಕದ ಕೆಲಕಡೆಗೆ ಅಂದಾಜು ಕ್ರಿ.ಶ.ಪೂ ೧೦,೦೦೦ ರಿಂದ ೭,೦೦೦ ವರೆಗಿನ ಸೂಕ್ಷ್ಮ ಶಿಲಾಯುಗದ; ಹಾಗೂ ಕ್ರಿ.ಶ.ಪೂ. ೧,೨೦೦ ರಿಂದ ೨೦೦ ರವರೆಗಿನ ಬೃಹತ್ ಶಿಲಾಯುಗದ ನಂತರ ಇತಿಹಾಸಿಕ ಅವಧಿಗಳಲ್ಲಿ ಕಲಾ ಚಟುವಟಿಕೆ ಬೆಳೆದಿರುವುದನ್ನು ಡಾ. ಅ. ಸುಂದರ ಅವರು ಪ್ರಾಗೈತಿಹಾಸಿಕ ಕಾಲದ ಕಲೆಯನ್ನು ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಗುರುತಿಸಿದ್ದಾರೆ.

ಪ್ರಾಗೈತಿಹಾಸಿಕ ಹಾಗೂ ಬೃಹತ್ ಶಿಲಾಯುಗದ ಕಾಲದಲ್ಲಿ ನೈಸರ್ಗಿಕ ಗವಿಯೊಳಗೆ ನಿರ್ಮಾಣವಾದ ಕಲ್ಲಾಸರೆಯ ಚಿತ್ರಗಳು. ಗಟ್ಟಿಕಲ್ಲಿನ ಮೇಲೆ ಕಬ್ಬಿಣದ ಉಳಿ ಅಥವಾ ಗಟ್ಟಿಕಲ್ಲಿನಿಂದ ಕುಟ್ಟಿ ಕುಟ್ಟಿ ಮಾಡಿದ ಗೀರು ಚಿತ್ತಾರಗಳು ಜಾನಪದ ಜಾಡಿನ ಚಿತ್ರಗಳಾದರೆ, ಇತಿಹಾಸ ಕಾಲದಲ್ಲಿ ಒಂದೊಂದು ಶೈಲಿಯ ಚಿತ್ರಕೃತಿಗಳು ಶಿಷ್ಟ ಸಂಪ್ರದಾಯವಾಗಿ ಬೆಳೆದುಬಂದವು. ಆದರೆ ಶಿಷ್ಟಕ್ಕೆ ಜಾನಪದ ಮೂಲವಾಗಿದೆ. ಅವುಗಳಲ್ಲಿ ಕರ್ನಾಟಕದ ಶೈಲಿ ವಿಶೇಷವಾಗಿದೆ. ಆಯಾಮ (ಒನ್ ಡೈಮೆನ್‌ಶನ್) ಹಾಗೂ ದ್ವಿ ಆಯಾಮ(ಟು ಡೈಮೆನ್‌ಶನ್) ಬಣ್ಣ ಲೇಪಿಸಿ ನೀಟಾಗಿ ಸೂಕ್ಷ್ಮವಾಗಿ ಹೊರರೇಖೆ ಹಾಕಿದ್ದು ಎದ್ದು ಕಾಣುತ್ತಿದೆ.

ಉತ್ತರ ಕರ್ನಾಟಕದ ಧಾರವಾಡ ಜಿಲ್ಲೆಯ ನರಗುಂದದ ಚಿತ್ರಗಳು ಮೈಸೂರಿನ ಸಾಂಪ್ರದಾಯಿಕ ಭಿತ್ತಿಚಿತ್ರಗಳನ್ನು ಹೋಲುತ್ತವೆ. ನರಗುಂದದ ವಾಡೆ ರಾಮದುರ್ಗದ ಭಾವೆ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿರುವ ಒಂದು ಸುಂದರ ಭವ್ಯಕಟ್ಟಡ. ಇದರಲ್ಲಿ ಸುಂದರ ಕಟ್ಟಿಗೆಯ ಕಲೆ; ಚಿತ್ತಾರಗಳಿವೆ. ಸದ್ಯ ಇದು ನರಗುಂದದ ನಗರ ಸಭೆಯ ಕಾರ್ಯಾಲಯವಾಗಿದೆ. ಈ ಭವ್ಯ ಕಟ್ಟಡದ ಗಾತ್ರ ೪೦೦ x ೪೫೦ ಅಡಿ ಆಗಿದೆ. ಪಶ್ಚಿಮ ಭಾಗಕ್ಕೆ ಮಹಾದ್ವಾರ. ಉತ್ತರ ದಕ್ಷಿಣಕ್ಕೆ ಸ್ವಲ್ಪ ಅಗಲ ಆದರೆ ದೊಡ್ಡ ಬಾಗಿಲು ಮೇಲ್ಮಹಡಿಗೆ ಹೋಗಲು, ಮೇಲ್ಮಹಡಿಯಲ್ಲಿ ದಕ್ಷಿಣ ಹಾಗೂ ಪೂರ್ವದ ನಡುವೆ. ಮೂಲೆಯಲ್ಲಿ ಸದ್ಯ ೨೦ x ೨೦ ಅಡಿ ಗಾತ್ರದ ಒಂದು ಕಲಾ ಭವನ ಕಾಣಸಿಗುತ್ತದೆ. ಅದರಲ್ಲಿ ಕೇವಲ ಮೂರು ಗೋಡೆಗಳ ಮೇಲೆ ಚಿತ್ರಗಳು ಉಳಿದಿದೆ.

'ರಾಮಾಯಣಕ್ಕೆ ಸಂಬಂಧ ಪಟ್ಟ ಚಿತ್ರಕೃತಿ'– ಇದರಲ್ಲಿ ಅನೇಕ ಋಷಿ ಮುನಿಗಳ ಚಿತ್ರಗಳಿವೆ. ರಾಮನ ಪೂರ್ತಿ ಜೀವನವನ್ನೇ ಇದರಲ್ಲಿ ಅಡಗಿಸಿದ್ದಾರೆ. ದ್ವಿ ಆಯಾಮದ ಬಣ್ಣ ಲೇಪನ ಹೊರಗಡೆ

ಸುಂದರ ಸೂಕ್ಷ್ಮ ಹೊರ ರೇಖೆಗಳಿವೆ. ಚಿತ್ರದ ಗಾತ್ರ ಹೆಚ್ಚು ಅಗಲವಾಗಿವೆ. ಎತ್ತರಕ್ಕೆ ಕಡಿಮೆ.

ರಾಜಾರಾಣಿ ಹಾಗೂ ಒಂದು ಮಗು, ಮೂವರೂ ಒಬ್ಬ ಋಷಿಯ ಹತ್ತಿರ ಬಂದು ತಮ್ಮದೇನೋ ಹೇಳಿಕೊಳ್ಳುತ್ತಿದ್ದಾರೆ. ಬಹುಶ: ಭೂತ ಪ್ರೇತದ ಕಾಟವಿರಬಹುದು. ಅವರ ಸ್ವಲ್ಪ ಪಕ್ಕದಲ್ಲಿ ಋಷಿ ಒಬ್ಬ ಯುವಕನಿಗೆ ಎದುರಿಗಿರುವ ರಾಕ್ಷಸನನ್ನು ಸಂಹರಿಸಲು ಆದೇಶಿಸುತ್ತಿದ್ದಾನೆ. ಒಬ್ಬ ಯುವಕ ಈಟಿಯಿಂದ ತಿವಿದು ಅದನ್ನು ಸಾಯಿಸುತ್ತಿದ್ದಾನೆ. ರಾಕ್ಷಸನಿಗೆ ಬಿಳಿ ಕೋರೆಗಳು, ಜಟ್ಟಿಯಂತಹ ಶರೀರ ಹಾಗೂ ಕೆದರಿದ ಕೂದಲುಗಳಿವೆ. ಋಷಿ ಮುನಿಗಳ ಕೇಶಾಲಂಕಾರ ಹಾಗೂ ವಸ್ತ್ರಗಳ ಮೇಲಿನ ನಿರಿಗೆಗಳು ಚೆನ್ನಾಗಿ ಮೂಡಿ ಬಂದಿದೆ.

ಒಂದೆಡೆ ಶಿವಪಾರ್ವತಿಯರ ಚಿತ್ರಗಳು ಇನ್ನೊಂದೆಡೆ ರಾಜಾರಾಣಿಯರ ನೃತ್ಯದ ಚಿತ್ರಗಳಿವೆ. ಅದರ ಮೇಲ್ಬದಿಗೆ ಮೆರವಣಿಗೆಯ ಚಿತ್ರ ವಿಶೇಷವಾಗಿದೆ. ಮಧ್ಯದಲ್ಲಿ ಮೂರ್ನಾಲ್ಕು ಜನ ಕೈಯಲ್ಲಿ ಏನೋ ಹಿಡಿದು ನಿಂತಿದ್ದಾರೆ. ಅಕ್ಕಪಕ್ಕದಲ್ಲಿ ತಾಶಾ ಎಂಬ ವಾದ್ಯವನ್ನು ಬಾರಿಸುವವರು, ಹಾಗೂ ಸೈನಿಕರಿದ್ದಾರೆ. ಸೈನಿಕರ ಬೇರೆ ಬೇರೆ ತುಕಡಿಗಳು ಅವರ ಆಯುಧ ಹಾಗೂ ಬಣ್ಣದ ಪೋಷಾಕಗಳು, ಬೇರೆಬೇರೆ ಇದೆ. ಆನೆ, ಕುದುರೆ, ಒಂಟೆ ಸವಾರರನ್ನು ಕೂಡಾ ಚಿತ್ರದಲ್ಲಿ ಚಿತ್ರಿಸಿದ್ದಾರೆ.

ಭೋಗ ವಿಲಾಸಜೀವನದ ಚಿತ್ರಕೃತಿ ಒಂದಿದೆ. ಅದರಲ್ಲಿ ಬೃಹತ್ ಆಕಾರದ ರಾಜಮಹಲ್ ಅದರ ಎಡಬಲಕ್ಕೆ ಮೇಲ್ಗಡೆ ಚಿಕ್ಕಗಾತ್ರದ ಶಂಖ ಚಕ್ರಗಳು ಅಮೂರ್ತವಾಗಿ ಮೂಡಿ ಅದರಲ್ಲಿ ಋಷಿಗಳ ಚಿತ್ರ ಕಾಣುವ ಹಾಗೆ ಚಿತ್ರಿಸಿದ್ದಾನೆ. ಇದರ ಒಳಗಡೆ ರಾಣಿಯ ಅಂತಃಪುರ, ಅಲ್ಲಿ ಸುಂದರ ಶಯನಮಂಟಪದ ಮೇಲೆ ದಿಂಬಿಗೆ ಆಸರೆಯಾಗಿ ರಾಜ ತನ್ನ ಎಡತೋಳ ತೆಕ್ಕೆಯಲ್ಲಿ ರಾಣಿಯನ್ನು ತಬ್ಬಿಕೊಂಡು ಅವಳ ಸ್ತನಗಳನ್ನು ಬಳಸುತ್ತಿದ್ದಾನೆ. ಒಬ್ಬ ದಾಸಿ ಕಾಲೊತ್ತುತ್ತಿದ್ದಾಳೆ. ಇನ್ನೊಬ್ಬದಾಸಿ ಬೀಸಣಿಕೆಯಿಂದ ಗಾಳಿ ಬೀಸುತ್ತಿದ್ದಾಳೆ. ಈ ಎಲ್ಲರ ಮಧ್ಯ ಕಲಾವಿದ ಒಂದು ಪುಟ್ಟ ಮಗುವನ್ನು ಚಿತ್ರಿಸಿದ್ದಾನೆ. ಅದು ವಿವಸ್ತ್ರಧಾರಿಯಾಗಿದೆ. ಅದು ಮುದ್ದು ಮುದ್ದಾಗಿದೆ. ರಾಜನ ಕಾಲ ಬಳಸಿ ತೊಡೆಯ ಮೇಲೆ ಹತ್ತುತ್ತಿದೆ. ಆದರೆ ಆ ಮಗುವಿನ ಗಾತ್ರ ಬಲು ಚಿಕ್ಕದು. ಕಾಲಿನ ಮೇಲೆ ಮೊಲದ ಮರಿಯಂತೆ ಹತ್ತುತ್ತಿದ್ದಾನೆ. ಕಲಾವಿದನ ಕಲ್ಪನೆ ಚಿಕ್ಕ ಮಗುವಿನ ಸಂಕೇತ ಭೂತಕಾಲ ಹಾಗೂ ವರ್ತಮಾನಕಾಲದ ಸಂಕೇತವಾಗಿರಬಹುದು. ಚಿತ್ರದ ಸಂಯೋಜನೆ ಚೆನ್ನಾಗಿದೆ. ಬಣ್ಣ ಲೇಪನ ಹಾಗೂ ಸೂಕ್ಷ್ಮ ನಕ್ಷೆಗಳು ನೋಡಿಸಿಕೊಳ್ಳುತ್ತವೆ. ಶಯನಮಂಚ ಅಲಂಕೃತವಾಗಿದೆ. ರಾಣಿಯರು ಕಚ್ಚೆಸೀರೆ ಹಾಗೂ ರವಿಕೆ ತೊಟ್ಟಿದ್ದಾರೆ. ದೊಡ್ಡಗಾತ್ರದ ತುರುಬು ನೀಳವಾಗಿ ಇಳಿಬಿಟ್ಟು ಕೇಶಾಲಂಕಾರ ಸುಂದರವಾಗಿದೆ. ಹೂವು ಎಲೆಬಳ್ಳಿಗಳ ಅಲಂಕಾರಿಕ ರೂಪಗಳಿವೆ. ಮೇಲ್ಗಡೆ ಒಂದು ಪಕ್ಷಿ ಹಾರುವ ಚಿತ್ರವಿದೆ. ಅರಮನೆಯ ಅಂತಃಪುರದಲ್ಲಿ ತಿಳಿ ಹಸಿರು, ಆನಂದ ಬಣ್ಣ ಹಿನ್ನೆಲೆಯಾಗಿದ್ದರೆ ಪೂರ್ತಿ ಚಿತ್ರದ ಹಿನ್ನೆಲೆ ಕಂದಿ ಬಣ್ಣವಾಗಿದೆ.

ದೇವ ದೇವತೆಯರ ಚಿತ್ರಗಳನ್ನು ನೋಡಿದರೆ ಅನೇಕ ಮುಖಗಳು ಕೈಯಲ್ಲಿ ಆಯುಧಗಳನ್ನು ಹಿಡಿದು ಕುಳಿತ ದೇವಿಯರ ಚಿತ್ರಕೃತಿಗಳು ಕಾಲ್ಪನಿಕ ಹಾಗೂ ದೈವೀ ದೇವಿಯರ ದರ್ಶನ ಮಾಡಿಸುತ್ತಿವೆ.

ಕೃಷ್ಣನ ರಾಸಲೀಲೆಯ ಮೊದಲ ಚಿತ್ರ 'ರಂಗಿನಾಟ'. ಮಧ್ಯದಲ್ಲಿ ಶ್ರೀಕೃಷ್ಣ ಅಕ್ಕಪಕ್ಕದಲ್ಲಿ ಅನೇಕ ಸಖಿಯರು ತಮ್ಮ ಕೈಗಳಲ್ಲಿ ಬಣ್ಣದ ಜೀಕಳಿಗಳನ್ನು ಹಿಡಿದು ಕೃಷ್ಣನೆಡೆಗೆ ಬಣ್ಣ ಹಾರಿಸುತ್ತಿದ್ದಾರೆ. ಹಿನ್ನೆಲೆ ಸುಂದರವಾದ ಪ್ರಕೃತಿಯ ರೇಖೆಗಳನ್ನು ಹಾಕಿದ್ದಾರೆ. ವರ್ಣ ವಿನ್ಯಾಸ ಸಮತೋಲನದಿಂದ ಮಾಡಿದ್ದಾಗಿದೆ. ಸಖಿಯರ ಕೇಶಾಲಂಕಾರ ಹಾಗೂ ಕಚ್ಚೆಸೀರೆ ಎದ್ದು ಕಾಣುತ್ತದೆ. ಪ್ರತಿ ಸಖಿಯರ ಮುಖದಲ್ಲಿ ಹಸನ್ಮುಖತೆ ಎದ್ದು ಕಾಣುತ್ತಿದೆ. ಪ್ರತಿಯೊಬ್ಬರು ಉಟ್ಟ ವಸ್ತ್ರಗಳ ಮೇಲೆ ಸಾಂಪ್ರದಾಯಿಕ ಶೈಲಿಯ ಚಿಕ್ಕೆಗಳಿವೆ. ಒಂದೇ ಸರಳರೇಖೆಯಲ್ಲಿ ಬರುವಂತೆ ಮಾನವಾಕೃತಿಗಳಿದ್ದರೂ ಚಿತ್ರದ ಸಂಯೋಜನೆ ನೋಡಿಸಿಕೊಳ್ಳುತ್ತಿದೆ. ಗಾತ್ರ ೧ x ೫ ಅಡಿ ಇದೆ.

ಕೃಷ್ಣಲೀಲೆಯ ಇನ್ನೊಂದು ಚಿತ್ರ. 'ಶ್ರೀಕೃಷ್ಣನ ಮೆರವಣಿಗೆ' ವಿಚಿತ್ರ ಕಾಲ್ಪನಿಕ ಚಿತ್ರವಾಗಿದೆ. ಹೆಣ್ಣುಮಕ್ಕಳ ಅಲಂಕಾರಕ ರೂಪಗಳಿಂದಲೆ ನಿರ್ಮಿಸಿದ ಒಂದು ಸುಂದರ ಪಲ್ಲಕ್ಕಿ ಮೇಲ್ಭಾಗ, ಚಕ್ರಾಸನದಂತಿರುವ ಸ್ತ್ರೀ ಅಕ್ಕಪಕ್ಕ ಕಾಲುಗಳನ್ನು ಉದ್ದ ಮಾಡಿದ ಸ್ತ್ರೀಯರು ಆ ಪಲ್ಲಕ್ಕಿಯಲ್ಲಿ ಶ್ರೀ ಕೃಷ್ಣನು ಕುಳಿತಿರುವದು. ಆ ಪಲ್ಲಕ್ಕಿಯ ಮುಂದೆ ಹಿಂದೆ ಅನೇಕ ಸ್ತ್ರೀಯರು ಕಚ್ಚೆ ಸೀರೆ ರವಿಕೆಯಿಂದ ಅಲಂಕರಿಸಿಕೊಂಡು ಕೈಯಲ್ಲಿ ಛತ್ರ ಚಾಮರಗಳನ್ನು ಹಿಡಿದು ಮೆರವಣಿಗೆಯಲ್ಲಿ ಹೊರಟಿದ್ದಾರೆ. ಆ ಹೆಣ್ಣುಗಳ ಅಲಂಕಾರಿಕ ರೂಪಗಳಿಂದ ನಿರ್ಮಾಣವಾದ ಪಲ್ಲಕ್ಕಿ ನೋಡುವಾಗ 'ಗಂಜೀಫಾ' ಕಲೆಯು ನೆನಪಿಗೆ ಬರುತ್ತದೆ. ಈ ಪಲ್ಲಕ್ಕಿಯ ಕೆಳಗಡೆ ಒಂದು ಶ್ವೇತವರ್ಣದ ತುಂಬಾ ಸುಂದರವಾದ ಆಕಳ ಆಕೃತಿ ಇದೆ.

ಈ ಚಿತ್ರಗಳ ಕೆಳಗಡೆ ಪೂರ್ಣ ವರ್ತುಳಗಳಲ್ಲಿ ಸಂಯೋಜಿಸಲ್ಪಟ್ಟ ಎರಡು ಕೃತಿಗಳಿವೆ. ಮೊದಲನೆಯದರಲ್ಲಿ ಬರೀ ಮಹಿಳೆಯರನ್ನೇ ದುಂಡು ವರ್ತುಳದಲ್ಲಿ ಸಂಯೋಜಿಸಲಾಗಿದೆ. ಕಲಾವಿದನ ಕಲ್ಪನೆ ಅದ್ಭುತವಾಗಿದೆ. ಇಲ್ಲಿರುವ ಎಲ್ಲ ಮಹಿಳೆಯರಿಗೆ ರವಿಕೆ ಮತ್ತು ಲಂಗಗಳ ವಸ್ತ್ರಾಲಂಕಾರವಿದೆ. ಉತ್ತಮ ಕೇಶಾಲಂಕಾರ, ಆದರೆ ಮೇಲ್ಗಡೆ ಒಬ್ಬಳು ಕಚ್ಚೆ ಸೀರೆ ಉಟ್ಟು ವಿಶೇಷ ಭಂಗಿಯಲ್ಲಿ ನಿಂತಿದ್ದಾಳೆ. ಬೆನ್ನಿನ ಮೇಲೆ ಬಾಣಗಳಿಂದ ಕೂಡಿದ ಬತ್ತಳಿಕೆ, ಆ ಬತ್ತಳಿಕೆಯಲ್ಲಿ ತ್ರಿಕೋನಾಕಾರದ ಚಿಕ್ಕ ಧ್ವಜವನ್ನಿರಿಸಿಕೊಂಡು ತೆಂಗಿನ ಗಿಡವನ್ನೇ ಒಂದು ಬಾಣವನ್ನಾಗಿ ಮಾಡಿ, ಬಾಣ ಪ್ರಯೋಗ ಮಾಡುತ್ತಿದ್ದಾಳೆ. ಏನು ಇದು ಕಲಾವಿದ ಕಾಲ್ಪನಿಕ ಹುಸಿಹೋಗದ, ಮಾಯೆ ಎಂಬ ಹೆಣ್ಣೆಂಬ ಬಾಣವೋ? ಅಥವಾ ಸ್ತ್ರೀಯರೂ ಧನುರ್ವಿದ್ಯಾಧಾರಿಗಳು ಎಂಬ ಕಲ್ಪನೆಯೋ? ಹೆಣ್ಣಿನ ಬಾಣ ಬಡಿಸಿಕೊಳ್ಳದಿದ್ದರೂ ಆ ಬಾಣದ ಗಾಳಿಯ ವೇಗದ ರಭಸವನ್ನು ಸ್ಪರ್ಶಿಸಿಕೊಳ್ಳದಿರುವವರು ವಿರಳರು.

ಇದೇ ತೆರನಾದ ಇನ್ನೊಂದು ಚಿತ್ರ ಕಲಾವಿದನ ವಿಚಿತ್ರ ಕಲ್ಪನೆ. 'ಆನೆಯ ಸವಾರ' ಮೇಲೆ ಕುಳಿತ ವ್ಯಕ್ತಿಗೆ ನಾಲ್ಕು ಕೈಗಳು ಹಾಗೂ ಶಂಖ ಚಕ್ರಧಾರಿಯಾಗಿದ್ದಾನೆ. ಪೂರ್ತಿ ಆನೆಮಾತ್ರಾ ಮಹಿಳೆಯರ ಅಲಂಕಾರಿಕ ರೂಪಗಳಿಂದಲೇ ಮೂಡಿಬಂದಿದೆ. ಚಿತ್ರ ನೋಡಿದಾಗ 'ಗಂಜೀಫಾ' ಕಲೆಯಲ್ಲಿಯ ರೂಪಗಳು ನೆನಪಿಗೆ ಬರುತ್ತವೆ. ಆನೆಯ ಕಾಲುಗಳಲ್ಲಿ ಹಾಗೂ ಸೊಂಡಿಲಲ್ಲಿ, ದೇಹದ ಭಾಗ ಮುಂತಾದೆಡೆಯಲ್ಲಿ ಸುಂದರ ನಲ್ಲೆಯರ ಆಕೃತಿಗಳಿವೆ. ವೃತ್ತದ ಬಾಹ್ಯರೇಖೆಯನ್ನು ಸ್ವಲ್ಪ ಅಲಂಕಾರ ಮಾಡಿದ್ದಾರೆ. ಇವೆರಡು ಚಿತ್ರಗಳು ಮಹಿಳೆಯರ ಅಲಂಕಾರಿಕ ರೂಪವನ್ನೇ ಗಮನದಲ್ಲಿಟ್ಟುಕೊಂಡು ಚಿತ್ರಕೃತಿಗಳನ್ನು ರಚಿಸಿದಂತಿದೆ. ಪೂರ್ತಿ ಕಲಾಭವನದ ಮೆರಗನ್ನು ಮರೆಯದಂತೆ ಮಾಡಿವೆ.

ಒಬ್ಬ ರಾಜನ ಪಟ್ಟಾಭಿಷೇಕ ನಡೆದಿದೆ. ಅನೇಕ ಋಷಿ ಮುನಿಗಳು ಅಕ್ಕಪಕ್ಕದಲ್ಲಿದ್ದಾರೆ. ಆ ಋಷಿಮುನಿಗಳ ತಲೆಯ ಜಟೆ ಹಾಗೂ ಗಡ್ಡಗಳ ಕೇಶಾಲಂಕಾರದಲ್ಲಿ ಕಲಾವಿದ ಅಲಂಕಾರ ಮೆರೆದಿದ್ದಾನೆ. ಆಯಾಮದ ಚಿತ್ರಗಳು ಇವಾಗಿವೆ.

ಅಂದಾಜು ೧x ೫ ಅಡಿ ಗಾತ್ರದ 'ಸಮುದ್ರ ಮಂಥನ' ಚಿತ್ರ ನೋಡುಗರನ್ನು ಬೆರಗುಗೊಳಿಸುತ್ತದೆ. ಸುಂದರ ವರ್ಣವಿನ್ಯಾಸ ಹಾಗೂ ಸಾಂಪ್ರದಾಯಿಕ ಸೂಕ್ಷ್ಮತೆಯಿಂದೊಡಗೂಡಿದ ರೇಖಾವಿನ್ಯಾಸ ಇದರಲ್ಲಿದೆ. ವಿಶಾಲವಾದ ಸಮುದ್ರದಲ್ಲಿ ಅನೇಕ ಮೀನುಗಳಿವೆ. ಸ್ವಲ್ಪ ದಟ್ಟನೀಲಿ ವರ್ಣದ ನೀರು, ಅದರಲ್ಲಿ ಬರೀ ಹೊರರೇಖೆಗಳಿಂದ ರಚಿತವಾದ ಮೀನಿನ ಆಕಾರಗಳಿವೆ. ಈ ಸಮುದ್ರದಲ್ಲಿ ಒಂದು ದಟ್ಟ ವರ್ಣದ ಪರ್ವತ. ಆ ಪರ್ವತದ ಕೆಳಗೆ ಕೂರ್ಮ(ಆಮೆ)ಯ ಡುಬ್ಬದ ಮೇಲೆ ಪರ್ವತವಿದೆ. ಆ ಪರ್ವತದ ಒಂದೆಡೆ ದೇವಗಣ, ಇನ್ನೊಂದೆಡೆ ರಾಕ್ಷಸಗಣಗಳು ವೀರಾವೇಶದಲ್ಲಿ ಆದಿಶೇಷನನ್ನು ಹಿಡಿದು ಜಗ್ಗ ಹತ್ತಿದ್ದಾರೆ. ಆ ಆದಿಶೇಷನನ್ನೆ ಹಗ್ಗವನ್ನಾಗಿ ಮಾಡಿ ಪರ್ವತಕ್ಕೆ ಸುತ್ತಿದ್ದಾರೆ. ಹಗ್ಗವನ್ನು ಎಳೆಯುವುದರೊಂದಿಗೆ ಜೋರಾಗಿ ಆ ಸಮುದ್ರವನ್ನು ಸುರ ಅಸುರರು ಕಡೆಯುತ್ತಿದ್ದಾರೆ. ಈ ಕಡೆಯುವ ಪ್ರಕ್ರಿಯೆಯಿಂದ ಹೊರಟ ಲಕ್ಷ್ಮೀ, ಐರಾವತ, ಕನ್ಯಾ, ವಿಷ, ಸೂರ್ಯ, ಚಂದ್ರ ಮುಂತಾದವರನ್ನು ಆ ಕಡಗೋಲಾದ ಪರ್ವತದ ಅಕ್ಕಪಕ್ಕಕ್ಕೆ ಚಿಕ್ಕಗಾತ್ರದಲ್ಲಿ ತೋರಿಸಲಾಗಿದೆ. ಪರ್ವತದ ತುತ್ತ ತುದಿಗೆ ಶಿವಲಿಂಗವಿದೆ. ದೇವಗಣಕ್ಕೂ ಹಾಗೂ ರಾಕ್ಷಸಗಣಕ್ಕೂ ಸುಂದರ ವರ್ಣವಿನ್ಯಾಸ, ವಸ್ತ್ರವಿನ್ಯಾಸವಿದೆ. ಸಿಟ್ಟಿನಿಂದ ಜಗ್ಗಲ್ಪಡುತ್ತಿರುವ ರಾಕ್ಷಸಗಣ, ದೇವಗಣ ತಮ್ಮ ಕಣ್ಣುಗಳ ಹಂಬಲದಿಂದ ಸಿಟ್ಟಾದ ಭಾಗ ಎದ್ದು ಕಾಣುತ್ತಿವೆ.

ಬಹುಶ: ನಾಲ್ಕು ಇಂಚು ಉದ್ದ, ಅಗಲವುಳ್ಳ ಚಿಕ್ಕ ಗಾತ್ರದ ಶಿವಪಾರ್ವತಿಯರ ಚಿತ್ರ ಒಂದೇ ಆಯಾಮದಲ್ಲಿದ್ದರೂ ಆ ಚಿತ್ರ ತ್ರಿವಳಿಯ ಹಾಗೂ ತಾಜಾತನದ ಕಲ್ಪನೆ ಕೊಡುತ್ತದೆ. ತಾಡೋಲೆ ಗ್ರಂಥದ ಅಥವಾ ಚಿಕಣಿ ಚಿತ್ರಗಳಂತೆ ಭಾಸವಾಗುತ್ತದೆ. ಆ ಚಿತ್ರವನ್ನೇ ಮುಂದುವರಿಸಿ ಶಿವನ ಚರಿತ್ರೆಯನ್ನು ಬಿಂಬಿಸುವಂತೆಯು ಅಥವಾ ಪಾರ್ವತಿಯ ಜೀವನ ತೋರಿಸುವ ಒಂದು ಕೃತಿ 'ಗಿರಿಜಾ ಕಲ್ಯಾಣ'ದಂತೆ ಇದೆ. ಉತ್ತಮವಾದ ವರ್ಣವಿನ್ಯಾಸ, ರೇಖಾವಿನ್ಯಾಸ ಇದರಲ್ಲಿದೆ. ಇದು ೮ ಇಂಚು ಉದ್ದ, ೫ ಅಡಿ ಅಗಲ ಇದ್ದು ವಿಶೇಷ ಗಾತ್ರದ ಚಿತ್ರ ಇದಾಗಿದೆ.

ದೊಡ್ಡ ಗಾತ್ರದಲ್ಲಿ ವಿಠೋಬಾ ದೇವರ ಚಿತ್ರದ ಅಕ್ಕಪಕ್ಕದಲ್ಲಿ ಕಚ್ಚೆಸೀರೆ ಉಟ್ಟ ಮಹಿಳೆಯರು ಆರತಿ ತಾಟನ್ನು ಹಾಗೂ ಹಣ್ಣಿನ ಗೊನೆಗಳನ್ನು ಹಿಡಿದುಕೊಂಡು ದೇವರ ಪೂಜೆಗೆ ಬರುತ್ತಿದ್ದಾರೆ. ವರ್ಣವಿನ್ಯಾಸ, ರೇಖಾವಿನ್ಯಾಸ ಶ್ರೇಷ್ಠ ಮಟ್ಟದ್ದಾಗಿದೆ.

ಚಮತ್ಕಾರಿಕ ಚಿತ್ರ ಒಂದಿದೆ. ನಂದಿ ಹಾಗೂ ಆನೆ ಎರಡೂ ಪ್ರಾಣಿಗಳು ಎದುರು ಬದಿರು ನಿಂತಿವೆ. ಎರಡಕ್ಕೂ ಒಂದೇ ಒಂದು ಮುಖ. ಆ ಮುಖವನ್ನು ನಾವು ಆನೆಯ ಭಾವದಿಂದ ನೋಡಿದಾಗ ಆನೆ ಕಾಣುತ್ತದೆ. ವೃಷಭ (ನಂದಿ) ಭಾವದಿಂದ ನೋಡಿದಾಗ ನಂದಿ ಕಾಣುತ್ತದೆ. ನಂದಿಯ ಮೇಲೆ ಶಿವನು ಆಸೀನನಾಗಿದ್ದರೆ ಆನೆಯ ಮೇಲೆ ಪಾರ್ವತಿಯು ಶಿವಲಿಂಗ ಸಮೇತ ಕುಳಿತಿದ್ದಾಳೆ. ನೋಡಲು ಮುಜಗರದ ಚಿತ್ರ ಇದಾಗಿದೆ.

ಪ್ರಾಯ: ಹದಿನೇಳನೆಯ ಶತಮಾನದ ಅವಧಿಯಲ್ಲಿ ಶ್ರೀಮಂತ ವರ್ಗದ ಜನರು ವಾಸ್ತುಶಿಲ್ಪಕಲೆಯನ್ನು (ಮನೆಯ ಕಟ್ಟಡಗಳನ್ನು) ಚಿತ್ರಕಲಾಕೋಣೆಯೊಂದಿಗೆ ನಿರ್ಮಿಸುತ್ತಿದ್ದರು. ಆ ಕಲಾಕೋಣೆಯಲ್ಲಿ ದೊಡ್ಡವರು, ಮಧ್ಯಮರು, ಚಿಕ್ಕಮಟ್ಟ ಮಟಾಣಿಗಳು ನೋಡಿ ಆನಂದಿಸುವ ಕಲಾಕೃತಿಗಳು ಅಲ್ಲಿರುತ್ತವೆ. ಈ ನರಗುಂದದ ಚಿತ್ರಕೃತಿಗಳು ಜಾನಪದ ಶೈಲಿ ಎಂದು ಹೇಳಲಿಕ್ಕಾಗದು. ಶಿಷ್ಟವೆಂದೂ ನಿಖರವಾಗಿ ಹೇಳಲಿಕ್ಕಾಗದು. ಇವು ಜಾನಪದ ಹಾಗೂ ಶಿಷ್ಟದ ಮಧ್ಯದ ಕೊಂಡಿ ಎಂದು ಹೇಳಬಹುದು. ಇವುಗಳಲ್ಲಿ ಬಳಸಿದ ರೇಖಾವಿನ್ಯಾಸ, ರೇಖಾ ಸೂಕ್ಷ್ಮತೆ ನೋಡಿದರೆ ಗ್ರಂಥಗಳಲ್ಲಿಯ ಕಿರುರೂಪಿ ಚಿತ್ರಗಳನ್ನು ಮೀರಿಸುತ್ತದೆ. ಅವುಗಳ ಹಿನ್ನೆಲೆಯನ್ನು ಕಂದಿ ಅಥವಾ ತಿಳಿನೀಲಿ ಹಸಿರುಗಳಿಂದ ಪೂರ್ತಿ ಮಾಡಿದ್ದಾರೆ. ಈ ಲಕ್ಷಣಗಳು ಹಾಗೂ ಅಮೂರ್ತತೆಯ ಮತ್ತು ಸಾಂಕೇತಿಕತೆಯ ಆಕಾರಗಳನ್ನು ನೋಡಿದಾಗ ಶಿಷ್ಟಕೃತಿಗಳನ್ನು ಮೀರಿಸುವ ಕೃತಿಗಳು ಇವಾಗಿವೆ. ಇವುಗಳಲ್ಲಿಯ ಮಾನವಾಕೃತಿಯ ಪ್ರಮಾಣಬದ್ಧತೆ ವಾಸ್ತವೀಕರಣ ಹಾಗೂ ಎಡಬಲಕ್ಕೆ ಕೈ ಕಾಲುಗಳನ್ನು ಪರೀಕ್ಷಿಸಿದಾಗ ತಪ್ಪುಗಳು ಎದ್ದು ಕಾಣುತ್ತಿವೆ. ಇವುಗಳಿಂದ ಜಾನಪದವೆಂದು ಹೇಳಬಹುದು.

ಅಗಲ ಕೇವಲ ಐದಾರು ಇಂಚು, ಎತ್ತರ ಎರಡು ಅಡಿವರೆಗೆ ಇರುವ ಚಿತ್ರಕೃತಿಗಳು ಚಿಕ್ಕಮಕ್ಕಳ ಮನೋರಂಜನೆಗಾಗಿ ರಚನೆಯಾಗಿವೆ. ಈ ಚಿತ್ರಕೃತಿಗಳಲ್ಲಿ ಎತ್ತರವಾದ ಅಡಿಕೆ ತೆಂಗಿನಮರದಲ್ಲಿ ಕೋತಿಗಳು ಜಿಗಿದಾಡುವುದನ್ನು ಚಿತ್ರಿಸಿದ್ದಾರೆ. ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹೋಗುತ್ತಿರುವ ಮಂಗಗಳ ಹಿಂಡನ್ನು ಚಿತ್ರಿಸಿದ್ದಾರೆ.

ಅಲ್ಲಲ್ಲಿ ಮಧ್ಯದಲ್ಲಿ ಸಿಕ್ಕ ಅಲ್ಪ, ಸ್ವಲ್ಪ ಸ್ಥಳವನ್ನು ನವಿಲು ಹೂದಾನಿ ಎಲೆ ಬಳ್ಳಿಗಳ ಹಾಗೂ ಹೂವಿನ ನಕ್ಷೆ, ಮಂಗ, ಒಂದೇ ಮುಖಕ್ಕೆ ಮೂರು ಮೀನುಗಳು, ಕಾಮಧೇನುವಿನ ಚಿತ್ರಗಳಿಂದ ಪೂರ್ತಿಮಾಡಿ ಸುಂದರ ಹೊರರೇಖೆಗಳನ್ನು ಹಾಕಿದ್ದಾರೆ.

ಕೆಲವು ಕಡೆಗೆ ಆನೆ ಸಿಂಹಗಳ ಕಾಳಗದ ಚಿತ್ರಗಳಿವೆ. ಆನೆಯ ತಲೆಯ ಮೇಲೆ ಸಿಂಹ ಆಕ್ರಮಣ ಮಾಡಿರುವ ಚಿತ್ರ ಹಾಗೂ ನಕ್ಷೆಯ ರೂಪವಾಗಿ ಮೂಡಿಬಂದಿವೆ.

ವಿಷ್ಣುವಿನ ಮಹಾ ಅವತಾರ ಮತ್ತು ರಾಕ್ಷಸ ಸಂಹಾರ ಈ ಚಿತ್ರಕೃತಿ ಬಹಳ ಸುಂದರವಾಗಿದೆ. ರೌದ್ರವಾದ ವರಾಹ ಅವತಾರ, ಕೋರೆಗಳು, ವಿಶಾಲ ಕಣ್ಣುಗಳು, ಉದ್ದನೆಯ ಮುಖ ಒಳ್ಳೆಯ ಅಲಂಕಾರಿಕ ಶೈಲಿಯಲ್ಲಿವೆ. ಎದುರಿಗೆ ಅಕ್ರಾಳ ವಿಕ್ರಾಳವಾಗಿರುವ ಒಬ್ಬ ರಾಕ್ಷಸ. ಅವನಿಗೆ ದಟ್ಟವರ್ಣ ಲೇಪಿಸಲ್ಪಟ್ಟಿದೆ. ಅವನನ್ನು ಸಂಹರಿಸುತ್ತಿರುವ ಚಿತ್ರ ಚೆನ್ನಾಗಿ ಬಿಡಿಸಿದ್ದಾರೆ.

ಸ್ವಲ್ಪ ದೊಡ್ಡಗಾತ್ರದಲ್ಲಿ ಶಂಖ ಚಕ್ರಧಾರಿಯಾದ ದೇವರಮೂರ್ತಿ ಹಾಗೂ ಇಕ್ಕೆಡೆಗಳಲ್ಲಿ ಒಂದೊಂದು ಕಾಲ್ಪನಿಕ ಅಲಂಕಾರಿಕ ವ್ಯಕ್ತಿಗಳು ಎಡಗಡೆ ಗರುಡ ಪಕ್ಷಿಯ ಪಕ್ಕಗಳು ಬೆನ್ನಿನ ಹಿಂದೆ ಇವೆ. ಹಾಗೂ ಚೂಪಾದ ಮೂಗು ಇದೆ. ಬಲಗಡೆ ಬಾಲವಿರುವ ಉಬ್ಬಿರುವ ಮುಖದ ಹನುಮನಿದ್ದಾನೆ.

ಮತ್ತೆರಡು ವರ್ತುಳಾಕಾರದಲ್ಲಿ ಚಿತ್ರಗಳಿವೆ. ಒಂದೇ ವರ್ತುಳದಲ್ಲಿ ಮುಕುಟ ಹಾಗೂ ಆಭರಣಧಾರಿಣಿಯಾದ ಸರಸ್ವತಿ ಅಲಂಕಾರಿಕ ರೂಪದಲ್ಲಿ ಮೂಡಿದ್ದಾಳೆ. ತನ್ನ ವಾಹನವಾದ ನವಿಲಿನ ಮೇಲೆ ಕುಳಿತಿದ್ದಾಳೆ. ಕೈಯಲ್ಲಿ ಒಂದು ವೀಣಾ ಹಿಡಿದುಕೊಂಡಿದ್ದಾಳೆ. ನವಿಲಿನ ಅಲಂಕಾರಿಕ ರೂಪ

ವಿಶೇಷ ಗಮನ ಸೆಳೆಯುತ್ತಿದೆ. ಹಿನ್ನೆಲೆ ನೀಲಿಯಾಗಿದೆ. ಇದರಂತೆಯೆ ಇನ್ನೊಂದು ವರ್ತುಳದಲ್ಲಿ ಗಣಪತಿಯ ಚಿತ್ರವಿದೆ. ಈ ಗಣಪತಿಯ ಚಿತ್ರವು ಎಷ್ಟುನೋಡಿದರೂ ತೃಪ್ತಿಯಾಗುವುದಿಲ್ಲ. ಮತ್ತೆ ಮತ್ತೆ ನೋಡುತ್ತೇವೆ. ಗ್ರಂಥಗಳ ಹಸ್ತಪ್ರತಿಗಳಲ್ಲಿ ಕಾಣಸಿಗುವ ಚಿತ್ರವನ್ನೇ ದೊಡ್ಡದನ್ನಾಗಿ ಮಾಡಿ ಹಾಕಿದಂತಿದೆ. ಪೇಶ್ವೆ ಕಾಲದ ಉಡುಪುಗಳು ಎದ್ದು ಕಾಣುತ್ತಿವೆ. ಆದರೆ ಪೀಠದಲ್ಲಿ ಅಷ್ಟು ಸೂಕ್ಷ್ಮತೆ ಕಾಣುವುದಿಲ್ಲ. ಇಂತಹ ಚಿತ್ರವನ್ನು ಗುಳೇದಗುಡ್ಡದ ಹೊಸಮನಿಗೌಡರ ಮನೆಯಲ್ಲಿಯ ಭಿತ್ತಿ ಚಿತ್ರಗಳಲ್ಲಿ ನೋಡಬಹುದು.

ಈ ಮೇಲಿನ ಮೂರ್‍ನಾಲ್ಕು ಚಿತ್ರಗಳನ್ನು ಕಾಯುತ್ತಲೋ ಅಥವಾ ದೇವರ ಸೇವೆಗಾಗಿಯೋ ನಿಂತ ಇಬ್ಬರು ದ್ವಾರಪಾಲಕರ ಚಿತ್ರ ಸ್ವಲ್ಪ ದೊಡ್ಡಗಾತ್ರದಲ್ಲಿಯೇ ಇದೆ.

ಶೇಷಶಯನ ವಿಷ್ಣು ವಿಶಾಲವಾದ ಸಮುದ್ರದಲ್ಲಿ ಬೃಹತ್ ಆಕಾರದ ಹಳದಿ ವರ್ಣದ ಸರ್ಪ ತನ್ನ ಹೆಡೆ ಎತ್ತಿದೆ. ಅದುವೇ ಲಕ್ಷ್ಮಿ ವಿಷ್ಣುವಿಗೆ ಶಯನವಾಗಿದೆ. ವಿಷ್ಣುವಿನ ನಾಭಿಯಿಂದ ಬ್ರಹ್ಮ ಹಾಗೂ ವಿಷ್ಣುವಿನ ಸೇವೆ ಮಾಡುತ್ತಿರುವ ಲಕ್ಷ್ಮಿಯ ಸಾಂಪ್ರದಾಯಿಕ ಚಿತ್ರ ದೊಡ್ಡ ಗಾತ್ರದಲ್ಲಿ ಇದೆ.

'ರಾಜರುಗಳ ಸಂವಾದ' ಕೆಲವೊಬ್ಬರು ಗಡ್ಡಧಾರಿ ವ್ಯಕ್ತಿಗಳು ಏನೋ ಚರ್ಚೆಯಲ್ಲಿರುವಂತೆ ಹಾಗೂ ಇಬ್ಬರು ಗಡ್ಡ ಇಲ್ಲದ ವ್ಯಕ್ತಿಗಳು ಕಂಡುಬರುತ್ತವೆ. ಯುದ್ಧದ ಹಾಗೂ ರಣವಾದ್ಯ ನುಡಿಸುವವರ ಚಿತ್ರಗಳು ಈ ತೆರನಾದ ಪ್ರತಿ ಚಿತ್ರಗಳಿಗೆ ಕಂದಿ ಅಥವಾ ನೀಲಿ ಬಣ್ಣಗಳಿಂದ ಒಂದು ಸೆಂಟಿಮೀಟರ್ ಗಾತ್ರದ ಹೊರರೇಖೆಯನ್ನು ಹಾಕಿದ್ದಾರೆ. ಚಿತ್ರಕೃತಿಗಳ ತಾಳಿಕೆ ಬಾಳಿಕೆಗಾಗಿ ಅವುಗಳ ಮೇಲೆ ಪಾರದರ್ಶಕ ತೈಲ ಲೇಪಿಸಿದ್ದಾರೆ. ಚಿತ್ರ ರಚನೆಗೆ ಹದವಾದ ಗಚ್ಚಿನಿಂದ ಲೇಪಿಸಲ್ಪಟ್ಟ ಗೋಡೆಯನ್ನು ತಯಾರಿಸಿಕೊಂಡು ಕಂದು ಬಣ್ಣದಿಂದ ಚಿತ್ರ ರಚಿಸಿಕೊಂಡು ನಂತರ ತೈಲವರ್ಣ ಅಥವಾ ಹುಡಿ ಬಣ್ಣಗಳನ್ನು ನೀರಿನಲ್ಲಿ ಕಲೆಸಿ ಲೇಪಿಸಿದ್ದಾರೆ. ಪ್ರತಿ ಚಿತ್ರಕ್ಕೂ ಕಪ್ಪು ಸೂಕ್ಷ್ಮವಾದ ಹೊರ ರೇಖೆಗಳನ್ನು ಹಾಕಿದ್ದಾರೆ. ಚಿತ್ರಗಳನ್ನು ಕಣ್ಣಿನ ಮಟ್ಟಗಿಗೆ ಸಮಾನ ಹಾಗೂ ಸ್ವಲ್ಪ ಮೇಲ್ಭಾಗದಲ್ಲಿ ನೋಡಲು ಬರುವಂತೆ ನಿರ್ಮಿಸಿದ್ದಾರೆ. ಕೆಳಭಾಗದಲ್ಲಿ ಕಂದಿ ಬಣ್ಣ ಲೇಪಿಸಿದ್ದಾರೆ.

ಮನೆಯ ಮೇಲ್ಛಾವಣಿಯ ಚಿತ್ರಗಳು:–

ಪ್ರತಿಯೊಬ್ಬರಿಗೆ ಬೇಕಾಗಿರುವ ಅವಶ್ಯಕವಾದ ಮೂಲಭೂತ ವಸ್ತು ಮನೆಯನ್ನು, ಸಾಮಾನ್ಯ ವರ್ಗದವರು ತಕ್ಕ ಮಟ್ಟಿಗೆ ಅಲಂಕಾರ ಮಾಡಿಕೊಂಡರೆ, ಕೆಲ ಶ್ರೀಮಂತವರ್ಗದವರು ಅತೀ ಸುಂದರವಾಗಿ ತಮ್ಮ ವಾಸ್ತುಶಿಲ್ಪವನ್ನು ಅಲಂಕರಿಸಿಕೊಳ್ಳುತ್ತಿದ್ದರು ಎಂಬುದಕ್ಕೆ ನರಗುಂದದ ಹಸಬಿಯವರ ಮನೆಯು ಒಂದಾಗಿದೆ. ಇಲ್ಲಿ ಒಟ್ಟು ಮೂರು ತೆರನಾಗಿ ಚಿತ್ರಿಸಿದ ಚಿತ್ರಗಳನ್ನು ನಾವು ಕಾಣುತ್ತೇವೆ. ಒಂದು ಪೂರ್ತಿ ಮೇಲ್ಭಾಗದಲ್ಲಿ ಬಿಡಿಸಿದ ತಗಡಿನ ಮೇಲಿನ ಚಿತ್ರಗಳು, ಕಟ್ಟಿಗೆ ಹಲಗೆಯ ಮೇಲೆ, ಹಾಗೂ ಮೂರನೆಯದಾಗಿ ಗೋಡೆಯ ಮೇಲಿನ ಚಿತ್ರಗಳು.

ಮೊದಲನೆಯ ವರ್ಗದ ಚಿತ್ರಗಳು ನೋಡಲು ಕೇವಲ ಐದು ಪ್ರತಿಶತ ಸಿಕ್ಕರೆ, ಹಲಗೆಯ ಮೇಲಿನ ಚಿತ್ರಗಳು ಹತ್ತು ಪ್ರತಿಶತ ಸಿಗುತ್ತವೆ. ಗೋಡೆ ಚಿತ್ರಗಳು ಪೂರ್ತಿಯಾಗಿ ಮಾಯವಾಗಿವೆ.

ಈ ಚಿತ್ರಗಳ ಮುಖ್ಯ ಉದ್ದೇಶ ನೋಡುವುದರಿಂದಲೇ ತಿಳಿಯುತ್ತದೆ. ಕನಿಷ್ಠ ಎಪ್ಪತ್ತೈದರಿಂದ ಎಂಭತ್ತು ಅಂಶದ ಕೋನ ಮಾಡಿಕೊಂಡು ಗೋಣನ್ನು ಮೇಲೆತ್ತಿದಾಗ ಮಾತ್ರಾ ಈ ಚಿತ್ರಗಳನ್ನು ನೋಡಲು ಸಾಧ್ಯ. ಇವುಗಳು ಜನ್ಮ ತಾಳಿದ್ದು ಈ ವಸ್ತುಕಲೆಗೆ ಹೊಳಪುಕೊಡಲು, ನಂತರ ದೊಡ್ಡ ಅವಿಭಕ್ತ ಕುಟುಂಬಗಳು ಅಲ್ಲಿರುವ ಸದಸ್ಯರೆಲ್ಲರೂ ನೋಡಿ ಆನಂದಿಸಲೆಂದು. ಹೊರಗಡೆ ಎಲ್ಲ ಪ್ರೇಕ್ಷಕರು ನಮ್ಮ ಮನೆಯ ಅಲಂಕಾರ ನೋಡಿ ಆನಂದಿಸಲೆಂದು ಈ ತರಹದ ಮೇಲ್ಛಾವಣಿಯ ಚಿತ್ರಗಳು ರಚನೆಗೊಂಡಿವೆ. ಬಡಿಗ ಹಾಗೂ ಚಿತ್ರಕಲಾವಿದ ಏಕಕಾಲಕ್ಕೆ ಚಿತ್ರ ಹಾಗೂ ಕಟ್ಟಿಗೆಯ ಕೆತ್ತನೆಯ ಕಾರ್ಯಗಳನ್ನು ಮಾಡಿದ್ದಾರೆ. ಅವನ ಅಲಂಕಾರಿಕ ರೂಪಗಳನ್ನು ಇವನು, ಇವನ ಅಲಂಕಾರಿಕ ರೂಪಗಳನ್ನು ಅವನು ಬಳಸಿಕೊಂಡಿದ್ದಾರೆ. ಚಿತ್ರದ ಹೊರ ರೇಖೆಗಳನ್ನು ಢಾಳವಾಗಿ ದಪ್ಪನೆಯ ಗೆರೆಗಳಿಂದ ಹಾಕಿದ್ದಾರೆ ನೋಡುಗರಿಗೆ ಸರಳವಾಗಿ ಕಾಣಲೆಂದು.

ಈ ಚಿತ್ರಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಕೆಲವು ಚಿತ್ರ ಸಂಯೋಜನೆಗಳಲ್ಲಿ ಕೆಲವೊಂದು ವ್ಯಕ್ತಿಗಳ ಹೆಸರುಗಳನ್ನು ಕೆತ್ತಿ ಅದರೊಳಗೆ ಬಿಳಿ ಬಣ್ಣ ತುಂಬಿದ್ದಾರೆ. ಆ ವ್ಯಕ್ತಿಗಳಿಗೆ ಸಂಬಂಧಿಸಿದ ಲಿಖಿತ ದಾಖಲೆ ಸಿಕ್ಕರೆ, ಇದೇ ಸಂದರ್ಭವನ್ನು ಚಿತ್ರಿಸಿದ್ದಾರೆಂದು ಹೇಳಬಹುದು. ಅಲ್ಲಿಯವರೆಗೆ ಇದೊಂದು ಚಿತ್ರಕೃತಿ ಎಂದು ಹೇಳಬಹುದು.

ಚಿತ್ರದಲ್ಲಿಯ ವಿಷಯಗಳೆಂದರೆ ರಾಮಾಯಣ, ಗಂಡಭೇರುಂಡ ಪಕ್ಷಿ, ಶ್ರೀಕೃಷ್ಣಲೀಲೆ, ಹನುಮಾನ್, ಪ್ರಾಣದೇವರು, ದ್ವಿ ಸ್ತ್ರೀಯರೊಂದಿಗೆ ರಾಜ, ಭಗವದ್ಗೀತೆ, ಆನೆ, ನಂದಿ, ಕೆಲವು ಚಿತ್ರಗಳಲ್ಲಿ ಟ್ರೇಸ್ ಮಾಧ್ಯಮದಿಂದ ಮೂಡಿರುವುದು ಎದ್ದು ಕಾಣುತ್ತದೆ. ರಾಮಾಯಣದ ಚಿತ್ರದಲ್ಲಿ ರಾಮ-ರಾವಣರ ಯುದ್ಧದ ಸಂಯೋಜನೆ ಚೆನ್ನಾಗಿ ಮೂಡಿಬಂದಿದೆ. ರಾಮ-ರಾವಣರ ಮಧ್ಯ ಹಾರಾಡುವ ಹನುಮನಿದ್ದಾನೆ.

ಮೇಲ್ಛಾವಣಿಯ ಮೂಲೆಯಲ್ಲಿಯ ನಕ್ಷೆಗಳು:-

ಮೂಲೆಗಳಲ್ಲಿ ಭೂಮಿ ಆಯ ನಕ್ಷೆಗಳನ್ನು ಹೋಲುವ ನೈಸರ್ಗಿಕ ಅಲಂಕಾರಿಕ ನಕ್ಷೆಯನ್ನು ಟ್ರೇಸ್ ಮಾಡಿ ಅದರಲ್ಲಿ ಬಣ್ಣ ತುಂಬಿದ್ದಾರೆ. ಅದರಲ್ಲಿ ನಡುವೆ ಏನಾದರು ತೂಗುಹಾಕಲು ಕೊಂಡಿಗಳನ್ನು ಹಾಕಿದ್ದಾರೆ.

ಕಾಲ್ಪನಿಕ ಅಲಂಕಾರಿಕ ರೂಪಗಳು:-

ಹೊಸ ಜಗತ್ತಿನ ಕಾಲ್ಪನಿಕ ರೂಪಗಳು ಇಲ್ಲಿವೆ. ಪಕ್ಷಿಯ ದೇಹ, ಆನೆಯ ತಲೆ ಅದರಂತೆ ಪಕ್ಷಿಯ ದೇಹ, ಸಿಂಹದ ಮುಖ, ಒಂದೇ ಮುಖದಲ್ಲಿ ಮೂರು ಮೀನುಗಳು ಮಾಯಾಲೀಲೆಯ ನಕ್ಷೆಯಂತಿವೆ.

ಟ್ರೇಸ್ ಮಾಧ್ಯಮದಿಂದ, ಆನೆಯನ್ನು ಆಕ್ರಮಣ ಮಾಡಿದ ಸಿಂಹದ ಎಡಬಲ ಕೃತಿ ಹಾಗೂ ಕಾಮಧೇನು, ಮಹಿಳೆಯ ಮುಖ ಆಕಳ ದೇಹ ಸುಂದರ ಕಿರೀಟ, ಬಾಲ ಸುಂದರ ರೂಪಗಳು ರಚಿತಗೊಂಡಿವೆ.

ಸಮುದ್ರದ ಮಂಥನ ಸುರ ಅಸುರರಿಂದ ಹಾಗೂ ಸೈನಿಕರ ಸಾಲುಗಳು ಬೇಟೆಯಾಡುವುದು ಕುದುರೆ ಸವಾರರ ಚಿತ್ರಗಳನ್ನು ಚಿತ್ರಿಸಿ ತೈಲ ಅಥವಾ ಭೂಮಿಯ ಬಣ್ಣಗಳನ್ನು ಲೇಪಿಸಿದ್ದಾರೆ. ಅವುಗಳ ಮೇಲೆ ಪ್ರಕೃತಿಯ ಪ್ರಭಾವ ಬೀರದಂತೆ ತೈಲ ಲೇಪಿಸಿರಬಹುದು. ಆದರೆ ಪ್ರಕೃತಿಯ ಪ್ರಭಾವದಿಂದ ಅವೆಲ್ಲ ಕಾಂತಿ ಕಳೆದುಕೊಳ್ಳಹತ್ತಿವೆ. ಇಂತಹ ಚಿತ್ರಗಳ ಪ್ರಭಾವದಿಂದಲೇ ಇಂದು ನಮ್ಮ ಭವ್ಯ ಬಂಗಲೆಗಳಲ್ಲಿ ಪ್ಲಾಸ್ಟರ್, ಸಿಮೆಂಟ್ ಮುಂತಾದವುಗಳಿಂದ ಮಾಡಿದ ಸೀಲಿಂಗ್ ಡಿಝಾಯಿನ್‌ಗಳನ್ನು ಕಾಣುತ್ತಿದ್ದೇವೆ.

ಮುಖ್ಯಾಧಿಕಾರಿ, ಇನ್‌ಟ್ಯಾಚ್ (Intach) ಚಿತ್ರಕಲಾ ಪರಿಷತ್, ಬೆಂಗಳೂರು– ಇವರಿಗೆ ಕರ್ನಾಟಕ ಸರಕಾರ ಆರ್ಥಿಕ ನೆರವು ನೀಡಿ ಕೊನೆಯ ಉಸಿರೆಳೆಯುತ್ತಿರುವ ಇಂತಹ ಭಿತ್ತಿ ಚಿತ್ರಗಳನ್ನು, ಮೇಲ್ಛಾವಣಿ ಚಿತ್ರಗಳನ್ನು ಸಂರಕ್ಷಿಸಲು ಹೇಳಿ ನಮ್ಮ ಮುಂಬರುವ ಪೀಳಿಗೆ ನೋಡಿ ಆನಂದಿಸುವಂತೆ ಮಾಡಲಿ. ಇವೆಲ್ಲ ಚಿತ್ರಗಳನ್ನು ಚಿತ್ರೀಕರಣ ಮಾಡಿಕೊಂಡ ಕರ್ನಾಟಕ ಲಲಿತಕಲಾ ಅಕಾಡೆಮಿಯು, ತನ್ನ ಸಂಚಾರಿ ಚಿತ್ರ ಪ್ರದರ್ಶನಾಲಯದಲ್ಲಿ ಚಿತ್ರ ಸುರುಳಿಯನ್ನು ಇರಿಸಿಕೊಂಡು ನಾಡಿನ ಜನತೆಗೆ ತೋರಿಸುತ್ತಾ ಸೌಂದರ್ಯ ಪ್ರಜ್ಞೆ ಮೂಡಿಸಬೇಕು. ಇಪ್ಪತ್ತೊಂದನೆಯ ಶತಮಾನದಲ್ಲಿ ಪಾದಾರ್ಪಣ ಮಾಡಲಿರುವ ನಾವು ನಮ್ಮ ಪೂರ್ವಜರ ಈ ಸಂಪ್ರದಾಯವನ್ನು ನಮ್ಮ ಮನೆ, ಕಛೇರಿ, ಮಹಲು ಮಹಡಿಗಳಲ್ಲಿ ಚಿತ್ರಕೃತಿಗಳನ್ನು ಹಾಕಿ ಮುಂದುವರಿಸಿಕೊಂಡು ಹೋಗುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

***

ನರಗುಂದದ ವೆಂಕಟೇಶ್ವರ ದೇವಸ್ಥಾನದಲ್ಲಿಯ ಭಿತ್ತಿ ಚಿತ್ರಗಳು

ನರಗುಂದದ ಗುಡ್ಡದ ಮೇಲಿರುವ ಭವ್ಯ ವೆಂಕಟೇಶ್ವರ ದೇವಾಲಯವು ಶ್ರೇಷ್ಠ ವಾಸ್ತುಶಿಲ್ಪವಾಗಿದೆ. ಮಂದಿರದ ಬಲಭಾಗಕ್ಕೆ ಉತ್ಸವದ ವಾಹನಗಳ ಪವಳಿಗಳು, ಎಡಭಾಗಕ್ಕೆ ಗುಡ್ಡ , ನಡುವೆ ಸಮತಟ್ಟಾದ ಸಮತಲದಲ್ಲಿ ಶ್ರೀ ವೆಂಕಟೇಶ ಭಗವಾನ ಮಂದಿರ ಕಂಗೊಳಿಸುತ್ತಿದೆ.

ಗುಡಿಯ ಮಹಾದ್ವಾರದ ಎದುರಿಗೆ ಗಣಪತಿ ಗುಡಿಯ ಬೆನ್ನುಗೋಡೆಗೆ ಜೀವ ಗಾತ್ರದ ದೊಡ್ಡ ಭಿತ್ತಿಚಿತ್ರಗಳು ಕಂಗೊಳಿಸುತ್ತವೆ. ಮಧ್ಯದಲ್ಲಿ ವೆಂಕಟೇಶ ಭಗವಾನ, ಎಡಬಲಕ್ಕೆ ಲಕ್ಷ್ಮೀ, ಪದ್ಮಾವತಿಯರು ಇರುವ ಒಂದು ಚಿತ್ರ, ಎಡಬಲಕ್ಕೆ ಹನುಮ, ಗರುಡರ ಚಿತ್ರಗಳಿವೆ. ಚಿತ್ರಿಸುವ ಮೊದಲು ಗೋಡೆಗೆ ಸಮತಲವನ್ನು ನಿರ್ಮಿಸಿಕೊಂಡು ನಂತರ ಜಲವರ್ಣಗಳಿಂದ ಚಿತ್ರಗಳನ್ನು ರಚಿಸಿದ್ದಾರೆ. ಚಿತ್ರಕೃತಿಗಳಿಗೆ ಸದ್ಯದಲ್ಲಿ ಮರುಬಣ್ಣ ಲೇಪನವಾದಂತಿದೆ. ಶೈಲಿ ಹಳೆಯದಿದೆ . ದಕ್ಷಿಣದ ಭಿತ್ತಿ ಚಿತ್ರಗಳ ಶೈಲಿಯೇ ಇದೆ.

ಗರ್ಭಗುಡಿಯ ಅಕ್ಕಪಕ್ಕದ ಬೃಹತ್ ಗಾತ್ರದ ಗೋಡೆಗಳು ಕಲ್ಲಿನಲ್ಲಿವೆ. ಆ ಗೋಡೆಗಳಿಗೆ ತಿಳಿಯಾದ ಸುಣ್ಣದ ಗಾರೆ ಲೇಪಿಸಿ ಅದರ ಮೇಲೆ ಭಿತ್ತಿ ಚಿತ್ರಗಳನ್ನು ನಿರ್ಮಿಸಿದ್ದಾರೆ. ಈ ಚಿತ್ರಗಳ ಗಾತ್ರವೂ ಕೂಡಾ ಜೀವಕಳೆಯ ಗಾತ್ರ ಹಾಗೂ ಅದಕ್ಕಿಂತ ದೊಡ್ಡಗಾತ್ರದ್ದಿದೆ. ಬಲಭಾಗಕ್ಕೆ ಗಣಪತಿ, ಎಡಭಾಗಕ್ಕೆ ಸರಸ್ವತಿಯ ಭಿತ್ತಿಚಿತ್ರಗಳಿವೆ. ತಲೆಯ ಮೇಲೆ ಅಲಂಕಾರಿಕ ಕಿರೀಟ ನಕ್ಷೆಗಳಿವೆ. ಇವುಗಳಿಗೂ ಕೂಡಾ ಇತ್ತೀಚಿನ ಪೋಸ್ಟರ್ ಬಣ್ಣ ಲೇಪನವಾದಂತಿದೆ.

ಎಡಬಲಕ್ಕೆ ದೊಡ್ಡಗಾತ್ರದ ದ್ವಾರಪಾಲಕರಿದ್ದಾರೆ. ಹೇರಳವಾಗಿ ಆಭರಣಗಳನ್ನು ಹಾಕಿಕೊಂಡಿದ್ದಾರೆ. ಕೆಲ ಆಭರಣಗಳಿಗೆ ಇತ್ತೀಚಿನ ಬೆಳ್ಳಿ ಸುನೇರಿ ಬಣ್ಣ ಲೇಪಿಸಿದ್ದಾರೆ. ಕೈಯಲ್ಲಿ ಆಯುಧವನ್ನು ಹಿಡಿದು ನೃತ್ಯಭಂಗಿಯಲ್ಲಿ ನಿಂತಿದ್ದಾರೆ. ಪ್ರತಿ ಚಿತ್ರದ ಮೇಲ್ಗಡೆ ಭಿತ್ತಿ ಚಿತ್ರಗಳಿಗೆ ಹಾಕುವಂತೆ ಕಮಾನಿನ ನಕ್ಷೆ ಹಾಕಿದ್ದಾರೆ.

ಗರ್ಭಗುಡಿಯ ಬಾಗಿಲ ಪಕ್ಕದಲ್ಲಿರುವ ಅಂದಾಜು ಒಂದುವರೆ ಫೂಟ್ ಅಗಲ ಉಳ್ಳ ಗಾತ್ರದ ಸ್ಥಳದಲ್ಲಿ ಒಂದೆಡೆ ಐದು, ಇನ್ನೊಂದೆಡೆ ಐದು ಗೋಲಾಕಾರಗಳು ಬಾಗಿಲ ಚೌಕಟ್ಟಿಗೆ ಇವೆ. ಈ ವರ್ತುಲಗಳಲ್ಲಿ ವಿಷ್ಣುವಿನ ದಶಾವತಾರದ ಚಿತ್ರಗಳು ಮೂಡಿ ಬಂದಿವೆ. ಎಡಬಲಕ್ಕೆ ಒಂದೊಂದು ಚೌಕಾಕಾರದಲ್ಲಿ ನಕ್ಷೆಗಳಿವೆ. ಅಲ್ಲದೆ ತುತ್ತ ತುದಿಗೆ ಬಲಕ್ಕೆ ಸೂರ್ಯ ಹಾಗೂ ಎಡಕ್ಕೆ ಚಂದ್ರನ ಚಿತ್ರಗಳಿವೆ. ಸೂರ್ಯನ ಒಳಗಡೆ ರೌದ್ರ ವ್ಯಕ್ತಿಯ ಕಣ್ಣು, ಮೂಗು, ಹುಬ್ಬು, ಹೊರಗಡೆ ಪ್ರಖರ ಬೆಳಕನ್ನು ಚೆಲ್ಲುವ ಹಾಗೆ ಮಾಡಿದ್ದಾರೆ. ಚಂದ್ರನಲ್ಲಿ ಒಂದು ಕೋಮಲ ಜಿಂಕೆಯ ಚಿತ್ರವಿದೆ. ಇವು ಸೂರ್ಯ– ಚಂದ್ರರ ಸಾದೃಶ್ಯ ಚಿತ್ರಗಳಾಗಿವೆ.

ಸಾಂಪ್ರದಾಯಿಕ ಭಿತ್ತಿ ಚಿತ್ರಗಳ ಅಲಂಕಾರವನ್ನೇ ಹೋಲುವ ಬೃಹತ್‌ಗಾತ್ರದ ಚಿತ್ರಗಳಿವೆ. ಆದರೆ ರೇಖಾವಿನ್ಯಾಸದಲ್ಲಿ ಸೂಕ್ಷ್ಮತೆ ಹಾಗೂ ತೇಜಮಯ ಕಡಿಮೆ ಎನಿಸುತ್ತಿದೆ. ಪ್ರತಿ ಚಿತ್ರಗಳ ಅಕ್ಕಪಕ್ಕದಲ್ಲಿರುವ ನಕ್ಷಾ ಪಟ್ಟಿಗಳಲ್ಲಿಯೂ ಕೂಡಾ ತೇಜಮಯ ರೇಖೆಗಳ ಕೊರತೆ ಎದ್ದುಕಾಣುತ್ತದೆ. ಎಲ್ಲ ನಕ್ಷಾ ಪಟ್ಟಿಗಳನ್ನು ಮರು ವರ್ಣಲೇಪನ ಮಾಡಿದೆ.

ಮಂದಿರದ ಒಳಭಾಗದಲ್ಲಿ ಪುಟ್ಟ ಮಹಡಿಯ ಒಳಭಾಗದ ಗೋಡೆಗಳ ಮೇಲೆಯು ಭಿತ್ತಿಚಿತ್ರಗಳಿದ್ದವಂತೆ. ಆ ಮಹಡಿಯಲ್ಲಿ ತಿರುಗಾಡುತ್ತಾ ಆ ಭಿತ್ತಿಚಿತ್ರಗಳನ್ನು ವೀಕ್ಷಿಸಲು ಅವಕಾಶ ವಿತ್ತಂತೆ. ಆದರೆ ಸದ್ಯ ಆ ಮಹಡಿಯಲ್ಲಿ ಯಾವ ಚಿತ್ರಗಳು ಕಾಣುತ್ತಿಲ್ಲ.

ವೇಕಟೇಶ ಮಂದಿರದ ಬೃಹತ್ ವಾಸ್ತುಶಿಲ್ಪಕ್ಕೆ ಕಟ್ಟಿಗೆಯ ಕೆಲಸ ಹಾಗೂ ಚಿತ್ರಕೃತಿಗಳು ಹೊಳಪು ಕೊಟ್ಟಿವೆ. ಚಿತ್ರಕೃತಿಗಳ ನಿರ್ಮಾಣದ ಕಾಲವನ್ನು ನಿಖರವಾಗಿ ಹೇಳುವುದು ಕಷ್ಟವಾಗಿದೆ. ಕಾರಣವೇನೆಂದರೆ ಶೈಲಿಯಲ್ಲಿ ಸ್ವಲ್ಪ ಬದಲಾವಣೆ ಹಾಗೂ ಇತ್ತೀಚಿನ ಬಣ್ಣಗಳ ಲೇಪನವಾಗಿವೆ. ಚಿತ್ರಕೃತಿಗಳಿರುವುದರಿಂದ ಮಂದಿರದ ಕಳೆ ಹೆಚ್ಚಾಗಿದೆ. ಚಿತ್ರಕಲಾ ಪಂಥ ಧಾರ್ಮಿಕ ಸೇವೆಗೆ ಕಂಕಣ ತೊಟ್ಟಿದ್ದು ಎದ್ದು ಕಾಣುತ್ತಿದೆ.

***

ಮಹಾಲಿಂಗಪುರದ ಮಹಾನ್ ಚಿತ್ರಕಲಾಕೃತಿಗಳು

ಹೊಳೆಸಾಲಿನ ಹಚ್ಚ ಹಸಿರಾದ ಫಲವತ್ತಾದ ಭೂಮಾತೆಯ ಗರ್ಭದಲ್ಲಿ ಅಡಗಿದ ಕಲಾ ಸಂಪತ್ತನ್ನು ಅರಿತುಕೊಳ್ಳುವುದೆಂದರೆ ಎಲ್ಲಿಲ್ಲದ ಆನಂದ.

ಮಹಾಲಿಂಗೇಶ್ವರ ಸಿದ್ದಿಸಂಸ್ಥಾನ ಮಠದ ಪ್ರವೇಶದ್ವಾರ ಪೂರ್ವಕ್ಕಿದ್ದರೆ, ನಮ್ಮ ಚಿತ್ರಕಲಾ, ವಾಸ್ತುಶಿಲ್ಪ, ಕಟ್ಟಿಗೆಯ ಕಲಾ ಸಂಪತ್ತಿರುವ ಮಹಾಭವನದ ಪ್ರವೇಶ ದ್ವಾರ ಉತ್ತರ ದಿಕ್ಕಿಗಿದೆ. ಇಲ್ಲಿಯ ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಗಳ ಹೇಳಿಕೆಯ ಪ್ರಕಾರ ೧೫೭೫ ರಿಂದ ೧೬೦೦ ಅವಧಿಯಲ್ಲಿ ಮಠದ ನಿರ್ಮಾಣಕಾರ್ಯ ನಡೆದಿದೆ.


ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ ಬಿಜಾಪುರ–ಬಾಗಲಕೋಟ ಜಿಲಲೆಯ ಗ್ರಂಥವನ್ನು ನೋಡಿದಾಗ ಗುಳೇದಗುಡ್ಡ ೧೫೪೦ ರಲ್ಲಿ ಗುಳೆಬಂದ ಜನರಿಂದ ನಿರ್ಮಾಣವಾಗಿದೆ ಎಂದು ಇದೆ. ಈ ಮಹಾಲಿಂಗಪುರದ ಮಠದ ವಾಸ್ತುಶಿಲ್ಪಕಲಾಶೈಲಿಯನ್ನೇ ಹೋಲುವ ಶ್ರೀ ಬಸವಪ್ರಭು ಗಂಗಾವತಿ ಅವರ 'ಮಹಾಮನೆ' ಹೆಸರಿನ ಮನೆ ಇದೆ. ಗುಳೇದಗುಡ್ಡದ ಮಹಾಮನೆಯ ಗಾತ್ರದ ಎರಡುಪಟ್ಟು ದೊಡ್ಡದಿದೆ. ಈ ಮಠ ಮುಧೋಳದ ಘೋರ್ಪಡೆ ರಾಜಮನೆತನದವರಿಂದ ನಮಗೆ ಬಂದಿತೆಂದು ಸ್ವಾಮೀಜಿಯವರ ಅಭಿಪ್ರಾಯವಾಗಿದೆ.

ಸದ್ಯ 'ಜಟಾದರ್ಶನ ಕಟ್ಟಡ' ಎಂಬ ಭಾಗದಲ್ಲಿ ಈ ಭವ್ಯ ಚಿತ್ರಕಲಾಭವನ ಅಂದಾಜು ೨೦೦ x ೨೦೦ ಅಡಿ ಗಾತ್ರದಲ್ಲಿ ಅಮ್ಮಿನಭಾವಿಯ ಬಾಳ ಹೊನ್ನೂರ ಶಾಖಾ ಮಠವನ್ನು ಹೋಲುತ್ತದೆ. ಈ ಕಲಾಗ್ಯಾಲರಿಗೆ ಬರುವ ಮಹಾದ್ವಾರದ ಮೇಲ್ಗಡೆ ಸುಂದರ ಕಟ್ಟಿಗೆಯ ಕೆಲಸದ ಕಲೆಗಳಲ್ಲಿ ಅನೇಕ ಸುಳಿವು ಸಂಯೋಜನೆಗಳಿವೆ. ಒಳಗಡೆ ನವಗ್ರಹದ ಮೂರ್ತಿಗಳನ್ನೆ ಮೇಲ್ಭಾವಣಿಗೆ ಕೆತ್ತಿದ್ದಾರೆ. ಈ ಬೃಹತ್ ಕಟ್ಟಡದಲ್ಲಿ ಚಿತ್ರ, ಕಟ್ಟಿಗೆ ಕಲೆ, ಕಲ್ಲಿನ ಶಿಲ್ಪ ಮುಪ್ಪುರಿಗೊಂಡಿವೆ.

ಭವನದ ಒಳಗಡೆ ಪ್ರವೇಶಿಸಿದಾಗ ಮೇಲ್ಗಡೆ ಇರುವ ಬೆಳಕಿನ ಕಿಂಡಿಯಿಂದ ಹಾಗೂ ಪಶ್ಚಿಮದ ಬಾಗಿಲಿನಿಂದ ಬರುವ ಬೆಳಕು ಸರಳವಾಗಿ ಎದುರಿಗಿರುವ ೮ x ೬ ಅಡಿ ಗಾತ್ರ ಚಿತ್ರ ಗೋಚರಿಸುತ್ತದೆ. ಆ ಚೌಸವ್ವೆ ಮನೆಯಂತಿರುವ ಮೆಟ್ಟಿಲುಗಳನ್ನು ಹತ್ತಿ ಕಣ್ಣಿಗೆ ಸಮಾನ ಅಂತರದಿಂದ ಸ್ವಲ್ಪ ಮೇಲ್ಗಡೆಗೆ ನಿರ್ಮಿಸಿರುವ ಚಿತ್ರ ನೋಡಿದರೆ ಮಹಾನ್ ಕಲ್ಪನೆಗಳು ಮೂಡುವದು ಸಹಜ. ಚಿತ್ರದಲ್ಲಿ ಕಣ್ಣುಬಿಟ್ಟು ಕ್ವಾರಮೀಸೆಯ ಮುಖಗಳನ್ನು ನೋಡಿದಾಗ ಇವು ಜಾನಪದ ಶೈಲಿ ಸಂಪ್ರದಾಯದವು ಎನಿಸುತ್ತವೆ. ಆದರೆ ಅಲಂಕಾರಶೈಲಿ ಸೂಕ್ಷ್ಮವಾದ ರೇಖಾವಿನ್ಯಾಸ ನೋಡಿದಾಗ ಅಪ್ಪಟ ಭಾರತೀಯ ಶೈಲಿ, ದಕ್ಷಿಣದ ಚಿತ್ರಕಲಾ ಸಂಪ್ರದಾಯದ ದಕ್ಷಿಣ ಚಿತ್ರಕಲಾ ಸಂಪ್ರದಾಯದವು ಎನಿಸುತ್ತಿವೆ. ಇಲ್ಲಿರುವ ಚಿತ್ರಕಲಾ ಕೃತಿಗಳ ವಿಶೇಷತೆ ಎಂದರೆ ಒಂದು ಚಿತ್ರವನ್ನು ಕೇಂದ್ರವಾಗಿಟ್ಟುಕೊಂಡು ಅದರ ಅಶ್ರಯದಲ್ಲಿ ಸಂಯೋಜನೆಗೊಳ್ಳುತ್ತಾ ಉಳಿದೆಲ್ಲಾ ಚಿತ್ರಗಳು ಬರುತ್ತವೆ. ಸದ್ಯದಲ್ಲಿ ಇಲ್ಲಿ ಇಂತಹ ಬೃಹತ್ ಗಾತ್ರದ

ಎರಡು ಚಿತ್ರಗಳು ಮಾತ್ರ ನೋಡಲು ಸಿಗುತ್ತದೆ. ಇವುಗಳಿಗೆ ನಾನು ಹೆಸರಿಸಿದ್ದೆಂದರೆ 'ಶಿವನ ಮಹಿಮೆ' ಶಿವನ ಒಡ್ಡೋಲಗ (ಮೆರವಣಿಗೆ) ಎಂದು ಹೆಸರಿಸಿಕೊಂಡು ಈ ಚಿತ್ರಗಳ ಆಶ್ರಯದಲ್ಲಿ ಬರುವ ಎಲ್ಲ ಚಿತ್ರಗಳನ್ನು ತಮ್ಮೆದುರಿಗೆ ವಿಮರ್ಶಿಸ ಬಯಸುತ್ತೇನೆ.

'ಶಿವನ ಮಹಿಮೆ':- ೮ x ೬ ಗಾತ್ರದ ಚಿತ್ರ ಶಿವ ಸಂಪ್ರದಾಯದ್ದಾಗಿದೆ. ಚಿತ್ರವನ್ನು ರಚಿಸುವ ಮುನ್ನ ಬಿಳಿ ಗಚ್ಚುಗಾರೆಯನ್ನು ಗೋಡೆಗೆ ಚೆನ್ನಾಗಿ ಲೇಪನಮಾಡಿ ಅದು ಹಸಿ ಇರುವಾಗಲೇನೆ ಕಂದಿ ಬಣ್ಣದಿಂದ ರೇಖೆಗಳನ್ನು ಮೂಡಿಸಿಕೊಂಡಿದ್ದಾರೆ. ನಂತರ ತೆಳುವಾದ ಜಲವರ್ಣವನ್ನು ಒನ್ ಡೈಮೆನ್ಷನ್ ಸಮತಟ್ಟಾಗಿ ತುಂಬಿ ನೀಟಾಗಿ ಸೂಕ್ಷ್ಮವಾಗಿ ಹೊರರೇಖೆಗಳನ್ನು ಕಂದಿ, ಜಾಂಬಳಿ, ಕಪ್ಪು ಬಣ್ಣಗಳಿಂದ ಹಾಕಿದ್ದಾರೆ. ಹೆಚ್ಚಾಗಿ ಮೂಲವರ್ಣಗಳಾದ ಹಳದಿ, ಕೆಂಪು, ನೀಲಿ, ಬಳಸಿದ್ದಾರೆ. ಶೀ ಮೂಲವರ್ಣಗಳು ಜಾನಪದ ಗತ್ತಿನವೇ ಆಗಿವೆ.



ಶಿವನ ಮಹಿಮೆಯ ಚಿತ್ರದಲ್ಲಿ ಶಿವನ ಗಾತ್ರ ದೊಡ್ಡದಾಗಿ ಬೆಳೆಸಿಕೊಂಡು ಉಳಿದೆಲ್ಲ ಚಿತ್ರಗಳು ಚಿಕ್ಕಚಿಕ್ಕ ಚಿತ್ರಗಳು. ಮಧ್ಯದಲ್ಲಿ ಶಿವನ ಚಿತ್ರ ಒಳ್ಳೆಯ ಅಲಂಕಾರಿಕ ಶೈಲಿಯಲ್ಲಿದೆ. ಶಿವನು ನಾಲ್ಕು ಕೈಗಳನ್ನು ಹೊಂದಿದ್ದಾನೆ. ಅಲಂಕಾರಿಕ ಸುಖಾಸನದಲ್ಲಿ ಕುಳಿತಿದ್ದಾನೆ. ತಿಳಿಗೆಂಪು ಧೋತರ, ಮೈಮೇಲೆ ಶಲ್ಯ ವಸ್ತ್ರ, ಕೊರಳಲ್ಲಿ ಹಾವು, ರುದ್ರಾಕ್ಷಿ ಇವೆ. ಎಡ ತೊಡೆಯ ಮೇಲೆ ಬಾಲಗಣಪತಿ ಪವಡಿಸಿದ್ದರೆ, ಬಲತೊಡೆಯ ಮೇಲೆ ಪಾರ್ವತಿ ಕುಳಿತಿದ್ದಾಳೆ. ಶಿವನು ಕುಳಿತುಕೊಳ್ಳಲು ಉಪಯೋಗಿಸಿರುವ ಹುಲಿ ಚರ್ಮ ತುಂಬಾ ಅಲಂಕರಮಯವಾಗಿದೆ. ಅದರ ಮುಖ ಮತ್ತು ಬಾಲದ ಮೇಲೆ ಬಣ್ಣದ ತಾಂತ್ರಿಕತೆ ಎದ್ದು ಕಾಣುತ್ತದೆ. ನಾಲ್ಕು ಕೈಗಳಲ್ಲಿ ಬಲಗಡೆ ತ್ರಿಶೂಲ, ರುದ್ರಾಕ್ಷಿಗಳಿದ್ದರೆ ಎಡಗಡೆಯ ಕೈಗಳಲ್ಲಿ ಶಂಖ, ಢಮರುಗಳಿವೆ. ಹೇರಳವಾದ ಜಡೆಗಳಲ್ಲಿ ಅಲಂಕಾರಿಕ ರೇಖಾವಿನ್ಯಾಸದ ನಡುವೆ ಚಂದ್ರ. ಆ ಚಂದ್ರನ ಮೇಲೆ ಗಂಗೆ ತುಂಬ ಅಲಂಕಾರಮಯ ತುರುಬು, ಮೂಗು ನಿರ್ಮಾಣವಾಗಿದೆ. ಅವಳ ತಲೆಯ ಮೇಲ್ಗಡೆ ಪಂಚಮಹೆಡೆ (ಐದುಹೆಡೆ)ಯ ನಾಗರ ಹಾವು ಅಲಂಕಾರಮಯವಾಗಿ ಸುತ್ತಿಕೊಂಡಿದೆ. ಗಂಗೆಯ ಬಾಯಿಂದ ನೀರು ವೇಗವಾಗಿ ಚಿಮ್ಮುತ್ತ ಬೃಹದಾಕಾರವಾಗಿ ಹರಿಯುತ್ತ ಶಿವನ ಹಾಗೂ ಆ ಹುಲಿ ಚರ್ಮದ ಹಿಂದೆ ಹಾಯ್ದು ಕರಳಗಡೆ ಭೂಮಿಗೆ ಹರಿಯುತ್ತಿರುವುದನ್ನೆ ಹಿನ್ನೆಲೆ ಮಾಡಿಕೊಂಡು ಅನೇಕ ಚಿತ್ರಗಳು ನಿರ್ಮಾಣವಾಗಿವೆ. ಇಲ್ಲಿಯ ಭಿತ್ತಿ ಚಿತ್ರಗಳ ವಿಶೇಷ ಶೈಲಿ, ಸಂಪ್ರದಾಯ ಇದಾಗಿದೆ. ಆ ಗಂಗೆಯಿಂದ ಧುಮುಕುವ ನೀರಿನಲ್ಲಿ ಮೀನುಗಳು ಸಹಿತ ಅಲಂಕಾರ ಶೈಲಿಯವಾಗಿವೆ. ಆ ನೀರಿನಿಂದಲೇ ಗುಡ್ಡ, ಬೆಟ್ಟ ನಿರ್ಮಾಣ, ನೀರಿನಲ್ಲಿರುವ ಅಲಂಕಾರಮಯ ಸಸ್ಯಗಳು, ಆ ನೀರಿನ ತಳದಲ್ಲಿ ನೆಗೆದಾಡುತ್ತಿರುವ ಜಿಂಕೆ, ಜಿಂಕೆಮರಿಗಳು ಇವೆ. ಆ ನದಿ ತಟದಲ್ಲಿ ಶಿವನ ಬಲಗಡೆಗೆ ಐದು ಋಷಿ ಮುನಿಗಳ ಪುರುಷಾಕೃತಿಗಳನ್ನು ಚೆನ್ನಾಗಿ ಸಂಯೋಜಿಸಲಾಗಿದೆ. ಕೆಲವರು ವಾದ್ಯಗಳನ್ನು ಊದುತ್ತಿದ್ದರೆ, ಕೆಲವರು ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸಿದ್ದಾರೆ. ಒಬ್ಬ

ಸತ್ಪುರುಷ ತನ್ನ ಬಲಗೈಗೆ ಅರಿವೆ ಚೀಲ ಹಾಕಿಕೊಂಡು ಒಳಗಡೆಗೆ ಜಪಮಣಿ ಹಿಡಿದು ನದಿಯ ದಂಡೆಯ ಮೇಲೆ ಜಪಮಾಡುತ್ತಿದ್ದಾನೆ. ಎಡಗಡೆಗೆ ಮೂರು ಮಾನವಾಕೃತಿಗಳಿವೆ. ಇವು ನಮಸ್ಕರಿಸುವುದು ಬಾರಿಸುವುದು, ಊದುವುದನ್ನು, ಮಾಡುವ ವಾದ್ಯ ಮೇಳಗಳಂತಿವೆ.

ಇವರ ಮೇಲ್ಗಡೆ ಬಲಕ್ಕೆ ಅಲಂಕಾರ ಶೈಲಿಯಲ್ಲಿ ಕುರಿತ ಬಸವಣ್ಣನ ಅಲಂಕಾರಿಕ ಕೊಂಬುಗಳು, ಇಣಿ, ಇಣಿಗೆ ಹಾಕಿದ ಜೂಲಾ, ಮಡಿಚಿ ಕುಳಿತ ಕಾಲುಗಳು, ಕೆಳಗೆ ಚೌಕಾಕಾರದ ಆಸನ ಇದೆ. ಎಡಕ್ಕೆ ಅಲಂಕಾರ ಶೈಲಿಯಲ್ಲಿ ಕುಳಿತ ಬಾಲವೆತ್ತಿದ, ಕುತ್ತಿಗೆಯ ಮೇಲೆ ಅಲಂಕಾರ ಶೈಲಿಯ ಕೇಶರಾಶಿಗಳುಳ್ಳ ಸಿಂಹ ದಿಟ್ಟಿಸಿ ಎದುರಿಗೆ ನೋಡುತ್ತಿದೆ.

ಬಲಕ್ಕೆ ಇವುಗಳ ಮೇಲ್ಗಡೆ ಮತ್ತೆ ನಾಲ್ಕು ಮಾನವಾಕೃತಿಗಳು ಇವೆ. ನದಿಯ ದಂಡೆಯಲ್ಲಿ ಇವರೆಲ್ಲ ಕುಳಿತ ಅನುಭವವಾಗುತ್ತದೆ. ಕಿರೀಟಧಾರಿಯಾದ ರಾಕ್ಷಸನಂತಿರುವ ಒಬ್ಬ ವ್ಯಕ್ತಿ ಅಕ್ರಾಳ ವಿಕ್ರಾಳ ಹಲ್ಲು,ಮುಖ, ಮೀಸೆ, ಮೈ ಬಣ್ಣ ಕಪ್ಪು ಇರುವ ಈ ಆಕೃತಿ ವಜ್ರಾಸನದಲ್ಲಿ ಕುಳಿತು ನಮಸ್ಕರಿಸಿದ್ದಾನೆ. ಮಧ್ಯದಲ್ಲಿಗುವ ಶಿವನೆಡೆಗೆ ನೋಡಿ ಏನೋ ಪ್ರಾರ್ಥಿಸುತ್ತಿದ್ದಾನೆ. ಇನ್ನೊಂದು ಪುರುಷ ಆಕೃತಿಯು ಜಪ ಮಾಡಹತ್ತಿದೆ ಜಟಾಧಾರಿ ಒಬ್ಬ ಪುರಷ ವಾದ್ಯ ಬಾರಿಸಿದರೆ, ಇನ್ನೊಬ್ಬ ವೀಣೆ ನುಡಿಸುತ್ತಾ ನಿಂತಿದ್ದಾನೆ.

ಎಡಕ್ಕೆ ಸಿಂಹದ ಮೇಲ್ಗಡೆ ಕಿರೀಟಧಾರಿಯಾದ ಆರು ಮುಖಗಳುಳ್ಳ ಹಾಗೂ ಹನ್ನೆರಡು ಕೈಗಳುಳ್ಳ ಮಾನವಾಕೃತಿ ಒಂದು ಕೈಯಲ್ಲಿ ಕಮಂಡಲ ಹಾಗೂ ರುದ್ರಾಕ್ಷಿ ಸರ ಹಿಡಿದಿದೆ. ಅದರ ಪಕ್ಕದಲ್ಲಿ ನದಿ ತಳದಲ್ಲಿ ಒಂದು ಮಾನವಾಕೃತಿ ಇದೆ.

ಈ ಮಾನವಾಕೃತಿಗಳ ಮಧ್ಯದಲ್ಲಿ ಶಿವನ ಎಡಕ್ಕೆರಡು, ಬಲಕ್ಕೆ ಎರಡು ಸುಂದರ ಗಾತ್ರದ ನಾಲ್ಕುವೃಕ್ಷಗಳಿವೆ. ಅವುಗಳ ಬಣ್ಣ ದಟ್ಟ ನೇರಳೆ, ಹಸಿರು ಬಳಸಿದ್ದಾರೆ. ಆ ಬಣ್ಣಗಳ ಸಮತೋಲನಕ್ಕಾಗಿ ಮಾನವಾಕೃತಿಗಳ ತಲೆಮೇಲಿರುವ ಜಟಾಗಡ್ಡಗಳಿಗೆ ಬಣ್ಣವನ್ನು ಲೇಪಿಸಿದ್ದಾರೆ. ಈ ಗಿಡಗಳ ರೆಂಬೆಗಳು ಮೇಲೆ ಎರಡು ಅಲಂಕಾರಿಕ ಶೈಲಿಗಳಲ್ಲಿ ಗಿಳಿಗಳನ್ನು ಚಿತ್ರಿಸಿದ್ದಾರೆ.

ಗಿಡಗಳ ದಟ್ಟಹಸಿರು ಬಣ್ಣದ ಎಲೆಗಳ ಮಧ್ಯದಲ್ಲಿ ತಿಳಿಹಳದಿ ಬಣ್ಣಗಳಿಂದ ಎಡಗಡೆಗೆ ಎರಡು, ಬಲಗಡೆಗೆ ಮೂರು ಮಂಗಗಳು ಹಾರಾಡುತ್ತಿರುವುದು. ಒಂದು ಮಂಗನ ಭಂಗಿ ಮತ್ತೊಂದರಲ್ಲಿ ಇಲ್ಲ.

ಆಕಾಶದಲ್ಲಿ ಗಿಳಿ, ಗುಬ್ಬಚ್ಚಿಗಳು ಹಾಗೂ ಇತರ ಕಡೆಗೆ ಹೂವಿನ ಅಲಂಕಾರಿಕ ರೂಪಗಳು ಈ ಪೂರ್ತಿ ಚಿತ್ರಕ್ಕೆ ಮೆರಗು ಕೊಟ್ಟಿವೆ. ಚಿತ್ರದ ಭೂಭಾಗವನ್ನು ತಿಳಿ ನೀಲಿ, ದಟ್ಟ ನೀಲಿ, ಬಳಸಿದರೆ ಆಕಾಶಕ್ಕೆ ಕಟ್ಟಕೆಂಪನ್ನು ಬಳಸಿರುವುದು ಚಿತ್ರಕಲೆ ಸಾರುವ ತಾಂತ್ರಿಕತೆ ಇದಾಗಿದೆ. ಶಿವನ ಆಕಾರ ದೊಡ್ಡದಾಗಿ ಅದಕ್ಕೆ ಸಂಯೋಜನಾತ್ಮಕವಾಗಿ ಉಳಿದೆಲ್ಲ ಚಿಕ್ಕ ಚಿಕ್ಕ ಆಕೃತಿಗಳು ಬಹಳ ಹೊತ್ತಿನವರೆಗೆ ಪ್ರೇಕ್ಷಕರಿಂದ, ಚಿತ್ರಕಲಾಪ್ರೇಮಿಗಳಿಂದ ನೋಡಿಸಿಕೊಳ್ಳುತ್ತವೆ.

ಸೂಕ್ಷ್ಮರೇಖಾವಿನ್ಯಾಸ ಪಕ್ಕದಲ್ಲಿ ಬಂದ ಕಿಟಕಿಯನ್ನು ಹೊರತು ಪಡಿಸಿ ಕಿಟಕಿಯ ಕೆಳಗಡೆ ಒಂದು ಹೂವು ಹಣ್ಣುಗಳನ್ನು ತುಂಬಿಟ್ಟ ಅಲಂಕಾರಿಕ ತಟ್ಟೆ. ಅ ತಟ್ಟೆಯಲ್ಲಿ ಗುಲಾಬಿ ಹೂವುಗಳು. ಆ

ಹೂವಿನ ತಟ್ಟೆಯ ಎಡಬಲಕ್ಕೆ ಎರಡು ಮಂಗಗಳ ಚಿತ್ರಗಳಿವೆ. ಇದನ್ನು ಚಿತ್ರಿಸಿದ್ದು ಈ ಕಿಟಕಿಯ ಮೇಲ್ಗಡೆ ಅಂದಾಜು ೨ ೧/೨ x ೧ ೧/೪ ಅಡಿ ಗಾತ್ರದ ಆಯತಾಕಾರದಲ್ಲಿ ಶಿವನ ರೌದ್ರರೂಪ ಇದಾಗಿರಬಹುದು. ಕಿರೀಟಧಾರಿಯಾಗಿದೆ, ಮೀಸೆ, ಆರು ಕೈಗಳು, ಬಲಗಡೆ ಕೈಗಳಲ್ಲಿ ತ್ರಿಶೂಲ, ಖಡ್ಗ, ಢಾಲ. ಎಡಗಡೆ ಶಂಖ, ಢಮರು, ಹಾವು, ರುಂಡ, ಇವೆ. ಒಂದು ಅಲಂಕಾರಿಕ ಆಸನದ ಆಕೃತಿಯ ಮೇಲೆ ನಿಂತಿದ್ದಾನೆ. ಎಡಬಲಕ್ಕೆ ಆಲದ ಎಲೆಗಳ ಅಲಂಕಾರಿಕ ಹೂವಿನ ಕುಂಡಗಳಿವೆ. ಇವೆಲ್ಲವನ್ನು ನೋಡಿದರೆ ನುರಿತ ಕೈಗಳಿಂದಲೇ ಆಗಿರಲು ಸಾಧ್ಯ ಎಂದೆನಿಸುತ್ತದೆ.

ತಿಳಿಯಾದ ಪಾರದರ್ಶಕ ಜಲವರ್ಣ ಬಳಸಿ ಚಿತ್ರ ರಚಿಸಿ ಸೂಕ್ಷ್ಮವಾದ ರೇಖೆಗಳಿಗೆ ಧಕ್ಕೆ ಹಾಗೂ ಪ್ರಕೃತಿಯ ಪ್ರಭಾವ ಬೀಳದಿರಲೆಂದು ಒಂದು ತರಹದ ಪಾರದರ್ಶಕ ಎಣ್ಣೆ ಲೇಪಿಸಿದ್ದಕ್ಕಾಗಿ ತೈಲವರ್ಣ ಕಲಾಕೃತಿಗಳಂತೆ ಭಾಸವಾಗುತ್ತದೆ. ಈ ಚಿತ್ರ ನೋಡಿ ಆದಮೇಲೆ ಅಕ್ಕಪಕ್ಕದಲ್ಲಿ ನೋಡ ಬಯಸುತ್ತೇವೆ. ಏನೂ ಕಾಣುವುದಿಲ್ಲ ಬಹುಶ: ಇದ್ದಿರಬಹುದು, ತೆಗೆಸಲಾಗಿದೆ. ಸ್ವಲ್ಪ ದೂರ ಪ್ರವೇಶದ್ವಾರದ ಬಲಗಡೆಗೆ ದೊಡ್ಡಗಾತ್ರದ ಚಿತ್ರ ಕಾಣುತ್ತದೆ. ಅದನ್ನು ನೋಡೋಣ–

ಶಿವನ ಒಡ್ಡೋಲಗ (ಮೆರವಣಿಗೆ) ಚಿತ್ರ:– ಈ ಚಿತ್ರಕಲಾ ಭವನದ ಉತ್ತರದ ಮಹಾದ್ವಾರದಿಂದ ಒಳಗೆ ಪ್ರವೇಶಿಸಿದರೆ ಎಡಗಡೆಗೆ ಕಟ್ಟೆ ಹತ್ತಿ ನಿಂತಾಗ ನೆಲದಿಂದ ಮೂರು ಫೂಟಿನವರೆಗೆ ಖಾಲಿ ಸ್ಥಳಬಿಟ್ಟು ಅದರ ಮೇಲ್ಗಡೆಗೆ ೪ x ೧೦ ಗಾತ್ರದ ಒಂದು ಚಿತ್ರ ನಿರ್ಮಾಣವಾಗಿದೆ. ಚಿತ್ರ ನೋಡಲು ಒಂದೇ ಕಂಡರೂ ಇದರಲ್ಲಿ ಅನೇಕ ಚಿತ್ರಗಳಿವೆ. ಆ ಎಲ್ಲಾ ಚಿತ್ರಗಳ ಕೊನೆಗೆ ಉತ್ತಮ ಬಾರ್ಡರ್ ಡಿಝಾಯಿನ್ ಇದೆ. ಪೂರ್ತಿ ಚಿತ್ರಕ್ಕೆ ದಟ್ಟ ಕೆಂಪುವರ್ಣದ ಹಿನ್ನೆಲೆ ಅಲ್ಲಲ್ಲಿ ಕಪ್ಪು ವರ್ಣದ ಹಿನ್ನೆಲೆಯನ್ನು ಬಳಸಿದ್ದಾರೆ. ಚಿತ್ರಕೃತಿಗಳಿಗೆ ನಿರ್ದಿಷ್ಟವಾದ ಗಾತ್ರ ಗುರುತು ಮಾಡಿಲ್ಲ. ಹೇಗೆ ಬೇಕೋ ಹಾಗೆ ಅಮೀಬಾದಂತೆ ವಕ್ರ , ಅಂಕುಡೊಂಕು ಗಾತ್ರದ ಚಿತ್ರಗಳು ನಿರ್ಮಾಣವಾಗುತ್ತಾ ಮಧ್ಯ ಮಧ್ಯ ತಿಳಿಯಾದ ಚಿತ್ರದ ಹೊರರೇಖೆಗಳಿವೆ. ಇದು ಈ ಚಿತ್ರಗಳ ವಿಶೇಷತೆಯೇ ಸರಿ. ಇಲ್ಲಿಯೂ ಚಿತ್ರರಚನಾ ಕಾರ್ಯ ಅದೇ ತರಹ ಇದೆ. ದಟ್ಟವಾದ ಪಾರದರ್ಶಕ ತೈಲವರ್ಣವನ್ನು ಲೇಪಿಸಿರುವುದರಿಂದ ತೈಲವರ್ಣ ಕೃತಿಗಳಂತೆ ಕಾಣುತ್ತವೆ.

ಈ ಚಿತ್ರವೂ ಕೂಡಾ ಮಧ್ಯದಲ್ಲಿ ಶಿವನ ಚಿತ್ರವನ್ನು ಕೇಂದ್ರವನ್ನಾಗಿಸಿಕೊಂಡೇ ಬೆಳವಣಿಗೆ ಹೊಂದಿದೆ. ನಟ್ಟ ನಡುವೆ ಅಲಂಕೃತ ನಂದಿಯು ಠೀವಿಯಿಂದ ನಡೆದಿದೆ. ಅದರ ಕಾಲಿನ ಕುರಗಳನ್ನು ಕೂಡಾ ಅಲಂಕಾರ ಶೈಲಿಯಲ್ಲಿ ಚಿತ್ರಿಸಿದ್ದಾನೆ. ಆ ನಂದಿಯ ಮೇಲ್ಗಡೆ ಚತುರ್ಭುಜಧಾರಿ ಶಿವನು ಕುಳಿತಿದ್ದಾನೆ. ಜೊತೆಗೆ ತೊಡೆಯ ಮೇಲೆ ಪಾರ್ವತಿ ಕುಳಿತಿದ್ದಾಳೆ. ನಂದಿಯ ಎದುರುಗಡೆಗೆ ಮರಾಠರ ಹಾಗೂ ಪೇಶ್ವೆ ಕಾಲದ ಉಡುಪುಗಳನ್ನು ಧರಿಸಿರುವ, ತಲೆಯ ಮೇಲೆ ಕಿರೀಟ ಧರಿಸಿರುವ ಎಂಟು ಪುರುಷ ಆಕೃತಿಗಳು ಶಿವನಿಗೆ ಕೈ ಜೋಡಿಸಿ ನಿಂತಿವೆ. ಆ ಆಕೃತಿಗಳ ಮೇಲ್ಗಡೆ ಒಂಬತ್ತು ಜನ ಋಷಿಮುನಿಗಳು ಕುಳಿತಿದ್ದಾರೆ. ಕುಳಿತಿರುವ ಆಸನ ಚೆನ್ನಾಗಿ ಅಲಂಕಾರಮಯವಾಗಿದೆ. ಶಿವನ ನಂದಿಯ ಹಿಂದುಗಡೆ ಸಾಲಿನಲ್ಲಿ ಛತ್ರ ಚಾಮರಗಳನ್ನು ಹಿಡಿದಿರುವ ಎಂಟು ವಿಶೇಷ ಮನುಷ್ಯಾಕೃತಿಗಳಲ್ಲಿ ವೀರಭದ್ರ, ಗಜಾನನರು ನಡದೇ ಹೋಗುತ್ತಿದ್ದಾರೆ. ಇವರ ಮೇಲ್ಗಡೆ ಆಕಾಶದಲ್ಲಿ ನಾಲ್ಕು ಋಷಿಮುನಿಗಳು ಹಾಗೂ

ಒಬ್ಬ ಹೆಣ್ಣು ಮಗಳು ಕುಳಿತಿದ್ದಾಳೆ. ಎಲ್ಲರೂ ಶಿವನ ಓಲಗಕ್ಕೆ ಕೈ ಮುಗಿದು ಕುಳಿತಿದ್ದಾರೆ. ಕುಳಿತವರಿಗೆಲ್ಲ ಕುಳಿತ ಸ್ಥಳ ವಿಶೇಷ ಅಲಂಕಾರವಾಗಿದೆ. ಕೆಲವರು ತಂಬೂರಿ ಬಾರಿಸುತ್ತಾ ಕುಳಿತಿದ್ದಾರೆ.

ಮಧ್ಯದಲ್ಲಿ ನಂದಿಯ ಮೇಲೆ ಕುಳಿತ ಶಿವನ ಜಡೆಯಲ್ಲಿರುವ ಗಂಗೆಯ ಬಾಯಿಯಿಂದ ಹರಿದು ಬರುವ ನದಿಯು ನಂದಿಯ ಹಿಂದೆ ಹಾಯ್ದು ಕೆಳಗಡೆ ಅದೇ ನೀರಿನ ನೀಲಿ ಹಾಗೂ ಕೆಂಪು ಹಿನ್ನೆಲೆ ಮಾಡಿಕೊಂಡು ಚಿತ್ರಗಳು ನಿರ್ಮಾಣವಾಗಿವೆ. ಮೊದಲನೆಯ ನಟ್ಟ ನಡುವಿನ ಚಿತ್ರ ಅರ್ಥಪೂರ್ಣವಾಗಿದೆ. ಇದನ್ನು ಮೊದಲನೆಯ ಚಿತ್ರ ಸಂಯೋಜನೆ ಎಂದು ಗಣನೆಗೆ ತೆಗೆದುಕೊಂಡೇ ಇದರ ಎಡಕ್ಕೆ ಆರು ಬೇರೆ ಬೇರೆ ಸಂಯೋಜನೆಗಳನ್ನು ಚಿತ್ರಿಸಿದ್ದಾರೆ. ಇನ್ನೂ ಬಲಗಡೆಗೆ ಒಂಬತ್ತು ಚಿತ್ರಗಳಿವೆ. ಇವೆಲ್ಲ ಚಿತ್ರಗಳು ಒಂದೇ ಎನ್ನುವಂತೆ ಕಾಣುವ ಹಾಗೆ ಒಂದೇ ದಟ್ಟಕೆಂಪು ಬಣ್ಣವನ್ನು ಲೇಪಿಸಿದ್ದಾರೆ.

ಗಂಗೆ ಹರಿದು ಬಂದ ನೀಲಿ ಹಿನ್ನೆಲೆಯ ಮೊದಲನೆಯ ಚಿತ್ರ ಋಷಿಮುನಿಗಳ ಸಾಧನೆಯ ಚಿತ್ರವಾಗಿದೆ. ಮಧ್ಯದಲ್ಲೊಂದು ಅಲಂಕೃತ ಗೋಪುರವಿರುವ ಗುಡಿ ಅದರ ಗರ್ಭಗೃಹದಲ್ಲಿ 'ಶಿವಲಿಂಗ'ವಿದೆ. ಇದರ ಮೇಲ್ಭಾಗದಲ್ಲಿ ಶಿವನು ಪದ್ಮಾಸನದಲ್ಲಿ ಕುಳಿತಿದ್ದಾನೆ. ಎದುರುಗಡೆ ಒಬ್ಬನು ನಮಸ್ಕರಿಸಿ ನಿಂತಿದ್ದಾನೆ.

ಕೆಳಗಡೆಗೆ ಋಷಿ ಮುನಿಗಳಿದ್ದಾರೆ. ಅವರ ಸುತ್ತಲೂ ಪುಟ್ಟ ಪುಟ್ಟ ಸುಂದರ ರೇಖಾವಿನ್ಯಾಸವುಳ್ಳ ಆರು ಗುಡಿಗಳಿವೆ. ಮಧ್ಯದ ಗುಡಿಯ ಹತ್ತಿರ ಶಿವನಿದ್ದಾನೆ. ಅವನ ಬಲಕ್ಕೆ ಜಟಾ ಹಾಗೂ ಗಡ್ಡಧಾರಿ ತೆಳುವಾದ ಋಷಿಯೊಬ್ಬರು ವೃಕ್ಷಾಸನ ಮಾಡಿ ಪರ್ವತಾಸನದಲ್ಲಿ ನಿಂತಿದ್ದಾನೆ. ಅವನ ಕೆಳಗಡೆಗೆ ಪದ್ಮಾಸನದಲ್ಲೊಬ್ಬ ಸನ್ಯಾಸಿ. ಅದರ ಪಕ್ಕದಲ್ಲಿ ಗುಡಿಯೊಂದರ ಮುಂದೆ ಒಬ್ಬ ಋಷಿ ತಲೆಕೆಳಗೆ ಮಾಡಿ ಕಾಲ್ಗಳನ್ನು ಮೇಲೆ ಮಾಡಿ ಪದ್ಮಾಸನಯುಕ್ತ ಶೀರ್ಷಾಸನ ಮಾಡಿ ನಂತರ ತನ್ನ ಅಂಗೈಗಳ ಮೇಲೆ ಇಡೀ ದೇಹವನ್ನು ಎತ್ತಿ ಹಿಡಿದಿದ್ದಾನೆ. ಈ ಚಿತ್ರದಲ್ಲಿ ಯೋಗಾಸನದ ಸಂಪ್ರದಾಯವನ್ನು ನೋಡುತ್ತೇವೆ.

ಇದರ ಎಡಗಡೆಗೆ ಮೊದಲನೆಯ ಮತ್ತು ಎರಡನೆಯ ಚಿತ್ರ ಪೇಶ್ವೆ ಮನೆತನದ ಹೆಣ್ಣು ಮಕ್ಕಳು ತಮ್ಮ ಮಕ್ಕಳೊಂದಿಗೆ ಮನೋ ಕಷ್ಟವನ್ನು ಹೇಳಿಕೊಳ್ಳುತ್ತಿರುವುದು. ಶಿವನಂತೆ ಹಾಗೂ ವಿಷ್ಣುವಿನಂತೆ ಕಾಣುವ ಇಬ್ಬರು ವ್ಯಕ್ತಿಗಳಿಂದ ಆ ದುಷ್ಟ ಶಕ್ತಿಯನ್ನು ಸಂಹಾರ ಮಾಡುವ ಚಿತ್ರಗಳಿವೆ. ಒಂದು ಚಿತ್ರದಲ್ಲಿ ಆ ಹೆಣ್ಣುಮಗಳು ಬಿಳಿ ಸೀರೆ ಉಟ್ಟದ್ದರೆ, ಇನ್ನೊಂದರಲ್ಲಿ ಕೆಂಪು ಸೀರೆ ಉಟ್ಟಿದ್ದಾಳೆ.

ಬಲಗಡೆಗೆ ಮೂರನೆ ಚಿತ್ರ ಸರ್ವಶ್ರೇಷ್ಠ ಅಲಂಕೃತವೆನ್ನುವಂತಿದೆ. ಮರಾಠಾ ಮನೆತನದ ಹೆಣ್ಣುಮಗಳೊಬ್ಬಳು ತಂಬೂರಿ ಹಿಡಿದು ಕುಳಿತುಕೊಂಡು ಬಲಗೈಯಿಂದ ತಂಬೂರಿ ನುಡಿಸುತ್ತಿದ್ದಾಳೆ. ಎಡಗೈಯಲ್ಲಿ ಅಲಂಕಾರಿಕ ಪುಷ್ಪದ ಆನಂದ ಸುಗಂಧ ಅನುಭವಿಸಿ ಹಾಡೊಂದನ್ನು ಹಾಡುತ್ತಿದ್ದಾಳೆ. ಇವಳ ಬಲಗಡೆಗೆ ಹಿನ್ನೆಲೆ ಅಲಂಕಾರಮಯ ಕಮಾನಿದೆ. ಅದಕ್ಕೆ ಹೊಂದಿಕೊಂಡೇ ಮೇಲೆ ಛತ್ರಿ ಇದೆ. ಈ ಸಂಗಿತಗಾರ್ತಿಯ ಹಿಂದೆ ಮುಂದೆ ಇಬ್ಬರು ಸಖಿಯರೋ ದಾಸಿಯರೋ ಚಾಮರಗಳನ್ನು ಹಿಡಿದು ನಿಂತಿದ್ದಾರೆ. ಚಾಮರ ಬೀಸುವುದು ಚಿತ್ರಕ್ಕೆ ಹಾಡಿಗೆ ರಾಗಕ್ಕೆ ಚಾಲನೆಯ ಸಂಕೇತವಾಗಿದೆ. ಈ ಚಿತ್ರದಲ್ಲಿ ಶ್ರವ್ಯಾನಂದದ ಜೊತೆಗೆ ದೃಶ್ಯಾನಂದವನ್ನೂ ಸೇರಿಸಿದ್ದಾರೆ. ಅದು ಹೇಗೆಂದರೆ ಆ ಸಂಗೀತಗಾರ್ತಿಯ ಎದುರುಗಡೆಯೇ ನವಿಲೊಂದು ಕುಳಿತಿದೆ. ಇವೆಲ್ಲದಕ್ಕೂ ಸಂಯೋಜನೆಯಾಗುವಂತೆ

ಫಲ,ಪುಷ್ಪ, ಕಾಯಿಗಳು ತುಂಬಿದ ಅಲಂಕೃತ ತಟ್ಟೆಯೊಂದು ಅಂತರದಲ್ಲಿ ನಿಂತಂತೆ ಸಂಯೋಜನೆಯಾಗಿದೆ.

ನಾಲ್ಕನೆಯ ಚಿತ್ರದಲ್ಲಿ ಒಬ್ಬ ಋಷಿ ಕೈಯಲ್ಲಿ ರುದ್ರಾಕ್ಷಿಸರ ಹಿಡಿದು ಮೊಳಕಾಲುಗಳನ್ನು ಮೇಲೆತ್ತಿಕೊಂಡು ಕೈಯಿಂದ ಹಿಡಿದು ಚಿಂತಾಮಗ್ನನಾಗಿ ಕುಳಿತಂತೆ ಕಾಣುತ್ತದೆ. ಅವರ ಹಿಂದುಗಡೆ ಹುಲಿಯೊಂದು ಕುಳಿತಿದೆ. ಗಿಡದಲ್ಲಿ ಹಾವು ಇದೆ. ಅಕ್ಕ ಪಕ್ಕದಲ್ಲಿ ಕರಿ, ಬಿಳಿ ನಾಯಿಗಳೆರಡು ಮೇಲ್ಮುಖಮಾಡಿ ಕುಳಿತಿವೆ. ಋಷಿಗಳು ಚಿಗರೆ ಚರ್ಮದ ಮೇಲೆ ಕುಳಿತಿರುವುದು ಚಿಗರೆಯ ರುಂಡ ಕೊಂಬುಗಳ ಸಹಿತ ಚಿತ್ರಿತವಾಗಿದೆ.

ಐದನೆಯ ಚಿತ್ರದಲ್ಲಿ ಶ್ರೀಕೃಷ್ಣನು ರಾಕ್ಷಸನ ವಧೆ ಮಾಡುತ್ತಿರುವಂತೆ ಕಾಣುತ್ತದೆ. ಕೃಷ್ಣನ ಕಪ್ಪು ಮೈ ಬಣ್ಣ, ಸುಂದರವಾದ ಕಿರೀಟ ಆ ರಾಕ್ಷಸನ ಒಂದು ಕಾಲಿನ ಮೇಲೆ ಕೃಷ್ಣ ಒಂದು ಕಾಲನ್ನಿಟ್ಟು ಇನ್ನೊಂದು ಕಾಲನ್ನು ತನ್ನ ಕೈಯಿಂದ ಮೇಲೆತ್ತಿ ಸೀಳಿ ಸಂಹಾರ ಮಾಡಲೆತ್ನಿಸಿದ್ದಾನೆ. ರಾಕ್ಷಸನು ಖಡ್ಗ ಢಾಲುಧಾರಿಯಾಗಿದ್ದಾನೆ.

ಆರನೆಯ ಚಿತ್ರ ಬಹುಶ: 'ಶಬರ ಶಂಕರ ವಿಲಾಸ'ದ ಚಿತ್ರವಿರಬಹುದು. (ಕಿರಾತಾರ್ಜುನ ಭಿತ್ತಿಚಿತ್ರ) ಕಾಡುಹಂದಿ ಬೇಟೆಯಿಂದ ಸತ್ತು ಬಿದ್ದಿದೆ. ಬೇಡ ಪತಿ, ಪತ್ನಿಯರು ನಿಂತಿದ್ದಾರೆ. ಪಾರ್ವತಿ ಮರಾಠಿ ಮಹಿಳೆಯ ಕಚ್ಚೆ ಸೀರೆಯಲ್ಲಿ ಬಹಳ ಸುಂದರವಾಗಿ ಕಾಣುತ್ತಿದ್ದಾಳೆ. ಎದುರುಗಡೆ ರಾಜ ಪೋಷಾಕುಧಾರಿ ಒಬ್ಬ ಯುವಕ ಕೆಳಗಡೆಗೆ ಇಬ್ಬರು ಬಾಲಕರು ಎರಡು ನಾಯಿಗಳಿವೆ. ಏಳು ಮತ್ತು ಎಂಟನೆಯ ಚಿತ್ರಗಳ ಬೇಟೆಗೆ ಸಂಬಂಧಪಟ್ಟಿವೆ. ಇಬ್ಬರು ಬೇಟೆಗಾರರು ಕಟ್ಟಿಗೆಯೊಂದಕ್ಕೆ ಬೇಟೆಯನ್ನು ಸಿಕ್ಕಿಸಿಕೊಂಡು ತಮ್ಮ ಹೆಗಲಮೇಲೆ ಹೇರಿಕೊಂಡು ಹೊರಟಿದ್ದಾರೆ.

ಈ ಎಲ್ಲಾ ಚಿತ್ರಗಳ ಮಧ್ಯದಲ್ಲಿ ಹುಲಿ ಮತ್ತು ಹಂದಿಯ ಬೇಟೆಯ ಚಿತ್ರ ಒಂದಿದೆ. ಒಬ್ಬ ಬೇಟೆಗಾರ ತನ್ನ ಭರ್ಜಿಯಿಂದ ಹುಲಿಯೊಂದನ್ನು ತಿವಿದಿದ್ದಾನೆ. ಈ ಚಿತ್ರಕ್ಕೆ ಬೋರ್ಡರ್ ವಿಶೇಷವಾಗಿ ಗೋಲಾಕಾರದಲ್ಲಿದೆ. ಆ ಗೋಲಾಕಾರವನ್ನು ಹುಲಿಯ ಬಾಲದಿಂದಲೇ ನಿರ್ಮಿಸಿದ್ದಾರೆ. ಇನ್ನೊಂದು ಬೇಟೆಯ ಚಿತ್ರ, ಒಂದು ವೃತ್ತದಲ್ಲಿ ಒಂದು ಕಾಡುಹಂದಿ ಅದರ ಬಾರ್ಡರ್ ನಕ್ಷೆಯ ಮೇಲೆ ಒಬ್ಬ ಬೇಟೆಗಾರ ಜೋತುಬಿದ್ದಿದ್ದಾನೆ.

ಶಿವನ ಎಡಗಡೆ ಈ ಬೇಟೆಯ ಎರಡೂ ಚಿತ್ರಗಳ ಎದುರುಗಡೆಗೆ ಒಂದು ಸುಂದರವಾದ ಗುಡಿ ಚಿತ್ರಿತವಾಗಿದೆ. ಸುಂದರ ಗುಡಿಗೆ ಮೇಲ್ಗಡೆ ಆರು ಕಮಾನುಗಳು, ಅದರ ಮೇಲೆ ನಾಲ್ಕು ಕಮಾನುಗಳು, ಅವುಗಳ ಮೇಲೆ ಒಂದು ಕಳಸವಿದೆ. ಈ ಎಲ್ಲ ಕಮಾನುಗಳಲ್ಲಿ ಬಣ್ಣದ ಲೈಟಿನಂತಿರುವ ಗಾಜಿನ ಅಲಂಕಾರಿಕ ವಸ್ತುಗಳನ್ನು ಇಲ್ಲಿ ಮತ್ತು ಶಿವನ ಓಲಗದ ಆಕಾಶದಲ್ಲಿ ಚೆನ್ನಾಗಿ ಕಾಣುವಂತೆ ತೂಗುಹಾಕಿದ್ದಾರೆ. ಇದು ಮಧ್ಯದ ಶಿವನ ಎಡಗಡೆಯ ಮೂರನೆಯ ಚಿತ್ರವಾಗಿದೆ. ಗುಡಿಯ ಒಳಗಡೆ ವಿಷ್ಣು ಭಗವಾನ ಮುಕುಟಧಾರಿಯಾಗಿದ್ದಾನೆ. ಶಂಖ, ಚಕ್ರ ಧರಿಸಿದ್ದಾನೆ. ಆಶೀರ್ವಾದ ಮಾಡಿದ್ದಾನೆ. ವಿಷ್ಣು ದೇವರು ಕುಳಿತಿದ್ದಾರೆ. ಆ ದೇವರ ಹಿಂದೆ ನಾಲ್ಕು ಜನ, ಮುಂದೆ ಇಬ್ಬರು ಕೆಲವೊಬ್ಬರು ಧನುರ್ಧಾರಿಗಳಾಗಿ ಬಂದು ನಮಸ್ಕರಿಸಿದ್ದಾರೆ. ಇದು ವೈಷ್ಣವಸಂಪ್ರದಾಯದ ಮಹತ್ವವನ್ನು ತೋರುವ ಚಿತ್ರವಾಗಿದೆ.

ಗೋಪುರದ ಹತ್ತಿರ ಮಂಗಗಳಿವೆ. ಈ ವಿಷ್ಣು ಭಗವಾನನ ಚಿತ್ರದಲ್ಲಿ ಮಹಾರಾಷ್ಟ್ರದ ವೇಷಭೂಷಣ ನೋಡಲು ಸುಂದರವಾಗಿದೆ.

ಎಡಗಡೆಯ ನಾಲ್ಕು ಮತ್ತು ಐದನೆಯ ಚಿತ್ರ, ಒಬ್ಬ ಮಾಂತ್ರಿಕನಿಗೆ ಸಂಬಂಧಿಸಿವೆ. ಒಬ್ಬ ಮಾಂತ್ರಿಕ ಒಂದು ಜಗಲಿ ನಿರ್ಮಿಸಿ ಗ್ರಾಮದೇವಿಯ ತರಹ ಮೂರ್ತಿಯೊಂದನ್ನು ಎದುರಿಗೆ ಇಟ್ಟುಕೊಂಡಿದ್ದಾನೆ. ಅವನೆದುರಿಗೆ ಪತಿ, ಪತ್ನಿಯರು ಬಂದು ಏನೋ ಹೇಳುತ್ತಿದ್ದಾರೆ. ಇನ್ನೊಂದರಲ್ಲಿ ಪತಿ, ಪತ್ನಿಯರ ವೈಮನಸ್ಸನ್ನು ದೂರ ಮಾಡಿ ಅವರನ್ನು ಒಂದುಗೂಡಿಸಹತ್ತಿರುವುದನ್ನು ನೋಡಬಹುದು.

ಎಡಗಡೆಗೆ ಆರನೆಯ ಚಿತ್ರ ಬಹು ಸುಂದರವಾದದ್ದಾಗಿ ಈ ಚಿತ್ರ ಸರಣಿಯ ಕೊನೆಯ ಚಿತ್ರವೆನ್ನಬಹುದು. ಚತುರ್ಭುಜಧಾರಿಯಾದ ಗಣಪತಿಯು ಒಂದು ಸುಂದರ ಸೂಕ್ಷ್ಮ ರೇಖೆಗಳಿಂದ ಅಲಂಕೃತ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ.

ಪೂರ್ಣತೋಳಿನ ರಾಜರ ಅಂಗಿಯಂತಿರುವ ವಸ್ತ್ರ ತೊಟ್ಟಿದ್ದಾನೆ ಗಣಪತಿ. ಡಾ. ಬಿ.ಕೆ.ಹಿರೇಮಠ ಅವರ ಸಂಶೋಧನಾ ಅಧ್ಯಯನ 'ಕನ್ನಡ ಹಸ್ತ ಪ್ರತಿಗಳು' ಗ್ರಂಥದಲ್ಲಿ ಮತಾತೀತ ವರ್ಣಚಿತ್ರಗಳು. ಉದಾಹರಣೆ ಪುಟ ೨೯ -೨೧೦ ರಲ್ಲಿಯ ಗ್ರಂಥದ ಚಿತ್ರವನ್ನು ಈ ಚಿತ್ರ ಹೋಲುತ್ತದೆ. ಆ ಗಣಪತಿ ಅಲಂಕೃತ ಮಂಟಪದ ಹಿಂದೆ ಅಲಂಕೃತ ಕಮಾನಿನ ಪಡಕ ಒಂದಿದೆ. ಆಪಕ್ಕೆ ಹೊಂದಿಕೊಂಡೆ ಛತ್ರಿ ಇದೆ. ಗಣಪತಿಯ ಕೈಗಳಲ್ಲಿ ಪರಶು ಮತ್ತು ಅಂಕುಶಗಳಿವೆ. ಬಲಗೈ ಆಶೀರ್ವಾದದ್ದಾಗಿದೆ.

ಈ ಆಸನದ ಎದುರುಗಡೆ ಕೈಯಲ್ಲಿ ಉಂಡಿ ಹಿಡಿದುಕೊಂಡು ನೆಗೆಯುತ್ತಿರುವ ಮೂಶಿಕ ಒಂದಿದೆ. ಈ ಗಣಪತಿಯ ಎದುರುಗಡೆ ಹಾಗೂ ಹಿಂದೆ ಇಬ್ಬರು ಸುಂದರಿಯರ ಚಿತ್ರಗಳಿವೆ. ಎದುರಿಗಿನ ಸುಂದರಿ ತಲೆತುಂಬಾ ಸೆರಗು ತೆಗೆದುಕೊಂಡು ಮೂಗಿನಲ್ಲಿ ನತ್ತು, ಕಿವಿಯಲ್ಲಿ ಕಿವಿ ಆಭರಣ, ಕಚ್ಚೆಸೀರೆ ಉಟ್ಟುಕೊಂಡು ಕೈಯಲ್ಲಿ ಆರತಿ ತಾಟು ಹಿಡಿದು ನಿಂತಿದ್ದಾಳೆ. ಹಿಂದೆ ನಿಂತ ಮಹಿಳೆ ತನ್ನ ಕೈಯಲ್ಲಿ ಚಾಮರವನ್ನು ಹಿಡಿದಿದ್ದಾಳೆ.

ಈ ಎಲ್ಲಾ ಚಿತ್ರಗಳಲ್ಲಿ ಬರುವ ಸ್ತ್ರೀ, ಪುರುಷರು ಹೆಚ್ಚಾಗಿ ಮಹಾರಾಷ್ಟ್ರದ ರಾಜ ಪೋಷಾಕು ಹಾಗೂ ಕಚ್ಚೆ ಸೀರೆಯನ್ನು ತೊಟ್ಟುಕೊಂಡ್ಡಿದ್ದಾರೆ. ಸೀರೆಯ ಮೇಲೆ ಸೂಕ್ಷ್ಮ ಬಿಂದುವಿನಿಂದ ಅಲಂಕಾರ ಮಾಡಿದ್ದಾರೆ. ತುಂಬ ಹರಿತವಾದ ರೇಖಾವಿನ್ಯಾಸ ಹಾಗೂ ವರ್ಣ ಸಂಯೋಜನೆಗಳಿಂದೊಡ ಗೂಡಿವೆ. ಇತ್ತೀಚೆಗೆ ಬಣ್ಣ ಲೇಪಿಸುವಾಗ ಬಾರ್ಡರ್ ನಕ್ಷೆಯ ಮೇಲೆ ಬಣ್ಣ ಲೇಪಿಸಿದ್ದು ಬಾರ್ಡರ್ ನಕ್ಷೆ ಹಾಳಾಗಿದೆ. ಯಾವ ಕಲಾವಿದನ ಹೆಸರು ಕಂಡು ಬರುವುದಿಲ್ಲ.

ಈ ಭವ್ಯ ಕಲಾ ಸಂಪತ್ತನ್ನು ರಕ್ಷಿಸಿಕೊಂಡು ಹೋಗುವಲ್ಲಿ ಮಠದ ಸ್ವಾಮೀಜಿಯವರು ಸಹಕರಿಸಬೇಕು. ಮುಖ್ಯಾಧಿಕಾರಿ ಇನ್‌ಟ್ಯಾಚ್ (Intach) ಚಿತ್ರಕಲಾ ಪರಿಷತ್, ಬೆಂಗಳೂರು, ಇವರು ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಇವುಗಳ ರಕ್ಷಣೆ ಹಾಗೂ ವರ್ಣ ಪಾರದರ್ಶಿಕೆ ಚಿತ್ರ ಸುರುಳಿ ಮಾಡಿಕೊಂಡು ಧಾರ್ಮಿಕ ಸಂಪ್ರದಾಯದ ಚಿತ್ರಕೃತಿಗಳ ಪ್ರದರ್ಶನವೀಯಬೇಕು.

***

❑ ಮಲೆನಾಡಿನಲ್ಲೊಂದು ಮುದ ನೀಡುವ ಮಂದಿರ
❑ ಹಳಿಯಾಳದ ಹತ್ತಿರ ಹಳೆ ಚಿತ್ತಾರಗಳು
❑ ಖುದರ ಕಂಚನಹಳ್ಳಿಯಲ್ಲಿ ಕಾಂತಿಯುತ ಚಿತ್ತಾರಗಳು
❑ ಖುದರ ಕಂಚನ ಹಟ್ಟಿಯಲ್ಲಿ ಕಲಾಕೃತಿಗಳ ಕಣಜ

ಉತ್ತರ ಕರ್ನಾಟಕದ ಪಶ್ಚಿಮಭಾಗದ ಮಲೆನಾಡಾಗಿರುವ ಹಳ್ಯಾಳ (ಹಳಿಯಾಳ)ದ ಹತ್ತಿರ ಮೈಸೂರು ಅರಮನೆಯ, ನರಗುಂದದ ವಾಡೆ, ಅಮ್ಮಿನದ ಭಾವಿ ಮಠ, ಮಹಾಲಿಂಗಪುರದ ಹಾಗೂ ಗುಳೇದಗುಡ್ಡದ ಭಿತ್ತಿ ಚಿತ್ರಗಳನ್ನು ಹೋಲುವ ಚಿತ್ತಾರಗಳ ಕಣಜವೇ ಅಡಗಿದೆ.

ಹಳಿಯಾಳದಿಂದ ತತ್ವಣಗಿ ಮಾರ್ಗದಲ್ಲಿ ಎಡಗಡೆಗೆ ಪೂರ್ವಕ್ಕೆ ಮುಖ ಹೊಂದಿರುವ ಐವತ್ತು ಅಡಿ ಗಾತ್ರದ ಚೌರಸಾಕಾರದಲ್ಲಿ ಒಂದು ಮಂದಿರ ಗೋಚರಿಸುತ್ತದೆ. ಅದುವೇ ಶ್ರೀರಾಮಮಂದಿರ.

ಮಲೆನಾಡಿನ ಸಂಪ್ರದಾಯಬದ್ಧ ಹಂಚಿನ ಛಾವಣಿ ಹೊಂದಿರುವ ದೊಡ್ಡ ಮಂದಿರದ ಎದುರಿಗೆ ಆಳೆತ್ತರದ ತುಳಸಿ ವೃಂದಾವನ ಅದರ ಸುತ್ತಲೂ ಜಾನಪದ ಶೈಲಿಯಲ್ಲಿ ನಿರ್ಮಿಸಿದ ಶಿಲ್ಪಗಳಾದ ಗಣಪ, ಹನುಮ, ಲಕ್ಷ್ಮಿ ದೇವರ ಮೂರ್ತಿಗಳಿವೆ. ತುಳಸಿಕಟ್ಟೆಯಲ್ಲಿ ತುಳಸಿಗಿಡ ಇದೆ. ಈ ಮಂದಿರದ ಒಳಗಡೆ ಗರ್ಭಗುಡಿಯಲ್ಲಿಯ ಜಾನಪದ ಶೈಲಿಯ ಅಷ್ಟೊಂದು ಶಿಷ್ಟ ಶೈಲಿಯವಲ್ಲದ ದೇವರ ಮೂರ್ತಿಗಳಾದ ರಾಮ, ಲಕ್ಷ್ಮಣ, ಸೀತೆ, ಭರತ, ಶತೃಘ್ನರ ನಿಂತ ಮೂರ್ತಿಗಳಿವೆ.

ಈ ಮಂದಿರದ ಒಳ ಹೊರಗೆ ಅಪಾರ ಬೆಲೆ ಬಾಳುವ ಚಿತ್ತಾರ ಸಂಪತ್ತು ಕಂಗೊಳಿಸುತ್ತದೆ. ಮಂದಿರ ನಟ್ಟ ನಡುವೆ ಮೂರು ಅಂಕಣಗಳ ಮಂಟಪದಿಂದ ಕಟ್ಟಡ ಹೊಂದಿದೆ. ಐದು ಅಂಕಣಗಳ ಪ್ರದಕ್ಷಿಣ ಪಥ, ಅದರ ನಂತರ ಏಳು ಅಂಕಣಗಳ ಪ್ರಕಾಶ ಹವೆಯಿಂದೊಡಗೂಡಿರುವ ಪ್ರಶಸ್ತ ಪ್ರಾಂಗಣವಿದೆ. ಪ್ರದಕ್ಷಿಣೆ ಪಥದಿಂದ ಅಥವಾ ಪ್ರಾಂಗಣದಿಂದ ಪ್ರಸ್ತುತ ಚಿತ್ರಗಳನ್ನು ನೋಡಿ ಆನಂದಿಸಬಹುದು. ಮಂದಿರ ನಿರ್ಮಾಣ ಹಾಗೂ ಚಿತ್ರಕೃತಿಗಳ ನಿರ್ಮಾಣದ ಕಾಲ ಕುರಿತು ವಯೋವೃದ್ಧರನ್ನು ವಿಚಾರಿಸಿದಾಗ ಈ ಭಾಗದ ಹೆಚ್ಚಿನ ಪ್ರಮಾಣದ ಜನರು ಮರಾಠಿ ಮಾತನಾಡುವವರು ಮರಾಠರಾಗಿದ್ದಾರೆ. ಮರಾಠಿಯಲ್ಲಿ ಅವರಿಗೆ ಕೇಳಿದಾಗ 'ನಾವು ಬಾಲ್ಯಾವಸ್ಥೆಯಲ್ಲಿದ್ದಾಗ ನಮ್ಮ ತಂದೆಯವರು ಹೇಳುತ್ತಿದ್ದರು. ಇದೊಂದು ನೂರಾರು ವರ್ಷ ಹಳೆಯ ಮಂದಿರ'ವೆಂದು ಎಂದರು. ಬಹುಶಃ ಈ ಚಿತ್ರಗಳ ನಿರ್ಮಾಣಮಂದಿರ ಏಕಕಾಲಕ್ಕೇನೆ ಹದಿನೆಂಟರ ಮುಕ್ತಾಯ ಅಥವಾ ಹತ್ತೊಂಬತ್ತನೆಯ ಶತಮಾನದಲ್ಲಿ ನಿರ್ಮಾಣವಾಗಿರಬಹುದು. ಚಿತ್ತಾರಗಳಲ್ಲಿ ಹೆಣ್ಣುಮಕ್ಕಳು ಉಟ್ಟುಕೊಂಡಿರುವ ಸೀರೆಯ ಶೈಲಿ ಅಪ್ಪಟ ಕಚ್ಚೆಸೀರೆ ಮರಾಠಾ ಶೈಲಿಯದ್ದಾಗಿದೆ. ಇದರಿಂದ ಹದಿನೇಳನೇ ಶತಮಾನದಲ್ಲಿ ನಿರ್ಮಿಸಿದ್ದು ಆಗಿರಲು ಸಾಧ್ಯತೆಗಳಿವೆ. ಚಿತ್ತಾರಗಳ ಮುಖ್ಯಭಾಗಗಳನ್ನು ಕಿಡಿಗೇಡಿಗಳು ಕೆದರಿ ಘಾಸಿಗೊಳಿಸಿದ್ದು ಕಂಡುಬರುತ್ತದೆ.

ಗರ್ಭಗುಡಿಯಲ್ಲಿ ಪ್ರವೇಶಿಸಬೇಕೆಂದು ಬಂದಾಗ ಮುಖ್ಯದ್ವಾರದ ಹಣೆಪಟ್ಟಿಯ ಮೇಲೆ ಒಂದು ವಿಶೇಷವಾದ ಚಿತ್ರ ಗೋಚರಿಸುತ್ತದೆ. ಗಾತ್ರ ೮' x ೪' ಅಂದಾಜಿದೆ. ಅಲಂಕೃತ ಮಂಟಪದಲ್ಲಿ ಶಿವಲಿಂಗ, ಈ ಈಶ್ವರಲಿಂಗ ದಟ್ಟ ಬಣ್ಣದ್ದಾಗಿದೆ. ಎಲ್ಲಾ ಆಕೃತಿಗಳು ದಟ್ಟವಾಗಿದ್ದು ತಿಳಿಯಾದ ಹಿನ್ನೆಲೆಬಣ್ಣಗಳಿಂದ ಪೂರ್ತಿಮಾಡಿದ್ದಾರೆ. ಈ ಶಿವಲಿಂಗದ ಎಡಬಲಕ್ಕೆ ಕುಳಿತ ಬಸವಣ್ಣನ ಚಿತ್ರಗಳು ಶ್ವೇತ ವರ್ಣದ್ದಾಗಿವೆ. ಕೃಷಿಯನ್ನೆ ಆರಾಧ್ಯ ವೃತ್ತಿಯನ್ನಾಗಿಸಿದ ಮರಾಠರು ಭಕ್ತಿ ಪೂರ್ವಕವಾಗಿ ವೃಷಭ ಶಿವಲಿಂಗದ ಪೂಜೆಗೈಯಲು ಅಕ್ಕ ಪಕ್ಕದಲ್ಲಿ ಹಿಂದು ಧಾರ್ಮಿಕ ಸಂಪ್ರದಾಯದಂತೆ ಪೂಜೆ ಪೀತಾಂಬರ ತೊಟ್ಟ ಜುಟ್ಟುಧಾರಿಗಳಾದ ವ್ಯಕ್ತಿಗಳಿಂದ ನಗಾರಿ, ಗಂಟೆ, ಜಾಗಟೆಗಳ ಜೊತೆಗೆ ತುತ್ತೂರಿ ಬಾರಿಸುವವರು ಗೋಚರಿಸುತ್ತಾರೆ. ಇದರ ಅಕ್ಕ ಪಕ್ಕಕ್ಕೆ ದೃಷ್ಟಿ ಹಾಯಿಸಿದಾಗ ಶಿವ ಇಂದ್ರರ ಮೆರವಣಿಗೆಯ ದೃಶ್ಯ ಆನೆ ಒಳ್ಳೆಯ ಅಲಂಕಾರಿಕ ಶೈಲಿಯಲ್ಲಿದೆ. ವೃಷಭ ವಾದ್ಯನುಡಿಸುವವರು ಇದ್ದರೆ, ಇನ್ನೊಂದೆಡೆ ಹುಲಿಯ ಬೇಟೆಯ ಚಿತ್ರ ಇದೆ. ಒಂದು ಆನೆಯ ಮೇಲೆ ಒಬ್ಬ ವ್ಯಕ್ತಿ, ಅದರ ಮೆರವಣಿಗೆಯಲ್ಲಿ ನಾಯಿಗಳಿವೆ, ಬ್ರಿಟಿಷ್ ವೇಷಧಾರಿಗಳಿದ್ದಾರೆ. ಇವೆರಡು ಚಿತ್ರಗಳನ್ನು ನೋಡುತ್ತಿದ್ದಂತೆ ಎಡಬಲಕ್ಕೆ ಗರುಡ, ಆಂಜನೇಯ ಇವುಗಳಲ್ಲೇ ವಿಶೇಷವಾದ ಶಿವ, ಇಂದ್ರರ ವಾಹನದ ಚಿತ್ರ ಒಂದೇ ಮುಖ ಹೊಂದಿದೆ. ಒಮ್ಮೆ ಆನೆಯಾಗಿ ಕಂಡರೆ ಮತ್ತೊಮ್ಮೆ ವೃಷಭ(ಎತ್ತು) ಆಗಿ ಕಾಣುತ್ತದೆ. ಮತ್ತೆ ಮೇಲ್ಗಡೆಗೆ ದೃಷ್ಟಿ ಹರಿಯುತ್ತದೆ. ಸುಂದರವಾದ ಕಾಮಧೇನು ಅದರ ಸ್ತನಗಳಿಂದ ಹಾಲು ಶಿವಲಿಂಗದ ಮೇಲೆ ಬೀಳುತ್ತಿರುವುದು ಚೆನ್ನಾಗಿ ಆಕರ್ಷಿಸುತ್ತದೆ.

ಗರ್ಭಗುಡಿಯ ಎಡಬಲದ ಗೋಡೆಯ ಸ್ವಲ್ಪಭಾಗ ಮುಂದೆ ಚಾಚಿರುವ ವಿಶೇಷವಾದ ಸ್ಥಳದಲ್ಲಿ ಋಷಿ ಸಂಪ್ರದಾಯದ ಎರಡು ಚಿತ್ರಗಳು ವಿಶೇಷ ಸೂಕ್ಷ್ಮದಾದ ಜಡೆ, ಗಡ್ಡಗಳಿವೆ. ಚಿತ್ರದ ಸೂಕ್ಷ್ಮ ಪ್ರಜ್ಞೆಯನ್ನು ಅಳೆಯಲು ಈ ಚಿತ್ರಗಳು ಸಾಕ್ಷಿಗಳಾಗಿವೆ. ಒಬ್ಬ ಋಷಿವರ್ಯರು ಪದ್ಮಾಸನದಲ್ಲಿ ಕುಳಿತಿದ್ದಾರೆ. ತಾವು ಬರೆದ ಗ್ರಂಥದೆಡೆಗೆ ನೋಡುತ್ತಿದ್ದಾರೆ. ಇನ್ನೊಬ್ಬ ಋಷಿಗಳು ಕುಳಿತ ಸ್ಥಿತಿಯೇ ವಿಚಿತ್ರವಾಗಿದೆ. ಎರಡೂ ಕಾಲುಗಳ ತೊಡೆ ಹಾಗೂ ನಡಕ್ಕೆ ಒಂದು ವಸ್ತ್ರವನ್ನು ಕಟ್ಟಿಕೊಂಡಿದ್ದಾರೆ. ಎದುರಿಗೆ ಗ್ರಂಥಗಳಿವೆ.

ಪ್ರಾಣಿಗಳ ಮೇಲೆ ಸವಾರಿ ಮಾಡುತ್ತಿರುವ ಚಿತ್ರಗಳ ಸಾಲು ಪಟ್ಟಕವನ್ನು ನೋಡಿದರೆ ಪ್ರಾಚೀನ ಗ್ರಂಥಗಳ ಚಿಕಣಿ ಚಿತ್ರಗಳನ್ನು ನೋಡಿದಂತೆ ಆನಂದವಾಗುತ್ತದೆ. ಸೂಕ್ಷ್ಮತೆಗೆ ಪ್ರಾಧಾನ್ಯತೆ ಕೊಟ್ಟಿದ್ದಾಗಿದೆ. ಆನೆಯ ಮೇಲೆ ಅಂಬಾರಿ, ಅಂಬಾರಿಯಲ್ಲಿ ಹೆಣ್ಣುಮಗಳು ಕುಳಿತಿರುವ ವಿಶೇಷ ಮೆರವಣಿಗೆ, ಮಹಿಳೆಯರು ಮಹಾರಾಷ್ಟ್ರ ಶೈಲಿಯ ಶೀರಿ ತೊಟ್ಟಿದ್ದು ತಲೆ ತುಂಬ ಶೆರಗ ಹೊತ್ತಿದ್ದಾರೆ.

ವಿಷ್ಣುವಿನ ದಶಾವತಾರ ಚಿತ್ರಗಳು ಚೆನ್ನಾಗಿ ಮೂಡಿ ಬಂದಿವೆ. ಸೂಕ್ಷ್ಮತೆ ಇದೆ. ಮತ್ಸ್ಯ, ವರಾಹ, ಕೂರ್ಮಾ, ಎಲ್ಲವೂಗಳಲ್ಲಿ ಬಲಿ ಚಕ್ರವರ್ತಿಯನ್ನು ಎದುರಿಸುತ್ತಿರುವ ವಾಮನ ಅವತಾರ ಹಾಗೂ ಹಿರಣ್ಯಕಶಿಪುವನ್ನು ಸಂಹಾರ ಮಾಡುತ್ತಿರುವ ಉಗ್ರನರಸಿಂಹನ ಚಿತ್ರಗಳು ನೋಡಿಸಿಕೊಳ್ಳುತ್ತವೆ.

ರಾಮನ ಪಟ್ಟಾಭಿಷೇಕದ ಚಿತ್ರದಲ್ಲಿ ಕೆಳಗಡೆ ಹನುಮ, ಸೀತೆ, ಆಕಾಶದಲ್ಲಿ ಸಪ್ತರ್ಷಿ ಮಂಡಳ, ಅದರ ಹಿಂದೆ ಒಬ್ಬಳು ಋಷಿಮಾತೆ. ಸಭೆಯಲ್ಲಿ ನಾಗಕನ್ಯೆಯರು ಹಾಗೂ ವಾನರರಿದ್ದಾರೆ.

ದೇವದಾನವರಿಂದ ಶೇಷನ ಸಹಾಯದಿಂದ ಸಮುದ್ರಮಂಥನ ನಡೆದಿದೆ. ಮೇಲ್ಗಡೆಗೆ ಕಲ್ಪವೃಕ್ಷ, ಕಾಮಧೇನು, ಎಲ್ಲವೂ ಹೊರಬರುತ್ತಿರುವ ದೃಶ್ಯ ಚೆನ್ನಾಗಿದೆ. ಮೇಲ್ಪಟ್ಟಿಯಲ್ಲಿ ಕಿರುರೂಪಿ ಚಿತ್ರಗಳಂತೆ ಪರಶುರಾಮ, ಕೃಷ್ಣ, ಅಶ್ವಮೇಧಯಾಗದ ಕುದುರೆ, ರಾಮವತಾರಗಳಿವೆ.

ಪಂಚಮುಖದ ಪರಮೇಶ್ವರ, ತೊಡೆಯ ಮೇಲೆ ಪಾರ್ವತಿ, ವಾದ್ಯವೃಂದ, ಕೆಳಗಡೆ ಗಣಪತಿ, ಇವರೆಲ್ಲರೆದುರಿಗೆ ಒಬ್ಬ ವ್ಯಕ್ತಿ ನರ್ತನ ಮಾಡುತ್ತಿದ್ದಾನೆ. ಆ ವ್ಯಕ್ತಿಗೆ ಮೂರು ಕಾಲು ತೋರಿಸಿ ನರ್ತನ ವೇಗವನ್ನು ಹಿಡಿದಿರುವುದು ಆಧುನಿಕ ಚಿತ್ರಕಲಾಕೃತಿಗಳ ಪಂಥದಂತೆ ಗೋಚರಿಸುವ ವಿಶೇಷ ಚಿತ್ರ ಇದಾಗಿದೆ.

ಶೇಷ ಶಯನ ವಿಷ್ಣು ವಿಶೇಷ ಅಲಂಕಾರದೊಂದಿಗೆ ಮಲಗಿದ್ದಾನೆ. ನಾಭಿಯಿಂದ ಕಮಲದ ದೇಟು, ಬ್ರಹ್ಮ ವಿಷ್ಣುವಿನ ಕಾಲಬದಿಗೆ ಲಕ್ಷ್ಮೀ ಕುಳಿತಿದ್ದಾಳೆ. ಆಕಾಶದಲ್ಲಿ ಹುಲಿವೇಷದ ಗಂಧರ್ವರು ಕಂಡುಬರುತ್ತಾರೆ. ಇವೆಲ್ಲವುಗಳು ಗರ್ಭಗುಡಿಪ್ರದೇಶದ ಮೊದಲಿಗಿರುವ ಭಾಗದಲ್ಲಾದರೆ ಒಳ ಗರ್ಭಗುಡಿಯ ದೇವರ ಮೂರ್ತಿಗಳ ಹಿನ್ನೆಲೆ ಎಡಬಲ ಎಲ್ಲ ಸ್ಥಾನವನ್ನು ಸುಂದರವಾದ ಸೂಕ್ಷ್ಮ ಅಲಂಕಾರಿಕ ರೂಪಗಳುಳ್ಳ ವಸ್ತ್ರದ ಚಿತ್ತಾರಗಳಿಂದ ಅಲಂಕೃತವಾಗಿವೆ.

ಇನ್ನೂ ಹೊರಗಡೆಗೆ ಪ್ರದಕ್ಷಿಣೆಯ ಪಥದಲ್ಲಿ ಜ್ಯೋತಿಶ್ಯಾಸ್ತ್ರವನ್ನಾಧರಿಸಿದ ಸುಂದರ ಚಿತ್ತಾರ, ಎಲ್ಲಾ ರಾಶಿಗಳಿಗೂ ಒಳ್ಳೆಯ ಅಲಂಕಾರಮಯ ಚಿತ್ರಗಳಿವೆ. ಗ್ರಹಗತಿಗಳನ್ನು ಅಧ್ಯಯನ ಮಾಡುವವರಿಗೆ ಹೆಚ್ಚಿನ ಅಂಕ ದೊರಕುತ್ತದೆ. ಪಂಚಮುಖದ ಪ್ರಾಣದೇವರು, ಐದುಮುಖಗಳನ್ನು ಹೊಂದಿರುವ ಹನುಮನ ಚಿತ್ರ ಒಳ್ಳೆಯ ಅಲಂಕಾರಮಯವಾಗಿದೆ, ವಿಶೇಷ ರೀತಿಯಲ್ಲಿ ಬಾಲ, ಬಾಲಕ್ಕೆ ಗಂಟೆ ಇದೆ.

ಕೃಷ್ಣ ಲೀಲೆಗೆ ಸಂಬಂದಿಸಿದ ಶೃಂಗಾರ ಚಿತ್ರಗಳಂತೂ ಎಷ್ಟುನೋಡಿದರೂ ತೃಪ್ತಿಯಾಗುವುದೇ ಇಲ್ಲಾ. ಕೃಷ್ಣನು ಪಾಲಕಿಯಲ್ಲಿ ಕುಳಿತಿದ್ದರೆ ಆ ಪಾಲಕಿಯ ಆಕಾರ ಪೂರ್ತಿ ಸಖಿಯರ ಅಲಂಕೃತ ಆಕಾರದಿಂದಲೇ ರಚನೆಯಾಗಿದೆ. ಆನೆಯು ಕೂಡಾ ಸುಂದರ ಸ್ತ್ರೀಯರಿಂದ ರಚಿತವಾಗಿದೆ. ಕೃಷ್ಣನ ಮೆರವಣಿಗೆಯಲ್ಲಿ ಅಲಂಕಾರಿಕ ದುಂಡುಮೈವುಳ್ಳ ಸಖಿಯರ ವೇಷಭೂಷಣ ವಿಶೇಷವಾಗಿದೆ.

ಗ್ರಾಮದೇವಿಯ ಮಹಿಮೆಯನ್ನು ಭಿತ್ತರಿಸುವ ಚಿತ್ರವೊಂದು ಅಪ್ಪಟ ಜಾನಪದ ಶೈಲಿಯ ಸುಂದರ ಚಿತ್ರವಿದೆ. ಗ್ರಾಮದೇವಿಯ ಆಶೀರ್ವಾದದಿಂದ ದುಷ್ಟ ಶಕ್ತಿಯ ಸಂಹಾರದ ಚಿತ್ರ ಇದಾಗಿದೆ.


ಕಥಾಚಿತ್ರಗಳ ಧಾರಾವಾಹಿಯಂತೆಯೇ ರಚಿತಗೊಂಡಿವೆ. ರಾಮಾಯಣದ ಪ್ರತಿ ಘಟನೆಗಳು ಎಲ್ಲವೂ ನೋಡಿಸಿಕೊಳ್ಳುತ್ತವೆ. ಶ್ರವಣ ಕುಮಾರ, ದಶರಥರಾಜನು ಬೇಟೆಯಡುವುದು, ಲವಕುಶ, ಅಶೋಕವನ, ರಾವಣ ಜಟಾಯು, ಲಂಕಾದಹನ ಎಲ್ಲವೂ ಪವಿತ್ರಮಯ. ರಾಕ್ಷಸರ ಸಂಹಾರ ಮಾಡುತ್ತಿರುವ ದೇವಿಯ ಚಿತ್ರ, ಕೋಣ ರಕ್ತ ಸಿಕ್ತವಾಗಿ ಬಿದ್ದಿದೆ, ಅದರ ಮಡುವಿನಲ್ಲಿ ರಾಕ್ಷಸ ಕೊನೆಯ ಉಸಿರೆಳೆಯುತ್ತಿದೆ.

ಎಲ್ಲ ಚಿತ್ರಗಳಿಗೂ, ಹೂವು, ಎಲೆ ದೇಟುಗಳ ಅಲಂಕಾರಿಕ ರೂಪಗಳಿಂದ ನಕ್ಷಾಪಟ್ಟಿಗಳನ್ನು ರಚಿಸಿದ್ದಾರೆ. ಮೀನು, ಏಡಿ, ಹಾವುಗಳಿಂದ ಅಲಂಕೃತ ನಕ್ಷಾಪಟ್ಟಿ ವಿಶೇಷವಾಗಿದೆ. ಎಲ್ಲ ಚಿತ್ರಗಳ ಹಿನ್ನೆಲೆ ಬಣ್ಣವನ್ನು ದಟ್ಟಕಂದಿ ಹಾಕಲು ಪ್ರಯತ್ನಿಸಿದ್ದಾರೆ. ವಾಸ್ತುಶಿಲ್ಪದ ನಿರ್ಮಾಣದ ಕಾಲಕ್ಕೇನೆ ಬಿಳೆ


ಗಾರೆಯನ್ನು ನಿರ್ಮಿಸಿ ಸಮತಟ್ಟಾದ ನಯವಾದ ಭಾಗರಚನೆಗೆ ಸಿಂಪೆಯ ಸುಣ್ಣ ಗಚ್ಚೆ ಬಳಸಿದ್ದಾರೆ. ಅವುಗಳ ಮೇಲೆ ಚಿತ್ರಕಲಾಕೃತಿಗಳನ್ನು ರಚಿಸಿಕೊಂಡು ಜಲವರ್ಣದಿಂದಲೇ ಭಾರತೀಯ ದಖಣ ಶೈಲಿಯಲ್ಲೆ ಬಣ್ಣ ತುಂಬಿ ನೀಟಾಗಿ ಸೂಕ್ಷ್ಮ ದಟ್ಟಕಪ್ಪು, ಕಂದಿ ಬಣ್ಣದಿಂದ ಹೊರ ರೇಖೆಗಳನ್ನು ಹಾಕಿದ್ದಾರೆ. ಉತ್ತಮ ಕಲಾಕೃತಿಗಳ ಕಣಜವೇ ಇದಾಗಿದೆ. ಪಾರದರ್ಶಕ ತೈಲ ಲೇಪಿಸಲ್ಪಟ್ಟಿವೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಎಲ್ಲಾ ಚಿತ್ರಗಳ ವಿಡಿಯೋ ಮಾಡಿಕೊಂಡು ರಕ್ಷಿಸಿಕೊಳ್ಳುವುದರೊಂದಿಗೆ ಪರಿಷತ್ತಿನ ಇನ್‌ಟ್ಯಾಚ್ ಸೊಸೈಟಿ ಇವುಗಳನ್ನು ರಕ್ಷಿಸಿಕೊಳ್ಳಬೇಕು. ಸ್ಥಳೀಯ ಸಮಿತಿಗಳು ಇದರ ಜೀರ್ಣೋದ್ಧಾರ ಮಾಡುತ್ತಿರುವುದು ಸೂಕ್ತ. ಇಲ್ಲವಾದರೆ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯವರು ಇದೊಂದು ಐತಿಹಾಸಿಕ ಸ್ಥಳವಾಗಿ ನಿರ್ಮಿಸಬೇಕು.

ನಶಿಸುತ್ತಿರುವ ಈ ಚಿತ್ರಕೃತಿಗಳನ್ನು ಕುರಿತು ಅನೇಕ ವಿದ್ಯಾರ್ಥಿಗಳು ಸಂಶೋಧನೆ ನಡೆಸಿರುವುದು ಕರ್ನಾಟಕದ ಚಿತ್ರಕಲಾಕೃತಿಗಳ ಭವ್ಯತೆಯ ಗುಟ್ಟಾಗಿದೆ. ಡಾ. ಎಸ್.ಸಿ.ಪಾಟೀಲ ಈ ಚಿತ್ರಕೃತಿಗಳನ್ನು ಕುರಿತು ಪತ್ರಿಕೆಗಳಲ್ಲಿ ಬರೆದಿದ್ದಾರೆ.








ಹಳಿಯಾಳದ ಹತ್ತಿರದ ಬಾದರ ಕಂಚನಹಳ್ಳಿಯ ಚಿತ್ರಕಲಾ ಕೃತಿಗಳು

***

ಕಾರ್ಮಿಕರ ಕೈ ಚಳಕ
ರವಿಕೆ ಬಟ್ಟೆ
(ಗುಳೇದಗುಡ್ಡದ ಕಣಗಳು)



ಕಂಡಕೆ ಸುತ್ತುತ್ತಿರುವ ಮಹಿಳೆ

ಶಿಲಾಯುಗದ ಮಾನವನು ತನ್ನ ದಿನನಿತ್ಯದ ಬದುಕನ್ನು ಒಂದಲ್ಲ ಒಂದು ಕಲಾತ್ಮಕ ಚಟುವಟಿಕೆಯ ಮುಖಾಂತರ ಹಸನು ಮಾಡಿಕೊಳ್ಳುತ್ತಾ ಬಂದಿದ್ದಾನೆ. ಪ್ರಾಣಿಗಳಂತೆ ಹರಿಯುತ್ತಿರುವ ನೀರನ್ನು ಬಾಗಿ ತುಟಿಗಳಿಂದ ಹೀರುವುದನ್ನು ಬಿಟ್ಟು, ಬೊಗಸೆಯಿಂದ ನೀರು ಕುಡಿಯುವುದನ್ನು ಕಲಿತನು. ಬೇಟೆಯಿಂದ ಸಿಕ್ಕ ಪ್ರಾಣಿಚರ್ಮವನ್ನು ಬಟ್ಟೆಯನ್ನಾಗಿಸಿ ಅವಯವ ಮುಚ್ಚಿಕೊಂಡು, ಗೆಡ್ಡೆ ಗೆಣಸುಗಳಿಂದ ಕೃಷಿಯನ್ನು ಪ್ರಾರಂಭಿಸಿರುವುದಲ್ಲದೆ ಸೂಕ್ಷ್ಮ ಕೀಟಗಳಿಂದ ಬರುವ ರೇಷ್ಮೆಯ ಎಳೆಗಳನ್ನು ಬಳಸಿಕೊಂಡು ಬಟ್ಟೆ ತಯಾರಿಸಿಕೊಂಡಿರುವುದು ಒಂದು ರೋಚಕ ಕಥೆಯೇ ಸರಿ. ಆ ಬಟ್ಟೆಯನ್ನು ವರ್ಣಮಯವನ್ನಾಗಿಸುವುದರ ಮೂಲಕ ಚಿತ್ತಾರ ರೂಪದಲ್ಲಿ ಪರಿವರ್ತಿಸಿದ್ದೂ ನಿರೀಕ್ಷಿಸಿದರೆ ಜನಪದ ಚಿತ್ತಾರಗಳು ಆಧುನಿಕ ಶಿಷ್ಟಬಟ್ಟೆಗಳಿಗೆ ಮಾರ್ಗವಾಗಿರದೇ ಇರಲಾರವು.

ಪೃಥ್ವಿಯ ಮೇಲೆ ಅನೇಕ ಸಂಸ್ಕೃತಿಗಳು ಬೆಳಕು ಕಂಡಿವೆ. ತೃಟಿಯಿಂದ ಹಿಡಿದು ಯುಗ ವರೆಗೆ ಕಾಲಗಣನೆಯ ಕಲ್ಪನೆ ಹೊತ್ತ ಭಾರತದೇಶವು ಜಗತ್ತಿಗೆ ಬಟ್ಟೆ ತಯಾರಿಸುವ ಮಾರ್ಗ ತೋರಿದೆ. ಸಹಸ್ರಾರು ವರುಷಗಳಿಂದ ಹತ್ತಿ ಬಟ್ಟೆಯ ತಯಾರಿಕೆಯಲ್ಲಿ ನಮ್ಮ ದೇಶವು ಹೆಸರು ಗಳಿಸಿತ್ತು. ಡಾಕಾ ಮಲ್‌ಮಲ್ ಬಟ್ಟೆಯ ಸೂಕ್ಷ್ಮತೆಯನ್ನು ಕೇಳರಿಯದವರೇ ಇಲ್ಲಾ. ದೇಶದ ಹಲವೆಡೆ ಹಲವು ಬಗೆಯ ಬಟ್ಟೆಗಳು ಜನ್ಮ ತಾಳುತ್ತಿವೆ. ಉಣ್ಣೆ, ಹತ್ತಿ, ರೇಷ್ಮೆ ಮುಂತಾದವುಗಳಲ್ಲದೇ ಕೃತ್ರಿಮ ಬಟ್ಟೆ ಕಾಣಸಿಗುತ್ತವೆ.

ಭಾರತದ ದಕ್ಷಿಣಭಾಗದಲ್ಲಿರುವ ಕರ್ನಾಟಕದ ಬಾಗಲಕೋಟೆ ಜಿಲ್ಲೆಯ 'ಗುಳೇದಗುಡ್ಡ' ಎಂಬ ಗ್ರಾಮದಲ್ಲಿ ಉತ್ಪನ್ನವಾಗುವ ಖಣಗಳು (ರವಿಕೆಯ ಬಟ್ಟೆಗಳು) ವಿಶೇಷತೆಗೆ ಬಹು ಮುಖ್ಯವಾಗಿವೆ. ಈ

ಖಣಗಳು ವ್ಯಕ್ತಿಗಳ ಕೈಯಾರ ನಿರ್ಮಿತವಾಗುವ ಕರಕುಶಲ ಕಲೆಯಾಗಿದೆ. ರೇಷ್ಮೆಯ ಕೀಟವು ತಾನು ಸ್ವತಃ ತನ್ನ ಸುತ್ತ ರೇಷ್ಮೆಯ ಎಳೆಗಳನ್ನು ರಚಿಸಿ, ತಾನು ಒಳಗೇ ಕುಳಿತು 'ಸಲ್ಲೇಖನ' ವ್ರತ ಮಾಡುವಂತೆ ಪ್ರಾಣಬಿಟ್ಟು ನಮ್ಮೆಲ್ಲರಿಗೂ ರೇಷ್ಮೆಕೊಟ್ಟು ಜೀವನವನ್ನು ಸಾರ್ಥಕ ಮಾಡಿಕೊಳ್ಳುವಂತೆ ನೇಯ್ಗೆ ಮಾಡುವ ನೇಕಾರ ನೇಯುತ್ತಾ ನೇಯುತ್ತಾ ನೀರೆಯರಿಗೆಲ್ಲ ಮೈ ಮನ ತಣಿಸುತ್ತಾ ಸಾರ್ಥಕ ಬದುಕು ಬದುಕುತ್ತಾನೆ.

ಖಣಗಳು ಜನ್ಮ ತಾಳುವುದು ಮಗ್ಗಗಳಲ್ಲಿ. ಮಗ್ಗ ಎಂದರೆ ೫ x ೬ ಎರಡು ಕಟ್ಟಿಗೆಯ ಚೌಕಟ್ಟುಗಳ ಮಧ್ಯದಲ್ಲಿ ಎರಡು ಕಪಾಳಗಳ ಆಶ್ರಯದಲ್ಲಿ ಲಾಳಿ ಎಂಬ ಹತ್ತು ಇಂಚಿನ ಒಂದು ಕಟ್ಟಿಗೆಯ ವಸ್ತುವು ಈ ಕಲಾತ್ಮಕ ಖಣಗಳ ನಿರ್ಮಾಣಕ್ಕೆ ಸಹಾಯಕಾರಿಯಾಗುತ್ತದೆ.

ಈ ಕೈಮಗ್ಗದ ಚೌಕಟ್ಟಿನ ಹಿಂದೆ ನೇಕಾರನು ಬೆನ್ನು ಆನಿಸಿ ನೇಯಲು ಗೋಡೆ ಆಧಾರ ವಾಗಿರುತ್ತದೆ. ನೇಕಾರನ ಅರ್ಧದೇಹ ನೆಯ್ಗೆಯ ಕುಣಿಯೊಳಗೆ ಇಳಿದಿದ್ದರೆ ಕಾಲುಗಳು ನೆಯ್ಗೆಯ ಕಾಲ್ಪಡಿಗಳ ಮೇಲಿರುತ್ತವೆ. ಒಂದು ಕೈ ಲಾಳಿಯ ಜೋಟಾ ಜಗ್ಗಿದರೆ ಇನ್ನೊಂದು ಕೈ ಲಾಳಿ ಓಡಾಡುವ ಹಲಿಗೆಯನ್ನು ಜಗ್ಗುವುದರೊಂದಿಗೆ ಬಿಗಿಯಾದ ನೆಯ್ಗೆಯನ್ನು ನೇಯುತ್ತಾ ಇರಬೇಕಾಗುತ್ತದೆ.

ಈ ಕಲಾತ್ಮಕ ನೆಯ್ಗೆಯಲ್ಲಿ ನಿರತನಾದ ನೇಕಾರನ ತಲೆಯ ಮೇಲೆ ಚಿತ್ತಾರಗಳನ್ನು ಮೂಡಿಸುವ ಚಕ್ರ, ಅದಕ್ಕೆ ಹೊಂದಿಕೊಂಡು ಸಾಕಳ ಪಟ್ಟಿ ನಿರ್ಮಿಸಿರುತ್ತಾರೆ. ಅದರ ಸಹಾಯದಿಂದ ಹಾಗೂ ಕಾಲ್ಪಡಿಯ ಸಹಾಯದಿಂದ ಕೋಲುಗಳು ಎದ್ದುಬಿದ್ದು ಮಾಡುವುದರಿಂದ ಕೆಳಗಡೆ ಪಡ್ಡಲು, ಪೇಟೆ,(ತಳಭಾಗ ಮೇಲ್ಭಾಗ) ಎಂಬ ಎಳೆಗಳ ಗುಂಪಿನ ನಡುವೆ ಹಾಯ್ದು ಹೋಗುವ ಲಾಳಿಯಿಂದ ಚೆಂದದ ಚಿತ್ತಾರಗಳು ನಿರ್ಮಾಣವಾಗುತ್ತವೆ.

ಈ ರೇಷ್ಮೆ ಖಣಗಳು ನೂಲು ಹಾಗೂ ರೇಷ್ಮೆಯ ಎಳೆಗಳಿಂದ ನಿರ್ಮಾಣವಾಗುತ್ತವೆ. ರೇಷ್ಮೆ ದೇಹಕ್ಕೆ ಹಿತದೊಂದಿಗೆ ಆರೋಗ್ಯ ಕಾಪಾಡಿದರೆ, ಹತ್ತಿಯ ನೂಲು ಮೆತ್ತಗೆ ಹಾಗೂ ಗಟ್ಟಿತನ ಸೃಷಿಸುತ್ತದೆ. ಸಾಗುವಾನಿ ಕಟ್ಟಿಗೆಯಿಂದ ತಯಾರಿಸಿದ ಈ ಮಗ್ಗ ಮತ್ತು ಕಾಲ್ಪಡಿಗಳನ್ನು ಸೇರಿಸಿ ಅಂದಾಜು ೨೫೦೦ ರೂಪಾಯಿ ಖರ್ಚಾಗುತ್ತದೆ. ಅದರಲ್ಲಿ ಉಪಯೋಗಿಸುವ ಕಚ್ಚಾ ವಸ್ತುಗಳಿಂದ ಪಕ್ಕಾ ವಸ್ತು ಸಿದ್ದವಾಗುತ್ತದೆ. ನೇಕಾರನು ನೇಯುವಾಗ ಆ ಖಣದ ಮೇಲೆ ವಿಶೇಷವಾದ ಬೆಳಕು ಬೀಳುವಂತೆ ವ್ಯವಸ್ಥೆ ಮಾಡಿಕೊಂಡಿರುತ್ತಾನೆ. ಎದುರಿಗೆ ಬಂದಿರುವ ಎಳೆಗಳನ್ನು ಪೋಣಿಸಿರುವ ನೇಯ್ಗೆ ಹಣಿಗೆ ಹಾಗೂ ಕೋಲುಗಳು ಪ್ರಸ್ತುತ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ನಾಲ್ಕು ಕೋಲಿನ ನೇಯ್ಗೆ ಮಗ್ಗದಲ್ಲಿ ತೆಂಗಿನ ಗರಿ, ವಗಸಾಲಸಾದಿ, ಐದು ಕೋಲಿನಲ್ಲಿ ತೇರು, ರುದ್ರಾಕ್ಷಿ; ಆರು ಕೋಲಿನಲ್ಲಿ ಏಲಕ್ಕಿ, ಕರಿಮಣಿ ಲೆಕ್ಕ, ಏಲಕ್ಕಿ ಬಳ್ಳ; ಏಳು ಕೋಲಿನಲ್ಲಿ ಕವಳಿ ಹೂ, ಸೂಜಿಮಲ್ಲಿಗೆ. ದೊಡ್ಡ ಹಂಡಿ, ಡಬಲ್ ಹಂಡಿ, ಕಳವರ ಹೂ, ಸೂಜಿಮಲ್ಲಿಗೆ; ಎಂಟುಕೋಲಿನಲ್ಲಿ ಸಿಲಾರಿ, ತುಳಸಿಪಾನ, ಪಿಚ್ ತೇರು, ದೊಡ್ಡ ಏಲಕ್ಕಿ; ಒಂಬತ್ತನೆಯ ಕೋಲಿನಲ್ಲಿ ನವಲಹರಿ, ತುಳಸಿಪಾನ; ಹತ್ತುಕೋಲಿನಲ್ಲಿ ಸಿದ್ದೇಶ್ವರ ಮುಕುಟ, ತೇರು ಕೇದಗಿ, ಕರಿಮಾಳ, ಚಿಕ್ಕಬಳ್ಳಿ, ಚಿಕ್‌ಸೂಜಿ ಮಲ್ಲಿಗೆ, ಸೂಜಿ ಮಲ್ಲಿಗೆ, ಗೊಡ್ಡ ಶಾವಂತಿಗೆ ರುಂಡಮಾಲಿ.

7

ಹದಿನೈದು ಕೋಲಿನಲ್ಲಿ ಸುದರ್ಶನ ಚಕ್ರ, ಬಳ್ಳಿ ಕಳವರ, ಸೂರ್ಯನಾರಾಯಣ; ಹದಿನೇಳು ಕೋಲಿನಲ್ಲಿ ಮುಖ್ಯವಾಗಿ ಆನೆ, ನವಿಲು, ಈಶ್ವರ, ಬಸವಣ್ಣ, ಬಾತುಕೋಳಿ ನಿರ್ಮಾಣಗೊಂಡರೆ; ಇಪ್ಪತ್ತೈದು ಕೋಲಿನಲ್ಲಿ ನಿರ್ಮಾಣಗೊಳ್ಳುವ ಚಿತ್ತಾರಗಳು ರಾಷ್ಟ್ರೀಯತೆಯ ಭಾವೈಕ್ಯತೆಯನ್ನು ಬಿಂಬಿಸುವ ಜಯಹಿಂದ ಎಂಬ ಅಕ್ಷರಗಳು ಹಾಗೂ ಮನುಷ್ಯಾಕೃತಿಗಳು ಮೂಡುತ್ತವೆ.

ಈ ತರಹದ ಖಣಗಳ ನಿರ್ಮಾಣಕ್ಕೆ ನೆಯ್ಗೆಗೆ ಬೇಕಾಗುವ ರೇಷ್ಮೆಯ ಎಳೆಗಳನ್ನು ಎರಡು ಮುಖ್ಯ ಭಾಗಗಳನ್ನಾಗಿ ಮಾಡಿಕೊಳ್ಳುತ್ತಾರೆ. ವಡ್ಲ ಹಾಗೂ ದಡಿ ಹಿಡಿದು ಸಾವಿರದಾ ನಾಲ್ಕು ನೂರು ಮತ್ತು ಮೇಲ್ಗಡೆ ಇರುವ ಪೇಟಿಯಲ್ಲಿ ಸಾವಿರದಾ ಆರನೂರು ಎಳೆಗಳು ಎಲ್ಲಾ ಸೇರಿ ಮೂರುಸಾವಿರ ರೇಷ್ಮೆ ಎಳೆಗಳನ್ನು ಉದ್ದುದ್ದಕ್ಕೆ ಹಾಕಿಕೊಂಡಿರುತ್ತಾರೆ.

ಅಡ್ಡಲಾಗಿ ಓಡಾಡುವ ಲಾಳಿಯಲ್ಲಿ ನೂಲಿನ ದಾರ ದಟ್ಟನೀಲಿ ಬಣ್ಣದ್ದಿರುತ್ತದೆ. ಇದು ಅಡ್ಡಲಾಗಿ ಹೆಣೆದುಕೊಂಡು ಆ ರೇಷ್ಮೆಯ ನೂಲಿನೊಂದಿಗೆ ಬೆರೆತು ಚಿತ್ರ ಹಾಗೂ ಬಟ್ಟೆಯ ಬಿಗುವನ್ನು ಸೃಷ್ಟಿಸುತ್ತಾ ನೂಲಿನ ದಾರ ಓಡಾಡುತ್ತದೆ. ಈ ಕ್ರಿಯೆ ನಿರಂತರ ನಡೆಯುವುದರಿಂದ ಚಿತ್ತಾರಮಯ ಖಣಗಳು ನಿರ್ಮಾಣವಾಗುತ್ತವೆ.

ಖಣಗಳ ನಿರ್ಮಾಣದಲ್ಲಿ ಈ ಕೆಳಕಂಡ ವಿಭಾಗಗಳು ಮುಖ್ಯ ಪಾತ್ರವಹಿಸುತ್ತದೆ.

ಉಂಕಿ ಹೂಡುವುದು:- ಬನಹಟ್ಟಿ, ಹುಲಕೋಟಿ ಮುಂತಾದ ಕಡೆಗಳಿಂದ ನೂಲಿನ ಗಿರಣಿಗಳಿಂದ ನೂಲಿನ ದಾರದ ಮೂಟೆಗಳನ್ನು ತಂದು ಅದಕ್ಕೆ ಬಣ್ಣ ಲೇಪಿಸುವ ಕ್ರಿಯೆ ಒಂದು ಭಟ್ಟಿಯ ಮುಖಾಂತರ ನಡೆಯುತ್ತದೆ. ಅದು ಹೇಗೆಂದರೆ, ಮಣ್ಣಿನ ದೊಡ್ಡ ಗಾತ್ರದ ಮಡಿಕೆಗಳನ್ನು ನೆಲದಲ್ಲಿ ಹೂತಿರುತ್ತಾರೆ. ಅದರಲ್ಲಿ ಕಪ್ಪು ಬಣ್ಣ ಹಾಕಲ್ಪಟ್ಟಿರುತ್ತದೆ. ಆ ನೀರಿನ ಬಣ್ಣದಲ್ಲಿ ನೂಲಿನ ಮೂಟೆಗಳನ್ನು ಹಾಕಿ ಎರಡು ಮೂರು ದಿವಸಗಳವರೆಗೆ ಬಣ್ಣ ಲೇಪಿಸಿಕೊಂಡು ಬಂದ ನೂಲು ನೇಕಾರರ ಹೆಣ್ಣು ಮಕ್ಕಳ ಕೈಯಲ್ಲಿ ಬರುತ್ತದೆ. ಅದನ್ನು ಉದ್ದನೆಯ ಹರಿಗೆಗೆ ಹಾಕಿ ಸ್ವಚ್ಛಮಾಡಿ ಆ ದಾರಕ್ಕೆ ಕಾಚು ಸುಣ್ಣಗಳಿಂದ ಕೂಡಿದ ಗಂಜಿನೀರಿನಿಂದ ಅದಕ್ಕೆ ಗಡಸುತನ ಬರುವ ಹಾಗೆ ಲೇಪಿಸುತ್ತಾರೆ. ನಂತರ ಚರಕಾದ ಮೂಲಕ ಕಂಡಕಿ ಎಂಬ ಸಣ್ಣ ಸಣ್ಣ ಲಡಿಗಳಿಗೆ ಸುತ್ತಿ ಆ ಲಡಿಗಳನ್ನು ಲಾಳಿಯಲ್ಲಿ ಹಾಕಲು ಕೊಡುತ್ತಾರೆ. ಈ ರೀತಿ ನೇಯಲು ಬೇಕಾಗುವ ಮುಖ್ಯವಾದ ದಾರವನ್ನು ತಯಾರಿಸುತ್ತಾರೆ. ಈ ಕಾರ್ಯ ಶಾಂತ ಮನಸ್ಸಿನಿಂದ ನಿಯಂತ್ರಣವನ್ನಿಟ್ಟುಕೊಂಡು ನೇಯುವವರಿಗೆ ಕೊಡುತ್ತಲೇ ಹೋಗಬೇಕು. ಈ ಕಂಡಕಿಗಳಿರದಿದ್ದರೆ ನೇಕಾರನ ನೇಯ್ಗೆ ಮುಂದೆ ಸಾಗದು.

ಹಣಿಗೆ ಕೆಚ್ಚುವುದು:- ಉದ್ದ ಉದ್ದುದ್ದಲಾಗಿ ಹಾಕಿದ ಎಳೆಯ ಹಣಿಗೆ ಮುಗಿದ ನಂತರ ಎರಡನೆಯ ಎಳೆಯ ಸಮೂಹವನ್ನು ಮಗ್ಗಕ್ಕೆ ಒಪ್ಪಿಸಲು ಮಾಡುವ ಪ್ರಕ್ರಿಯೆಯೇ ಹಣಿಗೆ ಕೆಚ್ಚುವಿಕೆಯಾಗಿದೆ. ಮೊದಲು ಆ ಮಗ್ಗದ ಬಿದಿರಪಟ್ಟಿ ಅಥವಾ ಸ್ಟೀಲ್‌ಪಟ್ಟಿಯಲ್ಲಿ ಹಾಯ್ದು ಎರಡು ತಂತಿಗಳ ಗೂಡಿನಲ್ಲಿ ನುಸುಳಿ ಕಂಬಿಗಳ ಮೇಲೆ ಕೆಳಗೆ ಹಾಯ್ದಿರುವ ಎಳೆಗಳನ್ನು ಪೂರ್ತಿಯಾಗಿ ಹೊರಗೆಳೆಯದೇ ಹಾಗೂ ಹೊರ ಎಳೆಗಳನ್ನು ಅಂಟಿ(ಜಿಗಿ)ನಿಂದ ಅಂಟಿಸುವ ಕಾಯಕ ಇದಾಗಿದೆ. ಇದನ್ನು ಇಬ್ಬರು ಸ್ತ್ರೀಯರು ಸೇರಿ ಮಾಡಿದರೆ ಮೂರು ಗಂಟೆ ವೇಳೆ ಬೇಕಾಗುತ್ತದೆ.

ಬಣ್ಣ ಹಾಕುವಿಕೆ:– ರೇಷ್ಮೆ ಇಲಾಖೆ ಅಥವಾ ವ್ಯಾಪಾರಿಗಳಿಂದ ತರಲ್ಪಟ್ಟ ರೇಷ್ಮೆಗೆ ಬಣ್ಣ ಹಾಕುವ ಪ್ರಕ್ರಿಯೆಯ ಒಂದು ಘಟಕವೇ ಇರುತ್ತದೆ. ಕೆಲವು ಬಣ್ಣಗಳನ್ನು ಬಿಸಿ ನೀರಿನಲ್ಲಿ ಇನ್ನೂ ಕೆಲವು ಬಣ್ಣಗಳನ್ನು ತಣ್ಣೀರಿನಲ್ಲಿ ಅದ್ದಿ ಆ ಬಣ್ಣ ಶಾಶ್ವತವಾಗಿರುವಂತೆ ಮಾಡುತ್ತಾರೆ. ಮುಖ್ಯವಾದ ಬಣ್ಣಗಳೆಂದರೆ ಕೆಂಪು, ಹಳದಿ, ಜಾಂಬಳಿ, ನೀಲಿ, ಹಸಿರು ಹಾಗೂ ಕಪ್ಪು ಬಣ್ಣಗಳನ್ನು ಅದ್ದುತ್ತಾರೆ. ಇವು ರೇಷ್ಮೆಗೆ ಅಥವಾ ಕೃತ್ರಿಮ ರೇಷ್ಮೆಗೆ ಶಾಶ್ವತವಾಗಿ ಹತ್ತಿಕೊಳ್ಳುವಂತೆ ಬಣ್ಣದಲ್ಲಿ ಅದ್ದಿ, ಒಣಗಿಸಿ ನೀರಿನಲ್ಲಿ ತೊಳೆದರೂ ಹೋಗದ ಹಾಗೆ ಬಣ್ಣಹಾಕುತ್ತಾರೆ. ಈ ಬಣ್ಣಗಳ ಜೊತೆಗೆ ಬಣ್ಣ ಹಾಕದೇ ಇರುವ ಅಚ್ಚ ಬಿಳಿಯ ರೇಷ್ಮೆ ಅಥವಾ ನೂಲನ್ನು ಕೂಡಾ ಬಳಸಿಕೊಂಡು ನಕ್ಷೆ ತಯಾರಿಸುತ್ತಾರೆ.

ಖಣಗಳಲ್ಲಿ ಜಾನಪದ ಚಿತ್ತಾರಗಳು:

ಆನೆ, ನವಿಲು:– ನಿಸರ್ಗದಲ್ಲಿಯೇ ಅತಿ ಬ್ರಹತ್ ಪ್ರಾಣಿಯಾದ ಆನೆಯನ್ನು ಎಲ್ಲರೂ ಪ್ರೀತಿಸುತ್ತಾರೆ. ಈ ಆನೆಯ ಅಲಂಕಾರ ರೂಪವನ್ನು ನೇಯ್ಗೆಯ ಚಕ್ರಗಳ ಪಟ್ಟಿಯ ಸಹಾಯದಿಂದ ಬಟ್ಟೆಯ ಮೇಲೆ ಮೂಡಿಸಲ್ಪಡುತ್ತದೆ. ಆನೆ ಚೆನ್ನಾಗಿ ಕಾಣ ಬಂದಿದೆ. ಅದರ ಸೊಂಡಿಲನ್ನು ಕೆಳಗೆ ತೂಗುಬಿಟ್ಟು ವಿನಯದಿಂದ ನಿಂತಿದೆ. ಅದರ ಹಿಂದೆಯೆ ನವಿಲೊಂದು ತನ್ನ ಠೀವಿಯಿಂದ ಗರಿಗೆದರಿ ಎದೆ ಸೆಟೆಸಿ ನಿಂತಿದೆ. ಪ್ರಕೃತಿಯಲ್ಲಿಯೇ ಬಹು ಸುಂದರವಾದ ಪಕ್ಷಿ ಎಂದರೆ ನವಿಲು. ಇದನ್ನು ಚೆನ್ನಾಗಿ ಸಂಯೋಜನಾತ್ಮಕವಾಗಿ ರೂಪಿಸಿದ್ದಾರೆ. ಪ್ರತಿ ಚಿತ್ತಾರಕ್ಕೂ ಹೊರಗೆ ಚೌಕಾಕಾರದ ಚೌಕನ್ನು ಹಾಕಿದ್ದಾರೆ. ಅದೆ ಖಣದ ದಡಿಯಲ್ಲಿಯೂ ಅದೇ ಸೂಕ್ಷ್ಮ ರೂಪಗಳು ಮೂಡುವಂತೆ ಮಾಡಿದ್ದಾರೆ. ದಟ್ಟಕಂದು ಬಣ್ಣದ ಬಾರ್ಡರ್ ದಡಿಯಲ್ಲಿ ನಕ್ಷೆಗಳು ಚೆನ್ನಾಗಿ ಕಾಣುತ್ತಿವೆ. ಬಣ್ಣಗಳಲ್ಲಿ ಯಾವುದನ್ನಾದರೂ ಬಳಸಿಕೊಂಡು ಚಿತ್ತಾರ ಮೂಡಿಸುವ ವಾಡಿಕೆ ಉಂಟು.

ಸೂರ್ಯನಾರಾಯಣ ಸುದರ್ಶನ ಚಕ್ರ:–

ಸುದರ್ಶನ ಚಕ್ರದಲ್ಲಿ ಹೊರ ರೇಖೆಗಳು ತಿರುಗುವ ಚಕ್ರದಂತೆ ಕಂಡರೆ ಮಧ್ಯದಲ್ಲಿ ಸೂಕ್ಷ್ಮತೆ ಇದೆ. ಮೇಲೆ ಕೆಳಗೆ ಬಿಂದುಗಳು ಆಕರ್ಷಣೀಯವಾಗಿವೆ. ಸೂರ್ಯ ನಾರಾಯಣನ ಚಿತ್ತಾರದಲ್ಲಿ ಅವನ ಕಣ್ಣು ,ಮೂಗು, ತುಟಿಗಳು ಹಾಗೂ ಹಣೆಯ ಮೇಲೆ ತಿಲಕ ಚೆನ್ನಾಗಿ ಮೂಡಿ, ಬಂದಿದೆ. ಮೇಲೆ ಕೆಳಗೆ ಇದ್ದ ಬಿಂದುಗಳು ಸುದರ್ಶನ ಚಕ್ರ ಹಾಗೂ ಇದಕ್ಕೆ ಸಮತೋಲನವನ್ನು ಸೃಷ್ಟಿಸಿವೆ. ಬಾರ್ಡರ್ ನಕ್ಷೆ ದೊಡ್ಡದಾಗಿ ಅಚ್ಚ ಬಿಳಿಯದಾಗಿದೆ. ಈ ಎರಡು ಅಲಂಕಾರಿಕ ರೂಪದ ಮಧ್ಯ , ಎರಡು ಪಟ್ಟಿಯ ವೇಗದ ಪಟ್ಟಿ ಖಣಗಳಿಗೆ ಜೀವ ತುಂಬಿವೆ.

ತೇರು ಕೇದಿಗೆ:– ಕೆಳಗಡೆ ಎರಡು ಚಿಕ್ಕಗಾತ್ರದ ಗಾಲಿಗಳು ಕಂಡರೆ ಮೇಲೆ ಹೋದಂತೆ ಅಗಲವಾಗಿ ಅತೀ ಮೇಲಕ್ಕೆ ಹೋದಂತೆ ಕಳಸದ ಆಕಾರ ಮೂಡಿದೆ. ಹಿನ್ನೆಲೆ ದಟ್ಟವಾದ ಬಣ್ಣವನ್ನು ಸದಾ ಬಳಸಿಕೊಂಡು ಈ ತೇರಿನ ಮಹತ್ವವನ್ನು ತೋರಿದೆ. ಅದರ ಕೆಳಗಡೆ ಸಾಲು ಕೇದಿಗೆ ಗೊನೆ ಚೆನ್ನಾಗಿ ಮೂಡಿ ನಿಂತಿವೆ. ಕೇದಿಗೆಯ ಪಕಳೆಗಳು ಮೇಲೆ ಹೋದಂತೆ ಸೂಕ್ಷ್ಮವಾಗಿ ನಿರ್ಮಿತಗೊಂಡಿವೆ. ಕೆಳಗಡೆ ದೇಟು ಚೆನ್ನಾಗಿ ಮೂಡಿದೆ. ಇದೆರಡು ಚೆನ್ನಾಗಿ ಚಾಮಿಆಯ ಚೌರಸಾಕಾರದ ಚೌಕುಗಳಲ್ಲಿ ಒಂದರ ನಂತರ ಮತ್ತೊಂದು ಸಾಲುಗಳು ಸರಿಯಾಗಿ ಮೂಡಿದ್ದು ದಡಿಗಳಲ್ಲಿ ಇದೇ ನಕ್ಷೆಯ ಕಿರುರೂಪಗಳು

ಬಿಳಿ ಬಣ್ಣದಲ್ಲಿ ಮೂಡಿಸಲಾಗಿದೆ. ಇವೆರಡೂ ಸಾಲುಗಳ ಮಧ್ಯದಲ್ಲಿ ವೇಗದ ರೇಖೆ ಒಂದು ಪಟ್ಟಿ ಚೆನ್ನಾಗಿ ಓಡಿದೆ. ನಕ್ಷೆಗೆ ಜೀವ ಕಳೆ ತುಂಬಿದೆ.

ಸೂಕ್ಷ್ಮ ರೂಪದ ಹೂವುಗಳು:- ಒಟ್ಟಾರೆ ಖಣಗಳಲ್ಲಿ ಸೂಕ್ಷ್ಮರೂಪದ ಹೂವುಗಳು ಜನರನ್ನು ಆಕರ್ಷಿಸುತ್ತವೆ. ಹಿನ್ನೆಲೆ ದಟ್ಟ ವರ್ಣಗಳಿರುವ ಮೂಲಕ ಆ ಚಿಕ್ಕ ಗಾತ್ರದ ಹೂವುಗಳು ಪ್ರಕೃತಿಯ ಅಲಂಕಾರ ಹೂವುಗಳಾಗಿ ಮೂಡಿವೆ. ಎಲ್ಲವೂ ಭೂಮಿತಿ ಅಲಂಕಾರಿಕ ರೂಪಗಳಂತೆ ಶೋಭಿಸುತ್ತವೆ.

ಆರೋಗ್ಯಕ್ಕಾಗಿ ಖಣಗಳು:- ದೇಹದ ಮೃದುವಾದ ಚರ್ಮಕ್ಕೆ ರೇಷ್ಮೆ ಬಟ್ಟೆಯು ಯಾವ ತೊಂದರೆಯನ್ನು ಕೊಡಲಾರದು. ಅದರ ಮೇಲೆ ಸುಂದರ ಚಿತ್ತಾರಗಳಿರುವ ಆಕರ್ಷಕ ಖಣದ ಬಟ್ಟೆ ಎಲ್ಲರ ಮನಸ್ಸನ್ನು ಆನಂದಗೊಳಿಸುತ್ತದೆ. ಸದ್ಯ ಒಂದು ಮೀಟರ್ ಖಣಕ್ಕೆ ಅರವತ್ತರಿಂದ ಎಪ್ಪತ್ತು ರೂಪಾಯಿಗಳು ಅಂದಾಜಿದೆ. ಸದಾ ಕೃತ್ರಿಮ ಬಟ್ಟೆ ದೇಹಕ್ಕೆ ರೇಷ್ಮೆಯಷ್ಟು ಆರೋಗ್ಯ ನೀಡಲಾರದು. ಹಳ್ಳಿಯ ಬಡ ಹೆಣ್ಣುಮಕ್ಕಳು ಅರ್ಧ ಕಟಿಗೆ ಎಂಬ ಮಾಪಿನಿಂದ ಜವಾರಿ ಖಣ ಎಂಬ ಹೆಸರಿನಿಂದ ಖರೀದಿಸಿ ಬಗಲಲ್ಲಿ ಹತ್ತಿ ಬಟ್ಟೆಯ ಕೊಂಕಳ ಹಚ್ಚಿ ಕುಪ್ಪಸ ಹೊಲಿಸಿ ತೊಟ್ಟುಕೊಂಡು ಆನಂದಿಸುತ್ತಾರೆ.

ಇಂದು ಇದರ ಬೇಡಿಕೆ ಮಹಾರಾಷ್ಟ್ರ ಮತ್ತು ಉತ್ತರದ ರಾಜ್ಯಗಳಲ್ಲಿ ಅಧಿಕವಾಗಿದೆ. ಹೊರದೇಶದವರು ಕೂಡಾ ಇದನ್ನು ಪ್ರೀತಿಸುತ್ತಾರೆ. ಇದೊಂದು ಅತ್ಯುನ್ನತ ಶ್ರೇಣಿಯ ಕಲೆಯಾಗಿದೆ. ಬಟ್ಟೆ ನಿರ್ಮಾಣದ ಹಂತವನ್ನು ಸೂಚಿಸುವ ಸಂಕೇತದೊಂದಿಗೆ ಜಾನಪದ ಚಿತ್ರಗಳ ನಿರ್ಮಾಣವು ಬಟ್ಟೆಯ ಮೇಲಾಗಿವೆ. ಇದೇ ತರಹದ ನಕ್ಷೆಯನ್ನು ಬಯಸಿ ನಾವು ವಿದ್ಯುತ್ ಚಾಲಕ ಯಂತ್ರಕ್ಕೆ ಅಳವಡಿಸಿದರೆ ಈ ತರಹದ ಕಲಾತ್ಮಕತೆ ಬರಲು ಸಾಧ್ಯವೇ ಇಲ್ಲ. ನಾವೆಲ್ಲರೂ ಈ ಬಟ್ಟೆಯನ್ನು ಖರೀದಿಸಿ ಉಟ್ಟು ತೊಡದಿದ್ದರೆ ನಮ್ಮ ಭವ್ಯ ಸಂಸ್ಕೃತಿಯನ್ನು ಕಳೆದುಕೊಳ್ಳುವುದರಲ್ಲಿ ಸಂದೇಹವೇ ಇಲ್ಲ.

ರಾಜ್ಯ ಹಾಗೂ ಕೇಂದ್ರ ಕರಕುಶಲ ಕೈಗಾರಿಕಾ ಕೇಂದ್ರ ಹಾಗೂ ಖಾದಿ ಗ್ರಾಮೋದ್ಯೋಗ ವಿಭಾಗದವರು ಯೋಗ್ಯ ತರಹದ ಪ್ರೋತ್ಸಾಹನೆಯೊಂದಿಗೆ ಸಂಪ್ರದಾಯವನ್ನು ಉಳಿಸಿಕೊಳ್ಳಬೇಕು. ಸರಕಾರ ಇದಕ್ಕೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಕಡಿಮೆ ಬೆಲೆಯಲ್ಲಿ ನೇಕಾರರಿಗೆ ತಲುಪುವ ಹಾಗೆ ಮಾಡಿ ಜನಪದ ಚಿತ್ತಾರಗಳನ್ನು ಉಳಿಸಿಕೊಂಡು ಅನ್ನ, ಬಟ್ಟೆ, ವಸತಿ, ಎಂಬ ಅಂಶಗಳಲ್ಲಿ ಒಂದನ್ನು ಬೆಳೆಯಲು ಆಸ್ಪದ ನಾವು, ನೀವೆಲ್ಲರೂ ಕೊಡುವುದು ಅವಶ್ಯವಾಗಿದೆ.

***

ಮಂಗಲ ಕಾರ್ಯಕ್ರಮದ ಚಿತ್ತಾರಗಳು

ಕೆಲವು ಮಂಗಲ ಕಾರ್ಯಗಳಲ್ಲಿ ಗೋಡೆಯ ಮೇಲೆ ಜಾನಪದ ಗತ್ತಿನ ಚಿತ್ರಗಳು ನಿರ್ಮಾಣವಾಗುತ್ತವೆ. ಮನೆಯಲ್ಲಿ ಲಗ್ನ ನಿಶ್ಚಯಿಸಿದರೆ, ಮನೆಯ ಗೋಡೆಯ ಮೇಲೆ ಬಣ್ಣದ ಜೋರುಗಳು ಗೋಡೆಯ ಅಲಂಕಾರವನ್ನು ಹೆಚ್ಚಿಸುತ್ತವೆ.

ಮದು ಮಕ್ಕಳ ಅಂದರೆ ವರ- ಕನ್ಯೆಗೆ ಮಾಂಗಲ್ಯ ಕಟ್ಟುವ ಕಾರ್ಯಕ್ರಮದ ಸ್ಥಳದ ಓನ್ನೆಲೆ ಗೋಡೆ ಕೆಲ ವಿಶೇಷ ಚಿತ್ರಗಳಿಂದ ಅಲಂಕೃತವಾಗುತ್ತವೆ. ಹೆಚ್ಚಾಗಿ ಒಂದೇ ಬಣ್ಣದ ರೇಖೆಗಳಿಂದ ಪೂರ್ತಿ ಮಾಡಿರುತ್ತಾರೆ.

ವೈದಿಕ ಸಂಪ್ರದಾಯದವರು ಅಂದರೆ ಆರ್ಯರೆಂದು ಹೇಳಬಹುದು. 'ಭೋರ್ಜಗಲಿ' ಎಂಬ ಚಿತ್ತಾರಗಳನ್ನು ಗೋಡೆಯ ಮೇಲೆ ಬಿಡಿಸುತ್ತಾರೆ. ಆ ಚಿತ್ರಗಳ ಮೇಲೆ ತಮ್ಮ ಮನೆದೇವರ ಹೆಸರುಗಳನ್ನು ಬರೆದಿರುತ್ತಾರೆ. ಮೇಲ್ಗಡೆ ಶ್ರೀಕಾರ ಅದರ ಅಕ್ಕ ಪಕ್ಕದಲ್ಲಿ ಸೂರ್ಯ, ಚಂದ್ರ, ಪಕ್ಕದಲ್ಲಿ ಕಮಾನುಗಳ ರಚನೆಯಾಗುತ್ತವೆ. ಆ ಜಗಲಿ ಮೇಲ್ಗಡೆ ಶಿಖರ, ಅದರ ಮೇಲೆ ಕಳಸ ಎಲ್ಲವೂ ಪ್ರಗತಿಯ ಸಂಕೇತ. ತಟ್ಟ ತಳದಲ್ಲಿಯ ಭದ್ರ ಬುನಾದಿಯು ಬೆಸ ಸಂಖ್ಯೆಗಳಾದ ಹನ್ನೊಂದು, ಒಂಬತ್ತು, ಏಳು, ಐದು, ಚೌಕುಗಳಿಂದ ಅವುಗಳ ಮೇಲೆ ಒಂದೊಂದು ಕಡಿಮೆಯಾಗುತ್ತ ಹೋಗುತ್ತವೆ. ಆ ಖಾನೆಗಳಲ್ಲಿ ಲಗ್ನದ್ದಾದರೆ 'ಕುರ್ಯಾತ್ ಸದಾ ಮಂಗಲಂ' ಮುಂಜವಿಯಾದರೆ 'ಕುರ್ಯಾತ್ ವಟೋರ್ವ ಮಂಗಲಂ' ಎಂಬುದಾಗಿ ಬರೆಯುತ್ತಾರೆ.

ದ್ರಾವಿಡ ಸಂಪ್ರದಾಯದಲ್ಲಿ ಶೈವಾರಾಧಕರು 'ಶ್ಯಾಶಿ ಕಟ್ಟೆ' ಎಂಬ ಚಿತ್ತಾರಗಳನ್ನು ನಿರ್ಮಿಸುತ್ತಾರೆ. ಒಂದು ದೊಡ್ಡದಾದ ಚೌಕು, ಅದರ ಮೇಲ್ಗಡೆ ಮೂರು ಚೌಕುಗಳು. ಅದರ ಕೆಳಗಡೆ ಮೂರು ಚೌಕು, ಕೆಳಗಡೆ ಖಾಲಿ ಇರುವ ಮೂರು ಚೌಕುಗಳು ನಿರ್ಮಾಣವಾಗುತ್ತವೆ. ಮೇಲಿನ ಮಧ್ಯದ ಚೌಕಾಕಾರದಲ್ಲಿ 'ಓಂ' ಎಂಬ ಅಕ್ಷರ ನಿರ್ಮಾಣವಾದರೆ ಅಕ್ಕ ಪಕ್ಕದಲ್ಲಿ ಅಪ್ಪಟ ಜನಪದ ರೇಖೆಗಳಿಂದ ಸೂರ್ಯ, ಚಂದ್ರರು ನಿರ್ಮಾಣವಾಗುತ್ತಾರೆ. ಇವುಗಳ ಕೆಳಗಡೆಗೆ ಮಧ್ಯದಲ್ಲಿ 'ಶಿವಲಿಂಗ'ವಿರುತ್ತದೆ. ಅಕ್ಕ ಪಕ್ಕದಲ್ಲಿ ಬಸವಣ್ಣನ ಮೂರ್ತಿಗಳು ಪ್ರಭಾವಳಿಯ ಮೇಲೆ ಕುಳಿತಿರುತ್ತವೆ. ಅದರ ಕೆಳಗಡೆಗೆ ಮೂರು ಖಾಲಿ ಇರುವ ಚೌಕಗಳಿರುತ್ತವೆ.

ವೈಶ್ಯ ಸಂಪ್ರದಾಯದ ಉದಾಹರಣೆಗಾಗಿ ಮಾಹೇಶ್ವರಿ ಜನಾಂಗದವರು ಮಂಗಲಕಾರ್ಯಕ್ಕೆ ಗೋಡೆಗೆ ಬರೆಯಿಸುವ ಚಿತ್ರವೆಂದರೆ ಮಧ್ಯದಲ್ಲಿ 'ಶ್ರೀ ಗಣಪ' ಅಕ್ಕ ಪಕ್ಕದಲ್ಲಿ ಐರಾಣಿಗಳೆಂಬ ಒಂದರ ಮೇಲೊಂದು ಇಟ್ಟಿರುವ ಐದು ಕುಡಿಕೆಗಳು, ಮೇಲ್ಗಡೆಗೆ ಕಳಸವನ್ನು ನಿರ್ಮಿಸಿರುತ್ತಾರೆ. ಅವುಗಳ ಪಕ್ಕಕ್ಕೆ ಬಾಳೆಕಂಭಗಳ ಚಿತ್ರಗಳನ್ನು ಬಿಡಿಸಿ ಇದಕ್ಕೆ ಪೂಜೆ ಸಲ್ಲಿಸಿ ಮುಂದಿನ ಕಾರ್ಯಗಳು ಪ್ರಾರಂಭವಾಗುತ್ತವೆ.

ಮದುವೆಯಾಗುವ ವರ, ಕನ್ಯಾ, ಹಾಗೂ ಮದುವೆ ಮಾಡಿಸುವ ಸ್ವಾಮಿ ಆಚಾರ್ಯರುಗಳು ಹಿಂದುಗಡೆ ಇರುವ ಈ ಚಿತ್ರಗಳು ಒಂದು ಹೊಸ ವಾತಾವರಣವನ್ನೇ ನಿರ್ಮಿಸುತ್ತವೆ.


ಸೂರ್ಯ, ಚಂದ್ರರಂತೂ ಆ ವಧೂವರರಿಗೆ ಸದಾ ಮಂಗಲವನ್ನೇ ಹರಸುವಂತೆ ಗೋಚರಿಸುತ್ತವೆ. ಹೆಣ್ಣು -ಗಂಡುಗಳೆರಡು ಪವಿತ್ರ ಪ್ರೀತಿ ಜಗತ್ತಿನಲ್ಲಿ ಸೂರ್ಯ-ಚಂದ್ರರ ಸಾಕ್ಷಿಯಾಗಿ ಪತಿ, ಪತ್ನಿಯರಾಗಿ ಜೀವನ ಸಾಗಿಸುವ ಪಣ ತೊಡುವುದನ್ನು ಹಾಗೂ ಹಿರಿಯರೆಲ್ಲಾ ಆಶೀರ್ವದಿಸುವುದು ಎಲ್ಲವೂ ಕಲಾಮಯ ವಾತಾವರಣವೇ ಸರಿ. ಹರಿಜನ ಗಿರಿಜನರಲ್ಲಿ ಮದುವೆ ಮಾಡುವಾಗ ಮದುಮಕ್ಕಳ ಹಿಂದುಗಡೆ

ಒಂದೇ ಗೋಪುರದ ಹಾಗೆ ಚಿತ್ರಮಾಡಿ ಮಧ್ಯದಲ್ಲಿ ಕಳಸ ನಿರ್ಮಿಸಿ ಅದರ ಕೆಳಗಡೆ ಗೆರೆಗಳಿಂದ ಕಮಾನವನ್ನು ಪೂರ್ತಿಮಾಡಿರುತ್ತಾರೆ. ಆ ಕಮಾನಿನ ಅಕ್ಕಪಕ್ಕದ ದಪ್ಪ ಪಟ್ಟಿಯಲ್ಲಿ ಎಡಗಡೆ ಸೂರ್ಯ, ಬಲಗಡೆಗೆ ಚಂದ್ರ, ನಟ್ಟನಡುವೆ ಶಿವಲಿಂಗ, ಅದರ ಪಕ್ಕದಲ್ಲಿ ಎರಡೂ ಕಡೆಗೆ ಬಸವಣ್ಣನ ಚಿತ್ರಗಳಿರುತ್ತವೆ. ಆ ಬಸವಣ್ಣಗಳು ಕಾಲು ಮಡಿಚಿ ಕುಳಿತಿರುತ್ತವೆ.


ಇದೊಂದು ಸಾಂಪ್ರದಾಯಿಕ ಜಾನಪದ ಚಿತ್ತಾರವಾದರೆ ಇತ್ತಿತ್ತಲಾಗಿ ಮದುವೆಯ ಮಂಟಪ ಏನೆಲ್ಲಾ ಅಲಂಕಾರಮಯ ಆಕೃತಿಗಳಿಂದ, ಬೆಂಡು, ಬಣ್ಣಗಳಿಂದ ಅಲಂಕರಿಸಲ್ಪಡುತ್ತಿವೆ. ದೇವರು ಮನೆಯಲ್ಲಿ ಸಂಪ್ರದಾಯ ಬಿದ್ದ ಅಕ್ಷತಾ ಕಾರ್ಯಕ್ರಮವಾದ ನಂತರ ಅಲಂಕೃತ ಮಂಟಪದ ಮೇಲೆ ಮಾಡುವ ಕಾರ್ಯಕ್ರಮ ಈ ಜಾನಪದ ಅಲಂಕೃತ ಚಿತ್ತಾರಗಳಿಂದಲೇ ಮುಂದುವರೆದಿರಲೂ ಬಹುದು.

ಮಂಗಲಕಾರ್ಯದಲ್ಲಿ ಮೂಡುವ ಈ ಚಿತ್ತಾರಗಳು ಸದಾ ಹಚ್ಚ ಹಸಿರಾಗಿರುವಂತೆ ಮುಂದುವರೆಸಿಕೊಂಡು ಹೋಗುವುದು ಅವಶ್ಯಕವಾಗಿದೆ.

ಆಯಾ ಸಂಪ್ರದಾಯದವರು ನಿರ್ಮಿಸುವ ಈ ಚಿತ್ತಾರಗಳ ಮೇಲೆ ತಮ್ಮ ತಮ್ಮ ಮನೆದೇವರ ನಾಮಗಳನ್ನು ಬರೆದು ಆಚರಿಸುವ ಈ ಮದುವೆ ಎಂಬ ಬಾಂಧವ್ಯ ಕಾರ್ಯಕ್ರಮಕ್ಕೆ ಮೆರಗುಕೊಡುತ್ತಿವೆ ಈ ಜಾನಪದ ಚಿತ್ತಾರಗಳು.



ಗುಳೇದಗುಡ್ಡದ ಶ್ರೀಮತಿ ಶಾವಂತ್ರೆವ್ವ, ರಾಚಯ್ಯನವರು ಮೆರಬದಮಠ ಇವರು ಬಿಡಿಸಿರುವ ಬೆಳದಿಂಗಳ ಚಿತ್ತಾರ



ಶ್ರೀಯುತ ಬನ್ನಿಯವರ ಮನೆಯಲ್ಲಿ ಬಿಡಿಸಿದ ಬೆಳದಿಂಗಳ ಚಿತ್ತಾರ

***

– ಭಾರತ ಹುಣ್ಣಿಮೆಯ ಬೆಳದಿಂಗಳ ಚಿತ್ತಾರಗಳತ
– ಭಾರತ ಬೆಳಕಿನಲ್ಲಿ ಬೆಳದಿಂಗಳ ಚಿತ್ತಾರ

ಈ ನಮ್ಮ ಭಾರತ ದೇಶ ಗ್ರಾಮಗಳ ನಾಡು. ಮುಂದುವರಿದ ನಗರಗಳೂ ಕೂಡಾ ಹಿಂದೊಮ್ಮೆ ಗ್ರಾಮಗಳಾಗಿದ್ದವು. ಗ್ರಾಮೀಣ ಜನರ ನಿತ್ಯದ ಬದುಕು ಲಲಿತಕಲಾಚಟುವಟಿಕೆಗಳ ಮೂಲಕ ಆನಂದಮಯವಾಗಿದೆ.

ನಾವೆಲ್ಲ ಆಚರಿಸುವ ಪ್ರತಿ ಹುಣ್ಣಿಮೆಗೂ ಒಂದಲ್ಲಾ ಒಂದು ಅರ್ಥವಿದೆ. ಅಂದು ಒಂದೊಂದು ಲಲಿತಾಕಲಾ ಚಟುವಟಿಕೆಗಳು ನಡೆದು ಸುಮೋಹಿತ ಆನಂದವನ್ನು ಕೊಟ್ಟು, ಸಹಬಾಳ್ವೆಗೆ ಹರಸಿ ಹೋಗುತ್ತವೆ ಹುಣ್ಣಿಮೆಗಳು. ಎಲ್ಲಾ ಹುಣ್ಣಿಮೆಗಳಲ್ಲಿ ಭಾರತ ಹುಣ್ಣಿಮೆ ಪ್ರಖರವಾದ ಹಾಲು ಬೆಳದಿಂಗಳನ್ನು ಹೊಂದಿರುವಂತಹುದು. ಹುಣ್ಣಿಮೆಯಂದು ಭೌಗೋಳಿಕವಾಗಿ ಸಮುದ್ರದ ನೀರೇ ನರ್ತನ ಮಾಡುವಾಗ ನೀರೆಯರ ನರ್ತನ ಆಗದೇ ಇದ್ದೀತೆ. ಈ ಭಾರತ ಹುಣ್ಣಿಮೆಗೆ ಚಂದಪ್ಪನ ಹುಣ್ಣಿಮೆ, ಬೆಳದಿಂಗಳ ಹುಣ್ಣಿಮೆ, ಗುಡಿ ಹುಣ್ಣಿಮೆ ಎನ್ನುವರು. ನಮ್ಮ ಜೀವನದ ಅನೇಕ ಒಳ್ಳೆಯ ಘಳಿಗೆಗಳಿಗೆ ಚಂದ್ರನನ್ನು ಬಳಸಿಕೊಂಡಿದ್ದೇವೆ. ಗಂಡು–ಹೆಣ್ಣುಗಳೆರಡು ದೈಹಿಕ, ಮಾನಸಿಕವಾಗಿ ಒಂದಾಗುವದಕ್ಕೆ – 'ಮಧುಚಂದ್ರ'ವೆಂದು ಪುಟ್ಟ ಪುಟಾಣಿಗಳಿಗೆ ಚಂದಿರ ತೋರಿಸಿ 'ಚಂದಾಮಾಮಾ'ನೆಂದು ಚಂದಿರನ ತಂಪನ್ನು ಬಳಸಿಕೊಂಡಿದ್ದೇವೆ.

ಪುಷ್ಯ–ಮಾಘ ಮಾಸದಲ್ಲಿ ಬರುವ ಈ ಭಾರತ ಹುಣ್ಣಿಮೆಯ ಐದು ದಿವಸಗಳು ಹೆಣ್ಣುಮಕ್ಕಳಿಗೆ ಸೌಭಾಗ್ಯವನ್ನಿಡುವ ಉತ್ಸವವಾಗಿದೆ. ಈ ಹಾಲು ಬೆಳದಿಂಗಳಲ್ಲಿ ನಡೆಯುವ ಚಿತ್ತಾರ ಬಿಡಿಸುವ ಚಿತ್ರಕಲಾ ಚಟುವಟಿಕೆ ಸಖಿಯರಲ್ಲಿ ಭಾವೈಕ್ಯತೆ, ಆನಂದ, ಸಕಲ ಸೌಭಾಗ್ಯವನ್ನೊದಗಿಸುತ್ತವೆ. ಚಿತ್ರ ಬಿಡಿಸುವ ಚಟುವಟಿಕೆಗೆ 'ಬೆಳದಿಂಗಳ ಹೊಯ್ಯುವುದು' ಎಂದು ಕರೆಯುತ್ತಾರೆ. ಇದು ಕನ್ನಡನಾಡಿನ ಬಹುಭಾಗದಲ್ಲಿ ನಡೆಯುತ್ತದೆ.

ಪ್ರಕೃತಿದತ್ತವಾಗಿ ದೊರೆಯುವ ಎರಡೇ ಎರಡು ಬಣ್ಣಗಳ ಮುಖಾಂತರ ಚಿತ್ರ ಬಿಡಿಸುವ ಕಾರ್ಯ ನಡೆಯುತ್ತದೆ. ಕೆಂಪು ಮಣ್ಣು ಮತ್ತು ಸುಣ್ಣದ ಮುಖಾಂತರ ಚಿತ್ರ ಬಿಡಿಸುವ ಪರಿ ಎಂದರೆ ತಮ್ಮ ತಮ್ಮ ಮನೆಯ ಒಂದು ಗೋಡೆಯ ನಾಲ್ಕರಿಂದ ಅಂದಾಜು ಎಳು ಫೂಟಿನ ಗಾತ್ರದ ಒಂದು ಭಾಗವನ್ನು ಚೆನ್ನಾಗಿ ಕೆಂಪು ಮಣ್ಣಿನಿಂದ ಸಾರಿಸಿಕೊಳ್ಳುತ್ತಾರೆ. ಆಧುನಿಕ ಚಿತ್ರಕಲಾವಿದ ಬಳಿಕ್ಯಾನಿವಾಸ ತಯಾರಿಸಿಕೊಂಡಂತೆ ಕೆಂಪುಮಣ್ಣಿನಿಂದ ಕೆಂಪು ಹಿನ್ನೆಲೆಯ ಮೇಲೆ ಬಿಳಿ ಸುಣ್ಣದಿಂದ ಬಿಂದುಗಳ ಮುಖಾಂತರ ಅಥವಾ ಬಿಳಿ ಸುಣ್ಣದ ಹಿನ್ನೆಲೆಯ ಮೇಲೆ ಕೆಂಪುಮಣ್ಣಿನ ಬಿಂದುಗಳ ಮುಖಾಂತರ ಚಿತ್ತಾರ ಮೂಡಿಸಿ ನೋಡಿ, ಆನಂದಿಸಿ ಆರತಿ ಎತ್ತಿ ತಮ್ಮ ಇಷ್ಟಾರ್ಥಗಳನ್ನೆಲ್ಲ ಪೂರೈಸಿಕೊಳ್ಳುವ ನಾರಿಯರ

ಚಟುವಟಿಕೆ ಮೆಚ್ಚುವಂತಹುದು. ಏಕ ಚಿತ್ತದಿಂದ ಚಿತ್ರಿಸುವ, ನೋಡುವ ಮಹಿಳೆ ತನ್ನಲ್ಲಿ ತಾಳ್ಮೆ, ಶಾಂತಿಗುಣಗಳನ್ನು ಬೆಳೆಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ಹುಣ್ಣಿಮೆಯ ನಾಲ್ಕು ದಿವಸ ಮೊದಲೇ ಪ್ರಸ್ತುತ ಕಾರ್ಯ ಪ್ರಾರಂಭವಾಗುತ್ತದೆ. ಆದರೆ ಈ ನಾಲ್ಕು ಚಿತ್ರಗಳು ಅವತ್ತಿನ ದಿವಸ ಮಾತ್ರ ನೋಡಲು ಸಿಗುತ್ತವೆ. ಮರುದಿವಸ ಇವುಗಳನ್ನು ಅಳುಕಿಸಿ ಅರ್ಥಾತ್ ಮತ್ತೆ ಸಾರಿಸಿ ಹೊಸ ಚಿತ್ರಗಳ ರಚನೆ ನಡೆಯುತ್ತದೆ. ಆದರೆ ಐದನೆಯ ದಿವಸದ ಚಿತ್ರ ಮಾತ್ರ ದಸರಾ, ದೀಪಾವಳಿ ಹಬ್ಬಗಳು ಬರುವವರೆಗೆ ನೋಡಲು ಸಿಗುತ್ತವೆ. ಗೋಡೆಯ ಮೇಲೆ ಚಿತ್ರ ಬಿಡಿಸಲು ಆಗದವರು ಕೂಡ್ರುವ ಮಣೆಗಳ ಮೇಲೆ ಚಿತ್ರ ಬಿಡಿಸಿ ಪೂಜಿಸುವ ವಾಡಿಕೆಯು ಇದೆ.

ಮೊದಲನೆಯ ದಿನ ಸೂರ್ಯ, ಚಂದ್ರರ ಚಿತ್ರವನ್ನು ಮಾತ್ರ ಬಿಡಿಸುತ್ತಾರೆ. ಬೆರಳುಗಳನ್ನು ಸುಣ್ಣದಲ್ಲಿ ಅದ್ದಿ ಆ ಸುಣ್ಣದ ಬಿಂದುಗಳನ್ನು ಕೆಂಪು ಹಿನ್ನೆಲೆಯ ಮೇಲೆ ಇಡುತ್ತಾ ಪೂರ್ಣಚಂದ್ರ ಅಥವಾ ಅರ್ಧ ಚಂದ್ರನನ್ನು ಚಿತ್ರಿಸುತ್ತಾರೆ.

ಎರಡನೆಯ ದಿನ ಸೂರ್ಯ–ಚಂದ್ರ ಹಾಗೂ ಹಾವುಗಳ ಚಿತ್ರ, ಸೂರ್ಯ– ಚಂದಿರರನ್ನು ದುಂಡಾಗಿ ಅರ್ಧ ದುಂಡಾಗಿ ಚಿತ್ರಿಸಲು ಊಟದ ತಾಟಿನ ಸಹಾಯ ತೆಗೆದುಕೊಂಡು ಅದನ್ನು ಗೋಡೆಯ ಮೇಲೆ ಹಿಡಿದು ಅದರ ಪಕ್ಕಕ್ಕೆ ಸುಣ್ಣದ ಬೊಟ್ಟುಗಳನ್ನಿಡುತ್ತಾ, ಪೂರ್ತಿ ಮಾಡುತ್ತಾರೆ. ಅಂಕು ಡೊಂಕಾದ ರೇಖೆಯಿಂದ ನಾಗರ ಹಾವು ನಾಲಿಗೆ ಚಾಚಿದ್ದನ್ನು ಚಿತ್ರಿಸುತ್ತಾರೆ.

ಮೂರನೆಯ ದಿವಸ ರಾಮನ ತೊಟ್ಟಿಲು ಎಂದು ಚೌಕಾಕಾರದ ಆಕೃತಿ ರಚಿಸಿ ಅದರಲ್ಲಿ ಕೆಲವೊಂದು ನಕ್ಷೆಗಳನ್ನು ಬಿಂದುಗಳ ಮುಖಾಂತರ ಇಟ್ಟು ಆನಂದಿಸಿ ಪುತ್ರ ಸಂತಾನದ ಅಪೇಕ್ಷೆಗಳನ್ನು ಪೂರೈಸಿಕೊಳ್ಳುತ್ತಾರೆ.

ನಾಲ್ಕನೆಯ ದಿನ ಹೂವು ಎಲೆ ಬಳ್ಳಿಗಳ ಚಿತ್ರ ಹಾಗೂ ನಾಗರ ಹಾವುಗಳ ಚಿತ್ರ ಮತ್ತು ಮಧ್ಯದಲ್ಲಿ ಚಿಕ್ಕದಾದ ತೇರಿನ ಆಕಾರ. ತೇರೆಳೆಯುವುದಕ್ಕೆ ಮುಂಚಿನ ದಿನ ಆ ಪಥದಲ್ಲಿಯೇ ನವಗ್ರಹ ಚಕ್ರವೆಂಬ ಪುಟ್ಟಗಾತ್ರದ ಹುಚ್ಚಯ್ಯನ ಎಳೆಯುವುದು ಹೇಗೆ ರೂಢಿಯಲ್ಲಿದೆಯೋ ಹಾಗೆ ಹುಚ್ಚಯ್ಯನನ್ನು ನಡುವೆ ಮೂಡಿಸುತ್ತಾರೆ.

ಇನ್ನು ಐದನೆಯ ದಿನ ಮಧ್ಯದಲ್ಲಿ ದೊಡ್ಡದಾದ ತೇರು, ಆ ತೇರಿನ ಕಳಸವನ್ನು ಚೆನ್ನಾಗಿ ಚಿತ್ರಿಸುವುದಕ್ಕಾಗಿ ಬಸರಿ ಎಲೆಯನ್ನು ಸಹಾಯಕ್ಕಾಗಿ ಬಳಸಿ ಅದನ್ನು ಗೋಡೆಯ ಮೇಲೆ ಹಿಡಿದು ಅದರ ಪಕ್ಕಕ್ಕೇನೇ ಸುಣ್ಣದ ಬೊಟ್ಟುಗಳನ್ನಿಟ್ಟು ನೀಟಾಗಿ ಚಿತ್ರಿಸುತ್ತಾರೆ. ಆಧುನಿಕ ಕಲಾವಿದ ಮೀಟರ್ ಪಟ್ಟಿಯನ್ನು ಉಪಯೋಗಿಸುವಂತೆ ಜೋಳದ ದಂಟನ್ನು ಬಳಸಿ ಆ ದಂಟಿನ ಎರಡು ಬದಿಗೆ ಸುಣ್ಣದ ಬೊಟ್ಟುಗಳನ್ನು ಮೂಡಿಸಿ ಸುಂದರ ಸಮಾಂತರ ಸಾಲುಬಿಂದುಗಳಿಂದ ತೇರನ್ನು ರಚಿಸುತ್ತಾರೆ. ಮೇಲ್ಗಡೆ ಸೂರ್ಯ, ಚಂದ್ರ, ಅಕ್ಕ ಪಕ್ಕದಲ್ಲಿ ಹಾವು, ಚೇಳು, ಬಸವಣ್ಣ, ವಾದ್ಯಮೇಳ ಚಿತ್ರಿಸುತ್ತಾರೆ. ನಿತ್ಯ ಸಂಜೆ ಚಿತ್ರಗಳ ಕಾರ್ಯ ನಡೆದು ಬೆಳದಿಂಗಳಲ್ಲಿ ಆನಂದಿಸಿ ಕೊನೆಯ ದಿನವಾದ ಇಂದು ಹೋಳಿಗೆ ನೈವೇದ್ಯ ಆರತಿ ಬೆಳಗುವುದರೊಂದಿಗೆ ವೈಭವೀಕರಿಸಿಕೊಳ್ಳುತ್ತವೆ ಈ ಚಿತ್ತಾರಗಳು.

ಪ್ರಸ್ತುತ ಚಿತ್ರ ರಚನಕಾರರಾದ ಶ್ರೀಮತಿ ಶ್ಯಾವಂತ್ರೆವ್ವ ರಾಚಯ್ಯನವರು ಮರಬದ ಮಠ ಇವರ ಸಂಬಂಧಿಕರಾದ ಶ್ರೀಮತಿ ಬಸವ್ವ ವೀರಭದ್ರಯ್ಯ ಸಾಲೀಮಠ ಇವರನ್ನು ಪ್ರಸ್ತುತ ಆಚರಣೆ ಕುರಿತು ಚರ್ಚಿಸಿದಾಗ, ಗುಳೇದಗುಡ್ಡದಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ನಡೆಯುತ್ತಿರುವುದು ತಿಳಿದು ಬಂದಿತು. ಐದು ದಿವಸಗಳ ಕಾಲ ಅದ್ದೂರಿಯಾಗಿ ನಾವು ಸಣ್ಣವರಿದ್ದಾಗ ಆಚರಿಸುತ್ತಿದ್ದೆವು ಎಂದು ಎಂಬತ್ತು ವರ್ಷದ ಬಸವ್ವ ಸಾಲಿಮಠ ನುಡಿದಳು.

ಗುಳೇದಗುಡ್ಡದ ಬನ್ನಿ, ತಿಪ್ಪಾ, ಹಬೀಬ, ಶೀಲವಂತರ ಮುಂತಾದ ಮನೆಗಳಲ್ಲಿ ಇಂದಿಗೂ ಕೂಡಾ ಭಾರತ ಹುಣ್ಣಿಮೆಯ ಬೆಳದಿಂಗಳ ಹೊಯ್ಯುವ ಉತ್ಸವ ನಡೆಯುತ್ತಿದೆ.

ಐದು ದಿನಗಳವರೆಗೆ ಅದ್ದೂರಿಯಾಗಿ ನಡೆಯುವ, ಖರ್ಚಿಲ್ಲದೇ ಸೃಜನಶೀಲತೆಯನ್ನು ಸಮಾಜದಲ್ಲಿ ಮೂಡಿಸುವ ಕಾರ್ಯ ಕೇವಲ ಒಂದು ದಿನಕ್ಕೆ ಅದೂ ಕಾಟಾಟವನ್ನು (ಕಾಲಾಚಾರಕ್ಕೆ) ಬಂದು ನಿಂತಿದೆ.

ಈ ಆಧುನಿಕ ಜಗತ್ತಿನಲ್ಲಿ ನಮ್ಮ ಜನಪದ ಚಿತ್ರಕಲಾ ಸಂಪತ್ತನ್ನು ಕಾಪಾಡಿಕೊಂಡು ಹೋಗುವ ಭಾರ ನಮ್ಮೆಲ್ಲರ ಮೇಲಿದೆ.

***

ಜಾನಪದ ಚಿತ್ತಾರಗಳ 'ಚಂದ್ರಕಾಳಿ' ಸೀರೆ

- ಕರ್ನಾಟಕದ ಚಂದ್ರಕಾಳಿ ಸೀರೆ
- ನೀರೆಯರಿಗಾಗಿ ಚಂದ್ರಕಾಳಿ ಸೀರೆ
- ಸೌಂದರ್ಯಕ್ಕಾಗಿ ಚಂದ್ರಕಾಳಿ ಸೀರೆ

ಉತ್ತರ ಕರ್ನಾಟಕದ ಬಾದಾಮಿ ತಾಲ್ಲೂಕಿನ ಗುಳೇದಗುಡ್ಡ ಜಗತ್ಪ್ರಸಿದ್ಧ ರೇಷ್ಮೆ ಖಣಗಳನ್ನು ತಯಾರಿಸುವಲ್ಲಿ ಮಾತ್ರ ಹೆಸರು ಮಾಡಿಲ್ಲ. 'ಚಂದ್ರಕಾಳಿ' ಎಂಬ ಹೆಸರಿನ ಕರಕುಶಲ ಕಲೆಯ ಸೀರೆಗಳು ನಾಡಿನಾದ್ಯಂತ ಪ್ರೌಢಿಮೆ ಮೆರೆದಿವೆ.

ರೇಷ್ಮೆಯ ಹುಳುವು ಧರೆಗೆ ಅವತರಿಸಿ ಜಗತ್ತನ್ನೆಲ್ಲಾ ನೋಡಿ ಹಚ್ಚ ಹಸುರಿನ ಎಲೆಗಳ ಮಧ್ಯ ಕೆಲವೇ ದಿವಸ ಇದ್ದು, ನಮಗಾಗಿ ಅಮೂಲ್ಯ ರೇಷ್ಮೆ ಎಳೆಯನ್ನು ಕೊಟ್ಟು ಈ ಭವಸಾಗರದಿಂದ ಪಾರಾಗುವಂತೆ, ನಮ್ಮ ಹಿರಿಯರು ನಮಗಾಗಿ ನಮ್ಮ ಜೀವನವನ್ನು ಅಲಂಕಾರಮಯವಾಗಿರಿಸುವ ಉದ್ದೇಶದಿಂದ ಹೆಣಿಕೆಯ ಕಲಾಕೃತಿಗಳಿಂದ ಕಂಗೊಳಿಸುವ ಚಂದ್ರಕಾಳಿ ಸೀರೆಯನ್ನು ತಯಾರಿಸಿ ಕೊಟ್ಟು ಹೊರಟುಹೋಗಿದ್ದಾರೆ. ಪ್ರಸ್ತುತ ಜಾನಪದ ಕರಕುಶಲಕಲೆಯನ್ನು ಗುಳೇದಗುಡ್ಡದ ಶ್ರೀಮತಿ ಉಮ್ಮವ್ವ ವಿರೂಪಾಕ್ಷಪ್ಪಾ ಹಗ್ಗದ ಇವರ ತವರು ಮನೆಯ ಹೆಸರು ಉಮ್ಮವ್ವಾ ಸಂಗಪ್ಪಾ ಅಥಣಿ ಎಂಬುವರು ಕರಗತ ಮಾಡಿಕೊಂಡು ತಮ್ಮ ಎಂಬತ್ತು ವರ್ಷದ ಜೀವನದಲ್ಲಿ ಸಾಕಷ್ಟು ಸೀರೆಗಳನ್ನು ತಯಾರಿಸಿ ಅಲ್ಪ ಸ್ವಲ್ಪ ಆದಾಯ ಮಾಡಿಕೊಂಡು ಆನಂದದಾಯಕ ಜೀವನ ನಡೆಸುತ್ತಿದ್ದಾರೆ. ಸದ್ಯದಲ್ಲಿಯು ಕೂಡಾ ಹೆಣಿಕೆ ಹಾಕುವ ಹುಮ್ಮಸ್ಸಿದೆ. ಅದರೆ ದೇಹದ ಮುಖ್ಯವಾದ ಅವಯವಗಳಾದ ಕಣ್ಣುಗಳು ಜೊತೆಗೂಡುತ್ತಿಲ್ಲ.

ಭಾರತೀಯ ಗೃಹಿಣಿಯರಿಗೆ ರೇಷ್ಮೆಯ ಸೀರೆ ಎಂದರೆ ಎಲ್ಲಿಲ್ಲದ ಆನಂದ. ದೇಹಕ್ಕೆ ಮೆತ್ತಗೆ ಹಗುರಾದ ಮಲ್ಲಿಗೆಯ ಹೂವಿನಂತಿರುವ ಈ ಸೀರೆಯ ದಡಿ ಸೆರಗು ಮಧ್ಯಭಾಗ ಎಲ್ಲ ರೇಷ್ಮೆಯಿಂದ ಕೂಡಿರುತ್ತದೆ. ಮಧ್ಯದಲ್ಲಿ ಅಡ್ಡಲಾಗಿ ಬರುವ ಎಳೆಗಳೆಲ್ಲ ನೂಲಿನವು, ಅದಕ್ಕಾಗಿ ತಾಳಿಕೆ ಬಾಳಿಕೆ ಹೆಚ್ಚಿಗೆ ಬರುತ್ತವೆ. ದಟ್ಟ ನೀಲಿ ಬಣ್ಣದ ಈ ಸೀರೆಯ ಸೆರಗು ದಡಿಗಳು ಮಾತ್ರ ಕೆಂಪು ವರ್ಣದ್ದಿರುತ್ತವೆ. ದಡಿಯಲ್ಲಿ ಅತೀ ಸೂಕ್ಷ್ಮ ಬಿಂದುಗಳಿಂದ ಅಲಂಕೃತ ಪಟ್ಟಿ ಇರುತ್ತದೆ. ಈ ಸೀರೆಯ ಗಾತ್ರ ಹದಿನೆಂಟುಮಳ, ಅಂದರೆ ಒಂಬತ್ತು ಮೀಟರ್ ಉದ್ದ, ದಡಿಯ ಗ್ರಾತ ಐದು ಅಂಗುಲ, ಅಗಲ, ಸೆರಗು ಅಂದಾಜು ಮೂರು ಫೂಟು ಉದ್ದ, ಮೂರು ಫೂಟು ಅಗಲದ್ದಾಗಿರುತ್ತದೆ.

ಸೀರೆಯ ಮಧ್ಯಭಾಗದಲ್ಲಿ ಸೂಜಿಮಲ್ಲಿಗೆ ಎಂಬ ಸುಂದರವಾದ ಹೂವಿನ ಆಕಾರವನ್ನು ಸೂಜಿಯ ಮಾಧ್ಯಮದಿಂದ ಬಣ್ಣದ ರೇಶ್ಮೆ ಎಳೆಗಳನ್ನು ತುಂಬಿ ಇಡೀ ಸೀರೆಯನ್ನು ಅಲಂಕಾರಮಯ ಮಾಡುತ್ತಾರೆ.

ಸೀರೆಯ ಸೆರಗಿನ ಕೆಲ ಭಾಗಗಳಲ್ಲಿ ಕಂಡು ಬರುವ ವಿಶೇಷ ಅಲಂಕಾರಿಕ ಜಾನಪದ ಚಿತ್ತಾರಗಳೆಂದರೆ ಪ್ರಾಣಿ ವಿಭಾಗದಲ್ಲಿ ಹುಲಿ, ಸಿಂಹ, ಚಿಗರಿ, ಅಳಿಲು; ಪಕ್ಷಿಗಳ ವಿಭಾಗದಲ್ಲಿ ನವಿಲು, ಗುಬ್ಬಿಗಳನ್ನು; ಹೂವು ಬಳ್ಳಿಗಳನ್ನು, ವಾಡಂಬಿ, ತೇರು, ವಂಕಿ, ಬಳ್ಳಿಸಾಲು, ಕಾಳಿಂಗನ ಮಡ, ಕಮಲದಲ್ಲಿ ಕುಳಿತ ಲಕ್ಷ್ಮೀ, ಹೂಜಿ ಮುಂತಾದವುಗಳನ್ನು ಪುನರಾವರ್ತಿತವಾಗಿ ಬಳಸಿಕೊಂಡು ಸುಂದರ ಅಲಂಕಾರಿಕ ರೂಪಗಳನ್ನು ನಿರ್ಮಿಸಿದ್ದಾರೆ.

ಬಾಲಕ್ಕೆ ಗಂಟೆ ಕಟ್ಟಿರುವ ಪ್ರಾಣದೇವರ ವರ್ಣಮಯ ಸಾಲನ್ನು ನೋಡಿದರೆ ಈ ಸೌಂದರ್ಯ ಅಲಂಕಾರವೆಲ್ಲವೂ ದೇವರಿಗೆ ಅರ್ಪಿತ ಎನ್ನುವಂತೆ ಆಧ್ಯಾತ್ಮದ ಸಂಕೇತವನ್ನು ತೋರುವ ಪ್ರಾಣದೇವರುಗಳ ಚಿತ್ತಾರಗಳು ಸೀರೆಯ ಘನತೆಯನ್ನು ಹೆಚ್ಚಿಸಿದೆ. ಬಳಸಿದ ಬಣ್ಣಗಳೆಂದರೆ ಹಳದಿ, ಕೆಂಪು, ತಿಳಿಗೆಂಪು, ತಿಳಿಹಸಿರು, ಗುಲಾಬಿ, ಬಿಳಿ ಬಣ್ಣದ ರೇಷ್ಮೆದಾರಗಳಿಂದ ರಚಿತಗೊಂಡ ನಕ್ಷೆಗಳು, ಸೀರೆಯ ಬಾಳಿಕೆಯುದ್ದಕ್ಕೂ ತಮ್ಮ ಸೌಂದರ್ಯ ಕಾಪಾಡಿಕೊಳ್ಳುತ್ತದೆ.

ಶ್ರೀಮತಿ ಹಗ್ಗದ ಅವರಂತೆ ಗುಳೇದಗುಡ್ಡದಲ್ಲಿ ದಿವಂಗತ ಮಲ್ಲವ್ವ ಚಂದ್ರಪ್ಪ ಗಾಣಿಗೇರ, ಶ್ರೀಮತಿಯರಾದ ಶೀತವ್ವ ಶ್ರೀಶೈಲಪ್ಪಾ ಪತ್ತಾರ, ಇಂದ್ರವ್ವಾ ಸುರೇಬಾನ, ಶಾಂತವ್ವಾ ಬಸಪ್ಪ ಗೊಂಬಿ, ಶಿವಗಂಗವ್ವಾ ಗುಂಡಪ್ಪಾ ಬಳಿಗೇರ, ನಾಗವ್ವ ಗೊಂದಳೆ, ಸಂಗವ್ವ ಸಂಗಪ್ಪಾಜಿರ್ಲಿಗೌಡ್ರ, ಆಪ್ಪವ್ವಾ ಅಡಿವೆಪ್ಪ ಬೆನಕನಾಳ, ರೇಣುಕಾ ಈಶ್ವರ ಗಂಜಿಹಾಳ ಇವರಲ್ಲದೆ ಇನ್ನೂ ಹಲವರಿದ್ದಾರೆ.

ಇವರು ಈ ಚಂದ್ರಕಾಳಿ ಸೀರೆಗೆ ಬೇಕಾಗುವ ಮುಖ್ಯವಾದ ಕಚ್ಚಾ ವಸ್ತು ಎಂದರೆ ಬಣ್ಣ ಬಣ್ಣದ ರೇಷ್ಮೆಯ ಎಳೆಗಳು, ಚಿಕ್ಕ ಗಾತ್ರದ ಸೂಜಿ ಹಾಗೂ ಸೀರೆ ಸೂಜಿಗಳಂತೂ ಸರ್ವೇಸಾಮಾನ್ಯ ಲಭ್ಯವಾಗುತ್ತವೆ. ಬಣ್ಣದ ರೇಷ್ಮೆ ಎಳೆಗಳನ್ನು ಈ ಕಸೂತಿ ಜಾನಪದ ಕಲಾವಿದರು ಜಾಡರ ಅಂದರೆ ನೇಕಾರರ ಮನೆಯಿಂದ ತರುತ್ತಾರೆ. ನೇಕಾರರು ಖಣಗಳನ್ನು ತಯಾರಿಸಿ ಕೊನೆಗೆ ಉಳಿದಿರುವ ಕೊಂಚಿ ರೇಷ್ಮೆ ಎಳೆಗಳನ್ನು ಇವರಿಗೆ ಕೊಡುತ್ತಾರೆ. ಅಲ್ಲದೇ ರಾಮದುರ್ಗದ ಹಸ(ಚಾರಮ್) ರೇಷ್ಮೆ ಎಂದು ಬರುತ್ತಿತ್ತು. ಅದನ್ನು ರೇಷ್ಮೆ ವಿತರಕರಿಂದ ಖರೀದಿಸುತ್ತಿದ್ದರು.

ಇನ್ನು ರೇಷ್ಮೆಯ ಸೀರೆಗಳನ್ನು, ಇಳಕಲ್ಲದಿಂದ ಹಾಗೂ ಗುಳೇದಗುಡ್ಡದ ಶ್ರೀ ರಾಮಚಂದ್ರಪ್ಪ ಅಡಿಕೆ, ಗುರವರ್, ಕುಮಟಗಿ ಅವರಿಂದ ಕಸೂತಿ ಹಾಕಿಸ ಬಯಸುವ ಸೌಂದರ್ಯ ಪ್ರಿಯರು ಶ್ರೀಮಂತರು ಖರೀದಿಸಿ ಕಸೂತಿ ಕಲಾವಿದರಿಗೆ ಕೊಡುತ್ತಾರೆ.

ಈ ಸೀರೆಗಳ ಮೌಲ್ಯದಲ್ಲಿ ವ್ಯತ್ಯಾಸಗಳಿವೆ. ದಡಿ ಸೆರಗು ಹಾಗೂ ಮಧ್ಯಭಾಗ ಎಲ್ಲ ರೇಷ್ಮೆಯದ್ದಾದರೆ ಆರುನೂರರಿಂದ ಎಂಟನೂರು; ದಡಿ ಸೆರಗು ರೇಷ್ಮೆ ಮಧ್ಯ ಭಾಗ ಚಮಕದ್ದಾದರೆ ನಾಲ್ಕುನೂರರಿಂದ ಆರನೂರು; ದಡಿ ಸೆರಗು ರೇಷ್ಮೆ ಮಧ್ಯದ ಭಾಗ ಬಾಂಬರದ್ದಾದರೆ ಐದು ನೂರು ರೂಪಾಯಿಗಳನ್ನು ಕೊಟ್ಟು ಖರೀದಿಸುತ್ತಾರೆ. ನಕ್ಷೆ ಹಾಕಿ ಆದ ಮೇಲೆ ರೂ. ನೂರರಿಂದ ಇನ್ನೂರರವರೆಗೆ ಕೊಟ್ಟು ಸೀರೆಯನ್ನು ಒಯ್ದು ಸಾಂಪ್ರದಾಯಿಕ ಜಾನಪದ ಕಲೆಯನ್ನು ರಕ್ಷಿಸಿ, ಕಲೆಯ ಆನಂದವನ್ನು ತಾವು ಪಡೆಯುತ್ತಾ ಇತರರನ್ನು ಆನಂದಿಸುತ್ತಾ ಜೀವಿಸುತ್ತಾರೆ.

ಈ ಕಸೂತಿ ಕಲೆಯು ಕೆಲ ಕಲಾವಿದರಿಗೆ ಹೊಟ್ಟೆ ಹೊರೆಯುವ ವೃತ್ತಿಯಾಗಿದ್ದರೆ ಇನ್ನು ಕೆಲವರಿಗೆ ಕಲಾ ಹವ್ಯಾಸವಾಗಿ ಇನ್ನು ಕೆಲವರಿಗೆ 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿ ಬಿಡು' ಎಂಬುದಾಗಿಯೂ 'ಮಾತಿಗಿಂತ ಕೃತಿ ಲೇಸು' ಎಂಬ ಸಿದ್ಧಾಂತದಂತೆ ತಮ್ಮ ನಾಲಿಗೆಯನ್ನು ಹಲ್ಲಿನ ಅಧೀನದಲ್ಲಿಟ್ಟುಕೊಂಡು ಉತ್ತಮವಾದುದನ್ನು ನಿರ್ಮಿಸುತ್ತಾರೆ.

ಅರವಿಂದರು ಹೇಳುವಂತೆ 'ಯಾವುದು ಕೇವಲ ಸೌಂದರ್ಯ ಪಿಪಾಸೆಯನ್ನು ಹಿಂಗಿಸುವುದೋ ಅದು ಅಧಮ ಕಲೆ ಯಾವುದು ಜ್ಞಾನ ಪಿಪಾಸೆಯನ್ನು ಹಿಂಗಿಸುವುದೋ ಅದು ಮಧ್ಯಮ ಕಲೆ, ಮತ್ತು ಯಾವುದು ಉದ್ಬೋಧವನ್ನುಂಟು ಮಾಡುವುದೋ ಅದು ಉತ್ತಮ ಕಲೆ.'

ಭಾರತೀಯ ನಾರಿ ತಲೆಯಿಂದ ಮೈತುಂಬಾ ಸೀರೆ ತೊಟ್ಟುಕೊಂಡು ಸೆರಗಿನ ಮೇಲಿರುವ ಚಿತ್ತಾರಗಳು ಪ್ರಕೃತಿ ಪ್ರೇಮ, ಸಕಲ ಪ್ರಾಣಿಗಳಲ್ಲಿ ದಯೆ, ದೇವರ ಚಿತ್ತಾರಗಳಿಂದ ಆಧ್ಯಾತ್ಮಿಕತೆಯ

ಜೊತೆಗೆ ಉತ್ಪಾದನೆ. ಇವೆಲ್ಲವುಗಳನ್ನು ಭೋಧಿಸುವ ಉದ್ಬೋಧನಾ ಫಲಕದಂತಿರುವ ಈ ಚಂದ್ರಕಾಳಿ ಸೀರೆ ತನ್ನತನವನ್ನು ಕಾಯ್ದುಕೊಂಡಿದೆ. ಹೆಣ್ಣಿನ ಅಂಗಾಂಗ ಸೌಂದರ್ಯದ ಮೋಹ ಪಾಶದಿಂದ ರಕ್ಷಿಸಲು ಅಭಯ ಹಸ್ತದಂತೆ ಗೋಚರಿಸುತ್ತದೆ. ಹೆಣ್ಣಿನಾರೋಗ್ಯವನ್ನು ಕಾಪಾಡುತ್ತದೆ.

ದೈನಿಕ ಜೀವನದಲ್ಲಿ ಹಬ್ಬ ಹುಣ್ಣಿಮೆ, ಮದುವೆ ಮಂಗಲ ಕಾರ್ಯಗಳಲ್ಲಿ ಗೃಹಿಣಿಯರು ಸೀರೆಯನ್ನುಟ್ಟು ಸ್ವತಃ ಆನಂದ ಪಡುವುದರೊಂದಿಗೆ ಲೌಕಿಕ ಆನಂದವನ್ನು ಒದಗಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಬಯಲಾಟಗಳು ಎಂಬ ಜನಪದ ರಂಗ ನಾಟಕಗಳು ಆಗಾಗ ನಡೆಯುತ್ತವೆ. ಈ ರಂಗಮಂಟಪದಲ್ಲಿ ಬರುವ ಸ್ತ್ರೀ ಪಾತ್ರಗಳು 'ಚಂದ್ರಕಾಳಿ' ಸೀರೆಯನ್ನುಟ್ಟು ಬಯಲಾಟಗಳಿಗೆ ವಿಶೇಷ ರಂಗವನ್ನೀಯುತ್ತಾರೆ.

ತಾಯಿ ಮಾತ್ರ ಅಬ್ಬರದ ಚಂದ್ರಕಾಳಿ ಸೀರೆ ಉಟ್ಟು ವ್ಯೆಯಾರ ಮಾಡಿದರೆ ಸಾಲದೆಂಬಂತೆ ಪುಟ್ಟ ಮಕ್ಕಳಿಗೆ ತಲೆಗೆ ಹಾಕುವ ಕುಲಯಿ ಕುಂಚಿಗೆಗೂ ಇದೇ ತರಹದ ನಕ್ಷೆಯ ರೂಪಗಳನ್ನು ಉಪಯೋಗಿಸಿ ಬಣ್ಣವನ್ನು ಬಳಸಿ ಮಗುವನ್ನು ಅಲಂಕರಿಸುತ್ತದೆ ಈ ಜನಪದ ಚಂದ್ರಕಾಳಿ ಸೀರೆ.

ಆಧುನಿಕ ಪ್ರಿಂಟಿಂಗ್ ಸಾರಿಗಳಿಗೆ ಈ ಜಾನಪದ ಕಲೆಯೇ ಪ್ರೇರಣೆಯಾಗಿರಲೂಬಹುದು. ಶಿಷ್ಟ ಸಾಂಪ್ರದಾಯಿಕ ಆಧುನಿಕ ಸೀರೆಗಳಿಗೆ ಭದ್ರ ಬುನಾದಿಯಂತಿರುವ ಈ ಹೆಣಿಕೆ ಕಲೆ ಮಾಯವಾಗಹತ್ತಿದೆ. ಸದ್ಯದ ಯುವತಿಯರು ಈ ತರಹದ ತಾಳ್ಮೆಯ ಸೂಕ್ಷ್ಮ ಕರಕುಶಲ ಕಲೆಯನ್ನು ತಾಳ್ಮೆಯ ಪ್ರತೀಕವೆಂದು ಕೈಗೆತ್ತಿಕೊಂಡು ಮಾಡಿ ಕಾಪಾಡಿಕೊಂಡು ಹೋಗಬೇಕು. ರಾಜ್ಯ ಹಾಗೂ ಕೇಂದ್ರ ಕರಕುಶಲ ವಿಭಾಗದವರು ಇಂಥಹ ಜಾನಪದ ಕಲಾಪಂಥವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಬೇಕು.

***

ಯುಗಾದಿಯ ಜಾನಪದ ಶಿಲ್ಪಗಳು

ಯುಗ ಯುಗವು ಕಳೆದರು ಯುಗಾದಿ ಮರಳಿ ಬರುತಿದೆ,

ಹೊಸ ವರ್ಷಕೆ ಹೊಸ ಹರ್ಷವ ಹೊಸತು ಹೊಸತು ತರುತಿದೆ.

ಎಂದು ವರಕವಿ ದ.ರಾ.ಬೇಂದ್ರೆ ಯುಗಾದಿಯ ಮಹತ್ವ ಕುರಿತು ಅರ್ಥಗರ್ಭಿತ ಕವನದ ರಚನೆ ಮಾಡಿ ಕಾಲಘಟ್ಟಕ್ಕೆ ಕಳೆಕಟ್ಟಿದ್ದಾರೆ.

ವಿಶ್ವದಲ್ಲಿಯೇ ಕರ್ನಾಟಕದ ಜನಪದ ಶಿಲ್ಪಗಳು ತಮ್ಮದೇ ಮಹತ್ವವನ್ನು ಸಾರಿ ಹೇಳುತ್ತಿವೆ. ಭೂಮಿಯು ಅಂತರಾಳದ ತೇವಾಂಶವನ್ನು ಹೀರುತ್ತಾ ಸೂರ್ಯನ ಪ್ರಖರ ಶಾಖವನ್ನು ಉಪಯೋಗಿಸಿಕೊಂಡು ಪ್ರಕೃತಿಯ ರೂಪಗಳಾದ ಬೇವು, ಬಾಳೆ, ಹುಣಸೆ, ಮಾವು ಮುಂತಾದ ಗಿಡಗಳು ಹಚ್ಚಹಸಿರಾಗುವ ಸುಗಮ ಸಮಯವೇ ಯುಗಾದಿ. ಈ ಯುಗಾದಿ ಹಬ್ಬವನ್ನು ಉಷ್ಣವಲಯದಲ್ಲಿ ಜೀವಿಸುವ ಜೀವಿಗಳು, ಅಂದರೆ ದಕ್ಷಿಣಭಾರತದ ನಿವಾಸಿಗಳಾದ ನಾವುಗಳು ಈ ಹಬ್ಬವನ್ನು ಬಲು ಸಡಗರ ಸಂಭ್ರಮದಿಂದ ಸರಳವಾಗಿ ಅರ್ಥಗರ್ಭಿತವಾಗಿ ಆಚರಿಸುತ್ತೇವೆ. ಈ ಆಚರಣೆಯಲ್ಲಿ ನಿರ್ಮಾಣವಾಗುವ ಜಾನಪದ ಶಿಲ್ಪ ಕಲಾಕೃತಿಗಳು ಬಹಳ ಮಹತ್ವದ ಪಾತ್ರ ವಹಿಸುತ್ತವೆ.

ಉಷ್ಣವಲಯದ ಮರಾಠಾ ಕ್ಷತ್ರಿಯರು ಕೃಷಿಯನ್ನೇ ಅವಲಂಬಿಸಿರುವವರು ಹಾಗೂ ಶರಣಾಗತಿಗಾ–ಶಿರ ಕಾಯುವ ಕಲ್ಪವೃಕ್ಷದಂತಿರುವ ಸೈನಿಕರು ಈ ಯುಗಾದಿಯನ್ನು 'ಗುಡಿ ಪಾಡವಾ' ಎಂಬ ಹೆಸರಿನಿಂದ ಆಚರಿಸುತ್ತಾರೆ.

ಫಾಲ್ಗುಣ ಚೈತ್ರದ ಯುಗಾದಿಯ ಪಾಡ್ಯದ ನಸುಕಿನ ಜಾವ ನೀಲಾಕಾಶದಲ್ಲಿ ಒಂದು ಗುಡಿಯನ್ನೇ ನಿರ್ಮಿಸುತ್ತಾರೆ. ನಸುಕಿನ ಜಾವ ನಾ ಮುಂದೆ ನೀ ಮುಂದೆ ಎಂದು ಸೂರ್ಯನ ಕಿರಣಗಳು ಭೂಮಿ ತಲುಪುವ ಮುನ್ನ ಗುಡಿಗೆ ಸ್ಪರ್ಶಿಸಿ ಇಡೀ ವರ್ಷ ತೇಜಮಯ ಆನಂದಮಯ ಮತ್ತು ಸಿಹಿ ಕಹಿ ಸಂದರ್ಭಗಳನ್ನು ಸಹರ್ಷ ಸ್ವೀಕರಿಸಿ ಎದುರಿಸುವ ಶಕ್ತಿಯನ್ನು ಅಪೇಕ್ಷಿಸಿ ಆಚರಿಸುವ ಹಬ್ಬವೇ 'ಗುಡಿ ಪಾಡವಾ' ಆಗಿದೆ. ಪಾಡವಾ ಎಂದರೆ ಪಾಡ್ಯ ಎಂದರ್ಥ. ಇದಕ್ಕೆ ರಾಮಾಯಣದ ಹಿನ್ನೆಲೆಯು ಇದೆ.

ಮಹಾರಾಷ್ಟ್ರದಿಂದ ಹಿಡಿದು ದಕ್ಷಿಣ ಭಾರತದ ತುಂಬೆಲ್ಲಾ ವಾಸಿಸುವ ಮರಾಠಾ ಜನಾಂಗ ಹಾಗೂ ಇತರ ಕ್ಷತ್ರಿಯ ಪಂಗಡಗಳು ಯುಗಾದಿಯ ನಸುಕಿನ ಜಾವ ಎದ್ದು ಸ್ನಾನ ಕರ್ಮಾದಿಗಳ ನಂತರ ಒಂದು ಉದ್ದನೆಯ ಕೋಲನ್ನು ತೆಗೆದುಕೊಂಡು ಅದಕ್ಕೆ ಅಲಂಕಾರ ಮಾಡಿ ಬೇವಿನ ಮರದ ಚಿಗುರೆಲೆಗಳ ಹಾಗೂ ಹೂವಿನ ಟೊಂಗೆಗಳಿರುವ ಭಾಗವನ್ನು ಕೋಲಿನ ಚೂಪಾದ ತಿಳಿಯಾದ ತುದಿಗೆ ಕಟ್ಟಿ ಅದರ ಮೇಲೆ ನಿರಿಗೆ ಮಾಡಲ್ಪಟ್ಟ ರವಿಕೆ ಬಟ್ಟೆ ಅಥವಾ ಸೀರೆಯನ್ನು ಹಾಕಿ ಅದರ ಮೇಲೆ ಅವೆರಡಕ್ಕೂ ರಕ್ಷಣೆ ಎಂಬಂತೆ ತಾಮ್ರ ಅಥವಾ ಹಿತ್ತಾಳೆ ಕಂಚಿನ ಪಾತ್ರೆಯನ್ನು ಬೋರಲಾಗಿ ಹಾಕುತ್ತಾರೆ. ಆ ಜಾನಪದ ಶಿಲ್ಪದ ಅಲಂಕಾರಕ್ಕಾಗಿ ಸಕ್ಕರೆ ಸರ, ಹೂಮಾಲೆಗಳನ್ನು ಹಾಕಿ ಅಲಂಕರಿಸುತ್ತಾರೆ.

ಈ ಅಲಂಕಾರಮಯ ಗುಡಿಯು ಬಿದಿರಿನ ಕೋಲು ಹಾಗೂ ಸೀರೆ, ಕುಪ್ಪಸ, ಬೇವಿನ ಟೊಂಗೆ, ಧಾತುವಿನ ಒಂದು ಪಾತ್ರೆಯಿಂದ ನಿರ್ಮಾಣಗೊಳ್ಳುವ ಈ ಜಾನಪದ ಶಿಲ್ಪ ನೋಡುಗರಿಗೆ ಭಯ ಭಕ್ತಿ ಪೂಜ್ಯಭಾವನೆಗಳೊಂದಿಗೆ ನೀಲಾಕಾಶದಲ್ಲಿ ಸೌಂದರ್ಯದ ಬುಗ್ಗೆಗಳನ್ನು ಮನದಲ್ಲಿ ಮೂಡಿಸಿ ಸತ್ಯವಾದುದು ಶಿವಮಯ ಸೌಂದರ್ಯಮಯ ಎಂಬುವುದನ್ನು ತೋರಿಸುತ್ತದೆ.

ಮನೆ ಮಹಲು ಅಥವಾ ಹಟ್ಟಿ ಗುಡಿಸಲೆ ಇರಲಿ ಕೃಷಿಯನ್ನೇ ನಂಬಿ ಬದುಕುವ ಜನರು ಕೋಲು ಹಾಗೂ ಧಾತುವಿನ ಪಾತ್ರೆಯನ್ನು ವಿಭೂತಿ, ಚಂದನ, ಅರಿಷಿಣ, ಕುಂಕುಮದಿಂದ ಅಲಂಕರಿಸಿ ಸೂರಿನ ಮೇಲ್ಭಾಗಕೆ ಏರಿಸಿ ಸೂರ್ಯೋದಯಕ್ಕೆ ಮುಂಚೆ ಪೂಜೆ ಸಲ್ಲಿಸಿ ಧೂಪ, ದೀಪ, ಜಾಗಟೆಗಳಿಂದ ಭಾವಪರವಶರಾಗಿ ಮುಂಬರುವ ವರ್ಷದ ಪ್ರತಿದಿನಗಳು ನಮಗೆ ಚೇತನ ತುಂಬಲಿ ಎಂದಾಶಿಸಿ ಪ್ರಾರ್ಥಿಸುತ್ತಾರೆ.

ಆ ಗುಡಿಯಲ್ಲಿ ಬೇವಿನ ಕಹಿಯು ಇದೆ, ಸಕ್ಕರೆ ಹಾರದಲ್ಲಿ ಸಿಹಿಯೂ ಇದೆ. ಇದು ಸುಖ ದುಃಖಗಳ ಸಂಕೇತವೇ ಆಗಿದೆ. ಚೈತ್ರ ಮಾಸದಿಂದ ಚಿತ್ತಾರಮಯ ಲೌಕಿಕ ಹಾಗೂ ಅಲೌಕಿಕ ಘಳಿಗೆಗಳನ್ನು ಸ್ವೀಕರಿಸುವ ಸಿದ್ಧತೆಯೇ ಈ 'ಗುಡಿ ಪಾಡವಾ'ದ ಗುಟ್ಟಾಗಿದೆ. ಈ ಜನಪದ ಶಿಲ್ಪಕ್ಕೆ ನೈವೇದ್ಯವೂ ಕೂಡ ಅರ್ಥಗರ್ಭಿತವೇ ಅಗಿದೆ. ಬೇವಿನ ಹೂವಿನ ದಳಗಳನ್ನು ಹಾಗೂ ಕೇರಬೀಜ, ಗೋಡಂಬಿಗಳ ಮಸಾಲಯನ್ನು ಸಕ್ಕರೆಯ ಮಾಧ್ಯಮದಿಂದ ಮಿಶ್ರಮಾಡಿ ಪ್ರಸಾದ ತಯಾರಿಸಿ, ನೈವೇದ್ಯಕೊಟ್ಟು, ಪ್ರತಿಯೊಬ್ಬರೂ ಒಂದೆರಡು ಚಮಚದಷ್ಟು ಪ್ರಸಾದ ತಿನ್ನುವಾಗ ಎಷ್ಟೇ ಕಹಿ ಇದ್ದರೂ ಮುಖವನ್ನು ಕಿವುಚದೆ ಶಾಂತ ಚಿತ್ತದ ನೀಲಕಂಠನಂತೆ ಕಷ್ಟಸಹಿಸುವ ಶಕ್ತಿ ಪಡೆಯುತ್ತಾರೆ. ನಸುಕಿನ ಜಾವ ಬೇವಿನ ತಪ್ಪಲನ್ನು ಹಾಕಿ ನೀರು ಕಾಯಿಸಿಕೊಂಡು ತಲೆ ಸ್ನಾನ ಮಾಡಿದ ಮನೆಯವರೆಲ್ಲ ಶ್ಯಾವಿಗೆ ಪಾಯಸದ ಮೃಷ್ಟಾನ್ನ ಭೋಜನದ ಊಟ ಮಾಡಿ, ಸಂಜೆ ಇಳಿಬಿಸಿಲಿಗೆ ಗೋಧೂಳಿ ಮುಹೂರ್ತದಲ್ಲಿ ಪ್ರಾತಃಕಾಲ ಏರಿಸಲ್ಪಟ್ಟ ಈ ಜಾನಪದ ಶಿಲ್ಪ 'ಗುಡಿ ಪಾಡವಾ'ವನ್ನು ಕೆಳಗಿಳಿಸುತ್ತಾರೆ.

ಈ ಜಾನಪದ ಶಿಲ್ಪ ಹೃದಯ ಮನಸ್ಸಿಗೆ ಮುದ ನೀಡಿದರೆ, ಬೇವಿನ ಎಚ್ಚ ಹಾಗೂ ಕಹಿ ಬಿಸಿನೀರು ವೈಜ್ಞಾನಿಕವಾಗಿ ದೇಹವನ್ನು ಸ್ವಚ್ಛಮಾಡುವಲ್ಲಿ ಹಾಗೂ ಮನೋವೈಜ್ಞಾನಿಕ ಶಕ್ತಿ ಸಾಮರ್ಥ್ಯವನ್ನು ತಂದೊದಗಿಸುತ್ತದೆ.

ಆ ಶಿಲ್ಪ ಗುಡಿಯನ್ನು ನೋಡುವಾಗ ಆಕಾಶದ ಕಾರ್ಮೋಡಗಳು ಒಂದರ ಮೇಲೊಂದು ಅಪ್ಪಳಿಸಿ ಧರೆಗಿಳಿಯುವ ತುಂತುರ ಹನಿಗಳು ಒಂದೆಡೆ ಸಪ್ತವರ್ಣಗಳ ಇಂದ್ರ ಧನುಷ್ಯ ಮುಂತಾದವುಗಳನ್ನು ನೋಡಿ ಆನಂದಿಸಿದವರೇ ಧನ್ಯರು, ಹೊಸ ವರ್ಷಕ್ಕೆ ಹೃದಯಾರ ಸ್ವಾಗತಿಸುವವರಾಗಿದ್ದಾರೆ.

ಭಾರತ ದೇಶದ ಬೇರೆಬೇರೆ ಭಾಗಗಳಲ್ಲಿ ಬೇರೆ ಬೇರೆ ತೆರನಾಗಿ ಯುಗಾದಿಯನ್ನಾಚರಿಸುವುದನ್ನು ಕಂಡಿದ್ದೇವೆ. ಸಾಹಿತಿಗಳು ಯುಗಾದಿಯ ಕವಿಗೋಷ್ಠಿ ಏರ್ಪಡಿಸಿದರೆ, ಸಂಗೀತಗಾರರು ಸಂಗೀತ ಕಛೇರಿಗಳನ್ನು ಹಾಗೂ ಚಿತ್ರಕಲಾವಿದರುಗಳು ಚಿತ್ರಕಲಾಪ್ರದರ್ಶನವನ್ನು ಏರ್ಪಡಿಸುವುದು ಶಿಷ್ಟ ಸಂಪ್ರದಾಯಗಳ ದ್ಯೋತಕಗಳಾಗಿವೆ.

ಕರ್ನಾಟಕದ ಘೋಷಿತ ಗುಳೇದಗುಡ್ಡ ತಾಲ್ಲೂಕಿನ ಗುಳೇದಗುಡ್ಡದಲ್ಲಿ ಯುಗಾದಿಯ ಜಾನಪದ ಶಿಲ್ಪಗಳು ಜಾನಪದಕಲಾಜಗತ್ತಿನ ಗಾಢವಾದ ಜ್ಞಾನವನ್ನು ನಮ್ಮೆದುರಿಗೆ ಅರಹುತ್ತಿವೆ. ಯುಗಾದಿಯ ಅಮಾವಾಸ್ಯೆಯ ಮರುದಿವಸ ನಸುಕಿನ ಜಾವ ಈ ಮೂರ್ತಿಗಳು ಜನರಿಂದ ನೋಡಿಸಿಕೊಳ್ಳತ್ತವೆ.

ಈ ಜಾನಪದ ಶಿಲ್ಪಗಳು ಗುಳೇದಗುಡ್ಡದ ಮ್ಯಾಳಗಳಲ್ಲೊಂದಾದ ಶ್ರೀ ಇಲಾಳದ ಮ್ಯಾಳದವರು ಪ್ರತಿವರ್ಷಮಾಡುತ್ತಾ ಬಂದಿದ್ದಾರೆ. ಯುಗಾದಿ ಪಾಡ್ಯದ ಮುನ್ನಾ ದಿನ ಸಂಜೆ ಹಳ್ಳದ ತಿಳಿ ಉಸುಕಿನ ಸ್ವಚ್ಛವಾದ ಸಮತಟ್ಟಾದ ಜಾಗದಲ್ಲಿ ಉಸುಕಿನ ಗದ್ದಿಗೆಯನ್ನು ಎರೆಮಣ್ಣಿನಿಂದ ಸಾರಿಸಿ ಸ್ವಚ್ಛಗೊಳಿಸಿ ಆ ಗದ್ದಿಗೆಯ ಮೇಲೆ ಎರಡು ಸುಂದರ ಜಾನಪದ ಶಿಲ್ಪಗಳನ್ನು ಕೈಯಾರ ಮಾಡಿ ಪ್ರತಿಷ್ಠಾಪಿಸುತ್ತಾರೆ.

ಅಲ್ಲಿ ನಿರ್ಮಾಣವಾದ ಕುಳಿತ ಬಸವಣ್ಣನ ಶಿಲ್ಪ ನೋಡಿದಾಗ ಹರಪ್ಪ ಮಹೆಂಜೋದಾರೋಗಳ ಗೂಳಿಯ ಉಬ್ಬು ಶಿಲ್ಪ ನೆನಪಿಗೆ ಬರುತ್ತದೆ. ಕೃಷಿಕರಿಗೆ ದೇವರಂತೆ ಇರುವ ಬಸವಣ್ಣನ ಹಾಗೂ ಅದರ ಪಕ್ಕಕ್ಕೆ ಇರುವ ಶಿವಲಿಂಗದ ಮೂರ್ತಿಗಳು ಜಾನಪದ ಜಾಡಿನವಾಗಿರುತ್ತವೆ. ಇವುಗಳಿಗೆ ಊಬತ್ತಿ, ಅರಿಷಿಣ, ಕುಂಕುಮ, ಹೂವು ಮುಂತಾದವುಗಳನ್ನು ಏರಿಸಿರುತ್ತಾರೆ.

ಈ ಮೂರ್ತಿಗಳ ಎದುರುಗಡೆ ಬಿಳಿ ಲೆಕ್ಕಿ ಎಲೆಯಲ್ಲಿ ಆಹಾರಧಾನ್ಯಗಳನ್ನು ಹಾಕಿ ಅದರ ಮೇಲ್ಗಡೆ ಲೆಕ್ಕಿ ಎಲೆಗಳನ್ನು ಮುಚ್ಚಿ ನೈವೇದ್ಯ ಮಾಡಿರುತ್ತಾರೆ. ಈ ಗದ್ದಿಗೆಯ ಬಲಗಡೆಗೆ ಇರುವ ರೈತ ಆತನ ಬಾಳ ಸಂಗಾತಿ ಹಾಗೂ ಎದುರಿಗೆ ಜೋಡೆತ್ತುಗಳು ಬೀಜ ಬಿತ್ತುವ ಕೂರಿಗೆ, 'ಬೀಜ ಬಿತ್ತುವ ರೈತನ' ಜಾನಪದ ಶಿಲ್ಪ ಹೊಸ ವರ್ಷ ನಮ್ಮೆಲ್ಲರಿಗೂ ಆಹಾರದ ಕೊರತೆ ನೀಗಿಸುವ ಸಂಕೇತವಾಗಿದೆ. ಆ ರೈತ ಬಿಳಿ ಧೋತರ ಹಾಗೂ ಬಿಳಿ ಪೇಟ ತೊಟ್ಟಿರುವುದು ಶಾಂತಿಯ ಸಂಕೇತ ಹಾಗೂ ರೈತನ ಹೆಂಡತಿ ರೇಷ್ಮೆಯ ಕುಪ್ಪಸ, ರೇಷ್ಮೆಯ ಸೀರೆ ಉಟ್ಟಿರುವುದು ಕೈ ಮಗ್ಗದ ಉತ್ಪಾದನೆಯ ಕುಟೀರ ಉದ್ಯೋಗ ಸದಾ ಜೀವಂತವಾಗಿರಲಿ ಎಂದು ಪ್ರಾರ್ಥಿಸುವುದರ ಸಂಕೇತವಾಗಿದೆ.

ಎದುರಿಗೆ ಹಾಗೂ ಬಲಗಡೆಗೆ ಕುಳಿತಿರುವ ಎರಡು ಮಾನವಾಕೃತಿಗಳು ಪ್ರಮಾಣವಿಲ್ಲದಿದ್ದರೂ ಬಟ್ಟೆಯ ತುಂಡುಗಳಿಂದ ಎರೆಮಣ್ಣಿನ ಮೂರ್ತಿಗಳ ಅಲಂಕಾರ ವಾಸ್ತವಿಕತೆ ಎದ್ದು ಕಾಣುತ್ತದೆ.

ಇವರಿಬ್ಬರ ಎದುರಿಗೆ ಎಲ್ಲ ತರಹದ ಬಟ್ಟೆಯ ತುಂಡುಗಳನ್ನು ಮಡಚಿ ಇಡಲಾಗುತ್ತದೆ. ಇದೆಲ್ಲಾ ನಿರ್ಮಾಣವಾಗುತ್ತದೆ. ಮಾರನೆಯ ದಿವಸ ಪಾಡ್ಯದ ನಸುಕಿನ ಜಾವ ಸೂರ್ಯನ ಕಿರಣಗಳು ಈ ಮೂರ್ತಿಗಳ ಮೇಲೆ ಬೀಳುವ ದೃಶ್ಯ ಜಾನಪದ ಮೂರ್ತಿಗಳಿಗೆ ಬಂಗಾರದ ಕಿರಣಗಳಂತೆ ಕಾಣುತ್ತವೆ. ಆದರೆ ಆ ವ್ಯಾಪಾರಿಯ ಬಟ್ಟೆಗಳು ರಾತ್ರಿ ಗಾಳಿಗೆ ಹಾರಾಡಿ ವಾಸ್ತವಿಕ ಅಲಂಕಾರಕ್ಕೆ ಸಮೀಪವಾಗಿರುತ್ತವೆ. ಆ ಬಣ್ಣದ ಬಟ್ಟೆಗಳೆ ಈ ಜಾನಪದ ಮೂರ್ತಿಗಳಿಗೆ ಕಳೆ ಕಟ್ಟುತ್ತವೆ.

ದಶ ದಿಕ್ಕುಗಳಿಗೆ ಪಸರಿಸಿದ ಈ ವಸ್ತುಗಳು ನೋಡಲು ಎರಡು ಕಣ್ಣುಗಳು ಸಾಲುವುದಿಲ್ಲ. ಹೊಸವರ್ಷ ಶಿವಲಿಂಗ, ಬಸವಣ್ಣ, ರೈತ ಹಾಗೂ ಜೋಡೆತ್ತುಗಳೊಂದಿಗೆ ಹೊಲ ಹಾಗೂ ವಾಣಿಜ್ಯ ವ್ಯಾಪಾರಸ್ಥ. ಶ್ರೀ ಸಾಮಾನ್ಯ ಎಲ್ಲ ಮೂರ್ತಿಗಳು ಒಂದು ವಿಶ್ವದ ಸಂಕೇತವಾಗಿರುತ್ತವೆ.

ಆ ಮೂರ್ತಿಗಳಿಗೆ ಲೇಪಿಸಿ ವಿಭೂತಿ ಭಸ್ಮ ಹಾಗೂ ಕುಂಕುಮಗಳ ಬಿಳಿ ಹಾಗೂ ಕೆಂಪು ವರ್ಣಗಳು ಕಪ್ಪು ಬಣ್ಣದ ಮೂರ್ತಿಗಳಿಗೆ ಕಳೆ ಹೆಚ್ಚಿಸುತ್ತವೆ. ಆ ಶಿಲ್ಪಗಳಿಗೆ ತೊಡಿಸಿರುವ ಬಣ್ಣದ ಬಟ್ಟೆಗಳು ರೇಷ್ಮೆಯ ಸೀರೆ, ಖಣಗಳು ಈ ಭಾಗದ ಬಟ್ಟೆ ಉತ್ಪಾದನೆಯ ಸಂಪ್ರದಾಯವನ್ನು ವೈಭವೀಕರಿಸುವ ಈ ಜಾನಪದ ಮೂರ್ತಿಗಳೆ ಭಾರತೀಯ ಕುಟೀರ ಉದ್ಯೋಗಗಳನ್ನು ಪೋಷಿಸುವುದರ ಪ್ರಕಟಣೆಯಾಗಿವೆ.

ಈ ದಟ್ಟ ಬಣ್ಣದ ಮೂರ್ತಿಗಳ ಎದುರಿಗೆ ಬಿಳಿ ಲೆಕ್ಕಿಯ ಹಚ್ಚ ಹಸಿರು ಎಲೆಗಳು ದಟ್ಟ ಹಸಿರು ಬಣ್ಣ ಅದರ ಮೇಲೆ ಲೇಪಿಸಿದ ಅರಿಶಿಣ ಕುಂಕುಮ ಪ್ರಾಥಮಿಕ ದ್ವಿತೀಯ ವರ್ಣಗಳು ನೋಡಲು ಸುಂದರವಾಗಿ ಕಾಣುತ್ತವೆ.

ಈ ಜಾನಪದ ಶಿಲ್ಪ ಸಮೂಹದಲ್ಲಿ ಕೃಷಿ, ವ್ಯಾಪಾರ, ಆಹಾಧಾನ್ಯಗಳ ನೈವೇದ್ಯ, ಪ್ರಾಣಿ ಪ್ರಪಂಚ, ಆಧ್ಯಾತ್ಮ ಎಲ್ಲವೂ ಒಳಗೊಂಡಿರುತ್ತದೆ.

ನೈವೇದ್ಯದಲ್ಲಿರುವ ಎಲ್ಲ ತರಹದ ಆಹಾರಧಾನ್ಯಗಳು ಸದಾ ನಮ್ಮ ಮನುಕುಲಕೋಟಿಗೆ ಲಭ್ಯವಾಗಲೆಂಬ ಪ್ರಾರ್ಥನೆ, ಹೊಸ ವರ್ಷದ ಹೊಸ್ತಿಲಿನಂತಿರುವ ಯುಗಾದಿಯಂದು ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದೆ.

ಇಲ್ಲಿ ನಿರ್ಮಾಣಗೊಳ್ಳುವ ಮಾನವಾಕೃತಿಗಳು, ಜೋಡೆತ್ತುಗಳು ಹಾಗೂ ಬೀಜ ಬಿತ್ತುವ ಕುಂಟೆ, ರೆಂಟೆ, ಎಲ್ಲವೂ ನೈಜತೆಯಿಂದ ದೂರವಾಗಿದ್ದರೂ ಕೂಡ ಜನಪದ ಶೈಲಿಯಿಂದ ಆಕರ್ಷಕ ಶಿಲ್ಪಗಳು ಇವಾಗಿರುತ್ತವೆ.

ನಸುಕಿನ ಜಾವ ನೈವೇದ್ಯದ ಮೆಲೆ ಮುಚ್ಚಲ್ಪಟ್ಟ ಎಲೆಗಳನ್ನು ತೆಗೆದಾಗ ನೀರಿನ ಭಾಸ್ಪೀಕರಣದಿಂದ ಹಾಗೂ ಈಶಾನ್ಯ, ನೈಋತ್ಯ, ಆಗ್ನೇಯ, ವಾಯುವ್ಯದೆಡೆಗೆ ಹಾರಿರುವ ಬಟ್ಟೆಯ ತುಂಡುಗಳಿಂದ ಮಳೆ ಹಾಗೂ ವ್ಯಾಪಾರದ ಕಲ್ಪನೆಗಳನ್ನು ಕಲ್ಪಿಸಿಕೊಳ್ಳುತ್ತಾನೆ.

ಯುಗಾದಿಯ ಶುಭ ಸಂದರ್ಭದಲ್ಲಿ ಪ್ರತಿವರ್ಷವೂ ಆಗಮಿಸುವ ಗುಡಿ ಪಾಡವಾ ಹಾಗೂ ಈಶ್ವರ ಬಸವಣ್ಣ, ವ್ಯಾಪಾರಿ, ಮುಂತಾದ ಮೂರ್ತಿಗಳು ಭಾರತೀಯ ಸಂಸ್ಕೃತಿಯ ಪಡಿನೆರಳಾಗಿವೆ. ಜೀವನದ ನಿಜವಾದ ಅರ್ಥವನ್ನು ಜನರಿಗೆ ಸಾರಿ ಹೇಳುತ್ತವೆ. ಅಲ್ಲದೇ ರಾಮಾಯಣ, ಮಹಾಭಾರತದ ಹಿನ್ನೆಲೆಯನ್ನೂ ಹೊಂದಿವೆ. ಆಧುನಿಕತೆಯ ಯಂತ್ರಾಂಶ ತಂತ್ರಾಂಶದ ಜಗತ್ತಿನಲ್ಲಿ ಈ ಭವ್ಯ ಪರಂಪರೆ ಕೊಚ್ಚಿ ಹೋಗದಂತೆ ಕಾಪಾಡಿಕೊಂಡು ಹೋಗಬೇಕಾದ ಸಾಂಸ್ಕೃತಿಕ ಜಾವಾಬ್ದಾರಿ ನಮ್ಮನಿಮ್ಮೆಲ್ಲರ ಮೇಲಿದೆ.

***

ಜಾನಪದ ಚಿತ್ತಾರ ಶಿಲ್ಪಗಳು ಶೆಟಿಗೆವ್ವ ಪೂಜೆ (ಜ್ಯೋತಿ ಪೂಜೆ)

ಉತ್ತರ ಕರ್ನಾಟಕದ ಮನೆ ಮನೆಯಲ್ಲೂ ಶೆಟಿಗೆವ್ವನ ಪೂಜೆ ನಡೆದೇ ಇರುತ್ತದೆ. ಈ ಶೆಟಿಗೆವ್ವನ ಪೂಜೆಗಾಗಿ ಮಗು ಹುಟ್ಟಿದ ಮನೆಯಲ್ಲಿ ಐದನೆಯ ದಿವಸ ಸಂಜೆ ಈ ರೀತಿಯ ಜಾನಪದ ಚಿತ್ತಾರಗಳು ಸೂಲಗಿತ್ತಿಯಿಂದ ರಚನೆಗೊಳ್ಳುತ್ತವೆ.

ಈ ಜಾನಪದ ಚಿತ್ತಾರಗಳನ್ನು ಸೂಲಗಿತ್ತಿ ಮಗು ಹುಟ್ಟಿದ ಮನೆಗೆ ಬಂದು ಗೋಡೆಗೆ ಪೂರ್ವಕ್ಕೆ ಮುಖ ಮಾಡಿ ನಿಂತಂತಹ ಎರಡು ಗೊಂಬೆಗಳನ್ನು ಇದ್ದಲಿಯಿಂದ ಚಿತ್ರಿಸುತ್ತಾರೆ. ಈ ಚಿತ್ತಾರಗಳಿಗೆ ಅರಿಷಿಣ, ಕುಂಕುಮ ಏರಿಸಿ ದೀಪ ಹಚ್ಚಿಟ್ಟು ಆರತಿ ಮಾಡುತ್ತಾರೆ. ಸಿಹಿತಿಂಡಿಯನ್ನು ಪ್ರಸಾದವನ್ನಾಗಿ ಸ್ವೀಕರಿಸುತ್ತಾರೆ. ಅಲ್ಲದೆ ಆ ಮಗುವಿನ ಹಣೆಬರಹವನ್ನು ಬರೆಯುವ ಶೆಟಿಗೆವ್ವಗಳಿಗೆ ಸ್ವಾಗತದ ದಿವಸ ಇದಾಗಿರುತ್ತದೆ. ಇವತ್ತಿನ ದಿವಸ ಶೆಟಿಗೆವ್ವ ಆ ಮಗುವಿನ ಜೀವನದ ಹಣೆಬರಹ ಬರೆಯುತ್ತಾಳೆಂದು ಈ ಜಾನಪದ ಚಿತ್ತಾರಗಳನ್ನು ಪೂಜಿಸುತ್ತಾರೆ. ಒಂದು ಮಗು ಸೀದಾ ನಿಂತರೆ ಇನ್ನೊಂದು ಅಡ್ಡ ಇರುತ್ತವೆ. ಈ ಚಿತ್ತಾರಗಳ ಹತ್ತಿರ ಮಸಿ ದೌತಿ ಹಾಗೂ ಗಲಗದ ಪೆನ್ನನ್ನು ಇಡೀ ರಾತ್ರಿ ಇಡುತ್ತಾರೆ. ಇದರಿಂದ ಶೆಟಿಗೆವ್ವ ಆ ಮಗುವಿನ ಹಣೆಬರಹ ಬರೆಯುತ್ತಾಳೆ. ಕಣಕದ ಮೂರ್ತಿಗಳನ್ನು ಮಾಡಿ ಹೊಸ್ತಿಲ ಕೆಳಗೆ ಇಡುವ ಪರಂಪರೆಯು ಇತ್ತಂತೆ. ಹತ್ತನೆಯ ದಿವಸ ಸೂಲಗಿತ್ತಿ ಈ ಚಿತ್ರಗಳನ್ನು ಅಳುಕಿಸಿ ಸಾರಿಸಿ ಹೋಗುತ್ತಾಳೆ. ಇದೇ ಸಂದರ್ಭದಲ್ಲಿ ಮಗುವಿನ ತಲೆಯ ಹಿಂದಿನಿಂದ ಬಂದು ಕೇರು, ಬಜೆಗಳನ್ನು ಹೊಸ ಅರಿವೆಯ ತುಂಡಿನಲ್ಲಿ ಕಟ್ಟಿಕೊಂಡು ಹೋಗಿ ಹೊರಗಡೆಗೆ ಒಗೆಯುತ್ತಾರೆ.

ಈ ಶೆಟಿಗೆವ್ವನ ಜಾನಪದ ಚಿತ್ತಾರಗಳು ಭವಿಷ್ಯದ ಭದ್ರತೆಗೆ ಮಾನಸಿಕ ಸ್ಥೈರ್ಯವನ್ನೊದಗಿಸುತ್ತವೆ. ಭಾವಿಜೀವನದ ಸಿಹಿ ಕಹಿಗಳಿಗೆ ಅಂಜದೆ ಅಳುಕದೆ ಮುಂದೆ ಸಾಗಲು ಸಹಾಯಕಾರಿಯಾಗಿವೆ. ಮಹಾಭಾರತದ ಮಹಾವಾಕ್ಯವಾದ ಏನು ನಡೆಯುತ್ತಿದೆಯೋ ಒಳ್ಳೆಯದಕ್ಕೇನೆ, ಏನು ನಡೆಯುವುದಿದೆಯೋ ಒಳ್ಳೆಯದೇನೆ, ಏನು ನಡೆದು ಹೋಗಿದೆಯೋ ಅದೂ ಒಳ್ಳೆಯದಕ್ಕಾಗಿಯೇ ಆಗಿದೆ ಎಂಬಂತೆ, ಐದನೆಯ ದಿವಸ ನಮ್ಮ ಭವಿಷ್ಯವನ್ನು ಶೆಟಿಗೆವ್ವ ಬರೆದೇ ಬಿಟ್ಟಿದ್ದಾಳೆ. ಯಾವುದಕ್ಕೆ ಏಕೆ ಹೆದರುತ್ತೀ, ಧೈರ್ಯದಿಂದ ಜೀವನ ಸಾಗಿಸುವ ಸಂಕೇತದಂತೆ ಒಡಮೂಡಿದೆ ಈ ಚಿತ್ತಾರಗಳು.

***

ಉತ್ತರ ಕರ್ನಾಟಕದ ಗ್ರಾಮೀಣ ಜನಪದ ಶಿಲ್ಪಗಳು

ಜಾನಪದ ಕಲೆಗಳು ನಮ್ಮ ಗ್ರಾಮೀಣ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಜನಪದ ಕಲೆಗಳೇ ಶಿಷ್ಟ ಕಲೆಗಳಿಗೆ ಭದ್ರಬುನಾದಿಗಳಾಗಿವೆ. ಉತ್ತರ ಕರ್ನಾಟಕದ ಭಾಗದಲ್ಲಿ ಕೆಲವೊಂದು ಜಾನಪದ ಶಿಲ್ಪ ಕಲೆಯ ಪರಂಪರೆ ಇಂದಿಗೂ ಎದ್ದು ಕಾಣುತ್ತಿವೆ. ನಿತ್ಯ ಜೀವನಕ್ಕೆ ಈ ಜನಪದ ಶಿಲ್ಪಗಳು ಹೊಸ ಹುರುಪನ್ನು ಕಲೆಯ ಚಮತ್ಕಾರವನ್ನೂ ತೂರುತ್ತವೆ. ಇವುಗಳೊಂದಿಗೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ, ನೈತಿಕ ಹೊಣೆ ಹೊತ್ತುಕೊಂಡು ಪ್ರತಿವರ್ಷವೂ ಯುಗ ಯುಗವು ಕಳೆದರೂ ಮರಳಿ ಬರುತ್ತಿದೆ ಯುಗಾದಿ ಎನ್ನುವ ಹಾಗೆ ಜನಪದ ಶಿಲ್ಪ ಕಲೆಗಳು ಇಂದಿಗೂ ಕಂಗೊಳಿಸುತ್ತಿವೆ.

ಕಟ್ಟಿಗೆಯಲ್ಲಿ ಕೆತ್ತಲಾದ ಪಡಿಯಚ್ಚು(ಸಾಚುಗಳು)

ಕಟ್ಟಿಗೆಯ ಶಿಲ್ಪಕಲಾಕಾರನು ಕಟ್ಟಿಗೆಯಲ್ಲಿ ಸೂಕ್ಷ್ಮವಾಗಿ ಚಿತ್ರಕೃತಿಗಳನ್ನು ಕೆತ್ತಿ ಸಾಮಾನ್ಯ ಜನರಿಗೆ ಅದರ ಅನೇಕ ರೂಪಗಳನ್ನು ತಯಾರಿಸಿ, ಸಾಮೂಹಿಕವಾಗಿ ಆನಂದಿಸುವುದಕ್ಕೋಸ್ಕರ ಈ ಪಡಿಯಚ್ಚುಗಳನ್ನು ನಿರ್ಮಾಣ ಮಡಿಕೊಡುತ್ತಾನೆ. ಅವುಗಳಲ್ಲಿ ಸಕ್ಕರೆಯ ಎರಕ ಹೊಯ್ದು ಗೊಂಬೆಗಳನ್ನು ತಯಾರಿಸಿ ಅವುಗಳನ್ನ ಆರತಿ ತಾಟಿನಲ್ಲಿಟ್ಟು, ಜಾನಪದ ಶಿಲ್ಪಕಲೆಯ ಮಾದರಿಯಾದ ಮಂಟಪದಲ್ಲಿ ಪ್ರತಿಷ್ಠಾಪಿಸಿದ ದೇವಿ ಪಾರ್ವತಿಯನ್ನು ಆರಾಧಿಸುವ ಹಬ್ಬ ವಿಶಿಷ್ಟವಾದದ್ದು. ಇದು ಗಂಗೆ, ಗೌರಿಯರ ಆರಾಧನೆಯ ಹಬ್ಬವಾಗಿದೆ. ಸಾಮಾನ್ಯವಾಗಿ ಆಷಾಢ ಕಾರ್ತಿಕ ಮಾಸದ ಸೀಗೆ ಹುಣ್ಣಿಮೆ ಹಾಗೂ ಕಾರ್ತಿಕ ಮಾರ್ಗಶಿರದ ಗೌರಿ ಹುಣ್ಣಿಮೆಗೆ ಅಂದರೆ ದಸರೆಯ ಹಾಗೂ ದೀಪಾವಳಿಯ ನಂತರ ಆನಂದದ ಅವಕಾಶದಲ್ಲಿ ಬರುವ ಈ ಹಬ್ಬವನ್ನು ಎಲ್ಲಾ ಹೆಣ್ಣುಮಕ್ಕಳು ಆಚರಿಸುತ್ತಾರೆ. ಹೆಣ್ಣುಮಕ್ಕಳು ಸಂಭ್ರಮ ಉತ್ಸಾಹಗಳಿಂದ ಭಾಗವಹಿಸುವ ಈ ಹಬ್ಬದಲ್ಲಿ ಪಾರ್ವತಿಯೇ ಆರಾಧನೆಗೊಳ್ಳುವ ದೇವರು. ಗಂಗೆ, ಗೌರಿ ಹಾಗೂ ಕೊಂತೆವ್ವ ಎಂಬ ಮೂರ್ತಿಗಳಿಗೆ ಆರತಿ ಬೆಳಗುತ್ತಾರೆ. ಸಕ್ಕರೆ ಗೊಂಬೆಗಳಿಂದ ಕೂಡಿದ ಆಕರ್ಷಕವಾದ ಆರತಿಯ ತಾಟು ಎಲ್ಲರ ಕಣ್ಮನ ಸೆಳೆಯುತ್ತವೆ. ಇವೆರಡು ಹುಣ್ಣಿಮೆಗಳು ಆರಂಭವಾಗುವ ಮೊದಲೇ ಹೆಣ್ಣು ಮಕ್ಕಳು ಸಕ್ಕರೆಯಿಂದ ಗೊಂಬೆ ತಯಾರಿಸಿ ತರುವ ಕಲೆಯಲ್ಲಿ ತೊಡಗುತ್ತಾರೆ.

ಹೆಣ್ಣುಮಕ್ಕಳು ಸಕ್ಕರೆ ತೆಗೆದುಕೊಂಡು ಸಕ್ಕರೆ ಗೊಂಬೆಗಳ ಎರಕ ಹೊಯ್ಯುವವರ ಹತ್ತಿರ ಹೋಗಿ ತಮಗೆ ಬೇಕಾದ ಗೊಂಬೆಗಳ ಸಾಚಾ (ಪಡಿಯಚ್ಚು)ಗಳನ್ನು ಆರಿಸಿ ತರಿಸುತ್ತಾರೆ. ಕಟ್ಟಿಗೆಯ ಪಟ್ಟಿಗಳನ್ನು ಜೋಡಿಸಿದಾಗ ಗೊಂಬೆಗಳನ್ನು ಕೆತ್ತಿದ ಸ್ಥಳ ಪೊಳ್ಳಾಗಿ, ಉಳಿದ ಭಾಗ ಸರಿಯಾಗಿ ಮುಚ್ಚಿಕೊಳ್ಳುತ್ತದೆ. ಪಟ್ಟಿಗಳನ್ನು ಜೋಡಿಸುವುದಕ್ಕಿಂತ ಮೊದಲು ಸಕ್ಕರೆಯನ್ನು ಒಂದು ಪಾತ್ರೆಯಲ್ಲಿ ಹಾಕಿ ಸ್ವಲ್ಪ ನೀರು ಬೆರಸಿ ಪಾಕ ಬರುವವರೆಗೆ ಚೆನ್ನಾಗಿ ಕುದಿಸಿ ಹದವಾದ ಪಾಕವನ್ನು ಕಟ್ಟಿಗೆಯ ಪಟ್ಟಿಗಳ ಪೊಳ್ಳಿನ ಆಧಾರದಿಂದ ಗೊಂಬೆಗಳು ನಿರ್ಮಾಣವಾಗುವ ಸ್ಥಳದಲ್ಲಿ ನಿಧಾನವಾಗಿ ತುಂಬುತ್ತಾರೆ(ಸುರಿಯುತ್ತಾರೆ). ಸುರುವಿದ ಪಾಕ ತಣ್ಣಗಾಗುವವರೆಗೆ ತಡೆದು ನಂತರ ಎರಡೂ ಕಟ್ಟಿಗೆಯ ಪಟ್ಟಿಗಳಿಗೆ ಕಟ್ಟಿರುವ ದಾರವನ್ನು ಬಿಚ್ಚಿ ಪಟ್ಟಿಗಳನ್ನು ಬೇರ್ಪಡಿಸಿದಾಗ ನಡುವೆ ಪಡಿಯಚ್ಚಿನಲ್ಲಿ ಸುಂದರ ಗೊಂಬೆಗಳು ರೂಪಗೊಳ್ಳುತ್ತವೆ. ತೇರು, ಗುಡಿ, ಬಸವಣ್ಣ, ಹುಂಜ, ಗುಬ್ಬಿ, ನೇಗಿಲಯೋಗಿ, ಈಶ್ವರಲಿಂಗ, ದೀಪದ ಕಂಬ, ಆನೆ, ಕುದುರೆ,

ಬೀಸುವ ಕುಟ್ಟುವ ಹೆಣ್ಣುಮಕ್ಕಳು, ಹಂಸಪಕ್ಷಿ, ದೊಡ್ಡ ಗಾತ್ರದ ಗೋಪುರಗಳು, ಸುಂದರ ಭಾವಭಂಗಿಗಳು ಮುಂತಾದ ನಾನಾ ಬಗೆಯ ಗೊಂಬೆಗಳು ಸಕ್ಕರೆಯ ಪಾಕದಿಂದ ಮೂಡಿ, ಬರುತ್ತವೆ.

ಈ ಸುಂದರ ವರ್ಣದ ಸಕ್ಕರೆಯ ಗೊಂಬೆಗಳನ್ನು ಒಂದು ಆರತಿ ತಾಟಿನಲ್ಲಿ ಇಟ್ಟುಕೊಂಡು, ಪಾರ್ವತಿ ಪರಮೇಶ್ವರ, ಗಂಗೆಯಿಂದೊಡಗೂಡಿದ ಮೂರ್ತಿ ಪೂಜೆಗೆ ಹೋಗುವಾಗ ಈ ಹಾಡನ್ನ ಹಾಡುತ್ತಾ ಸಖಿಯರು ಹೋಗುತ್ತಾರೆ–

ಗೌರಿ ಗೌರಿ ಗಾಣಾಗೌರಿ
ಕುಂಕುಮ ಗೌರಿ
ಅವರಿಯಂಥ
ಅಣ್ಣನ ಕೋಲ ಅಣ್ಣನ ಕೋಲ,
ತೊಗರಿಯಂಥ ತಮ್ಮನ ಕೋಲ ತಮ್ಮನ ಕೋಲ
ಒಂದ ಸೇರ ಎಣ್ಣೆ ತಂದನೇ ಗೌರಿ
ಒಂದೇ ದೀಪಕ ಹಚ್ಚನ ಗೌರಿ
ಗೌರಿ ಏಕದಾರತಿ ಗೌರಿ ಬೆಳಗದಾರತಿ
ಗೌರಿ ಚಿನ್ನಚಿಟಗಾಣಿ ಗೌರಿ ದಾಳದಿಂಬಾಳ
ಎರಡ ಸೇರ ಎಣ್ಣೆ ತಂದನೆ ಗೌರಿ
ಎರಡ ದೀಪಕ ಹಚ್ಚನ ಗೌರಿ
ಮೂರು ಸೇರ ಎಣ್ಣೆ ತಂದನೆ ಗೌರಿ
ಮೂರ ದೀಪಕ ಹಚ್ಚೆನ ಗೌರಿ
ನಾಲ್ಕು ಸೇರ ಎಣ್ಣೆ ತಂದನೆ ಗೌರಿ
ನಾಲ್ಕು ದೀಪಕ ಹಚ್ಚೆನ ಗೌರಿ
ಐದ ಸೇರ ಎಣ್ಣೆ ತಂದನೆ ಗೌರಿ
ಐದ ದೀಪಕ ಹಚ್ಚೆನ ಗೌರಿ
ಗೌರಿ ಏಕದಾರತಿ ಗೌರಿ ಬೆಳಗದಾರತಿ
ಗೌರಿ ಚಿನ್ನ ಚಿಟಗಾಣಿ ಗೌರಿ ದಾಳದಿಂಬಾಳ

ಈ ಕಲಾತ್ಮಕ ಗೊಂಬೆಗಳು ದೇವರ ಆರಾಧನೆಗೆ ಮಾತ್ರ ಮೀಸಲಾಗಿಲ್ಲ. ಲೌಕಿಕ ಜೀವನದಲ್ಲಿಯೂ ಅವು ಪಾತ್ರವಹಿಸಿವೆ. ಬೀಗರು ಬಿಜ್ಜರುಗಳಿಗೆ ಆರತಿ ಕಳಿಸುವ ವಾಡಿಕೆಯು ಇದೆ. ಹಿರಿಯರು ನಿಶ್ಚಯಿಸಿದ ಕನ್ಯೆಯನ್ನು ವಿವಾಹವಾಗಿ ಮನೆಗೆ ಕರೆತರುವವರೆಗೆ ಗೊಂಬೆಗಳು ನಲ್ಲ ನಲ್ಲೆಯರ ಮಧ್ಯೆ ಹಾಗೂ ಬೀಗರುಗಳ ಮಧ್ಯೆ ಪ್ರೀತಿ, ಪ್ರೇಮ, ವಿಶ್ವಾಸಗಳ ವಿನಿಮಯದ ಮಾಧ್ಯಮವಾಗಿರುತ್ತದೆ.

ಇಂಥ ಬಣ್ಣ ಬಣ್ಣದ ಸುಂದರ ಗೊಂಬೆಗಳು ಈ ಉತ್ಸವಕ್ಕೆ ಕಳೆ ಕಟ್ಟುತ್ತವೆ. ಲೌಕಿಕ ಜೀವನದ ಗುಟ್ಟನ್ನು ಸಾರಿ ಹೇಳುತ್ತವೆ. ಮಕ್ಕಳಿಗಂತೂ ಈ ಗೊಂಬೆಗಳನ್ನು ಕಂಡರೆ ಪಂಚಪ್ರಾಣ. ಕೇವಲ ಮನಸ್ಸಿಗೆ ಆನಂದವನ್ನಷ್ಟೇ ಅಲ್ಲ, ನಾಲಿಗೆಗೂ ಅಮೃತದ ಸವಿಯನ್ನು ಒದಗಿಸುತ್ತವೆ.

ಇವುಗಳಂತೆಯೇ ಭಾದ್ರಪದ ಶುಕ್ಲ ಚೌತಿಯಂದು ಮನೆಮನೆಗಳಲ್ಲಿ ಆಗಮಿಸುವ ಮಂಗಲ

ಮೂರ್ತಿ ಗಜಾನನ ಮೂರ್ತಿಯನ್ನು ಇದೇ ತರಹದ ಕಟ್ಟಿಗೆಯ ಪಡಿಯಚ್ಚಿನ ಮುಖಾಂತರ ತಯಾರಿಸುತ್ತಾರೆ. ನಂತರ ಹಸಿ ಮಣ್ಣು ಪೂರ್ತಿಯಾಗಿ ಆರಿದ ಮೇಲೆ ಮೂರ್ತಿಗೆ ನೀರ ಬಣ್ಣಗಳಿಂದ ಅಥವಾ ತೈಲ ಬಣ್ಣಗಳಿಂದ ಮೂರ್ತಿಯ ಅಲಂಕಾರವನ್ನು ಹೆಚ್ಚಿಸುತ್ತಾರೆ. ಈ ಜನಪದ ಮಂಗಲ ಮೂರ್ತಿಗಳು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸಲು ಪ್ರತಿವರ್ಷವೂ ವಿರಾಜಮಾನವಾಗುತ್ತವೆ.

ಬಾಗಿಲ ಚೌಕಟ್ಟು, ಕಂಬಗಳು ಹಾಗೂ ಮೇಲ್ಛಾವಣಿಯ ತೊಲಿಗಳ (ವಾಸ್ತುಶಿಲ್ಪ)ನಕ್ಷೆಗಳು



ಬಾಗಿಲುವಾಡ ನಕ್ಷೆ



ಸಕ್ಕರೆ ಗೊಂಬೆಯನ್ನು ವೀಕ್ಷಿಸುವ ಜೀವಂತ ಗೊಂಬೆಗಳು

ಮನೆ ಎಂಬ ವಾಸ್ತುಶಿಲ್ಪಕ್ಕೆ ಮುಖ್ಯವಾಗಿ ಕಳೆಕಟ್ಟುವುದು ತಲಬಾಗಿಲು. ಆ ಬಾಗಿಲುಗಳ ಅಕ್ಕಪಕ್ಕಕ್ಕಿರುವ ಚೌಕಟ್ಟು, ಆ ಚೌಕಟ್ಟಿನಲ್ಲಿ ನಕ್ಷೆಗಳ ಮಾಧ್ಯಮದಿಂದ ಒಂದೇ ಅಖಂಡ ಕಟ್ಟಿಗೆಯಲ್ಲಿ ಕೆತ್ತಿದಂತೆ ಭಾಸವಾಗುವಷ್ಟು ಸುಂದರ ಕೆಲಸಗಳು ಇವಾಗಿವೆ.

ನಕ್ಷೆಗಳಲ್ಲಿ ಹೊಸ್ತಿಲ ಮಧ್ಯದಲ್ಲಿ ಬಹಳಷ್ಟು ಪಕಳೆಗಳಿರುವ ಹೂವನ್ನು ಕೆತ್ತಿ ಅದಕ್ಕೆ ಸಮಾನಾಂತರವಾಗಿ ಮೇಲ್ಭಾಗದ ಹಣೆ ಪಟ್ಟಿಯಲ್ಲಿಯ ಮಧ್ಯದಲ್ಲಿ ಬಹಳಷ್ಟು ಪಕಳೆಗಳಿರುವ ಹೂವನ್ನು ಕೆತ್ತಿರುತ್ತಾರೆ. ಈ ನಕ್ಷೆಗಳೇ ವಿಶಾಲವಾಗಿ ಹರಡಿಕೊಂಡು ಅಕ್ಕ ಪಕ್ಕದ ಭುಜಗಳಿಗೂ ಬಂದಿರುತ್ತವೆ. ಹೊಸ್ತಿಲಿನಿಂದ ಆರಂಭವಾದ ನಕ್ಷೆ ಹೊಸ್ತಿಲನ್ನು ಬಿಟ್ಟು ೮ ಅಥವಾ ೧೦ ಇಂಚು ಮೇಲೆದ್ದ ನಂತರ ಅಲ್ಲಿ ಒಂದು ಮುಮಿಡಿಯಂತೆ ಅಥವಾ ಗಿಳಿಯಂತೆ ಇಲ್ಲವೇ ಕಾಲ್ಪನಿಕ ಸಿಂಹದ ಮುಖದ ಮಾದರಿಯನ್ನು ಹೋಲುವ ಒಂದು ಮುಖ ಎರಡು ಬದಿಗೆ ಕಾಣುತ್ತದೆ. ಹಣೆ ಪಟ್ಟಿಯಲ್ಲಿ ಹೆಚ್ಚಿಗೆ ಎತ್ತರ ತೆಗೆದುಕೊಳ್ಳಲು ಸುಂದರ ಹೂವುಗಳ ಸಾಲನ್ನಾಗಲೀ, ಮೊಗ್ಗುಗಳ ಸಾಲನ್ನಾಗಲೀ ಹಾಕಿ ಪೂರ್ತಿ ಮಾಡುತ್ತಾರೆ. ಆ ಮೊಗ್ಗು ಹೂಗಳ ಸಾಲನ್ನೇ ಹೋಲುವ ನಕ್ಷೆಗಳು ಆ ಬಾಗಿಲವಾಡಗಳ ಮೇಲೆ ಬರುವ ಕಲ್ಲಿನ ಪಟ್ಟಿಕದಲ್ಲಿಯೂ ಸಣ್ಣಾಗಿ 'ಸಾಸಿವೆ ಕಾಳ' ಹೊಡೆತದ ನಕ್ಷೆ ತಯಾರಿಸುತ್ತಾರೆ. ಈ ರೀತಿ ಕಲ್ಲು ಮತ್ತು ಕಟ್ಟಿಗೆಯಲ್ಲಿ ಕೆತ್ತಿದ ನಕ್ಷೆಗಳನ್ನು ನಿರ್ಮಿಸಿದ್ದಾರೆ. ಪಕ್ಕದ ಪಟ್ಟಿಗಳಲ್ಲಿನ ಅಲಂಕರಿಕ ರೂಪಗಳು ಒಂದಕ್ಕೊಂದು ಬಳ್ಳಿರೂಪದಲ್ಲಿ ಮುಂದುವರೆಯುತ್ತವೆ. ಅವುಗಳ ಮುಕ್ತಾಯದ ಮೇಲ್ಭಾಗದಲ್ಲಿ ಕೆಲ ಬಾಗಿಲ ವಾಡಗಳಿಗೆ ಅಲಂಕಾರ ಮಾಡಿದ ಕುದುರೆ ಮುಖ ಕೆತ್ತಿರುವುದು ಕಂಡು ಬರುತ್ತವೆ. ಕೆಲವು

ಬಾಗಿಲಗಳ ಹಣೆ ಪಟ್ಟಿಯ ಮಧ್ಯದ ಹೂವಿನ ಪಕ್ಕದಲ್ಲಿ ಬಾತುಕೋಳಿ, ಹಂಸ, ನವಿಲು ಗೂಡಬಿ ಮುಂತಾದ ಅಲಂಕಾರಿಕ ರೂಪಗಳಿಂದ ಪೂರ್ತಿ ಮಾಡಿ ಅವುಗಳಿಗೆ ನುಣುಪು ಬರುವಂತೆ ತಿಕ್ಕಿ ಅಗಸಿ ಎಣ್ಣೆ ಅಥವಾ ಪಾರದರ್ಶಕ ಎಣ್ಣೆ ಹಚ್ಚಿರುತ್ತಾರೆ. ಇಂತಹ ಕಲಾತ್ಮಕ ಬಾಗಿಲುಗಳು ಅತಿಥಿಗಳನ್ನು ಆನಂದದಿಂದ ಬರಮಾಡಿಕೊಂಡಾಗ ಒಳಗೆ ಹೋದ ಕೂಡಲೆ ಬೃಹತ್ ಆಕಾರದ ಚೌಕಾಕಾರದ ಬಯಲು ಆ ಬಯಲಿಗೆ ಹೊಂದಿಕೊಂಡ ಕಟ್ಟೆಗಳು. ಆ ಕಟ್ಟೆಗಳ ಮೇಲೆ ಅಲಂಕಾರಿಕ ಕಂಬಗಳು ಆ ಕಂಬಗಳ ಆಧಾರದ ಮೇಲೆ ಮೇಲ್ಛಾವಣಿಗೆ ಅಲ್ಲಲ್ಲಿ ನಿಲ್ಲಿಸಿರುವ ತೊಲೆಗಳನ್ನು ಅತಿ ಅಲಂಕಾರಮಯವಾದ ರೂಪಗಳಿಂದ ಕೂಡ್ರಿಸಿದ್ದಾರೆ. ಈ ಸಂಪ್ರದಾಯವನ್ನು ಗ್ರಾಮೀಣ ಭಾಗದ ಬಡಿಗೇರ ಜನಾಂಗ ಹಾಗೂ ಕೆಲವೊಬ್ಬ ಆಸಕ್ತ ಕ್ಷತ್ರಿಯ ಕಲಾವಿದರು ಇಂದಿಗೂ ಪಾಲಿಸಿಕೊಂಡು ಬಂದಿದ್ದಾರೆ. ಆದರೆ ಮೊದಲಿನಂತೆ ಸೂಕ್ಷ್ಮತೆ ಕಂಡುಬರುವುದಿಲ್ಲವಾದರೂ ಸಂಪ್ರದಾಯವನ್ನು ಉಳಿಸಿಕೊಂಡು ಮುಂದುವರೆಸಿಕೊಂಡು ಹೊರಟಿದ್ದಾರೆ. ಈ ತರಹದ ಬಾಗಿಲುವಾಡಗಳು ಈ ಭಾಗದ ಅತಿ ದೊಡ್ಡ ಜಾತ್ರೆಯಿಂದ ಬನಶಂಕರಿ ದೇವಿಯ ಜಾತ್ರೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತವೆ.



ಜನಪದ ಶಿಲ್ಪಗಳ ನಿರ್ಮಾಣದಲ್ಲಿ ಜನಪದ ಶಿಲ್ಪಿ



ಜಾನಪದ ಶಿಲ್ಪಗಳು

ಚಂದಾಳ ಗೊಂಬಿ, ಮಣ್ಣೆತ್ತು, ಗುಳ್ಳವ್ವಾಗಳು:

ಚಂದಾಳ ಗೊಂಬೆಗಳನ್ನು ಬಡಿಗೇರರು ಮಾಡುತ್ತಾರೆ. ಹೆಚ್ಚಾಗಿ ಕರೆ ಅಂದರೆ ಕಂದು ಮಿಶ್ರಿತ ಕಟ್ಟಿಗೆಯಲ್ಲಿ ಮಾಡುತ್ತಾರೆ. ಅಂದಾಜು ಇವುಗಳ ಎತ್ತರ ೬ ಇಂಚು, ೫ ಇಂಚು, ೧೧ ಇಂಚುಗಳಾಗಿರುತ್ತವೆ. ನೋಡುವುದಕ್ಕೆ ಕ್ಯೂಬಿಸಂ ಶೈಲಿಯ ಶಿಲ್ಪಗಳಂತೆ ಭಾಸವಾಗುತ್ತವೆ. ಕೈ ಕಾಲುಗಳು ಹಾಗೂ ಚಪ್ಪಟೆಯಾದ ತಲೆ, ಮುಖದ ಭಾಗದಲ್ಲಿ ಕೆತ್ತನೆಯಿಂದ ಸಾಂಕೇತಿಕವಾಗಿ ಕಣ್ಣು, ಮೂಗು, ತುಟಿಗಳನ್ನು ಮಾಡಿರುತ್ತಾರೆ. ನೆಲದ ಮೇಲೆ ನಿಲ್ಲಿಸಿದರೆ ನಿಲ್ಲುವ ಹಾಗೆ ಸ್ವಲ್ಪ ಸಮತಟ್ಟಾದ ಕಟ್ಟಿಗೆ ಇರುತ್ತವೆ. ಇದಕ್ಕೆ ಹೆಣ್ಣು, ಗಂಡು ವ್ಯತ್ಯಾಸ ಬರುವ ಹಾಗೆ ಕೆತ್ತಿರುತ್ತಾರೆ.

ಮುಟ್ಟಕಂಡೆ, ಮುದಚೆಟ ಕಂಡೆ
ಮುತ್ತಿನಂತೆ ಮಗು ಕಂಡೆ

ಎನ್ನುವ ವಾಡಿಕೆಯಂತೆ ಹುಡುಗಿಯರು ಋತುಮತಿಯಾದ ದಿವಸದಿಂದ ಒಂಬತ್ತು ದಿನಗಳವರೆಗೆ

ಅವಳ ಕೈಯಲ್ಲಿ ಹಿಡಿದುಕೊಳ್ಳಲು ಹಾಗೂ ಅವಳ ಪಕ್ಕಕ್ಕೆ ಕೂಡ್ರಿಸಿಕೊಳ್ಳಲು ಈ ಗೊಂಬೆಯನ್ನು ಕೊಡುತ್ತಾರೆ. ಈ ಗೊಂಬೆಯೂ ಆ ಋತುಮತಿಯಾದ ಹೆಣ್ಣಿಗೆ 'ನೀನು ಮಗುವಿಗೆ ಜನ್ಮ ಕೊಡುವುದಕ್ಕಾಗಿ ಸಮರ್ಥಳಾದೆ' ಎಂಬುದನ್ನು ಸೂಚಿಸುವ ಸಂಕೇತವಾಗಿದೆ. ಸದಾ ಓಡಾಡಿಕೊಂಡಿರುವ ಹುಡುಗಿ, ಕನ್ಯೆಯಾಗಿ ಒಂಭತ್ತು ದಿವಸಗಳ ಕಾಲ ಆ ಗೊಂಬೆಯೊಂದಿಗೆ ಏನೆಲ್ಲಾ ಕಲ್ಪನೆಗಳನ್ನು ಮಾಡುತ್ತಾ ದೊಡ್ಡಾಟದ ಅಲಂಕೃತ ಮಂಟಪದಲ್ಲಿ ಸಮಯ ಕಳೆಯುತ್ತಾಳೆ. ನಿತ್ಯ ಸಂಜೆ ಹೆಣ್ಣು ಮಕ್ಕಳು ಅವಳ ಮುಂದೆ ಕುಳಿತು ಹಾಡು ಹಾಡಿ, ಆರತಿ ಮಾಡುತ್ತಾರೆ. ಒಂಭತ್ತನೆಯ ದಿವಸ ಎಬ್ಬಿಸುವಾಗ ಕೆಲ ಹೆಣ್ಣುಮಕ್ಕಳು ಸೇರಿಕೊಂಡು ಹೊಸಬಟ್ಟೆಯಿಂದ ತೊಟ್ಟಿಲು ಮಾಡಿ ಅದರಲ್ಲಿ ಈ ಚಂದಾಳ ಗೊಂಬೆಯನ್ನು ಕೂಸಿನಂತೆ ಮಲಗಿಸಿ ತೂಗುತ್ತಾರೆ.

ಕೆಲವೊಂದು ಸ್ತ್ರೀಯರಿಗೆ ಮಕ್ಕಳು ದಕ್ಕುತ್ತಿರುವುದಿಲ್ಲ, ಯಾವುದೋ ಒಂದು ಕಾರಣದಿಂದ ಸಾಯುತ್ತಿರುತ್ತವೆ. ಅಂತಹ ಹೆಣ್ಣುಮಕ್ಕಳಿಗೆ ಈ ಚೆಂದಾಳ ಗೊಂಬೆಯನ್ನು ಉಡಿತುಂಬುತ್ತಾರೆ. ನಂತರ ಮಕ್ಕಳು ಬದುಕಿ ಉಳಿಯುತ್ತವೆ ಎಂಬ ವಾಡಿಕೆ ಇದೆ.

ಇನ್ನು ಅತಿ ಚಿಕ್ಕ ಗಾತ್ರದ ಚಂದಾಳ ಗೊಂಬೆಯನ್ನು ಮಗುವನ್ನು ಮಲಗಿಸುವ, ತೂಗಿ ಆಡಿಸಲು ಮಾಡಿದ ತೊಟ್ಟಿಲಕ್ಕೆ ಕಟ್ಟುವ 'ಗುಬ್ಬಿ ಚೆಟ್ಟ'ನಲ್ಲಿ ಬಳಸುತ್ತಿದ್ದರು. ಈ ಚೆಟ್ಟನ್ನು ತೊಟ್ಟಿಲಿನಿಂದ ಅಂದಾಜು ಎರಡು ಫೂಟ್ ಅಂತರದ ಮೇಲೆ ಕಟ್ಟಿರುತ್ತಾರೆ.

ಮಣ್ಣೆತ್ತುಗಳನ್ನು ಕುಂಬಾರರು, ಚಿತ್ರಗಾರರು, ಜೀನಗಾರರು, ಬಡಿಗೇರರು, ಮುಂತಾದವರು ಮಾಡುತ್ತಾರೆ. ಕೃಷಿಪ್ರಧಾನವಾದ ದೇಶ ನಮ್ಮದು. ನಾವು ಸಾಗುವಳಿ ಮಾಡಲು ಹೆಚ್ಚಾಗಿ ಮೊದಲಿನಿಂದಲೂ ಎತ್ತುಗಳನ್ನು ಉಪಯೋಗಿಸುತ್ತಾ ಬಂದಿದ್ದೇವೆ.


ಜೇಷ್ಠ ಆಷಾಢದಲ್ಲಿ ಬರುವ ಮಣ್ಣೆತ್ತಿನ ಅಮಾವಾಸ್ಯೆಯ ದಿವಸ ಮಣ್ಣೆತ್ತುಗಳನ್ನು ತಂದು ಜಗುಲಿಯ ಮೇಲಿಟ್ಟು ಪೂಜಿಸುತ್ತಾರೆ. ಬಸವಣ್ಣ ಎಂದು ನಾಮಾಂಕಿತ ಮಾಡಿ ಸುಣ್ಣ ಬಣ್ಣಗಳಿಂದ ಅಲಂಕರಿಸಿ ಬಿಳಿ ಬಸವಣ್ಣನಂತೆ ಮಾಡುವರು. ಇವುಗಳಿಗೆ ಆಹಾರ ಇಡಲು ಗ್ವಾದ್ಲಿ ಪೊಳಿಗಳನ್ನು ಮಾಡುವರು. ಸಂಜೆಗೆ ಚಿಕ್ಕ ಮಕ್ಕಳು ಅವುಗಳೊಂದಿಗೆ ಆಡಿ ಆನಂದಿಸುತ್ತವೆ. ಈ ರೀತಿ ಸದಾ ರೈತನೊಂದಿಗೆ ಪರಿಶ್ರಮ ಪಟ್ಟು ದುಡಿಯುವ ಪ್ರಾಣಿಯ ಬಗ್ಗೆ ಪೂಜ್ಯ ಭಾವನೆ ಸದಾ ಇರಲಿ ಎನ್ನುವ ಭಾವನೆಯಿಂದ ನಮ್ಮ ಪೂರ್ವಜರು ಮಣ್ಣೆತ್ತಿನ ಶಿಲ್ಪಕಲೆ ಉತ್ಸವ ಆಚರಣೆಗೆ ತಂದರು.

ಆಷಾಢ ಶ್ರಾವಣದ ಪ್ರತಿ ಮಂಗಳವಾರವು 'ಗುಳ್ಳವ್ವಾ' ಎಂಬ ಒಂದು ಜನಪದ ಮಣ್ಣಿನ ಶಿಲ್ಪ ನಿರ್ಮಾಣವಾಗುತ್ತದೆ. ಇದು ಮನೆಯ ಹೆಣ್ಣು ಮಗಳ ಸಂಕೇತವಾಗಿದೆ. ಹಾಗೂ ಭೂದೇವಿಯ ಸಂಕೇತವಾಗಿದೆ. ಇದನ್ನು ಕುಂಬಾರರು ಮಡಿಕೆ ಕುಡಿಕೆಗಳನ್ನು ಮಾಡುವ ತಿಗರಿಗೆ ಹಾಕಿ ತಯಾರಿಸುತ್ತಾರೆ. ಮೊದಲು ಮಂಗಳವಾರ ಆ ಶಿಲ್ಪದ ಮೇಲೆ ಒಂದು ಉಬ್ಬುಗೆರೆ ಇರುತ್ತದೆ. ಆ ಉಬ್ಬುಗೆರೆಗಳ ಸಂಖ್ಯೆ ಆ ಮಾಸದಲ್ಲಿ ಬರುವ ಮಂಗಳವಾರಗಳ ಸಂಖ್ಯೆಗಳಾಗಿರುತ್ತವೆ. ಎರಡನೆಯ ಮಂಗಳವಾರ ಎರಡು. ಹೀಗೆ ಪ್ರತಿ ಮಂಗಳವಾರ ಹೊಸ ಮೂರ್ತಿಗಳು ನಿರ್ಮಾಣವಾಗುತ್ತವೆ. ಮನೆಯ ಹೆಣ್ಣು ಮಗಳು ಕೂಳ್ + ಅವ್ವ = ಗುಳ್ಳವ್ವಾ ಆಗಿದೆ. ಆಹಾರ ದೇವಿಯ ಪೂಜೆ ಇದಾಗಿದೆ. ಭೂದೇವಿಯ

ಆರಾಧನೆ. ಮಣ್ಣಿನ ಆರತಿ ತಾಟಿನಲ್ಲಿ ಆರತಿ ಮಾಡುವುದು. ಅವಳೆದುರಿಗೆ ಕೋಣದ ಬಲಿ. ಅದರ ಗೆರೆಗಳ ಮೇಲೆ ಆಹಾರ ಧಾನ್ಯಗಳನ್ನು ಹಚ್ಚಿ ಗುಲಗುಂಜಿಗಳನ್ನು ಹಚ್ಚಿ ಅಲಂಕಾರ ಮಾಡುತ್ತಾರೆ. ಹೆಣ್ಣು ಮಕ್ಕಳೆಲ್ಲಾ ಸೇರಿ ಗುಳ್ಳವ್ವಗಳಿಗೆ ಪೂಜೆ ಸಲ್ಲಿಸಿ ಅವುಗಳೊಂದಿಗೆ ವನಭೋಜನಕ್ಕೆ ಹೋಗುತ್ತಾರೆ. ಮಳೆಗಾಲದ ಪ್ರಕೃತಿ ಹೆಣ್ಣುಮಕ್ಕಳಿಗೆ ಆಹ್ಲಾದಕರವಾದ ಸಂಪ್ರದಾಯಕ ಅವಕಾಶ ಇದಾಗಿದೆ.

ಕಾಮ ಹಾಗೂ ರತಿಯ ಮೂರ್ತಿ ಮತ್ತು ಜೋಕುಮಾರ:

ಕೆಲವೊಂದು ಮ್ಯಾಳದವರು ಫಾಲ್ಗುಣ ಚೈತ್ರ ಮಾಸದಲ್ಲಿ ಬರುವ ಹೋಳಿ ಹುಣ್ಣಿಮೆಯಂದು ಜನನಿಬಿಡ ಸ್ಥಳಗಳಲ್ಲಿ, ಕೂಟಗಳಲ್ಲಿ ರತಿ ಮತ್ತು ಕಾಮನ ಮೂರ್ತಿಗಳನ್ನು ಕೂಡ್ರಿಸುತ್ತಾರೆ. ಅಲಂಕಾರಮಯ ಶಾಮಿಯಾನ ಹಾಕಿಸಿ, ಅದರಲ್ಲಿ ಮಂಚ, ಮಂಚದ ಮೇಲೆ ಮನ್ಮಥ, ರತಿಯನ್ನು ಕೂಡ್ರಿಸುತ್ತಾರೆ. ಈ ಮೂರ್ತಿಗಳನ್ನು ನೋಡಿ ಕಾಮದ ಮರ್ಮವನ್ನರಿಯಲೋ ಅಥವಾ ಸುಂದರ, ಸುಂದರಿಯನ್ನು ನೋಡಿ ಕಾಮವ ಆನಂದಿಸುವ ಉದ್ದೇಶದಿಂದಲೋ ಬಹಳಷ್ಟು ಸ್ತ್ರೀ, ಪುರುಷರು ಸಂಜೆಯಿಂದ ಪ್ರಾರಂಭಿಸಿ ಮಧ್ಯರಾತ್ರಿಯವರೆಗೆ ಅಲ್ಲಲ್ಲಿ ಕೂಡ್ರಿಸಿರುವ 'ರತಿ, ಕಾಮ' ರನ್ನು ನೋಡುತ್ತಾರೆ. ಅಂದೆ ರಾತ್ರಿ ಕಾಮದಹನ ಮಾಡುತ್ತಾರೆ. ಚಿಕ್ಕ ಮಣ್ಣಿಂದ ಅಥವಾ ಕಟ್ಟಿಗೆಯ ಮೂರ್ತಿಗಳನ್ನು ದಹನಕ್ಕಾಗಿ ಬೇರೆ ಮಾಡಿಸಿರುತ್ತಾರೆ. ಅವುಗಳನ್ನು ಮಧ್ಯದಲ್ಲಿಟ್ಟು ಕುಳ್ಳು ಕಟ್ಟಿಗೆಯನ್ನು ಒಟ್ಟಿ ಸುಡುತ್ತಾರೆ. ಪ್ರದರ್ಶನ ಮೂರ್ತಿಗಳನ್ನು ಸುರಕ್ಷಿತವಾಗಿ ತೆಗೆದು ಇಡುತ್ತಾರೆ.



ರತಿ ಕಾಮರ ಶಿಲ್ಪಗಳು

ಈ ಮಾನವ ಗಾತ್ರದ ಕಾಮ ಹಾಗೂ ರತಿಯ ಗೊಂಬೆಗಳನ್ನು ಈ ಭಾಗದ ಚಿತ್ರಕಾರರು, ಜೀನಗಾರರು, ಬಡಿಗೇರರು ಮಾಡುತ್ತಾರೆ. ಈ ಮೂರ್ತಿಗಳಿಗೆ ಮೊದಲು ತಾವೇ ತಯಾರಿಸಿದ ವನಸ್ಪತಿ ಬಣ್ಣಗಳನ್ನು ಲೇಪಿಸುತ್ತಿದ್ದರು. ಆದರೆ ಈಗ ಲಭ್ಯವಿರುವ ತೈಲಬಣ್ಣವನ್ನು ಉಪಯೋಗಿಸುತ್ತಾರೆ. ಕಾಮನಿಗೆ ರಾಜ ಪೋಷಾಕದ ಅಂಗಿ ಮತ್ತು ರತಿಗೆ ಮೇಲ್ಭಾಗದ ರವಿಕೆ ಮಾತ್ರ ಅ ಕಟ್ಟಿಗೆಯಲ್ಲಿಯೆ ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತಿ ಬಣ್ಣ ಲೇಪಿಸುತ್ತಾರೆ. ಉಳಿದ ಬಟ್ಟೆಗಳಾದ ಪೀತಾಂಬರ ಹಾಗೂ ಸೀರೆ ವಾಸ್ತವಿಕವಾಗಿ ತೊಡಿಸಿ ಬಟ್ಟೆಯ ಹೆಚ್ಚಿನ ಭಾಗವನ್ನು ನಿರಿಗೆ ಮಾಡಿ ಉತ್ತಮ ಶೈಲಿಯಲ್ಲಿ ಮಂಚದ ಮೇಲೆ ಇಳಿಬಿಡುತ್ತಾರೆ. ಅಲ್ಲದೆ ಕೈ, ಕಾಲು, ಕೊರಳುಗಳಲ್ಲಿ ವಾಸ್ತವಿಕ ಬಂಗಾರದ ಆಭರಣಗಳನ್ನು ಹೇರಳವಾಗಿ ತೊಡಿಸುತ್ತಾರೆ.

ಈ ಗೊಂಬೆಗಳ ಮುಖಗಳು ಅತಿ ಸುಂದರವಾಗಿರುತ್ತವೆ. ತಲೆಯ ಮೇಲ್ಗಡೆ ಸುಂದರ ಕೇಶಾಲಂಕಾರ, ನೀಟಾದ ಮೂಗು, ಕಣ್ಣು, ಹುಬ್ಬು, ತಿದ್ದಿದ ಚಿಗರು ಮೀಸೆ, ತುಂಬುಗಲ್ಲಗಳು ಹಾಗೂ ಗದ್ದ ಕಿವಿಯೋಲೆಯಿಂದ ಅಲಂಕೃತ ಕಿವಿಗಳು ಇರುತ್ತವೆ. ಇವನು ಶಿವನ ತಪಸ್ಸು ಭಂಗಮಾಡಲು ಪ್ರಯತ್ನಿಸಿದಾಗ, ಮುಕ್ಕಣ್ಣನು ತನ್ನ ಮೂರನೆಯ ಕಣ್ಣಿಂದ ಬಿಟ್ಟ ಅಗ್ನಿ ಇವರನ್ನು ದಹಿಸಿತು ಎನ್ನುವ ಆಧಾರದ ಮೇಲೆ ಜನಪದ ಮೂರ್ತಿಗಳು ಬಂದಿವೆ. ಪ್ರತಿ ಮನೆಯಲ್ಲಿಯೂ ಈ ಸಂಪ್ರದಾಯವನ್ನು

ಸಾಂಕೇತಿಕವಾಗಿ ಆಚರಿಸಿ, ಕಾಮದೇವನನ್ನು ಪೂಜಿಸಿ, ಕಾಮದ ಮೇಲೆ ಹಿಡಿತ ಸಾಧಿಸಲು ಪ್ರಾರ್ಥಿಸುತ್ತಾರೆ. ಉಗಮದ ಸಂಕೇತದ ಕಾಮನ ಮಂದಿರಗಳು ದೇಶದಲ್ಲಿ ಅಲ್ಲಲ್ಲಿ ಕಾಣಸಿಗುತ್ತವೆ



ಜೋಕುಮಾರ

ಭಾದ್ರಪದ ಶುಕ್ಲ ಅಷ್ಟಮಿಯಂದು ಗಣಪತಿಯ ವಿಸರ್ಜನವಾಗುವ ಸಮಯದಲ್ಲಿ ರಾತ್ರಿ ಜೋಕುಮಾರ ಹುಟ್ಟುತ್ತಾನೆ. ಒಂದು ಜನಾಂಗದವರು ಮಧ್ಯರಾತ್ರಿ ಅಡವಿಯಿಂದ ಮಣ್ಣಿನ ಮುದ್ದೆಯನ್ನು ತರುತ್ತಾರೆ. ಮನೆಯಲ್ಲಿ ಹೆಣ್ಣುಮಕ್ಕಳು ಜೋಕುಮಾರನ ಮೂರ್ತಿಯನ್ನು ತಯಾರಿಸುತ್ತಾರೆ.

ಜೋ ಎಂದರೆ ಅತಿ ಕಾಮಿ, ಕುಮಾರ ಎಂದರೆ ಪುರುಷ. ಅತಿ ಕಾಮುಕ ರಾಜನ ಒಂದು ದಂತ ಕಥೆಯ ಆಧಾರದಿಂದ ಸಮಾಜಕ್ಕೆ ಪಾಠ ಹೇಳಲು ಕಾಮುಕರಿಗೆ ಪಾಠ ಕಲಿಸಲು ಈ ಜನಪದ ಶಿಲ್ಪ ಪ್ರತಿ ವರ್ಷ ಬರುತ್ತದೆ. ಈ ರಾಜ ಕೇವಲ ಏಳು ದಿವಸ ರಾಜಕೀಯ ಮಾಡಿ ಎಲ್ಲ ಹೆಣ್ಣುಗಳ ಮೇಲೆ ತನ್ನ ಕಾಮುಕ ದೃಷ್ಟಿ ಬೀರಿದ್ದನಂತೆ. ಅವನನ್ನು ಒಂದು ಜನಾಂಗದವರು ತಲೆ ಒಡೆದು ಊರ ಹೊರಗಿನ ಅಗಸರು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಮುಚ್ಚಿದ್ದರಂತೆ. ಅದಕ್ಕಾಗಿ ಅಗಸರು ಅವನ ದಿನಕರ್ಮ ಮಾಡಿದರಂತೆ. ಕಾರಣ ಅಗಸರು ಅಂದು ಕೆಲಸಕ್ಕೆ ರಜೆ ಮಾಡುವ ಸಂಪ್ರದಾಯ ಇಂದಿಗೂ ಇದೆ. ಈ ಭಾಗದಲ್ಲಿ ದುರ್ಮರಣಕ್ಕೀಡಾದ ವ್ಯಕ್ತಿಯನ್ನು ಬೇವಿನ ತಪ್ಪಲಲ್ಲಿ ಸುತ್ತುತ್ತಾರೆ. ಅದೇ ಪ್ರಕಾರ ಈ ಜೋಕುಮಾರನಿಗೂ ಬಂದಿರಲಿಕ್ಕೆ ಬೇಕು.

ಪ್ರಮಾಣಬದ್ಧವಲ್ಲದ ಒಂದು ಫೂಟ್ ಎತ್ತರದ ಒಂದು ಮಣ್ಣಿನ ಮೂರ್ತಿ ಇದಾಗಿರುತ್ತದೆ. ಇದರ ಮೈಮೇಲೆ ಸ್ವಲ್ಪವೂ ಬಟ್ಟೆ ಇರುವುದಿಲ್ಲ. ಇದರ ಗುಪ್ತಾಂಗವನ್ನು ದೊಡ್ಡದನ್ನಾಗಿ ಮಾಡಿರುತ್ತಾರೆ. ಈ ಮೂರ್ತಿಯನ್ನು ಕೂಡ್ರಿಸಿಕೊಂಡು ಬರುವ ಬಿದರಿನ ಬುಟ್ಟಿಯಿಂದ ಹೊರ ಕಾಣುತ್ತಿರುತ್ತದೆ. ಗುಪ್ತಾಂಗವನ್ನು ಬೇವಿನ ತಪ್ಪಲಲ್ಲಿ ಹೆಚ್ಚಿನ ಭಾಗವನ್ನು ಮುಚ್ಚಿರುತ್ತಾರೆ. ನಾಲ್ಕೈದು ಹೆಣ್ಣುಮಕ್ಕಳು ಮನೆ ಮನೆಗೆ ಹೋಗಿ ಹಾಡುಗಳನ್ನು ಹೇಳಿ ದವಸ, ಧಾನ್ಯಗಳನ್ನು ದೇಣಿಗೆಯ ರೂಪದಲ್ಲಿ ಸಂಗ್ರಹಿಸುತ್ತಾರೆ. ಆ ಹಾಡುಗಳು ಈ ಕೆಳಗಿನಂತಿವೆ.

ಹುಟ್ಟಿದ ಏಳು ದಿನಕ ಪಟ್ಟವ ಆಳ್ಯಾನ
ದಿಕ್ಷಾದೇವಿ ನಿನ್ನ ಮಗ
ಕೊಟ್ರವ ಏಳುದಿನಗಳು,
ತಿರುಗಿ ಬಂದು ಊರಹೋಗಲಿಲ್ಲ,
ಹಳ್ಳದ ದಂಡಿ ಹಾಯಬ್ಯಾಡ ನನ್ನ ಕುಮಾರ ಹಳ್ಳತಾಕಿ ಗೆಜ್ಜೆ ಉದುರಾವ,
ಬಿಲ್ಲತಾಕಿ ಬಾಣ ಮುರಿದಾವ,
ಚಿನ್ಮಯನ ಮನಿಗೆ ಎಣ್ಣಿಗೆ ಹೋದೆ,
ಕಣ್ಣಿಟ್ಟ ಕೋಲ ಅಡನಿಟ್ಟ
ನನ್ನ ಕೇಳ್ಯಾಕ ನೀನ್ಯಾರ ಮಗನಯ್ಯ,
ನಿನ್ನೆರಡ ಕಣ್ಣ ತೆಗೆಸೇನ
ಅಗಸರ ಬಂಡ್ಯಾಗ ತೇಲೆ ಒಡಸೇನ

ಮುಂದೆ ಸತ್ತ ನಂತರ ದೇವರಲ್ಲಿ ಹೋಗಿ ಪ್ರಾರ್ಥಿಸಿ ಭೂಲೋಕದ ಜನರಿಗೆ ಸುಖ ಸಮೃದ್ಧಿ ದಯಪಾಲಿಸಿದೆ ಎಂಬ ಜನಪದ ಶಿಲ್ಪ ನಿತ್ಯನೂತನವಾಗಿದೆ. ಬೇಡಿದವರಿಗೆ ಬೇಡಿದ್ದನ್ನು ಕೊಡುವ ಜೋಕುಮಾರ ಸ್ವಾಮಿ ಎನಿಸಿಕೊಂಡಿದ್ದಾನೆ.

ಸಗಣಿ ಗೊಂಬೆ ಸಗಣಿ ಪಾಂಡವರು

ಇಟ್ಟರೆ ಸೆಗಣಿಯಾದೆ ತಟ್ಟಿದರೆ ಕುರುಳಾದೆ,
ನಿನಾರಿಗಾದೆಯೋ ಎಲೆ ಮಾನವಾ?

ಎಂದು ಗೋವು ಮಾನವನಿಗೆ ಸದಾ ಒಳ್ಳೆಯ ಕೆಲಸಮಾಡಲು ಎಚ್ಚರಿಸುವಂತೆ, ಸೆಗಣಿಯ ಗೊಂಬೆಗಳು ಮಕ್ಕಳಿಗೆ ತಾಯ ಮಗುವಿನ ಭಾಂದವ್ಯ, ಪ್ರೀತಿ, ವಾತ್ಸಲ್ಯವನ್ನು ಬೆಳಸಿಕೊಳ್ಳುವುದನ್ನು ಕಲಿಸಲು ಜಾತ್ರೆ , ಉತ್ಸವಗಳಲ್ಲಿ ಬರುತ್ತವೆ.



ಹೆಂಡಿ ಪಾಂಡವರು

ಈ ಸಗಣಿ ಗೊಂಬೆಗಳನ್ನು ಚಿತ್ರಗಾರ, ಜೀನಗಾರ, ಮಾಡುತ್ತಾರೆ. ಇವುಗಳ ಇನ್ನೊಂದು ಹೆಸರು ಕಿಸಗಾಲ ಗೊಂಬಿ ಎಂದು ಇದೆ. ಹೆಸರಿನಲ್ಲಿ ವಿಶೇಷತೆ ಇರುವಂತೆ ಕಾರ್ಯದಲ್ಲಿಯೂ ಇದೆ. ಸೆಗಣಿ ಕೂಡಿಹಾಕಿ ಗಟ್ಟಿಯಾಗಿ ಚೆನ್ನಾಗಿ ನಾದುತ್ತಾರೆ. ಗೊಂಬೆಗಳನ್ನಾಗಿಸಲು ಬೇರೆ ಬೇರೆ ಗಾತ್ರದ ಗೊಂಬೆಯ ಪಡಿಯಚ್ಚುಗಳು ಇರುತ್ತವೆ. ಅವು ಅಮೂರ್ತ ರೂಪದ್ದಾಗಿರುತ್ತವೆ. ಕಟ್ಟಿಗೆಯಲ್ಲಿ ಕೆತಿ ಮಾಡಲ್ಪಟ್ಟಿರುತ್ತವೆ. ಈ ಸಾಚಾದಲ್ಲಿ ಸಗಣಿಯನ್ನು ತುಂಬಿ ಅದರ ಮಧ್ಯದಲ್ಲಿ ಬೆನ್ನಿಗೊಂದು ಕೈ ಮತ್ತು

ಕಾಲುಗಳಿಗೆ ಸಜ್ಜೆಯ ಅಥವಾ ಜೋಳದ ದಂಟನ್ನು ಸೇರಿಸಿ, ಅವುಗಳನ್ನು ಸಾಚಾದಿಂದ ಬಿಡಿಸಿ ಬಿಸಿಲಿಗೆ ಆರಲು ಹಾಕುತ್ತಾರೆ. ಸೆಗಣಿಯಿಂದ ಮಾಡಿದ್ದೆಂದು ಗೊತ್ತಾಗಬಾರದೆಂದು ತಾಳಿಕೆ ಬರಲೆಂದೂ, ಬಣ್ಣ ಹಚ್ಚಲು ಸರಳವಾಗಲೆಂದೂ ಅದರ ಮೇಲೆ ತೆಳುವಾದ ಅರಿವೆಯ ತುಕಡಿಗಳನ್ನು ಅಂಟಿಸುತ್ತಾರೆ. ಅಂಟನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಹುಣಸೇ ಬೀಜವನ್ನು ಸ್ವಲ್ಪ ಹುರಿದು ಅದರ ಮೇಲಿನ ಸಿಪ್ಪೆಯನ್ನು ತೆಗೆದು ಒಳ್ಳಿನಲ್ಲಿ ರುಬ್ಬಿ ನೆನೆಯಿಟ್ಟಾಗ ಅಂಟು ತಯಾರಾಗುತ್ತದೆ. ಆ ಅಂಟಿನಲ್ಲಿ ಬಟ್ಟೆಯ ತುಣುಕುಗಳನ್ನದ್ದಿ ತೆಗೆದು ಗೊಂಬೆಗಳಿಗೆ ಅಂಟಿಸಿ ಒಣಗಿಸಿ ಕೆಂಪು ಕಟಗದ ಮಣ್ಣಿನಿಂದ ತಯಾರಿಸಿದ ತಿಳಿ ನೀರಿನಲ್ಲಿ ಅದ್ದಿ ಮತ್ತೆ ಒಣಗಿಸಿ, ವನಸ್ಪತಿ ಅಥವಾ ಭೂಮಿಯಲ್ಲಿ ದೊರೆಯುವ ಬಣ್ಣಗಳ ಸಹಾಯದಿಂದ ಗೊಂಬೆಯ ತಲೆಗೂದಲು, ಕಣ್ಣು, ಮೂಗು, ರವಿಕೆ, ಸೀರೆ ಎಲ್ಲವನ್ನು ಕುಂಚದಿಂದ ಲೇಪಿಸಿ ಮಾರಾಟಕ್ಕೆ ತರುತ್ತಾರೆ.

ದೊಡ್ಡವರಾದ ನಾವುಗಳು ಮಾಡುವ ಎಲ್ಲಾ ಚಟುವಟಿಕೆಗಳನ್ನು ಮಕ್ಕಳು ನಿರೀಕ್ಷಿಸಿ ತಾವೇ ತಾವಾಗಿ ಆಡಿಕೊಳ್ಳುತ್ತವೆ. ತಾಯಿ ತನ್ನ ಮಗುವನ್ನು ಬಗಲಲ್ಲಿ ಹೇಗೆ ಕೂಡ್ರಿಸಿಕೊಳ್ಳುವಳೋ ಹಾಗೆಯೆ ಈ ಕಿಸಗಾಲ ಗೊಂಬೆಯು ತನ್ನ ಬಗಲಲ್ಲಿ ಒಂದು ಮಗುವನ್ನು ಕೂಡ್ರಿಸಿಕೊಂಡಿರುತ್ತದೆ. ಈ ಪಾಠವನ್ನು ಮಕ್ಕಳು ಪಾಲಿಸಲೆಂದು ಆ ಗೊಂಬೆಗಳ ಕಾಲುಗಳನ್ನು ಅಗಲ ಮಾಡುತ್ತಾರೆ.

ಮಕ್ಕಳು ಆ ಗೊಂಬೆಯನ್ನು ಎತ್ತಿಕೊಂಡು ತಮ್ಮ ನಡದಲ್ಲಿ ಕೂಡ್ರಿಸಿಕೊಂಡು ಮಗುವಿನ ತಾಯಿಗಿಂತಲೂ ಚೆನ್ನಾಗಿ ನಟಿಸುತ್ತಾ ಆಟವಾಡುತ್ತಾರೆ. ಇದೇ ಸಗಣಿಯಿಂದ ಗುಬ್ಬಿ, ನವಿಲು ಚಿಗರೆಯ ಮುಖ, ಬೀಸುವ ಕಲ್ಲು, ನಿಂತ ಗೊಂಬೆ, ಅರಲಿನಿಂದ ಆನೆ, ಬಸವಣ್ಣ, ಮಣ್ಣೆತ್ತುಗಳನ್ನು ಮತ್ತು ನಾಗರ ಹೆಡೆಗಳನ್ನು ಮಾಡುತ್ತಾರೆ. ಈ ಜಾನಪದ ಶಿಲ್ಪಗಳು ಹೇಳುವುದೇನೆಂದರೆ 'ನಮ್ಮ ದುಡಿತಕ್ಕೆ ಸಂಭಾವನೆ ದೊರೆಯುವುದಿಲ್ಲ ಮೊದಲಿನಿಂದ ಬಂದ ಕಲೆ ಎಂದು ಮುಂದುವರೆಸಿಕೊಂಡು ಹೊರಟಿದ್ದೇವೆ' ಎನ್ನುತ್ತಾರೆ.

ದೀಪಾವಳಿ ಅಮಾವಾಸ್ಯೆಯ ಲಕ್ಷ್ಮೀ ಪೂಜೆಯ ಮರುದಿವಸ ಬಲಿಪಾಡ್ಯದ ದಿವಸ ಈ ಸಗಣಿ ಪಾಂಡವರನ್ನು ಪ್ರತಿಷ್ಠಾಪನೆ ಮಾಡುತ್ತಾರೆ. ಶಂಖಾಕೃತಿಯಲ್ಲಿ ಮಾಡಿ ಐದು ಪಾಂಡವರನ್ನು ನಿರ್ಮಿಸುತ್ತಾರೆ. ಅವುಗಳ ತಲೆಯ ಮೇಲೆ ಒಂದು ದುಂಡನೆಯ ಭಾಗವನ್ನು ಜೋಡಿಸುತ್ತಾರೆ. ಅವರಿಗೆ ನೈವೇದ್ಯ ಮಾಡುವ ಆಹಾರದ ಮೊಸರು ಅನ್ನ ಹಾಗೂ ಹೊನ್ನ ಅಂಬ್ರಿಯ ಅಚ್ಚ ಹಳದಿಯ ಹೂವುಗಳನ್ನು ಹಾಗೂ ಉತ್ತರಾಣಿಯ ಕಡ್ಡಿಗಳನ್ನು ಆ ದುಂಡನೆಯ ಭಾಗದಲ್ಲಿ ಚುಚ್ಚುತ್ತಾರೆ. ಈ ಐವರು ಪಾಂಡವರ ಮಧ್ಯೆ ಒಂದು ಸಗಣಿ ಗೊಂಬೆ ಮಾಡಿರುತ್ತಾರೆ. ಬಹುಶಃ ಆ ಗೊಂಬೆಯು ವಧೆ ಮಾಡಲ್ಪಟ್ಟ ದುರ್ಯೋಧನನ ಸಂಕೇತವಿರಬಹುದು. ಬಲಿ ಚಕ್ರವರ್ತಿಯದೂ ಇರಬಹುದು. ಬಲರಾಮ ಎನ್ನುತ್ತಾರೆ. ಈ ಪಾಂಡವರು ಕೂಡಾ ದುಷ್ಟಶಕ್ತಿಗೆ ಕೊನೆ ಇದೆ ಎನ್ನುವುದನ್ನು ತೋರುವ ಹಾಗೂ ಇತಿಹಾಸವನ್ನು ಸಾಮಾನ್ಯರು ಮೆಲುಕು ಹಾಕುವ ಜನಪದ ಶಿಲ್ಪ ಇವಾಗಿವೆ. ಅಂದೆ ಸಂಜೆಗೆ ಅವುಗಳನ್ನು ಪೂಜೆ ಮಾಡಿ ತೆಗೆದು ಮಾಳಿಗೆಯ ಮೇಲೆ ಇಡುತ್ತಾರೆ.

ದುರ್ಗವ್ವಾ, ದ್ಯಾಮವ್ವ, ಶೆಟಿಗೆವ್ವಳ ಮೂರ್ತಿಗಳು

ಗ್ರಾಮದೇವತೆಯ ಮಂದಿರವಿಲ್ಲದ ಊರು ಇಲ್ಲವೇ ಇಲ್ಲ. ಈ ಗ್ರಾಮ ದೇವಿಯೇ ದುರ್ಗವ್ವಾ, ದ್ಯಾಮವ್ವ, ಈ ದೇವಿಯರನ್ನು ಒಂದೇ ಗುಡಿಯಲ್ಲಿ ಅಥವಾ ಬೇರೆ ಬೇರೆ ಗುಡಿಗಳಲ್ಲಿ ಪ್ರತಿಷ್ಠಾಪಿಸುತ್ತಾರೆ. ಯಾವುದೇ ಶುಭಕಾರ್ಯಕ್ಕೆ ಮೊದಲು ಪೂಜೆ ಇವರಿಗೆ ಸಲ್ಲುತ್ತದೆ. ಸಿಂಹಾರೂಢಳಾದ ದೇವಿಗೆ ವಾಸ್ತಿವಿಕ ಸೀರೆಯನ್ನು ಉಡಿಸಿರುತ್ತಾರೆ. ಉಡಿ ತುಂಬುತ್ತಾರೆ. ನೋಡುವುದಕ್ಕೆ ಉಗ್ರವಾಗಿ ಕಂಗೊಳಿಸುತ್ತವೆ.

ಈ ಮೂರ್ತಿಗಳನ್ನು ಅಖಂಡ ಕಟ್ಟಿಗೆಯಾಗಲಿ ಬಿಡಿ ಬಿಡಿ ಭಾಗಗಳಲ್ಲಾಗಲೀ ಮಾಡುತ್ತಾರೆ. ಇವುಗಳನ್ನು ತಯಾರಿಸುವವರು ಚಿತ್ರಗಾರರು, ಜೀನಗಾರರು, ಬಡಿಗೇರರಾಗಲಿ ಮಾಡುತ್ತಾರೆ. ಇವುಗಳಿಗೆ ಹಚ್ಚುವ ಪ್ರಖರವಾದ ಬಣ್ಣವನ್ನು ಸ್ವತಃ ತಾವೇ ತಯಾರಿಸಿಕೊಳ್ಳುತ್ತಾರೆ. ಬಣ್ಣ ತಯಾರಿಸುವ ಪದ್ಧತಿ ಎಂದರೆ ತವರನ್ನು ಕುಟ್ಟಿ ಪುಡಿ ಮಾಡಿ ಅದರಲ್ಲಿ ವನಸ್ಪತಿ ಅಥವಾ ಮಣ್ಣಿನ ಬಣ್ಣಗಳನ್ನು ಹಾಕಿ ತೈಲ ಮಿಶ್ರ ಮಾಡಿ ಸುಂದರವಾಗಿ ಬಣ್ಣ ಹಚ್ಚಿರುತ್ತಾರೆ. ಎಲ್ಲರಿಗೂ ಒಳ್ಳೆಯದನ್ನೇ ಮಾಡುವ ದೇವಿ ಇವಳು.

ಇದೇ ರೀತಿ ಶೆಟಿಗೆವ್ವ ಎಂಬ ದೇವಿಯನ್ನು ದುರ್ಗ ಮುರ್ಗಿ ಜನಾಂಗ ಒಂದು ಬುಟ್ಟಿಯಲ್ಲಿ ಅಥವಾ ಕಟ್ಟಿಗೆಯ ಪೆಟ್ಟಿಗೆಯಲ್ಲಿ ಪ್ರತಿಷ್ಠಾಪಿಸಿಕೊಂಡು ಓಣಿಯಲ್ಲಿ ಮನೆ ಮನೆಗೆ ಬರುತ್ತಾರೆ. ನೋಡಲು ದೇವಿ ಭಯಾನಕವಾಗಿ ಕಾಣುತ್ತಾಳೆ. ಕೋರೆಗಳು ಹೊರಗೆ ಬಂದಿರುತ್ತವೆ. ಕೈಯಲ್ಲಿ ಖಡ್ಗ, ದಟ್ಟಹಸಿರು ಬಳೆಗಳು, ಈ ಭಯಾನಕ ಮೂರ್ತಿ ನೋಡಿ ಮನಸ್ಸಿನ ಭಯವನ್ನು ಮಕ್ಕಳಿಂದ ಓಡಿಸಬೇಕೆಂಬ ಉದ್ದೇಶದಿಂದ ಅರ್ಚಕರು ಸಹಿತ ಮುಖಕ್ಕೆ ಬಣ್ಣ ಹಚ್ಚಿಕೊಂಡು ಮುಖವಾಡ ಹಾಕಿಕೊಂಡು ಮಕ್ಕಳ ಹೆದರಿಕೆ ದೂರ ಮಾಡಿ ಮಕ್ಕಳ ರಕ್ಷಣೆ ಮಾಡಿ ಅವರ ಹಣೆ ಬರೆಯಲು ಈ ಶೆಟಿಗೆವ್ವ ಬರುತ್ತಾಳೆ. ಅನೇಕ ತರಹದ ಆಟಗಳನ್ನು ಓಣಿಯಲ್ಲಿ ಆಡಿ ತೋರಿಸಿ ಭಕ್ತರು ಕೊಟ್ಟಷ್ಟನ್ನೇ ಸಮಾಧಾನದಿಂದ ತೆಗೆದುಕೊಂಡು ಮರೆಯಾಗುವುದು ಈ ಜಾನಪದ ಶಿಲ್ಪಿ.


ಈ ತರಹದ ಮೂರ್ತಿಗಳೊಂದಿಗೆ ಜೀನಗಾರರು, ದೇವರ ಪಾಲಿಕೆ ದೇವಿಯ ಪ್ರಭಾವಳಿ, ಛತ್ರಿ, ಅಪ್ತಗಿರಿ, ಆದಿಕೋಲು ಮುಂತಾದವುಗಳನ್ನು ಮಾಡಿ ಬಣ್ಣ ಹಚ್ಚಿಕೊಡುತ್ತಾರೆ.

ಜಾತ್ರೆಯ ತೇರುಗಳು (ರಥಗಳು)

ನಮ್ಮ ಪೂರ್ವಜರು ನಮಗಾಗಿ ಒಂದು ಭವ್ಯ ಕಟ್ಟಿಗೆಯ ಶಿಲ್ಪ ಸಂಪ್ರದಾಯವನ್ನೇ ಒದಗಿಸಿದ್ದಾರೆ. ಅದರ ಅಂಗವಾಗಿ ವರ್ಷಕ್ಕೆ ಒಂದು ದಿವಸ ನಾವೆಲ್ಲರು ನಮ್ಮಲ್ಲಿಯ ಭೇದಭಾವಗಳನ್ನು ಮರೆತು ಭಕ್ತಿ, ಭಾವನೆಯಿಂದ ಒಂದೆಡೆಗೆ ಕೂಡಿ ಶಿಲ್ಪವನ್ನು ಅಲಂಕರಿಸಿ ಅದರಲ್ಲಿ ದೇವರ ಉತ್ಸವದ ಮೂರ್ತಿಯನ್ನು ಪ್ರತಿಷ್ಠಾಪಿಸಿ ಉತ್ಸವ ಮಾಡಿ ಆನಂದಿಸುತ್ತೇವೆ. ಇದುವೇ ಜಾತ್ರೆಯ ತೇರು.

ಜಾತ್ರೆಯ ತೇರುಗಳು ಚಿಕ್ಕವೆಂದರೆ ೫ ಫೂಟಿನಿಂದ ದೊಡ್ಡವೆಂದರೆ ೩೦–೪೦ ಫೂಟುಗಳಷ್ಟು ದೊಡ್ಡ ತೇರುಗಳನ್ನು ನೋಡಬಹುದು. ಅವುಗಳ ಮೇಲೆ ಬಾವುಟ ಪಥ ಹಾಗೂ ಕಳಸವನ್ನು ಕೂಡ್ರಿಸಿದರೆ ಆಕಾಶವನ್ನೇ ಚುಂಬಿಸುವಂತೆ ಕಾಣುತ್ತದೆ.





ನಾಲ್ಕು ಕಲ್ಲಿನ ಗಾಲಿಗಳ ಮೇಲೆಯೇ ಈ ತೇರಿನ ಪೂರ್ತಿ ಭಾರವಿರುತ್ತದೆ. ಗಾಲಿಗಳಿಗೆ ಹೊಂದಿಕೊಂಡು ಎರಡು ಬದ್ರ ಕಟ್ಟಿಗೆಯ ದಿಮ್ಮಿಗಳು, ಅದರ ಮೇಲೆ ನಾಲ್ಕು, ಐದು ಕಟ್ಟಿಗೆಯ ತೊಲೆಗಳು. ಇಲ್ಲಿಂದಲೇ ಕಟ್ಟಿಗೆಯಕಲೆ ಪ್ರಾರಂಭವಾಗುತ್ತದೆ. ದಿಮ್ಮಿಗಳಿಗೆ (ತೊಲೆಗಳಿಗೆ) ಹೆಚ್ಚಾಗಿ ಕುಳಿತ ಸಿಂಹಗಳು ಎರಡು ಕಾಲುಗಳನ್ನು ಮುಂದೆ ಚಾಚಿರುತ್ತವೆ. ಆಕರ್ಷಕ ಮುಖಭಾವ. ಆದರೆ ತಲೆ ಕೇಸರಗಳನ್ನು ಸೂಕ್ಷ್ಮವಾಗಿ ಕೆತ್ತಿರುತ್ತಾರೆ. ತೇರಿನ ಮುಂದೆ, ಹಿಂದೆ ಎರಡು ಭಾಗ ಒಂದೇ ತರಹದ ಭದ್ರ ಬುನಾದಿ ಚೌಕಾಕಾರದ ಬುನಾದಿಯ ಮೇಲೆ ಅಷ್ಟಕೋನ ಅಥವಾ ಷಟ್‌ಕೋನದಲ್ಲಿ ತೇರಿನ ಭಾಗ ಮೇಲೇಳುತ್ತದೆ. ಅಲ್ಲಲ್ಲಿ ಬರುವ ಚಿಕ್ಕ ಚಿಕ್ಕ ಸ್ಥಳಗಳನ್ನು ಸುಂದರ ಪ್ರಾಕೃತಿಕ ಅಲಂಕಾರಿಕ ರೂಪಗಳಾದ ಹೂವು, ಬಳ್ಳಿ, ದೇಟುಗಳಿಂದ ಅಲಂಕರಿಸಿದ ಉಬ್ಬು ಶಿಲ್ಪವನ್ನು ನಿರ್ಮಿಸಿರುತ್ತಾರೆ. ದೊಡ್ಡ ಗಾತ್ರದ ಸ್ಥಳಾವಕಾಶದಲ್ಲಿ ಗಣಪತಿ, ರಾಮಾಯಣ, ಮಹಾಭಾರತ ದೇವಿಯರ ಶಿಲ್ಪಗಳನ್ನು ಹಾಗೂ ಕಾಲ್ಪನಿಕ ಪ್ರಾಣಿಗಳ ಉಬ್ಬು ಶಿಲ್ಪಗಳನ್ನು ಮಾಡಿರುತ್ತಾರೆ. ಸುಂದರ ಗಾತ್ರದ ಕಂಬಗಳು ರಥದ ಭದ್ರತೆ ಹಾಗೂ ಅಲಂಕಾರಕ್ಕೆ ಉಪಯೋಗವಾಗಿವೆ. ಕೆಲ ತೇರುಗಳ ಮೇಲೆ ಹೆಣ್ಣು ಹಾಗೂ ಗಂಡು ವಾನರ ಗೊಂಬೆಗಳನ್ನು ವಿವಸ್ತ್ರವಾಗಿ ಕುಳ್ಳಿರಿಸುವುದು ತೋರುತ್ತದೆ. ರಥಕ್ಕೆ ಮರ್ತ್ಯರ ದೃಷ್ಟಿ ಬೀಳದಿರಲೆಂದು ಹಾಗೂ ಕಾಮದ ಬಗ್ಗೆ ಇರುವ ಗೌಪ್ಯ ಮಾಯಾಜಾಲವನ್ನು ಬೇಧಿಸಲು ಕೆತ್ತಿರುತ್ತಾರೆ. ಇವುಗಳ ಮೇಲೆ ಕಂಬಗಳು, ಆ ಕಂಬಗಳ ಮೇಲೆ ಮಂಟಪ,ಮಂಟಪದಲ್ಲಿ ಉತ್ಸವ ಮೂರ್ತಿ ಹಾಗೂ ಅರ್ಚಕರು ಕೂಡ್ರುತ್ತಾರೆ. ಮೇಲ್ಗಡೆಗೆ ಬಣ್ಣ ಬಣ್ಣದ ಪತಾಕೆಗಳನ್ನು ವೃತ್ತಾಕಾರಗಳಲ್ಲಿ ಹೆಣೆದು ಮಧ್ಯದಲ್ಲಿರುವ ಸ್ಪಟಿಕದ ಶಲಾಕೆಗೆ ತಾಮ್ರ, ಹಿತ್ತಾಳೆ ಅಥವಾ ಪಂಚಲೋಹದ ಕಳಸವನ್ನು ಕೂಡ್ರಿಸುತ್ತಾರೆ.

ಆಗಾಗ ಜಾತ್ರೆಯ ಸಂದರ್ಭಗಳಲ್ಲಿ ಪಾರದರ್ಶಕ ಎಣ್ಣೆಯನ್ನು ಲೇಪಿಸಿ ತೇರಿಗೆ ಹೊಳಪು ಬರುವ ಹಾಗೆ ಮಾಡುತ್ತಾರೆ. ಇಂತಹ ತೇರುಗಳನ್ನು ವಿಶ್ವಕರ್ಮ ವಂಶದವರು ಹಾಗೂ ಕಟ್ಟಿಗೆಯ ಕಲಾತ್ಮಕ ಕೆಲಸ ಮಾಡುವವರು ಪೂರ್ತಿ ಮನಸ್ಸಿನಿಂದ ಕೆಲಸ ಮಾಡಿ ನಿರ್ಮಿಸುತ್ತಾರೆ. ಪುಟ್ಟದೆಂದರೆ ೫೫ ಇಂಚು ಎತ್ತರದ್ದಾದರೆ, ಓಡಿಪಾದಪುರಿ ರಥಗಳು ಬೃಹತ್ ಆಗಿವೆ.

ಅಂತೆಯೇ 'ನೋಡೋಣ ಬಾ, ಬ್ರಹ್ಮ ಬಡಿಗ ಮಾಡಿದ ತೇರು, ನೋಡೋಣ ಬಾ' ಎಂಬ ಪದ್ಯಗಳು ಕೇಳಸಿಗುತ್ತವೆ. ಆದರೆ ಇತ್ತೀಚಿನ ತೇರುಗಳಲ್ಲಿ ಕಲಾತ್ಮಕ ಕೆಲಸ ಕಡಿಮೆ ಪ್ರಮಾಣದಲ್ಲಿ ಇರುತ್ತವೆ. ಮೊದಲಿನ ಕಲಾತ್ಮಕತೆ ಮುಂದುವರಿಸಿಕೊಂಡು ಹೋಗುವಲ್ಲಿ ಕೆಲವೊಬ್ಬರು ಪ್ರಯತ್ನಿಸುತ್ತಿದ್ದಾರೆ. 'ರಥಾರೂಢಂ ಪ್ರಭುಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೆ' ಅಂದರೆ ರಥವನ್ನೇರಿದ ಪ್ರಭುವನ್ನು ದರ್ಶನ ಮಾಡಿದವರಿಗೆ ಪುನರ್ಜನ್ಮವಿಲ್ಲ ಎಂದು ಪುರಾಣಗಳು ಹೇಳಿವೆ.

ಶಿಲೆಗಳಲ್ಲಿ ಒಡಮೂಡಿದ ದೇವರ ಮೂರ್ತಿಗಳು, ಕೆತ್ತಿ ನಿಲ್ಲಿಸಲ್ಪಟ್ಟ ಇತರ ಮೂರ್ತಿಗಳು

ಸಾಮಾನ್ಯ ಕಲ್ಲಿನಲ್ಲಿ ದೇವರ ಮೂರ್ತಿಗಳನ್ನು ಗುರುತಿಸಿ, ಅದನ್ನೊಂದು ಶಿಲ್ಪವನ್ನಾಗಿ ಪರಿವರ್ತಿಸಿ ಪೂಜಾವಿಧಿ ನಡೆದಿವೆ. ಆಸ್ತಿಕ ಭಾವನೆಗಳಿಗೆ ಬರವೆಂಬುದೇ ಇಲ್ಲ. ಒಂದು ದೊಡ್ಡ ಅಥವಾ ಚಿಕ್ಕ ಗಾತ್ರದ ಶಿಲೆಯಲ್ಲಿ ಯಾವುದಾದರೂ ಮೂರ್ತಿ ಭಾಸವಾದರೆ ಅಥವಾ ಹೊಳೆ, ಸಮುದ್ರಗಳಲ್ಲಿ ಸಿಗುವ ಆಧುನಿಕ ಶಿಲ್ಪಗಳಂತಿರುವ ಬಣ್ಣದ ಕಲ್ಲು, ಸಿಂಪೆ ಶಂಖಗಳನ್ನು ನೋಡಿ ಅವುಗಳಲ್ಲಿ ಆಧ್ಯಾತ್ಮಿಕ ಆನಂದಪಟ್ಟು ಒಂದು ಪ್ರಶಾಂತ ಸ್ಥಳದಲ್ಲಿ ಪ್ರತಿಷ್ಠಾಪಿಸಿ ಪೂಜಾ ಪ್ರಾರಂಭಿಸಿದ್ದಾನೆ. ಅದೇ ಒಡಮೂಡಿದ ಮೂರ್ತಿಗೆ ಭಕ್ತರ ಸಂಖ್ಯೆ ಹೆಚ್ಚಾಗಿ ತಮ್ಮ ಮನಸ್ಸಿನ ಬಯಕೆಗಳು ಪೂರ್ಣಗೊಂಡಾಗ ಬೆಳ್ಳಿಯ ಉಬ್ಬು ಶಿಲ್ಪದ ಆಭರಣಗಳನ್ನು ಮಾಡಿಸಿ ದೇವರಿಗೆ ಉಡಿಸಿ ಭಕ್ತಿಯನ್ನು ಅರ್ಪಿಸಿದ್ದಾರೆ.

ನಾಗರ ಅಮಾವಾಸ್ಯೆಗೆ ಪೂಜೆಗೊಳ್ಳಲಿರುವ ಜೋಡಿ ನಾಗಗಳು ಅಥವಾ ಒಂದೇ ನಾಗದ ಉಬ್ಬು ಶಿಲ್ಪ ಅಥವಾ ರೇಖಾಂಕಿತ ಶಿಲ್ಪಗಳು ಗಿಡದ ಕೆಳಗಿರುವ ಕಟ್ಟೆಗೆ ಬಹಳಷ್ಟು ಕಡೆ ಪ್ರತಿಷ್ಠಾಪಿಸಲ್ಪಟ್ಟಿವೆ.



ಮಂದಿರ ವಾಸ್ತುಶಿಲ್ಪದ ಮೇಲೆ ಮಿಥುನ ಹಾಗೂ ಉಬ್ಬು ಶಿಲ್ಪಗಳು ೬೧ಕೆಕೆ

ಕೆಲವು ಮಂದಿರದ ಅಕ್ಕ ಪಕ್ಕದಲ್ಲಿ ದ್ವಾರ ಬಾಗಿಲದ ಹತ್ತಿರ ನಗ್ನ ಸ್ತ್ರೀ, ಪುರುಷರು (ಮಿಥುನ) ಕಾಮಶಾಸ್ತ್ರದಲ್ಲಿ ತೊಡಗಿರುವಂತೆ ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತಿದ್ದಾರೆ. ಅದಲ್ಲದೆ ಪ್ರತಿಯೊಂದು ಮಂದಿರದ ಒಳಗಡೆ ಪ್ರವೇಶಿಸುವಾಗ ಆವಿ(ಕಲ್ಲಾವಿ, ನೀರಾವಿ)ಗಳನ್ನು ಇರಿಸಿರುತ್ತಾರೆ. ಇವುಗಳ ಉದ್ದೇಶ ಲೌಕಿಕ ಜಗತ್ತಿನ ಷಡ್‌ವರ್ಗಗಳನ್ನು ಅಳಿದು ಬನ್ನಿ ಉನ್ನತ ಶ್ರೇಣಿಯಲ್ಲಿ ಕಟ್ಟಿದ. ವಾಸ್ತುಶಿಲ್ಪಕ್ಕೆ ಮರ್ತ್ಯರ ದೃಷ್ಟಿಗಳಿಂದ ಏನು ಆಗಲೆಂದೋ, ಕಾಮದ ಗೌಪ್ಯವನ್ನು ಬೇಧಿಸಲು, ಮುಂತಾದ ಕಾರಣಗಳಿಂದ ಪೂರ್ವಜರು ನಿರ್ಮಿಸಿದ್ದಾರೆ.

ಕೆಲವು ಮಂದಿರದ ಅಕ್ಕ ಪಕ್ಕದಲ್ಲಿ ದ್ವಾರಪಾಲಕರು ಒಳ್ಳೆಯ ರೀತಿಯಿಂದ ನಿಂತಿರುವುದು, ಕಾಲ್ಪನಿಕ ಹಾಗೂ ಕುದುರೆ, ಆನೆಯ, ಮುಖದ ಶಿಲ್ಪ ಕಾಣಸಿಗುತ್ತದೆ. ಮಧ್ಯದಲ್ಲಿ ಕಾಲ್ಪನಿಕ ರೂಪಗಳ ಆರಾಧನೆ ಮಾಡುತ್ತಿರುವುದು ಕಂಡು ಬರುತ್ತಿದೆ. ಈ ದ್ವಾರಪಾಲಕರು ಭಕ್ತರನ್ನು ಸ್ವಾಗತಿಸಲು ರಕ್ಷಿಸಲು

ನಿಂತಂತೆ ಭಾಸವಾಗುತ್ತದೆ. "ಲಜ್ಜಗೌರಿ" ಎಂಬ ಮೂರ್ತಿಗಳು ಮೊದಲು ಕಾಡುಗಲ್ಲಿನಲ್ಲಿ ನಗ್ನ ಸ್ತ್ರೀ ರೂಪಕಂಡು ಅದನ್ನು ಪೂಜಿಸಿರಲುಬಹುದು. ಇದೇ ಮುಂದುವರಿದು ಶಿಷ್ಟ ಶಿಲ್ಪವಾಗಿ ಬ್ರಹತ್ ಕೃತಿಯಾಗಿದೆ. ಮಹಿಳೆಯರೂ ಕೂಡಾ ಕುಂಡಲಿನಿ ಯೋಗ ಸಾಧಕರಾಗಿದ್ದಾರೆ. ಮಹಿಳೆಯರಿಗೆ ನೈತಿಕತೆ ಅವಶ್ಯ ಎಂಬುದಾಗಿ ದಂತಕಥೆಗಳಿವೆ. ಇದರ ಸಂಕೇತವಾಗಿ 'ಲಜ್ಜಾಗೌರಿ' ಶಿಲ್ಪ ಇಂದಿಗೂ ಸಿದ್ದನಕೊಳ್ಳ, ಹುಲಿಗೆಮ್ಮನ ಕೊಳ್ಳ, ಮಹಾಕೂಟ ಮುಂತಾದವುಗಳಲ್ಲಿ ನೋಡಲು ಸಿಗುತ್ತವೆ.

ಬೆದರ ಗೊಂಬೆ – ನೆದರ ಗೊಂಬೆ

ಬೆಳೆದುನಿಂತ ಬೆಳೆಗಳ ಪೀಕಿನಲ್ಲಿ ಹೊಲಕಾಯುವ ರೈತನಿಗೆ ಸಂಗಾತಿಯಾಗಿ ಜನಪದ ಗೊಂಬೆ ನಿರ್ಮಾಣವಾಗುತ್ತದೆ. ಇದುವೇ ಬೆದರು ಗೊಂಬೆ. ಇದರ ಕೆಲಸ ಎಲ್ಲರನ್ನೂ ಬೆದರಿಸುವುದು. ಪ್ರಾಣಿ, ಪಕ್ಷಿಗಳಿಗೆ ಹಾಗೂ ರಾತ್ರಿ ಕದಿಯ ಬೇಕೆಂದು ಬರುವ ಕಳ್ಳರಿಗೆ ಹೆದರಿಸುವುದು, ಬಿಸಿಲಿನಲ್ಲಿ ತೊಂದರೆಯಾದರೆ ತನ್ನ ನೆರಳನ್ನು ರೈತನಿಗೆ ಕೊಡುವುದು ಮಾಡುತ್ತದೆ.

ಹೊಲದ ಬೆಳೆಗಳಲ್ಲಿ ಕಾಳು ತುಂಬುವ ಸಮಯದಲ್ಲಿ ರೈತ ಎರಡು ಕೋಲುಗಳನ್ನು ತಂದು ಬೆಳೆಗಳ ಮಧ್ಯದಲ್ಲಿ ಕೈಗಳನ್ನು ಅಗಲ ಮಾಡಿಕೊಂಡು ನಿಂತ ಒಬ್ಬ ವ್ಯಕ್ತಿಯಾಗಿ ಕಾಣುವಂತೆ ಕೋಲುಗಳನ್ನು ಕಟ್ಟುತ್ತಾನೆ. ಅದಕ್ಕೆ ಹಳೆಯ ಅಂಗಿಗಳನ್ನು ಹಾಕಿ ತಲೆಯ ಒಂದು ಭಾಗಕ್ಕೆ ಒಂದು ಗಡಿಗೆ ತೆಗೆದುಕೊಂಡು ಅದರ ಮೇಲೆ ಸುಣ್ಣದಿಂದ ಕಣ್ಣು, ಮೂಗು, ಮೀಸೆಗಳನ್ನು ಚಿತ್ರ ಬರೆದು ಅದನ್ನು ಮೇಲ್ಗಡೆಗೆ ಸಿಕ್ಕಿಸುತ್ತಾರೆ. ಈ ಗೊಂಬೆ ಯಾರಿಗೂ ಏನನ್ನೂ ಹಾನಿ ಮಾಡದೆ ಲಾಭ ಮಾಡಿಕೊಟ್ಟು ಸುಗ್ಗಿ ಮುಗಿದ ನಂತರ ಮಾಯವಾಗಿ ಮತ್ತೆ ಸುಗ್ಗಿಗೆ ಹುಟ್ಟುತ್ತದೆ.

ದೊಡ್ಡ ಪ್ರಮಾಣದ ವಾಸ್ತುಶಿಲ್ಪ, ಮಠ ಮಂದಿರಗಳ ಕಟ್ಟಡ ನಡೆದಿರುವಾಗಲೆ ಅದರ ಹೊಸ ಸೌಂದರ್ಯಕ್ಕೆ ಕೆಟ್ಟ ದೃಷ್ಟಿ ಉಳ್ಳವರು ನೋಡಿ ಅಸೂಯೆ ಪಟ್ಟು ತಮ್ಮ ದೃಷ್ಟಿಯಿಂದ ಕಟ್ಟಡ ಘಾಸಿ ಗೊಳಿಸದಿರಲಿ ಎಂದು ಈ ನೆದರ ಗೊಂಬೆ ಕಟ್ಟುತ್ತಾರೆ.


ಕರೆ ಬಟ್ಟೆಯಿಂದ ಒಬ್ಬ ಪುರುಷನ ವಿಕಾರ ರೂಪದ ಎರಡು ಅರಿವೆಗಳನ್ನು ಕತ್ತರಿಸಿ ಚೀಲ ಹೊಲಿದಂತೆ ಹೊಲಿದು ಗೊಂಬೆ ನಿರ್ಮಾಣ ಮಾಡುತ್ತಾರೆ. ಈ ಗೊಂಬೆಗೆ ತಲೆಗೆ ದಾರ ಕಟ್ಟಿ ನೆದರೆಲ್ಲಾ ಈ ಗೊಂಬೆಗೆ ಹತ್ತಲೆಂದು, ಶಿಲ್ಪ(ಕಟ್ಟಡ) ಸುರಕ್ಷಿತವಾಗಿರಲೆಂಬ ನಂಬಿಕೆಯಿಂದ ನೆದರ ಗೊಂಬೆಯನ್ನು ಕಟ್ಟುತ್ತಾರೆ.

ವೆಂಕಟೇಶ ದೇವರ ದಸರಾ ಉತ್ಸವದ ಜನಪದ ವಾಹನಗಳು



ವೆಂಕಟೇಶ ದೇವರ ದಸರಾ ಉತ್ಸವದ ಜಾನಪದ ಸವಾರಿ ಶಿಲ್ಪಗಳು

ವೆಂಕಟೇಶ ಮಂದಿರದಲ್ಲಿ ಪ್ರತಿವರ್ಷ ಆಶ್ವೀಜ ಶುದ್ಧ ಪ್ರತಿಪದದಿಂದ ವಿಜಯ ದಶಮಿವರೆಗೆ ಶ್ರೀನಿವಾಸ ಕಲ್ಯಾಣೋತ್ಸವ ನಡೆದಿರುತ್ತದೆ. ಈ ಒಂಭತ್ತು ದಿವಸಗಳ ಉತ್ಸವಕ್ಕೆ ಜನಪದ ಗೊಂಬೆಗಳೆ ವಾಹನಗಳಾಗಿ ಮೆರಗು ಕೊಡುತ್ತವೆ.



ವಾಹನಗಳಕೂಡಲ ಸಂಗಮದ ಐತಿಹಾಸಿಕ ಸಂಗಮನಾಥನ ರಥೋತ್ಸವವು ಸಕಲ ವಾದ್ಯ ಮೇಳಗಳೊಂದಿಗೆ

ಒಂದು ಕಟ್ಟಿಗೆಯ ಪ್ರಭಾವಳಿ ಅದರ ಮಧ್ಯದಲ್ಲಿ ಸಿಂಹದ ಮುಖದ ಅಲಂಕಾರಿಕ ರೂಪ, ಅಕ್ಕ ಪಕ್ಕದಲ್ಲಿ ಹೂಬಳ್ಳಿಯ ಅಲಂಕಾರಿಕ ರೂಪಗಳನ್ನು ಕೆತ್ತಿ ಬಣ್ಣಗಳಿಂದ ಅಲಂಕರಿಸುತ್ತಾರೆ. ಅದರ ಮಧ್ಯದಲ್ಲಿ ಉತ್ಸವದ ಮೂರ್ತಿಗಳಾದ ವೆಂಕಟೇಶ, ಶ್ರೀದೇವಿ, ಭೂದೇವಿಯ ಪಂಚಲೋಹದ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುತ್ತಾರೆ. ಈ ಮೂರ್ತಿಗಳ ಕೆಳಗಡೆಯೇ ಈ ಕಟ್ಟಿಗೆಯ ವಾಹನಗಳನ್ನು ನಿಲ್ಲಿಸಲು ಸ್ಥಳವಿರುತ್ತದೆ. ಪ್ರತಿ ದಿವಸ ಗೋಧೂಳಿ ಮುಹೂರ್ತಕ್ಕೆ ಒಂದೊಂದು ವಾಹನದ ಮೇಲೆ ಉತ್ಸವ ಮೂರ್ತಿಯ ಮೆರವಣಿಗೆಯಾಗುತ್ತದೆ. ಹತ್ತನೆಯ ದಿವಸ ವಿಜಯದಶಮಿಯಂದು ರಥೋತ್ಸವ ಮುಂಜಾನೆ ಮುಹೂರ್ತಕ್ಕೆ ನೆರವೇರುತ್ತದೆ.

ವಾಹನಗಳು ಜಾನಪದ ಶೈಲಿಯಲ್ಲಿ ಮಾಡಲ್ಪಟ್ಟಿವೆ. ಕ್ರಮವಾಗಿ ಸೂರ್ಯ, ಚಂದ್ರ, ಆನೆ, ಸಿಂಹ, ನವಿಲು, ಗರುಡ, ಹನುಮ, ಶೇಷ, ಅಶ್ವ, ಎಲ್ಲವುಗಳನ್ನು ಸುಂದರವಾಗಿ ತೈಲಬಣ್ಣದಿಂದ ಅಲಂಕರಿಸುತ್ತಾರೆ. ಆ ಗೊಂಬೆಯನ್ನು ಒಂದು ಅಖಂಡ ಕಟ್ಟಿಗೆಯಲ್ಲಿ ಕೆತ್ತಿ ಮಾಡಿದ್ದು. ಭದ್ರವಾದ ತಳಪಾಯಗಳಿವೆ.

ಈ ಗೊಂಬೆಗಳು ಉತ್ಸವದ ಅಲಂಕಾರವನ್ನು ಹೆಚ್ಚಿಸುತ್ತವೆ. ಜನಪದ ಕಲಾವಿದ ಪ್ರತಿ ಗೊಂಬೆಗೆ ತನ್ನ ಕಲ್ಪನಾಶಕ್ತಿಯಿಂದ, ಹೊಸರೂಪವನ್ನು ಕೊಟ್ಟಿದ್ದಾನೆ. ಕಟ್ಟಿಗೆಯಲ್ಲಿ ಸೂಕ್ಷ್ಮವಾಗಿ ಕೆತ್ತುತ್ತಾರೆ. ಮೊದಲು ತಾವೇ ತಯಾರಿಸಿದ ಬಣ್ಣಗಳನ್ನು ಹಚ್ಚುತ್ತಿದ್ದರು. ಈಗ ಲಭ್ಯವಿರುವ ತೈಲ ಬಣ್ಣವನ್ನು ಲೇಪಿಸುತ್ತಾರೆ. ಈ ಉತ್ಸವದ ಕಲಾವೈಭವ ಆಸ್ಥಾನಿಕ ಆಶ್ರಯದಲ್ಲಿ ಬೆಳಗುತ್ತಿದ್ದವು. ಈಗ ಈ ಗೊಂಬೆಗಳು ಉತ್ಸವ ಮುಗಿದ ನಂತರ ಬಾದಾಮಿಯ ಶ್ರೀ ನರಸಿಂಹ ರಾವ ಕಾರಕೂನ ಎಂಬವರಲ್ಲಿ ಸುರಕ್ಷಿತವಾಗಿರುತ್ತವೆ. ಈ ಉತ್ಸವ ಬಾದಾಮಿ ತಾಲ್ಲೂಕಿನ ಗುಳೇದಗುಡ್ಡದ ವೆಂಕಟೇಶ ದೇವಸ್ಥಾನದಲ್ಲಿ ನಡೆಯುತ್ತದೆ. ಬಾಗಲಕೋಟೆ, ಗದಗ, ನರಗುಂದ, ರಾಮದುರ್ಗ ಮುಂತಾದವುಗಳಲ್ಲಿಯೂ ಇಂತಹ ಉತ್ಸವ ನಡೆಯುತ್ತದೆ.

ಆಣೀ ಪಾಣೀ ಆರತಿ ದೀಪ

ದನಕಾಯುವ ಯುವಕರು ದೀಪಾವಳಿಯ ಪಾಡ್ಯ ಹಬ್ಬದಲ್ಲಿ ದನಗಳ ಹಾಗೂ ದನದ ಕೊಟ್ಟಿಗೆಗೆ ಬೆಳಗುವ ಆರತಿಯ, ಒಂದು ಸುಂದರ ಜನಪದ ಶಿಲ್ಪವಾಗಿದೆ.

ಈ ಜನಪದ ಶಿಲ್ಪವನ್ನು ಗಣಜಿಗೆ ಹುಲ್ಲು. ಆಪು, ಹಸಿರು ಚೆಕ್‌ಗಳಿಂದ ವಿಶಿಷ್ಟವಾದ 'ಆಣೀಪಾಣೀ' ದೀಪ ಎಂಬ ಆರತಿಯನ್ನು ಹೆಣೆದು ತಯಾರಿಸುತ್ತಾರೆ. ಇದರ ಮಧ್ಯದಲ್ಲಿ ಎಣ್ಣೆಯ ಹಣತೆಯನ್ನು ಇಟ್ಟು ಎಣ್ಣೆ ಬತ್ತಿ ಹಾಕಿ ದೀಪ ಹಚ್ಚಿದಾಗ ಆ ಶಿಲ್ಪದ ವರ್ಣವಿನ್ಯಾಸ ಸೌಂದರ್ಯ ನೋಡುವ ಹಾಗೆ ಇರುತ್ತದೆ.

ಆ ಅಮಾವಾಸ್ಯೆಯ ಸಂಜೆಯ ಕಾರ್ಗತ್ತಲಲ್ಲಿ ವಳ್ಳಣ್ಣೆ ದೀಪದ ಬೆಳಕು ನಾಗರ ಹೆಡೆಯಂತೆ ನಿರ್ಮಿತಗೊಂಡ ಅ ಆರತಿಯ ಗೂಡು ಆ ಗೂಡಿನ ಮುಂಭಾಗದಿಂದ ಬರುವ ಸುವರ್ಣದ ಪ್ರಖರ ಬೆಳಕು ಅದರ ಹಿಂಭಾಗದ ಹಸಿರು ಮಿಶ್ರಿತ ಬಣ್ಣ ನೋಡಲು ಆನಂದವೆನಿಸುತ್ತದೆ.

ಆರತಿ ತೆಗೆದುಕೊಂಡು ಹುಡುಗರು ದನಕರುಗಳು ಇರುವ ಮನೆಗಳಿಗೆ ಬಂದು ಮನೆಯೊಡತಿ, ಒಡೆಯನಿಂದ ಆ ಆರತಿಗೆ ಎಣ್ಣೆ ಹಾಕಿಸಿಕೊಂಡು ದನಕರುಗಳ ಆರೋಗ್ಯಕ್ಕಾಗಿ ಮಾಡುವ ಆರತಿ ಹಾಗೂ ಪ್ರಾರ್ಥಿಸುವ ಪ್ರಾರ್ಥನೆ ಕೇಳುವ ಹಾಗೆ ಇರುತ್ತದೆ. ನಾವು ಕೊಟ್ಟ ತೊಂದರೆಗಳಿಂದ ಮೂಕ ಪ್ರಾಣಿಗಳು ಏನಾದರೂ ಆಣಿ ಪಾಣಿ ಇಟ್ಟಿದ್ದರೆ ಕ್ಷಮಾಪಣೆಯೂ ಇದಾಗಿರಬಹುದು.

ಆಕಳ ಆಕಳ ಈದಿರಬೇಕು
ಆಕಳ ಗಿಣ್ಣಾ ಕಾಸಿರಬೇಕು
ಸರಕ್ಕ ಬರಕ್ಕ ಸರದಿರಬೇಕು
ಅತ್ತೀ ಬಂದು ಬೈದಿರಬೇಕು
ಮಾವನ ಮ್ಯಾಗ ಹೊರಸಿರಬೇಕು
ಆಣೀ ಪಿಣೀ ಚಾಣಿಗಳು...
ನಮ್ಮ ಆಕಳ ಹಿಂಡಾ ಹೊಳಿ ಅಟ್ಟಿಕೋ...

ಎಂದು ಹಾಡುತ್ತಾ ಮನೆಮನೆಗೆ ಆ ಸುಂದರವಾದ ಜನಪದ ಶಿಲ್ಪದ ಆರತಿಯನ್ನು ಕೈಯಲ್ಲಿ ಹಿಡಿದು ತಿರುಗುವ ದನಗಾಯರನ್ನು ನೋಡಿದಾಗ ನಮ್ಮ ಸಮುದಾಯಜೀವನದಲ್ಲಿ ಈ ಜನಪದ ಶಿಲ್ಪ ಸೌಂದರ್ಯಕ್ಕೆ ಕಳೆಕಟ್ಟುತ್ತದೆ.

ಗುರುಜಿ – ಗುರಜಿ:– ಗುರುಜಿ ಎಂಬ ಜಾನಪದ ಶಿಲ್ಪ ಉತ್ತರ ಕರ್ನಾಟಕದಲ್ಲಿ ಮುಂಗಾರು ಮಳೆ ಕೈಕೊಡುವ ಸಂಭವ ಮೂಡಿದಾಗ ಹೊರ ಬರುವ ಈ ಜಾನಪದ ಶಿಲ್ಪ ಎರೆ ಮಣ್ಣಿನಿಂದ ಒಂದು ದುಂಡನ್ನು ಮಾಡಿ ಆ ರೊಜ್ಜಿನ ದುಂಡನ್ನು ಒಂದು ಹಂಚಿನ ಅಂದರೆ ರೊಟ್ಟಿ ಬೇಯಿಸುವ ಕಬ್ಬಿಣದ ಪಾತ್ರೀಯ ಹಿಂಬದಿಗೆ ಮಧ್ಯದಲ್ಲಿಟ್ಟು ಆ ಹಸಿ ಮಣ್ಣಿನಲ್ಲಿ ಹಸಿರು ಹುಲ್ಲನ್ನು ಚುಚ್ಚಿಕೊಂಡು ಆ ಹಂಚನ್ನು ತಲೆಯ ಮೇಲಿಟ್ಟುಕೊಂಡು, ರೈತಾಪಿ ಮನೆತನದ ಪುಟ್ಟ ಪುಟ್ಟ ಬಾಲಕ ಬಾಲಕಿಯರು ಅಲ್ಪಸ್ವಲ್ಪ ಬಟ್ಟೆ ಹಾಕಿಕೊಂಡು ಬರೀ ಮೈಮೇಲೆ ಮನೆಮನೆ ಮುಂದೆ ತಿರುಗಾಡುವಾಗ ಪ್ರಕೃತ ಎಲ್ಲ ಅಲ್ಪಸ್ವಲ್ಪ ತಂಪಾಗಿ ಕಾರ್ಮೋಡಗಳು ಮುತ್ತುವ ಸ್ಥಿತಿ. ಆದರೆ ಮಳೆ ಭೂಮಿಗೆ ಸುರಿಯುತ್ತಿರಲಾರದ ಗಂಭೀರ ಸಂದರ್ಭದಲ್ಲಿ ಈ ಗುರುಜಿ ಎಂಬ ಜಾನಪದ ಶಿಲ್ಪ ಮಳೆರಾಯನನ್ನು ಆಹ್ವಾನಿಸುತ್ತ, ಪ್ರಾರ್ಥಿಸುತ್ತ, ಮನೆಮನೆಯ ಎದುರುಗಡೆ ಬಂದಾಗ ಆ ಮನೆಯವರು ಆ ಗುರುಜಿ ಮೂರ್ತಿಗೆ ತಂಬಿಗೆಯಿಂದ ನಿಧಾನವಾಗಿ ನೀರು ಸುರಿಯುವಾಗ ಆ ಮೂರ್ತಿ ಹೊತ್ತ ಪುಟ್ಟ ಪಾಪು ಸುತ್ತ ತಿರುಗುತ್ತಿರುವಾಗ ಆ ಹಂಚಿನ ಸುತ್ತಲೂ ಹಾರಿ ಬೀಳುವ ನೀರು ಹನಿಗಳ ಕೃತ್ರಿಮ ಮಳೆಯಂತೆ ಮುತ್ತುಗಳು ಧರೆಗೆ ಬೀಳುವಂತೆ ಗೋಚರಿಸುತ್ತವೆ. ಆ ಮಕ್ಕಳು ಒಂದು ಜಾನಪದ ಹಾಡು ಹೇಳುತ್ತ ಮಳೆರಾಯನನ್ನು ಕರೆಯುತ್ತಾರೆ. ಆ ಜಾನಪದ ಹಾಡು ಇಲ್ಲಿದೆ:

'ಗುರುಜಿ, ಗುರುಜಿ, ಎಲ್ಯೋಡಿ ಬಂದಿ,
ಹಳ್ಳ ಕೊಳ್ಳ ಹರಿದ್ಯಾಡಿ ಬಂದಿ, ಕಾರ ಮಳಿಯೇ
ಕಪತ ಮಳಿಯೇ, ಬೇಗನೆ ಬಾ, ಸುರಿ ಮಳಿಯೇ,
ಬಣ್ಣ ಕೊಡ್ತೀನಿ, ಬಾರಲೆ ಮಳೆಯೇ, ಸುಣ್ಣ ಕೊಡ್ತನಿ,
ಸುರಿಯಲೇ ಮಳೆಯೇ, ಬೇಗನೇ ಬಾ ಸುರಿ ಮಳೆಯೇ'

ಎಂದು ಹಾಡುತ್ತಾ ಮನೆ ಮನೆಯಿಂದ ಆಹಾರ ಧಾನ್ಯ ಸಂಗ್ರಹಿಸಿ ಮಳೆರಾಯನನ್ನು ಪ್ರಾರ್ಥಿಸಿ ಅನ್ನ ಸಂತರ್ಪಣೆ ಏರ್ಪಡಿಸಿ ಆಕಾಶವನ್ನೇ ನೋಡುತ್ತಿರುವ ರೈತರಿಗೆ ಆನಂದವಾಗದೇ ಇರಲಾರದು.

ನಿತ್ಯೋಪಯೋಗಿ ಜನಪದ ಶಿಲ್ಪಗಳು:

ಕೃಷಿ ಪ್ರಧಾನವಾದ ನಮ್ಮ ನಾಡಿನಲ್ಲಿ ರೈತ ತನ್ನ ವಾಹನ ಚಕ್ಕಡಿ(ಬಂಡಿ)ಯನ್ನು ಕಟ್ಟಿಗೆಯ ಕೆಲಸ ಮಾಡುವ ಬಡಿಗನಿಂದ ಸುಂದರವಾಗಿ ನಿರ್ಮಿಸಿಕೊಳ್ಳುತ್ತಾನೆ. ಬಂಡಿಯ ನೊಗ ಹಾಗೂ ತೊಟ್ಟಿಲು ಭಾಗದಲ್ಲಿ ಜಾನಪದ ಶೈಲಿಯ ಕೆತ್ತನೆಯ ಕಾರ್ಯಗಳು ಕಾಣಸಿಗುತ್ತವೆ. ಇದರ ಜೊತೆಗೆ ಸದಾ ಇರುವ ಬಾರಕೋಲು ಗುಣಿ,ಕುಂಟಿ, ರಂಟಿಗೂ ಕೂಡ ತಕ್ಕಮಟ್ಟಿಗೆ ಕೆತ್ತನೆ ಕಾರ್ಯ ನಡೆದಿರುತ್ತದೆ.

ಬೇಸಿಗೆಯಲ್ಲಿ ಅವನ ಬಾಯಾರಿಕೆಯನ್ನು ನೀಗಿಸಲು ತತ್ರಾಣಿ ಎಂಬ ಮಣ್ಣಿನ ಒಂದು ವಿಶೇಷ ಗಾತ್ರದ ಪಾತ್ರೆಯನ್ನು ಕುಂಬಾರರು ತಯಾರುಮಾಡುತ್ತಾರೆ. ಆ ಪಾತ್ರೆಗೆ ಚಿಕ್ಕದಾದ ಬಾಯಿ, ಹಿಚುಕಿದ ಕುತ್ತಿಗೆ, ಅದರ ಕ್ಷೇತ್ರಕ್ಕೆ ಹಗ್ಗ ಕಟ್ಟಿ ಹೆಗಲಿಗೇರಿಸಲಿಕ್ಕೆ ಬರುವಂತೆ ಜಾನಪದೀಯ ಶೈಲಿಯ ಪಾತ್ರೆ ನೋಡುಗರನ್ನು ಮುಜುಗರಕ್ಕೆ ಹಾಕುತ್ತದೆ.

ಹರಿವೆ, ಹರಿವಾಣ, ಪರ್ಯಾಣ, ಮುಚ್ಚಳ, ಒಲೆ, ಕುಡಿಕೆ, ಮಡಿಕೆ, ಮುಡುಪು ತೆಗೆಯುವ ಕುಡಿಕೆ, ಮುಂತಾದವುಗಳ ನಿತ್ಯೋಪಯೋಗಿ ಶಿಲ್ಪಗಳಾಗಿವೆ. ತಿಗರಿಗೆ ಹಾಕಿ ತೆಗೆದ ಹರಿವಾಣ ಸ್ವಾರಿಗಳ ಮೇಲೆ ಬೆರಳಿನ ಉಗುರಿನ ಗೀರುಗಳಿಂದ ಮೂಡಿಸಿದ ಆಕರ್ಷಕ ಗೆರೆಗಳು ಶತಶತಮಾನಗಳು ಗತಿಸಿದರೂ ತನ್ನ ಅಲಂಕಾರವನ್ನು ತೋರಿಸುತ್ತ ಬಿದ್ದಿರುತ್ತದೆ. ಈ ಭಾರತೀಯ ಬಡವನ ಜೀವನದ ಸಂಗಾತಿಗಳು ಕಡಿಮೆ ಖರ್ಚಿನಲ್ಲಿ ನಿರ್ಮಾಣವಾಗುವ ಈ ವಸ್ತುಗಳು ತಮ್ಮ ತಮ್ಮ ಕಣ ಕಣಗಳನ್ನೂ ನಮಗಾಗಿ ಅರ್ಪಿಸಿವೆ.

ಸಾಲಿಗ್ರಾಮಗಳು:-

ಮಠ ಮಂದಿರ ಹಾಗೂ ಮನೆ ಮಹಲುಗಳಲ್ಲಿ ಪ್ರಕೃತಿಯ ಹೊಳೆ ಹಳ್ಳಗಳಲ್ಲಿ ನೀರಿನ ಪ್ರಾವಾಹದಿಂದಲೋ ಶಿಲಾಪಾಕ ಘನೀಭವಿಸಿ ಹೊರಹೊಮ್ಮುವುದರಿಂದಲೂ ನಿರ್ಮಾಣಗೊಂಡ ನುಣುಪಾದ ಕಲ್ಲುಗಳಿಗೆ ಸಾಲಿಗ್ರಾಮ ಎನ್ನುವರು. ಇದು ನೋಡುವುದಕ್ಕೆ ಸುಂದರವಾಗಿದ್ದು ಇದರ ಗಾತ್ರ ದೊಡ್ಡದು, ಚಿಕ್ಕದು ಇರುತ್ತದೆ. ಬಣ್ಣ ಕಪ್ಪು, ನೇರಳೆ, ಕಂದು, ಅಚ್ಚ ಹಸಿರು. ಒಟ್ಟಿನಲ್ಲಿ ಕಪ್ಪುಛಾಯೆಯನ್ನು ಹೊಂದಿರುತ್ತದೆ. ಇದನ್ನು ದೇವರ ಪ್ರತಿರೂಪವೆಂದು, ಶ್ರೀ ಕೃಷ್ಣ ಬಾಲ್ಯಾವಸ್ಥೆ


ಎಂದೂ, ಹತ್ತು ಸಾಲಿಗ್ರಾಮಗಳನ್ನು ವಿಷ್ಣುವಿನ ಹತ್ತು ಅವತಾರಗಳೆಂದೂ, ಆ ಸಾಲಿಗ್ರಾಮಗಳಿಗೆ, ಕಲ್ಲುಗಳನ್ನು ಬೇರೆ ಹಚ್ಚಿ, ಅದಕ್ಕೆ ಕೆಂಪು, ಕೇಸರಿ, ಬಿಳಿ ತಿಲಕ ಹಚ್ಚಿ ನೋಡಿ ಆನಂದಿಸಿ ಅಲೌಕಿಕ ಆನಂದವನ್ನು ಪಡೆಯುತ್ತಾನೆ ಮಾನವ. ಅದರ ಮೇಲಿರುವ ಹೊಳಪುಳ್ಳ ಚುಕ್ಕೆಯನ್ನು ಏಕ ಚಿತ್ತದಿಂದ ನೋಡಿ ಲೌಕಿಕ ಜಂಜಾಟಗಳಿಂದ ಹೊರಹೋಗಿ ಮನೋನಿಗ್ರಹ ಪಡೆದು ಆತ್ಮ ಶಾಂತಿ ಪಡೆಯುವಲ್ಲಿ ಈ ಜನಪದ ಶಿಲ್ಪಗಳು ಬಹಳ ಸಹಾಯಕಾರಿಗಳಾಗಿವೆ. ಶಿವ ಧರ್ಮದ ಲಿಂಗ ಪೂಜೆಯೂ ಕೂಡ, ಗುಂಡಗಡಿಯಲ್ಲಿರುವ ಲಿಂಗವೂ ಕೂಡಾ ಅಲೌಕಿಕ ಜಗತ್ತಿನ ದಾರಿ ತೋರುವ ಜನಪದ ಶಿಲ್ಪವೇ ಆಗಿದೆ.

ನವಗ್ರಹ ಶಾಂತಿ ಚಕ್ರ (ಹುಚ್ಚಯ್ಯ):-

ಹೆಚ್ಚಾಗಿ ಪ್ರತಿ ಜಾತ್ರೆಯ ತೇರುಗಳ ಮುಂದೆ ಮುಂದೆ ಸಾಗುವ ಚಿತ್ರಗಳಿಂದೊಡಗೂಡಿರುವ ಒಂದು ಕಟ್ಟಿಗೆಯ ಫಲಕ. ಇದು ಉದ್ದನೆಯ ಆಯತಾಕಾರದ ಮೇಲೆ ಒಂದು ಅರ್ಧವರ್ತುಳ ಹಾಕಿದಂತೆ ಇರುತ್ತದೆ. ಅದರ ನಟ್ಟ ನಡುವೆ ಒಂದು ಕಳಸ, ಅಕ್ಕ ಪಕ್ಕಕ್ಕೆ ಮೂರು ಮೂರು ಗೋಡಂಬಿ ಆಕಾರದ ಸುಂದರ ಮೂರ್ತಿಗಳು ಇರುತ್ತದೆ. ಈ ಚಿತ್ರ ಫಲಕವನ್ನು ಒಂದು ಎತ್ತಿನ ಗಾಡಿಯ ಮೇಲೆ ಕಟ್ಟಿರುತ್ತಾರೆ. ಚಿತ್ರ ಫಲಕಗಳಲ್ಲಿ ಮಧ್ಯದಲ್ಲಿ ಸೂರ್ಯನ ಚಿತ್ರ ಇದೆ. [illegible]ವೆ ರವಿ. ಇದರ ಅಕ್ಕ ಪಕ್ಕ, ಮೇಲೆ ಕೆಳಗೆ ಇನ್ನುಳಿದ ಎರಡು ಗ್ರಹಗಳ ಚಿತ್ರಗಳು ಜನಪದ ಶೈಲಿಯಲ್ಲಿರುತ್ತದೆ. ಇದು ಅ ದಿವ್ಯ ಶಕ್ತಿಯ ಸುತ್ತಲೂ ಗ್ರಹಗಳು ಚಲಿಸುತ್ತಿರುವುದರ ಸಂಕೇತವೂ ಹಾಗೂ ಗ್ರಹಗಳ ಶಾಂತಿ ಇರಲೆಂದೂ ಪ್ರಾರ್ಥಿಸುವ ಪೂಜಾ ಫಲಕವೂ ಆಗಿದೆ. ಜಾತ್ರೆಯ ಮುನ್ನಾದಿನ ಜಾತ್ರೆಯ ತೇರಿನ ಪಥವನ್ನು ಸುಗಮಗೊಳಿಸುವ ಸೈನಿಕಗಂಟೆ ಕೆಲಸವನ್ನು ಇದು ನಿಭಾಯಿಸುತ್ತದೆ.

ದೆವ್ವಗಾಮ ಬೂದಿಗಾಮ

ಫಾಲ್ಗುಣ ಚೈತ್ರ ಮಾಸದಲ್ಲಿ ಬರುವ ಹೋಳಿ ಹುಣ್ಣಿಮೆಯಂದು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ವಿಶೇಷವಾದ ಜಾನಪದ ಬೃಹತ್ ಮೂರ್ತಿಯೊಂದು ಜನ್ಮ ತಾಳುತ್ತದೆ. ಇದು ರತಿ, ಮನ್ಮಥರ ಮೂರ್ತಿಯ ಹತ್ತಿರದಲ್ಲೇ ಕೂಟೆಗೆ ನಿಲ್ಲಿಸಿರುತ್ತಾರೆ.



ಬೂದಗಾಮಾ

ರತಿ ಕಾಮರ ಪೌರಾಣಿಕ ಹಿನ್ನೆಲೆಯಲ್ಲಿ ಶಿವನ ತಪೋಭಂಗ ಮಾಡಿರುವುದಕ್ಕೆ ಶಿವನ ಮೂರನೆಯ ಉರಿಗಣ್ಣಿನಿಂದ ದಹಿಸಿ ಹೋಗಿರುವುದು ತಿಳಿದುಬರುತ್ತದೆ. ಉತ್ತರ ಬಾರತದಲ್ಲಿ ಭಕ್ತ ಪ್ರಹ್ಲಾದನ ಭಕ್ತಿಯನ್ನು ತೋರಿಸುವುದಕ್ಕಾಗಿ ಪ್ರಹ್ಲಾದ ಹಾಗೂ ಅವನ ಅತ್ತಿ ಹೊಲಿಕಾಳ ಘಟನೆಯಿಂದ ತಿಳಿದು ಬರುತ್ತದೆ.

ರಾವಣನ ದೊಡ್ಡ ಮೂರ್ತಿಗಳನ್ನು ಮಾಡಿ ರಾಮನಿಂದ ಸುಡುವುದನ್ನು ನೋಡಿದರೆ ಈ ಕಾಮದಹನ ವಿಕೃತ ಕಾಮಿಗಳಿಗೆ ದಾರಿದೀಪವಾಗಿದೆ.

ರತಿ, ಮನ್ಮಥರ ಮೂರ್ತಿಗಳನ್ನು ಪ್ರತಿಷ್ಠಾಪಿಸಲ್ಪಟ್ಟಿರುವ ಕೂಟ ಅಥವಾ ಚೌಕಗಳ ಹತ್ತಿರವೇ ಒಂದು ಬೃಹತ್ ಜಾನಪದ ಮೂರ್ತಿಯೆಂದು ಗೋಚರಿಸುತ್ತದೆ. ಅದಕ್ಕೆ ಯಾವ ಬಟ್ಟೆಗಳನ್ನು ತೊಡಿಸಿರುವುದಿಲ್ಲ. ವಿವಸ್ತ್ರ ಮೂರ್ತಿ ಇದಾಗಿರುತ್ತದೆ. ಇದನ್ನು ಓಣಿ ಹುಡುಗರೆಲ್ಲ ಸೇರಿ ತೊಗರಿ ಕಟ್ಟಿಗೆ ಅಥವಾ ಕಣಿಕೆ, ತಟ್ಟು, ಗಡಿಗೆ, ಬಿದರಿನ ಗೋಲು ಮುಂತಾದ ಕಚ್ಚಾವಸ್ತುಗಳಿಂದ ನಿರ್ಮಿಸಿ ಆಯ ಕಟ್ಟಿನ ಸ್ಥಳದಲ್ಲಿ ನಿರ್ಮಿಸುತ್ತಾರೆ. ಸಾರ್ವಜನಿಕರು ಆ ಬೂದಿಗಾಮನ ಕಿಸಗಾಲುಗಳ ನಡುವೆಯೇ ಹಾದು ಹೋಗುವ ಹಾಗೆ ನಿಲ್ಲಿಸುತ್ತಾರೆ. ಈ ಮೂರ್ತಿ ಸಂಜೆಯಗುತ್ತಿದ್ದಂತೆ ನಿರ್ಮಾಣವಾಗಿ ರಾತ್ರಿ ಇವನಿಗೆ ಕಟ್ಟಿಗೆ, ಕುಳ್ಳು, ಏನೆಲ್ಲಾ ಒಟ್ಟಿ ಈ ಮೂರ್ತಿಗೆ ಬೆಂಕಿ ಹಚ್ಚುತ್ತಾರೆ.

ಈ ವಿಕೃತ ಮೂರ್ತಿ ಕುರಿತು ವಿಚಾರಿಸಿದಾಗ ಆ ಸುಂದರ ಕಾಮ ರತಿಯ ಜಾನಪದ ಕಟ್ಟಿಗೆಯ ಮೂರ್ತಿಗಳಿಗೆ ಕೆಟ್ಟ ದೃಷ್ಟಿಗಳು ತಾಗಿ ಹಾಳಾಗದಿರಲೆಂದು, ಇನ್ನೊಂದು ಅರ್ಥದಲ್ಲಿ ನೋಡಿದರೆ ಒಂದು ವೇಳೆ ಮನು ಪ್ರಾಕೃತಿ ಕಾಮಿಯಾದಲ್ಲಿ ಅವನು ಅತಿ ಬೇಗನೆ ದಹಿಸಿ (ಸುಟ್ಟು) ಹೋಗುತ್ತಾನೆ.. ವಿಕೃತ ಕಾಮಿಯಾಗಿ ಮನ ಬಂದಂತೆ ವರ್ತಿಸಿದರೆ ಅವನು ಮೊಟ್ಟ ಮೊದಲಿಗೆ ನೈತಿಕ ಬಲದಿಂದ ದಹಿಸಿಹೋಗುತ್ತಾನೆ. ಅಷ್ಟೇ ಅಲ್ಲ ಎಲ್ಲ ಜನರು ಸೇರಿ ಅವನನ್ನು ಇಲ್ಲದಂತಾಗಿಸುತ್ತಾರೆ ಎಂಬುದಕ್ಕೆ ಈ ನಗ್ನ ಮೂರ್ತಿ ಮಾಡಿ ದಹಿಸುವುದು ವಿಕೃತ ಕಾಮಿಯ ಸಂಹಾರದ ಸಂಕೇತವಾಗಿದೆ.

ಪ್ರತಿ ವರ್ಷವು ಹೋಳಿ ಹುಣ್ಣಿಮೆಗೆ ವಿಕೃತ ಕಾಮಿಗಳಿಗೆ ಒಳ್ಳೆಯ ದಾರಿ ತೋರಲು, ಏಡ್ಸ್ ರೋಗದಿಂದ ಪಾರಾಗಲು ಮಾಡುವ ಪ್ರಚಾರದ ಗೊಂಬೆಯಂತೆ ಉತ್ತರ ಕರ್ನಾಟಕದ ಕೆಲವು ಊರುಗಳಲ್ಲಿ ಈ ದೇವಗಾಮ ಬಂದು ಹೋಗುತ್ತಾನೆ.

ಪ್ರಸ್ತುತ ದೇವಗಾಮ ಜಾನಪದ ಶಿಲ್ಪವಾಗಿದ್ದು ಚಟುವಟಿಕೆ ಬಹುದಿನಗಳಿಂದ ನಡೆದು ಬಂದಿದೆ. ಇದು ಗುಳೇದಗುಡ್ಡದ ಹೊಸಪೇಟೆಯ ಶ್ರೀಸಾಲೇಶ್ವರ ಗುಡಿಯ ಪಕ್ಕದಲ್ಲಿ ೧೯೭೭ ರಲ್ಲಿ ನಿರ್ಮಿಸಲ್ಪಟ್ಟಿತ್ತು.

ಧಾತುವಿನ ತಗಡಿನಲ್ಲಿ ಮುಖಾ ಮಾಡಿಸುವುದು:



ಮುಕಾ ಮಾಡಿಸುವದು

ವಿಶ್ವ ಕರ್ಮ ಪಂಚಾಳರು ಕೆಲವೊಂದು ಜಾನಪದ ಶಿಲ್ಪಗಳನ್ನು ನಿರ್ಮಾಣ ಮಾಡುತ್ತಾರೆ. ಅಂದಾಜು ೧ ೧/೨ x ೨ ಇಂಚಿನ ಬೆಳ್ಳಿಯ ಹಾಗೂ ತಾಮ್ರದ ತಗಡಿನಲ್ಲಿ, ತೀರಿಕೊಂಡವರ ಜ್ಞಾಪಕಕ್ಕೆ ಹಾಗೂ ಅವರ ಪೂಜೆ ಮಾಡುವುದಕ್ಕಾಗಿ 'ದೇವರ ಮುಖಾ' ಎಂದು ಪಡಿಯಚ್ಚಿನ ಸಹಾಯದಿಂದ ಉಬ್ಬು ಶಿಲ್ಪಗಳನ್ನು ನಿರ್ಮಿಸುತ್ತಾರೆ.

ಈ ಉಬ್ಬು ಶಿಲ್ಪಗಳು ಆಯತಾಕಾರ ಹಾಗೂ ಮೇಲ್ಭಾಗ ಕೋನಿನ ಆಕಾರದಲ್ಲಿ ಮಾಡಿರುತ್ತಾರೆ. ಕುದುರೆಯ ಮೇಲೆ ಕುಳಿತ ಯೋಧನ ಉಬ್ಬುಶಿಲ್ಪ ಹಾಗೂ ಹಿತ್ತಾಳೆಯ ಎರಕ ಹೊಯ್ದಿರುವುದು, ನಿಂತ ದೇವರು, ಕುಳಿತ ದೇವಿ, ಕುದುರೆಯ ಮೇಲೆ ಛತ್ರಿ, ಆಕಳು, ಕರು, ಮುಂತಾದ ಶಿಲ್ಪಗಳನ್ನು ಮಾಡುತ್ತಾರೆ. ತೀರಿಕೊಂಡ ವ್ಯಕ್ತಿಯನ್ನು ಹದಿಮೂರನೆಯ ದಿವಸ ಕಾಲ್ಪನಿಕವಾಗಿ 'ದೈವದೊಳಗೆ ಹಾಕಿಕೊಳ್ಳುವದೆಂಬ' ಕಾರ್ಯಕ್ರಮ ಮಾಡಿ ಆ ಸ್ತ್ರೀ ಮೂರ್ತಿಯನ್ನು ಜಗಲಿಯ ಮೇಲಿಟ್ಟು ಪೂಜಾ ಮಾಡುತ್ತಾರೆ. ತೀರಿಕೊಂಡವರು ಸ್ತ್ರೀಯರಾಗಿದ್ದರೆ ಮೂರ್ತಿ, ಪುರುಷರಾಗಿದ್ದರೆ ಗಂಡು ದೇವರು ಮೂರ್ತಿಗಳನ್ನು ಮಾಡಿಸಿ ಇಟ್ಟು ಅವುಗಳನ್ನು ಪೂಜೆ ಮಡುತ್ತಾರೆ.

ಅಕಸ್ಮಾತ್ ಯಾವುದೇ ಪ್ರಾಣಿ, ಪಕ್ಷಿಯನ್ನು ಕೊಂದರೆ, ಕಾಗೆ ಮನೆಯೊಳಗೆ ಹೊಕ್ಕರೆ ಅದರ ಪಾಪದಿಂದ ಪರಿಹಾರ ಪಡೆಯಲು ಬೆಳ್ಳಿ, ಬಂಗಾರದ ಚಿಕ್ಕ ಜನಪದ ಶೈಲಿಯ ಉಬ್ಬು ಶಿಲ್ಪ ಮಾಡಿ ದಾನ ಮಾಡುವ ವಾಡಿಕೆ ಇದೆ. ಪ್ರಾಣಿಗಳ ಮೇಲೆ ದಯೆ ಇರಲಿ ಎಂಬ ಉದ್ದೇಶದಿಂದ ಹಾಗೂ ಪಾಪ ಪರಿಹಾರ ಮಾಡಲು ಈ ಮೂರ್ತಿಗಳು ಉಂಟಾಗುತ್ತವೆ.

ಪೂಜೆಯ ಮೂರ್ತಿಗಳಾದ ವೀರಭದ್ರ, ದೇವಿ, ಈಶ್ವರಲಿಂಗದ ಒಡಮೂಡಿದ ದೇವರುಗಳಿಗಾಗಿ ಕಣ್ಣು ಬಿಟ್ಟು ಕ್ವಾರಮೀಸೆ, ತಾಯತ, ಶಟಿಗೆವ್ವ ಮುಂತಾದವುಗಳನ್ನು ಪಡಿಯಚ್ಚಿನ ಸಹಾಯದಿಂದ ಮಾಡುತ್ತಾರೆ. ಮಗು ಹುಟ್ಟಿದ ಐದನೆ ದಿನ ಶೆಟಿಗೆವ್ವ ಪೂಜೆ ಮಡುತ್ತಾರೆ. ಆ ಚಿಕ್ಕ ಗಾತ್ರದ ಉಬ್ಬು ಶಿಲ್ಪವನ್ನು ತಂದು ಪೂಜೆ ಮಾಡಿ ಅದನ್ನು ದಾನವಾಗಿ ಕೊಡುತ್ತಾರೆ.

ಬಾದಾಮಿ ಭಾಗ ಜಗತ್ಪ್ರಸಿದ್ಧ ಕೈ ಮಗ್ಗದ ರೇಷ್ಮೆ ಖಣಗಳಿಗೆ ಎಷ್ಟು ಪ್ರಸಿದ್ಧವಾಗಿದೆಯೋ ಜನಪದ ಶಿಲ್ಪಕಲಾ ಸಂಪ್ರದಾಯ ಅಷ್ಟೇ ಪ್ರಸಿದ್ಧವಾಗಿದೆ. ಅನೇಕ ಜನಪದ ಶಿಲ್ಪಕಲೆಗಳು ಈ ಭಾಗದಲ್ಲಿ ನಡೆಯುವ ದೊಡ್ಡ ಜಾತ್ರೆಯಾದ ಬನಶಂಕರಿ ದೇವಿ ಜಾತ್ರೆಯಲ್ಲಿ ವಿನಿಮಯವಾಗಿ ಹಾಗೂ ಮಾರಾಟಕ್ಕೆ ಸಿಗುತ್ತವೆ. ಕೆಲವೊಮ್ಮೆ ಬೇಡಿಕೆ ಕಡಿಮೆಯಾಗಿ ಶಿಲ್ಪಗಳಿಗೆ ಬೇಚಾರು ಆಗುತ್ತವೆ. ಕೆಲವೊಂದು ಶಿಲ್ಪಗಳು ಕಾಣದಿರಲು ಕಾರಣವೇನೆಂದರೆ ಅವು ತಮ್ಮ ಸ್ವರೂಪವನ್ನು ಬದಲಾಯಿಸಿಕೊಂಡು ಪರಿವರ್ತನೆಗೊಂಡಿವೆ. ಆಸ್ಥಾನಿಕರ ಪೋಷಕರ ಆಶ್ರಯದಲ್ಲಿ ಬೆಳೆಯುತ್ತಿದ್ದ ಕೆಲ ಜನಪದ ಕಲೆಗಳು ಇಂದು ಆಸರೆ ತಪ್ಪಿ ಮಣ್ಣು ಗೂಡುತ್ತವೆ. ಆಧುನಿಕತೆಯ ಕಾರ್ಮೋಡಗಳಿಂದ ಮುಚ್ಚಲ್ಪಡುತ್ತವೆ. ಇಂತಹ ಉಪಯುಕ್ತ ಕಲೆಗಳನ್ನು ಪ್ರೋತ್ಸಾಹಿಸಿ ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ನಮ್ಮ, ನಿಮ್ಮೆಲ್ಲರ ಹಾಗೂ ಸರಕಾರದ ಕಾರ್ಯವಾಗಿದೆ.

ಬಾಸಿಂಗ:

ವಧುವರರ ಅಲಂಕಾರಕ್ಕಾಗಿ ಹಿಂದೂ ಧರ್ಮದಲ್ಲಿ ಬಾಸಿಂಗ ಕಟ್ಟುವ ಸಂಪ್ರದಾಯವಿದೆ. ಇದು ವಧು, ವರರ ಅಲಂಕಾರಕ್ಕಾಗಿ ಮಾಡಿದ ಜನಪದ ವಸ್ತುವಾಗಿದೆ. ಬ್ರಾಹ್ಮಣ, ಕ್ಷತ್ರಿಯರಲ್ಲಿ ಹಣೆಗೆ ಮುತ್ತಿನ ಹಾರದ ಸರವನ್ನೇ ಬಾಸಿಂಗವನ್ನಾಗಿ ಕಟ್ಟಿ ಅಲಂಕರಿಸಿದರೆ, ವಿಶ್ವ ಕರ್ಮ ಸಮಾಜದಲ್ಲಿ ಎಲೆ ಬಾಸಿಂಗಗಳನ್ನು ಕಟ್ಟುವ ರೂಢಿ ಇದೆ. ಇತರೆ ಜನರಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಧುವರರ ಅಲಂಕಾರ ಗುಡಿ ಬಾಸಿಂಗದಿಂದಾಗುತ್ತದೆ. ಗುಡಿ ಬಾಸಿಂಗ ನೋಡಲು ಚಂದ. ಗುಡಿ ಬಾಸಿಂಗದಲ್ಲಿ

ಮೇಲ್ಭಾಗದಲ್ಲಿ ಮೂರು ಗುಡಿಗಳು ಇರುತ್ತವೆ. ಇವು ತ್ರಿಮೂರ್ತಿಗಳು ಅಂದರೆ ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರತೀಕ. ಕೆಳಗಡೆ ಏಳು ಹೆಡೆಗಳನ್ನು ಅಳವಡಿಸಿರುತ್ತಾರೆ. ಇವು ಸಪ್ತ ಮಾತೃಕೆಯವರು ಬ್ರಾಹ್ಮಿ, ಮಹೇಶ್ವರಿ, ಕುಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ ಹಾಗೂ ಚಾಮುಂಡಿಯರ ಸಂಕೇತಗಳು.

ಇವುಗಳನ್ನು ತಯಾರಿಸುವ ಕಚ್ಚಾಸಾಧನಗಳೆಂದರೆ ಜೋಳದ ದಂಟು ಅಥವಾ ಬಿದಿರು ಕಡ್ಡಿ ಬಣ್ಣದ ಕಾಗದ, ಗುಳಾಪ ಜರಿಗಳು ಬಳಕೆ ಮಾಡುತ್ತಾರೆ.

ಅರಳೆ, ಹಿಟ್ಟು, ಸೆಗಣಿ ಗೊಂಬೆಗಳು: ಕೆಟ್ಟ ದೃಷ್ಟಿಯಿಂದ ಕಲ್ಲು ಕೂಡು ಎನ್ನುವಂತೆ ಮಾನವನ ಕೆಟ್ಟ ದೃಷ್ಟಿ ಪುಟ್ಟ ಮಕ್ಕಳನ್ನು ಭೇದಿಸಿದಾಗ ಆ ಮಕ್ಕಳು ಸಾಯುವ ನೋವಿನಿಂದ ನರಳಿ ಅತ್ತು ಕರೆಯುವುದು ಮಾಡುವುದು ಸ್ವಾಭಾವಿಕ. ಇಂತಹ ಸಮಯದಲ್ಲಿ ಈ ಜಾನಪದ ಅರಳೆ ಗೊಂಬೆ ಆ ಮಗುವಿನ ಕಣ್ಣೊರೆಸುವಲ್ಲಿ ಸಹಾಯವಾಗುತ್ತವೆಂಬ ನಂಬಿಕೆಯಂತೆ. ಒಂದು ಅರಳೆ ಗೊಂಬೆಯನ್ನು ಮಾಡಿ ಅದನ್ನು ಆ ಅಳುತ್ತಿರುವ ಮಗುವಿನ ಮುಖದಿಂದ ಕಾಲಿನವರೆಗೆ ಮೂರು ಸಲ ನಿವಾಳಿಸಿ ಆ ಅರಳೆಯ ಗೊಂಬೆಯ ಮುಖದ ಮೇಲೆ ಮೂರು ಸಲ ಉಗುಳಿ ಅದೇ ಹಸಿಯಲ್ಲಿ ಗೋಡೆಗೆ ಅಂಟಿಸಿ ಅದಕ್ಕೆ ದೀಪ ತಗುಲಿಸಿ ಅದನ್ನು ಸುಟ್ಟು ಹಾಕುತ್ತಾರೆ. ಆ ಗೊಂಬೆ ಸುಡುವುದರೊಂದಿಗೆ ಅ ಮಗುವಿಗೆ ಆಗಿರುವ ದೃಷ್ಟಿ ದೋಷ ಪರಿಹಾರವಾಗುತ್ತದೆ.

ಇದೇ ರೀತಿ ಒಂದು ಕಣಕದ ಅಂದರೆ ಗೋದಿ ಹಿಟ್ಟಿನ ಗೊಂಬೆಯನ್ನು ತಯಾರಿಸಿ ಅದನ್ನು ದೃಷ್ಟಿದೋಷದಿಂದ ನರಳುವ ಮಗುವಿನ ಮೇಲೆ ಇಳಿಸಿ ಆ ಗೊಂಬೆಗೆ ಅರಿಷಿಣ, ಕುಂಕುಮ ಹಚ್ಚಿ ಅದನ್ನು ಒಂದು ಪರಿಯಾಣದಲ್ಲಿಟ್ಟು ಅದನ್ನು ಊರ ಹೊರಗಡೆ ಒಯ್ದು ಅದನ್ನು ಇಟ್ಟು ಬರುತ್ತಾರೆ. ಇದರಿಂದಲೂ ಆ ಮಗು ಆರಾಮವಾಗುತ್ತದೆ ಎಂಬ ನಂಬಿಕೆ ಇದೆ.

ಕೆಟ್ಟ ಪಂಚಕದಲ್ಲಿ ಯವುದೇ ವ್ಯಕ್ತಿ ಸತ್ತರೆ ಮೂರು ಹಿಟ್ಟಿನ ಗೊಂಬೆಗಳನ್ನು ಹಾಗೂ ಒಳ ಪಂಚಕದಲ್ಲಿ ತೀರಿಕೊಂಡರೆ ಆ ಸತ್ತ ವ್ಯಕ್ತಿಯ ಅಂತ್ಯಕ್ರಿಯೆಯೊಂದಿಗೆ ರುದ್ರ ಭೂಮಿಗೆ ಒಯ್ದು ಆ ಗೊಂಬೆಗಳನ್ನು ನೆಲದಲ್ಲಿ ಹುಗಿಯುವುದರ ಮೂಲಕ ಅಥವಾ ಸುಡುವುದರ ಮೂಲಕ ಆ ಪಂಚಕ ದೋಷವನ್ನು ಪರಿಹರಿಸಿಕೊಳ್ಳುತ್ತಾರೆ.

ಮಾನವ ದೈನಿಕ ಜೀವನದಲ್ಲಿ ಅವನ ಭಾವನೆಗಳಿಗೆ ಸಮಾಧಾನ ಹೇಳಲು ಈ ಅರಳೆ ಗೊಂಬೆ, ಹಿಟ್ಟು ತಮ್ಮ ಪಾಲಿನ ಸೇವೆ ಮಾಡುತ್ತಿವೆ.

ದೀಪಾವಳಿಯ ಶಿವನ ಬುಟ್ಟಿ:

ಅಜ್ಞಾನದ ಕತ್ತಲೆಯನ್ನು ಹೊಡೆದೋಡಿಸುವ ಬೆಳಕಿನ ಹಬ್ಬ ದೀಪಾವಳಿಯಲ್ಲಿ ಐದು ದಿನಗಳವರೆಗೆ ಎಲ್ಲರ ಮನ ತಣಿಸಲು ಜನಪದ ಶಿಲ್ಪ 'ಶಿವನ ಬುಟ್ಟಿ' ಯೊಂದು ಜನ್ಮ ತಾಳುತ್ತದೆ. ಇದು ಬಲಿ ಚಕ್ರವರ್ತಿಯ ದಾನದ ಶ್ರೇಷ್ಠತೆಯ ಪ್ರತೀಕವೂ ಆಗಿದೆ.

ಪ್ರತಿಯೊಬ್ಬರು ತಮ್ಮ ಮನೆ ಎದುರಿಗೆ ಒಂದು ಕಂಬ ನೆಡೆಸಿ ಅದಕ್ಕೆ ಒಂದು ನೂಲಿನ ಹಗ್ಗ ಜೋಡಿಸಿ; ಬಿದಿರು ದಾರ ಹಾಗೂ ಪಾರದರ್ಶಕ ವರ್ಣದ ಕಾಗದಗಳಿಂದ ನಿರ್ಮಿಸಿದ ಶಿವ ಬುಟ್ಟಿಯಲ್ಲಿ

ಒಂದು ಎಣ್ಣೆಯ ಪಣತಿಯನ್ನು ಇಟ್ಟು ಹೊತ್ತಿಸಿದಾಗ ಆ ದೀಪದ ಬೆಳಕು ಬಣ್ಣದ ಪಾರದರ್ಶಕ ಹಾಳಿಯಿಂದ ಹೊರಬಂದಾಗ ನೋಡಲು ಅದೆಷ್ಟು ಚೆಂದ ಹೇಳತೀರದು.

ಈ ಸುಂದರವಾದ ಬಣ್ಣದ ಶಿವನ ಬುಟ್ಟಿ, ದಟ್ಟ ಕಾರ್ಗತ್ತಲೆಯ ಆಕಾಶದಲ್ಲಿ ಮೇಲೆ ಏರಿಸಿದಾಗ. ಆ ಅಂಥ ಆಕಾರದಲ್ಲಿ ಜ್ಞಾನದ ಜ್ಯೋತಿಯಂತೆ ಕಂಗೊಳಿಸಿ ಮನಸ್ಸಿಗೆ ಆನಂದವನ್ನು ನೀಡುತ್ತದೆ, ಶಿವನ ಪುಟ್ಟಿ ಎಂಬ ನಾಮಾಂಕಿತ ಹೊಂದಿದ ಈ ಜಾನಪದ ಶಿಲ್ಪ. ಮೊದಲು ಒಂದು ಚೌಕಾಕಾರದ ಬಿದಿರಿನ ಹಂದರ ಮಾಡಿ ಅದಕ್ಕೆ ಪ್ರತಿ ಮೂಲೆಗೂ ಒಂದೊಂದು ಚೌಕುಗಳನ್ನು ಉದ್ದಾಗಿ ಕೂಡ್ರಿಸಿ, ಸುಂದರವಾದ ಪುಟ್ಟಿಯನ್ನು ಅದರ ಕೆಳಗಡೆ ಗಾಳಿ ಒಳ ಹೋಗದಂತೆ ತಯಾರಿಸಿ ಹಾಗೂ ಸುಂದರ ಕಾಣಲು ಹಾಳೆಯ ನಕ್ಷೆ ಕತ್ತರಿಸಿ ಪರಪರಿಯನ್ನು ಅಂಟಿಸುತ್ತಾರೆ.

***

ಗುಳೇದಗುಡ್ಡದ ಗೊಗ್ಗಲರ ಮನೆಯಲ್ಲಿ ಗಾಜಿನ ಮೇಲಿನ ಚಿತ್ತಾರಗಳು

ಶಿಲಾಯುಗದಿಂದ ಲೋಹಯುಗಕ್ಕೆ ಪಾದಾರ್ಪಣ ಮಾಡಿದ ಮಾನವ ಗಾಜನ್ನು ಆವಿಷ್ಕಾರಗೊಳಿಸಿಕೊಂಡು ಏನೆಲ್ಲ ವಸ್ತುಗಳನ್ನು ಗಾಜಿನ ಮಾಧ್ಯಮದಿಂದ ನಿರ್ಮಿಸಿ ಆನಂದಿಸಿರುವುದು ಮಹಾಸಾಧನೆಯೇ ಆಗಿದೆ.

ಕ್ರಿ.ಶ. ಆರನೆಯ ಶತಮಾನದಲ್ಲಿ ಚಾಲುಕ್ಯರು ಗುಹಾಲಯಗಳಲ್ಲಿ ಚಿತ್ತಾರಗಳನ್ನು ಚಿತ್ರಿಸಿ ಜನಜೀವನಕ್ಕೆ ಜೀವಕಳೆಯನ್ನಿತ್ತರು. ಅದೇ ಪರಂಪರೆ ಮುಂದುವರಿದು ಎಲ್ಲೆಡೆಯಲ್ಲಿ ಪಸರಿಸಿತು. ಚಿತ್ರ ಅದರಲ್ಲೂ ವರ್ಣಚಿತ್ರಗಳು ಪ್ರಾರಂಭದ ಮುಂಚೂಣಿಯ ಸಂದರ್ಭವನ್ನು ಊಹಿಸಿಕೊಂಡಾಗ ರೋಮಾಂಚನ ವಾಗುತ್ತದೆ. ಸೂಕ್ಷ್ಮ ಶಿಲಾಯುಗದ ಮಾನವನಿಗೆ ಚಿತ್ತಾರ ಗೀಚುಗೆರೆಗಳೇ ಲಿಪಿಯಾಗಿ ಪರಿಣಮಿಸಿರಲೇ ಬೇಕು. ಆ ಲಿಪಿ ತನ್ನ ಆಕರ ಧ್ವನಿ ಶೈಲಿಯಿಂದ ಬೇರೆ ಬೇರೆಯಾಗಿ ಭಾಷೆ, ಸಾಹಿತ್ಯ ನಿರ್ಮಿಸಿರುವಂತೆ ಈ ಚಿತ್ತಾರ ಅಂಕುರ ಗೋಡೆ ಚಿತ್ತಾರ, ಧಾತುವಿನ ಮೇಲಿನ ಚಿತ್ತಾರ, ಕಾಷ್ಟ್ಯ ಚಿತ್ತಾರ, ಚರ್ಮದ ಚಿತ್ತಾರ, ಲೋಹದ ಮೇಲೆ ಗಾಜಿನ ಮೇಲೆ ಎಂಬ ಅನೇಕ ಪಂಥಗಳ ಚಿತ್ರಕಲೆ ಪ್ರಾರಂಭವಾಯಿತು.

ಸತ್ತ ಪ್ರಾಣಿಗಳ ಚರ್ಮದ ಮೇಲಿನ ತುಪ್ಪಳಗಳನ್ನು ತೆಗೆದು ಪಾರದರ್ಶಕದಂತಿರುವ ಚರ್ಮದ ಮೇಲೆ ಚಿತ್ತಾರ ಚಿತ್ರಿಸಿ ವರ್ಣಗಳನ್ನು ಬಿಡಿಸಿ ಆನಂದಿಸಿದ್ದಲ್ಲದೇ, ಅದರ ಹಿಂದೆ ಅಥವಾ ಮುಂದೆ ದೀವಟಿಗೆ (ಹಿಲಾಲ) ಹಿಡಿದು ಅದರ ಮುಂದೆ ಒಂದು ಬಿಳಿ ಬಟ್ಟೆ ಹಿಡಿದು ಮೂಲ ತೊಗಲಗೊಂಬೆಯ ದೊಡ್ಡ ಚಿಕ್ಕ ಚಿತ್ರನೋಡಿ ಆನಂದಿಸಿದ.

ಗೋಡೆಯ ಮೇಲೆ ಸುಂದರ ಸಪಾಟಾದ ಪಾತಳಿಯನ್ನು ನಿರ್ಮಿಸಿಕೊಂಡು ಅದರ ಮೇಲೆ ಚಿತ್ರ ಚಿತ್ರಿಸಿ ದಟ್ಟವಾದ ಬಣ್ಣವನ್ನು ಲೇಪಿಸಿ ಶತಮಾನದವರೆಗೆ ವೀಕ್ಷಿಸಲು ಯೋಗ್ಯವನ್ನಾಗಿಸಿದ್ದರು ನಮ್ಮ ಹಿರಿಯರು.

ಈ ಗೋಡೆ, ಕಾಷ್ಟ್ಯ, ಧಾತು, ಮುಂತಾದ ವಸ್ತುಗಳ ಮೇಲೆ ಮಾಡಿದ ಚಿತ್ತಾರಗಳು ಪ್ರಕೃತಿಯ ತ್ರಿವಿಧ ಗತಿಯಾದ ಬಿಸಿಲು, ಮಳೆ, ಛಳಿಯಿಂದ ಘಾಸಿಗೊಂಡು ಕೊನೆವುಸಿರೆಳೆಯುತ್ತಿರುವುದನ್ನು ಕಂಡು, ಆ ಅಲೌಕಿಕ ಜ್ಞಾನಿ ಚಿತ್ರಕಲಾವಿದ ಗಾಜನ್ನು ಉಪಯೋಗಿಸಿ ಗಾಜಿನ ಒಳಗಡೆ ಚಿತ್ತಾರ ಬಿಡಿಸಿ ತ್ರಿವಿಧ ಪರಿಣಾಮಗಳನ್ನು ಎದುರಿಸಿ ಸಫಲತೆ ಮೆರೆದಿದ್ದಾನೆ.

ಗಾಜಿನ ಮೇಲೆ ವಿರುದ್ಧ ದಿಸೆಯಲ್ಲಿ ಚಿತ್ತಾರ ಮೂಡಿಸಿಕೊಂಡು, ಅಂದರೆ ಪ್ರಥಮತಃ ಹೊರರೇಖೆಗಳನ್ನು ದಟ್ಟ ವರ್ಣದಿಂದ ಹಾಕಿಕೊಂಡು ಭಾರತೀಯ ವರ್ಣ ಪದ್ಧತಿಯಂತೆ ಸಮತಟ್ಟಾದ ಬಣ್ಣಗಳನ್ನು ಲೇಪಿಸಿ ಹೊಳಪುಳ್ಳ ಬಂಗಾರದ ಬಣ್ಣ ಲೇಪಿಸಿ ಸಂಯೋಜನಾತ್ಮಕವಾದ ಚಿತ್ರಕೃತಿಗಳನ್ನು ನಿರ್ಮಿಸಿ ಸಂಸ್ಕೃತಿಯನ್ನು ಪೀಳಿಗೆ ಪೀಳಿಗೆಗೆ ಒಪ್ಪಿಸಿದ್ದಾರೆ.

ಗುಳೇದಗುಡ್ಡದ ಶ್ರೀ ರಾಚಪ್ಪ ಶಂಬಣ್ಣಪ್ಪ ಗೊಗ್ಗಲ ಎಂಬುವರ ಶ್ರೀಮಂತ ಮನೆ ಗುಳೇದಗುಡ್ಡದ ಪಶ್ಚಿಮಭಾಗದಲ್ಲಿದೆ. ಇವರ ಮನೆಯಲ್ಲಿ ಒಂದು ಶತಮಾನ ಹಳೆಯದಾದ ಗಾಜಿನ ಚಿತ್ರಗಳು ಲಭ್ಯವಿದೆ.

ಮೊದಲು ಇಪ್ಪತ್ತು ಇಪ್ಪತ್ತೈದು ಇದ್ದವು. ಈಗ ಕೇವಲ ಮೂರು ಚಿತ್ರಗಳು ಮಧ್ಯಮ ಗಾತ್ರದವು ನೋಡಲು ದೊರೆಯುತ್ತವೆ.

'ಸಿದ್ಧಿ, ಬುದ್ಧಿ, ಗಣಪ' ಉತ್ತಮ ಸಂಯೋಜನೆಯುಕ್ತ ಗಾಜಿನ ಚಿತ್ರಕಲಾಕೃತಿ ಇದಾಗಿದೆ. ವೃತ್ತದ ಮಧ್ಯದಲ್ಲಿ ಒಂದೇ ಕಣ್ಣಿನಂತೆ ಕಣ್ಣು, ಅಲಂಕಾರಿಕ ಶೈಲಿಯ ಸೊಂಡೆ ಗಣಪತಿ, ಅಕ್ಕ ಪಕ್ಕದಲ್ಲಿ ಎರಡೂ ಸ್ತ್ರೀ ರೂಪಗಳ ಮಧ್ಯದಲ್ಲಿ ದೊಡ್ಡದಾದ ಮೂಷಕ. ಅದರ ಮೇಲೆ ಕುಳಿತ ವಿಘ್ನವಿನಾಶಕ ಗಣಪ. ಅವನ ಎರಡೂ ಬದಿಗೆ ಅರ್ಚಕರು ಕೇಸರಿ ಭಗವಾಧ್ವಜವನ್ನು ಎತ್ತರವಾಗಿಸಿ ಕೈಯಲ್ಲಿ ಹಿಡಿದಿದ್ದಾರೆ. ಈ ಧಾರ್ಮಿಕ ಚಿತ್ರಾಕೃತಿ ಗಣಪತಿಯ ಮಹಿಮೆಯನ್ನು ತೋರಿಸುತ್ತಿದೆ.

ಇನ್ನೊಂದು ಚಿತ್ರ 'ಗಜಲಕ್ಷ್ಮೀ'. ಅಕ್ಕ ಪಕ್ಕದಲ್ಲಿ ಆನೆಗಳು, ಮಧ್ಯದಲ್ಲಿ ಲಕ್ಷ್ಮೀ ಕುಳಿತಿದ್ದಾಳೆ. ಆನೆಯ ಅಲಂಕಾರಿಕ ರೂಪ ಚೆನ್ನಾಗಿದೆ. ಚಾಲುಕ್ಯರ ವಾಸ್ತು ಶಿಲ್ಪಗಳಲ್ಲಿಯೂ ದೇವರ ಗರ್ಭಗುಡಿಯ ಹಣೆ ಪಟ್ಟಿಯ ಮೇಲಿರುವ ಗಜಲಕ್ಷ್ಮಿಯಂತೆಯೇ ಇದೆ.



ವ್ಯಾಸ ಮಹರ್ಷಿಗಳಿಂದ ರಚಿತವಾದ ಭಾಗವತ ಪುರಾಣದ 'ಬಾಲಕೃಷ್ಣ' ಇಲ್ಲಿಯ ಕೈ ಕಾಲುಗಳನ್ನು ಆಡಿಸುತ್ತಾ ಅಂಗಾತ ಮಲಗಿದ್ದಾನೆ. ಈ ಮುದ್ದು ಕೃಷ್ಣನನ್ನು ನೋಡಿದರೆ ಕನ್ಯೆಗೆ ತಾಯಾಗೋ ಆಸೆ, ವರನಿಗೆ ತಂದೆಯಾಗೋ ಆಸೆ. ತಂದೆ ತಾಯಂದಿರಿಗೆ ಅಜ್ಜ ಅಜ್ಜಿಯಾಗುವ ಆಸೆ, ಅಜ್ಜ ಅಜ್ಜಿಯಂದಿರಿಗೆ ಇಂತಹ ಮರಿ ಮೊಮ್ಮಕ್ಕಳನ್ನು ಕಾಣುವ ಭಾವಿ ಜೀವನದ ಬೀಜ ಮೊಳಕೆಯೊಡೆಯದೆ ಇರಲಾರದು.

ವೇದವ್ಯಾಸ ಮಹರ್ಷಿಗಳಿಂದ ಶುಕ್ರಾಚಾರ್ಯರಿಗೆ, ಶುಕ್ರಾಚಾರ್ಯರ ಮಾಧ್ಯಮವಾಗಿ ನಮ್ಮ ಚಿತ್ರಕಲಾವಿದರ ಭಾವನೆಗಳಲ್ಲಿ ಅಚ್ಚಳಿಯದೆ ಉಳಿದ ಈ ಬಾಲಕೃಷ್ಣ ತಾನು ಕಾರಾಗೃಹದಲ್ಲಿ ಜನ್ಮವೆತ್ತರೂ ಸಕಲರ ಸ್ವತಂತ್ರವಾದ ಮನಸ್ಸಿನಲ್ಲಿ ಸದಾ ನಿಂತು, ಶಿಷ್ಟರ ಸಂರಕ್ಷಣೆ ಮಾಡುತ್ತಾ, ದುಷ್ಟರನ್ನು ಶಿಕ್ಷಿಸುತ್ತಾ ಸದಾ ಧರ್ಮ ಸಂರಕ್ಷಣೆ ಮಾಡುತ್ತಾ ಬ್ರಹ್ಮಾಂಡದಲ್ಲೆಲ್ಲ ಗೋಚರಿಸುತ್ತಿದ್ದಾನೆ. ಆತನ ಪಕ್ಕದಲ್ಲಿ ಅವನಂತೆ ಇರುವ ಪುಟ್ಟ ಬಾಲಕರಿಬ್ಬರ ಜೊತೆಗೆ ತಾಯಂದಿರು. ಈ ಚಿತ್ರ ಗೋಕುಲಾಷ್ಟಮಿಯನ್ನು ಎಲ್ಲರಿಗೂ ನೆನಪು ತರುತ್ತದೆ.

ಭಾರತೀಯ ಮಹಾಗ್ರಂಥವಾದ 'ಮಹಾಭಾರತದಲ್ಲಿ' ತನ್ನ ದಿಟ್ಟ ಪಾತ್ರ ವಹಿಸಿದ ಈ ಶ್ರೀಕೃಷ್ಣನ ಮಹಿಮೆಯನ್ನು ಈ ಗಾಜಿನ ಚಿತ್ರಕೃತಿಗಳು ಹೊರಹೊಮ್ಮಿಸುತ್ತವೆ. ಜಾನಪದ ಜಗತ್ತಿನಲ್ಲೆ ಮೂರ್ತಿಗೊಳ್ಳುವ ಆಕಾರಗಳು ಅನೇಕಾನೇಕ ಪ್ರತಿಗಳು ತಯಾರಾಗಿರುವುದರಿಂದ ರೇಖೆಗಳಲ್ಲಿ ತೀಕ್ಷ್ಣತೆ, ಬಣ್ಣಗಳಲ್ಲಿ ನಯಬದ್ಧತೆಯನ್ನು ಕಾಣುತ್ತೇವೆ. ಮಧ್ಯಮ ಗಾತ್ರದ ಗಾಜಿನ ಚಿತ್ರಗಳನ್ನು (೧.೫ ಅಡಿ x ೧೧) ಇವರ ಮನೆಯಲ್ಲಿ ಮಾತ್ರ ಕಾಣಸಿಗುತ್ತವೆ.

ಈ ತೆರನಾದ ಚಿತ್ರಕಲಾಪರಂಪರೆ ಬೆಳೆಯಲು ದಕ್ಷಿಣ ಭಾರತದಲ್ಲಿ ತಿಳಿದ ಹಾಗೂ ಖ್ಯಾತಿ ಪಡೆದ ರಾಜ ಮನೆತನಗಳ ಸೌಂದರ್ಯ ಪ್ರಜ್ಞೆಯೇ ಕಾರಣವಾಗಿದೆ.

ಮರಾಠ, ತಂಜಾವೂರು, ಮೈಸೂರು ಅರಸರಿಂದ ಪ್ರೋತ್ಸಾಹಿತಗೊಂಡ ಈ ಗಾಜಿನ ಕಲಾಕೃತಿಗಳು, ಹತ್ತೊಂಬತ್ತನೆಯ ಶತಮಾನದಲ್ಲೇ ಗುಳೇದಗುಡ್ಡದಲ್ಲಿ ಆಗಮಿಸಿವೆ. ಮಹಾಲಿಂಗಪುರದ ಹಾಗೂ ಅಮ್ಮಿನಭಾವಿಯಲ್ಲಿರುವ ಚೌಸಪ್ಪಿ ಮನೆಗಳಂತೆ ಇರುವ ಒಂದು ಚಾಸಪ್ಪಿ ಮನೆ ಗುಳೇದಗುಡ್ಡದಲ್ಲಿದೆ. ಈ ಚೌಸಪ್ಪಿ ಅರ್ಥಾತ್ ಚೌಕಾಕಾರದ ಅವಿಭಕ್ತ ಕುಟುಂಬ ಹಾಯಾಗಿ ಜೀವನ ಸಾಗಿಸುವ ಮನೆ. ಇದರ ಒಳಗಡೆ ಮಳೆಯ ನೀರಿನಿಂದ ಆನಂದಿಸಬಹುದು. ತಲಬಾಗಿಲ ಹಾಕಿದರೆ ತೀರಿತು. ಒಳಗಡೆ ಒಂದು ಆಧುನಿಕ ಬಗೀಚಾ ಇದ್ದಂತೆ. ಇಂತಹ ಮನೆಗಳು ಅಲಂಕಾರಕ್ಕಾಗಿ ಹಾಗೂ ಮನೆಯಲ್ಲಿ ವಾಸಿಸುವವರಿಗೆ, ಮನೆಗೆ ಆಗಮಿಸುವ ಅತಿಥಿಗಳಿಗೆ ಆನಂದ ನೀಡುವ ಈ ಚಿತ್ತಾರಗಳು ಒತ್ತಡಕ್ಕೆ ಮಣಿದು ಒಡೆದು ನಶಿಸಹತ್ತಿವೆ.

ಶತಮಾನೋತ್ಸವವನ್ನು ಆಚರಿಸಿಕೊಂಡ ಈ ಚಿತ್ತಾರಗಳು ಇನ್ನು ಹೆಚ್ಚೆಂದರೆ ಒಂದು ಶತಮಾನ ಬದುಕುಳಿಯಬಹುದು. ಇಷ್ಟು ದಿವಸ ಬಾಳಲೆಂದೇ ಸಾಗವಾನಿ ಫ್ರೇಮ್‌ನ ಹಿಂದೆ ಮಳೆನೀರು, ಬಿಸಿ, ತಂಡಿ ತಗಲದಿರಲೆಂದು ಧಾತುವಿನ ತಗಡಿನಿಂದ ರಕ್ಷಣೆಯನ್ನು ಒದಗಿಸಿದ್ದಾರೆ.

ಸತ್ಯಂ, ಶಿವಂ, ಸುಂದರಂ, ಪಂಥದ ಈ ಗಾಜಿನ ಮೇಲಿನ ಚಿತ್ರಗಳು ಯೋಗ್ಯ ಸ್ಥಳದಲ್ಲಿ ಪ್ರದರ್ಶನವಾಗಬೇಕು. ಇವುಗಳ ಆನಂದ ಸೌಂದರ್ಯ ಪ್ರಜ್ಞೆಯಿಂದ ಜನತೆಯಲ್ಲಿ ನೈತಿಕತೆ ಸಹಬಾಳ್ವೆ, ಶಾಂತಿ ಲಭಿಸುತ್ತದೆ.

ರಾಜಾಶ್ರಯದಲ್ಲಿ ಬೆಳೆದ ಚಿತ್ರಕಲಾವಿದರುಗಳು ಆಗಿನ ಸಮಾಜದ ಶಾಂತಿದೂತರಂತೆ ಕಾರ್ಯನಿರ್ವಹಿಸಿದ್ದನ್ನು ಗಮನಿಸಿ ಪ್ರಸ್ತುತ ಜಗತ್ತಿಗೆ ಈ ಚಿತ್ರಕಲಾ ಸೇವೆಯ ಅವಶ್ಯಕತೆ ಅರಿತು ಸಂಸ್ಕೃತಿ ಇಲಾಖೆ ಕಾರ್ಯಪ್ರವೃತ್ತರಾಗಿ ವಾಸ್ತವಿಕ ಸಂಸ್ಕೃತಿಯ ಬೆಳವಣಿಗೆ ಹಾಗೂ ಮಹತ್ವವನ್ನು ಬಿತ್ತರಿಸಲಿ. ಗುಳೇದಗುಡ್ಡದ ಗಾಜಿನ ಮೇಲಿನ ಚಿತ್ತಾರಗಳು ನಮ್ಮ ಭವ್ಯ ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯ ಮಾಡುವುದೇ ಇವುಗಳ ಗುಟ್ಟಾಗಿದೆ.

ಜಿಲ್ಲೆಗೊಂದು ಸಂಗ್ರಹಾಲಯ ಪ್ರದರ್ಶನಾಲಯಗಳನ್ನು ನಿರ್ಮಿಸಿ ಆಧುನಿಕ ಜಗತ್ತಿಗೆ ನಾವು ಬಂದ ದಾರಿಯನ್ನು ಮರೆಯದ ಹಾಗೆ ವ್ಯವಸ್ಥೆ ಮಾಡಬೇಕಾಗಿದೆ. ಇಂತಹ ಅಮೂಲ್ಯ ಕಲಾಕೃತಿಗಳನ್ನು ತುಂಬಿ ಜಗತ್ತಿಗೆ ತೋರಿಸಿ ಜಗತ್ತೇ ಶಾಂತಿಯಿಂದ ವರ್ತಿಸುವ ಕಾರ್ಯವಾಗಬೇಕು.


***

ಶೀಲವಂತರ ಶ್ರೀಮಂತ ಚಿತ್ರಗಳು

ಗುಳೇದಗುಡ್ಡದ ಮಾಜಿ ಶಾಸಕರಾದ ಶ್ರೀ ರಾಜಶೇಖರ ಶೀಲವಂತ ಅವರ ಅಂಗಡಿಯಲ್ಲಿ ದೊಡ್ಡಗಾತ್ರದ ನಾಲ್ಕು ಗಾಜಿನ ಚಿತ್ರಕಲಾಕೃತಿಗಳು ಶತಮಾನ ಪೂರ್ವವೇ ಆಗಮಿಸಿವೆ. ಪ್ರೇಕ್ಷಕರಿಗೆ ಸರಿಯಾಗಿ ಕಾಣುವಂತೆ ತಮ್ಮ ಅಪರಂಜಿ ಅಂಗಡಿಯಲ್ಲಿ ತೂಗುಹಾಕಿದ್ದಾರೆ. ಚಿತ್ರ ನಂ. ೨೧, ೨೨, ೨೩, ೨೪ ರಲ್ಲಿ 'ಪುಂಗಿ ನಿನಾದದ ಹಾವಾಡಿಸುವವಳು' ಹಾಗೂ ಭಾಗವತ ಪುರಾಣದ 'ಬಾಲಕೃಷ್ಣ' ಮತ್ತು 'ಸಿಂಹಾಸನಾರೂಢ ಕೃಷ್ಣ' , 'ರಾಜಾ ಹಾಗೂ ಕಾರಭಾರಿ' ಎಂಬ ನಾಲ್ಕು ಚಿತ್ರಗಳು ಚೆನ್ನಾಗಿ ಮೂಡಿಬಂದಿವೆ.



ಶೀಲವಂತರ ಶ್ರೀಮಂತ ಚಿತ್ರಗಳು



ಶೀಲವಂತರ ಶ್ರೀಮಂತ ಚಿತ್ರಗಳು

ನಂ. ೨೧ ರ ಹಾವಾಡಗಿತ್ತಿ ನರ್ತನ ನಿರತಳಾಗಿ ಪುಂಗಿ ಬಾರಿಸುತ್ತಾ ನಾಗರ ಹಾವುಗಳನ್ನು ಆಡಿಸುತ್ತಿದ್ದಾಳೆ. ಚಿತ್ರದಲ್ಲಿ ಒಬ್ಬ ಪುರುಷ ಆಕೃತಿಯು ಇದೆ. ಬಾಲಕೃಷ್ಣನ ಹಾಗೆ ಕೇಶಾಲಂಕಾರ, ನವಿಲಿನ ಪರಿಚ್ಛದ, ಹರಳಿನ, ಮುತ್ತುಗಳಿಂದ, ಅಲಂಕೃತ ಕೇಶಾಲಂಕಾರವಿದೆ. ನಾಲ್ಕು ನಾಗರ ಹಾಗೂ ಒಬ್ಬ ಪುರುಷ ಆಕೃತಿಗಳಿದ್ದರೂ ಪ್ರಾಧಾನ್ಯತೆ ಮಾತ್ರ ಹಾವಾಡಗಿತ್ತಿಗೆ ಕೊಟ್ಟಿದ್ದಾಗಿದೆ. ಅವಳೊಬ್ಬ ವಿಶೇಷ ನರ್ತನಗಾರ್ತಿ ಎನ್ನುವುದನ್ನು ಚಕ್ರಾಸನದ ಭಂಗಿಯಲ್ಲಿ ಪುಂಗಿ ಬಾರಿಸುತ್ತಿರುವುದರಿಂದ ಗೊತ್ತಾಗುತ್ತದೆ. ಅವಳ ಹೆರಳು ಜೋತಾಡುವುದನ್ನು ವಾಸ್ತವಿಕವಾಗಿ ಚಿತ್ರಿಸಿದ ಕಲಾವಿದ ನೈಪುಣ್ಯ ಮೆರೆದಿದ್ದಾನೆ. ತೆಳುವಾದ ನಡ, ತುಂಬು ಎದೆ, ನಿತಂಬಗಳು, ಹೂವಿನಿಂದ ಅಲಂಕೃತವಾದ, ಕೇಶಾಲಂಕಾರ, ದಟ್ಟ ವರ್ಣದ ರವಿಕೆ, ಪುಂಗಿ ವಾದ್ಯ ಎಲ್ಲವೂ ಉತ್ತಮ ಸಂಯೋಜನೆಯಾಗಿದೆ.

ಮೇಲೆ ನೀಲಿ ಬಣ್ಣದ ಬಟ್ಟೆಗೆ ಸಮತೋಲನವಾಗುವಂತೆ ನೆಲಕ್ಕೆ ನೀಲಿ ಬಣ್ಣವನ್ನು ಲೇಪಿಸುವುದರ ಮೂಲಕ ಹಾವಿನ ಬುಟ್ಟಿ, ಹಾವಿನ ಎದೆಯ ಭಾಗದಲ್ಲಿರುವ ಕಾಲುಗಳು ಎಲ್ಲವೂ ನಿಖರವಾಗಿ ಗೋಚರಿಸುತ್ತವೆ. ಕಚ್ಚೆ ಸೀರೆ ಉಟ್ಟಿರುವ ಹಾವಾಡಗಿತ್ತಿ ಎಲ್ಲರ ಮನಸ್ಸನ್ನು ಸೂರೆಗೊಳ್ಳುತ್ತಾಳೆ. ತಿಳಿ ನಸುಗೆಂಪು ಹಿನ್ನೆಲೆ ವರ್ಣದ ದಟ್ಟ ಚಿತ್ರಗಳಿವೆ.





ಚಿತ್ರ ನಂ. ೨೨ ರಲ್ಲಿ ಭಾಗವತದ ಮುದ್ದು ಬಾಲಕೃಷ್ಣನ ಸಂಯೋಜನೆ ಕಂಡರೆ ವಿವಸ್ತ್ರ ಮುದ್ದುಕೃಷ್ಣನಂತಿರುವ ಬಾಲಕನನ್ನು ಹೆರುವ ಆಸೆ ಎಲ್ಲ ನಲ್ಲನಲ್ಲೆಯರದಾಗುತ್ತದೆ. ಅಲಂಕೃತ ಸಿಂಹಾಸನ ಬಾಲಕೃಷ್ಣನ ರಕ್ಷಣೆಗಾಗಿ ಆದಿಶೇಷ ಐದು ವಿಶಾಲ ಹೆಡೆಗಳಿಂದ ಅಲಂಕೃತ, ಋಷಿಗಳು, ತಾಯಂದಿರು, ಸಖಿಯರು, ಚಾವಳಧಾರಿಗಳಾದ ಶ್ರೀ ಕೃಷ್ಣನ ಜೊತೆಗಾರರು ಎಲ್ಲವೂ ಉತ್ತಮ ಸಂಯೋಜನೆಗಳಾಗಿವೆ. ಅಕಾಶದಲ್ಲಿ ವೀಣಾವಾದನ ಮಾಡುತ್ತಾ ಬಾಲಕೃಷ್ಣನಿಗೆ ನಮಿಸುತ್ತಿರುವ ಋಷಿಗಳು ವರಾಹ ಅವತಾರದಲ್ಲಿರುವ ವೀಣಾವಾದನ ಮಾಡುತ್ತಿರುವ ದಟ್ಟ ವರ್ಣದ ಆಕಾರ ವಿಶೇಷವಾಗಿದೆ.

ಹಿನ್ನೆಲೆ ದಟ್ಟ ನೀಲಿ ಬಳಸಿ ಸಿಂಹಾಸನ ಶೇಷಶಯನ ಸಿಂಹಾಸನ ನಾಗರ ಹೆಡೆಗಳು ಎಲ್ಲವೂ ದಟ್ಟಚಾಕಲೇಟು ಕಂದಿ ಬಣ್ಣದಿಂದ ರಚಿತ ಸೂಕ್ಷ್ಮ ಕೃತಿಗಳಾಗಿವೆ. ಶ್ವೇತ ವರ್ಣದ ಬಾಲಕೃಷ್ಣ ಹಾಗೂ ಆತನ ಮಿತ್ರರನ್ನು ರಚಿಸಿ, ತಾಯಂದಿರಲ್ಲಿ ಒಬ್ಬಳು ಬಹಳ ಬಿಳಿ ಬಣ್ಣದವಳಿದ್ದರೆ ಇನ್ನೊಬ್ಬಳು ಕಪ್ಪು ವರ್ಣದವಳನ್ನಾಗಿಸಿ ಕಂದಿ ವರ್ಣಕ್ಕೆ ಸಮತೋಲನವನ್ನು ಕಲಾವಿದ ನಿರ್ಮಿಸಿದ್ದಾನೆ. ಎದುರಿಗೆ ಇಟ್ಟಿರುವ ಫಲ, ಪುಷ್ಪ, ಪತ್ರೆ, ಹಾಲು, ಕಾಯಿಗಳು ಚೆನ್ನಾಗಿ ಸಂಯೋಜಿಸಲ್ಪಟ್ಟಿದೆ. ನಾಗರ ಹೆಡೆಯ ಬಣ್ಣ ವೈವಿಧ್ಯಮಯವಾಗಿದೆ.

ಬಾಲಕೃಷ್ಣ ಹಾಗೂ ಅವನ ಸ್ನೇಹಿತರ ಗುಪ್ತಾಂಗಗಳನ್ನು ತಿಳಿಯಾದ ಬಣ್ಣದಿಂದ ರಚಿಸಿ ವಾಸ್ತವಿಕತೆಗೆ ಅಲಂಕಾರಿಕ ಆತ್ಮವನ್ನು ರಚಿಸಿದಂತಾಗಿದೆ. ಚಿತ್ರ ನಿರ್ಮಾಣಕ್ಕೆ ಮೊದಲೆ ಸೂಕ್ಷ್ಮವಾದ ರೇಖೆಗಳನ್ನು ದಟ್ಟ ಬಣ್ಣದಿಂದ ಹಾಕಿಕೊಂಡು ನಂತರ ಅದರ ಮೇಲೆ ಆಕರ್ಷಕ ಬಣ್ಣಗಳನ್ನು ಲೇಪಿಸಿ ಅವಶ್ಯವೆನಿಸಿದಲ್ಲಿ ಸುವರ್ಣದ ರೇಖೆಯನ್ನು ಬಳಸಿ ಚಿತ್ರದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಇಬ್ಬರು ಮಾತೆಯರು, ಒಬ್ಬಳು ಬೀಸಣಿಕೆ ಹಿಡಿದಿದ್ದಾಳೆ, ಇನ್ನೊಬ್ಬಳು ಅಲಂಕಾರಿಕ ನವಿಲನ್ನು ಹಿಡಿದಿದ್ದಾಳೆ. ಬಾಲಕೃಷ್ಣನ ಹಾಗೂ ಗೆಳೆಯರ ನಡೆದ ಸುವರ್ಣದ ಉಡದಾರ ಆಕೃತಿಗಳಿಗೆ ಸಂಯೋಜನೆಗಳಾಗಿವೆ.

ಚಿತ್ರ ನಂ. ೨೩ ರಲ್ಲಿ ಸಂಗೀತಾರಾಧನೆಯ ಸಿಂಹಾಸನಾರೂಢನಾದ ಬಾಲಕೃಷ್ಣ ಚಿತ್ರಕೃತಿ ಶ್ರೇಷ್ಠ ಸಂಯೋಜನೆಯಾಗಿದೆ. ಈ ಚಿತ್ರದಲ್ಲಿ ಮೇಲ್ಗಡೆಗೆ ಗಿಳಿಯ ಅಲಂಕಾರಿಕ ರೂಪಗಳು ಕೆಳಗಡೆಗೆ ಆಕಳುಗಳ ಅಲಂಕಾರಿಕ ರೂಪಗಳು ಚಿತ್ರಕ್ಕೆ ಕಳೆಕಟ್ಟಿವೆ.

ಸಿಂಹಾಸನಾ ರೂಢನಾದ ಬಾಲಕೃಷ್ಣನ ಕೈಕಾಲು ಬೆರಳುಗಳ ಅಲಂಕಾರಿಕ ರೂಪಗಳನ್ನು ನಿರ್ಮಿಸುವಲ್ಲಿ ಶ್ರೇಷ್ಠತೆ ಸಾಧಿಸಿದ್ದಾನೆ. ತುಟಿಯಲ್ಲಿ ಮಂದಸ್ಮಿತ ಮೂಗಿನ ನಡುವೆ ಮುತ್ತಿನ ಆಭರಣ, ಬಣ್ಣ ಬಣ್ಣದ ಹೂವುಗಳಿಂದ ಅಲಂಕೃತವಾದ ವಸ್ತ್ರ ವಿಶೇಷವಾಗಿದೆ. ರಾಜಮಹಲದ ಚಿತ್ರ ಸೂಚಿಸುವ ಹಿನ್ನೆಲೆ, ಭದ್ರಕೋಟೆಯ ಲಕ್ಷಣ ತೋರುವ ಚಿಕ್ಕ ಗೇಟು ಮೆಟ್ಟಿಲು, ಹೂದಾನಿ ಹೊರಗಡೆಗೆ ನಾಲ್ಕು ಆಕಳುಗಳು ಚೆನ್ನಾಗಿ ಸಂಯೋಜನೆಯಾಗಿವೆ.

ಶ್ರೀಕೃಷ್ಣನ ಹಿಂದೆ ಒಳ್ಳೆಯ ಠೀವಿಯಿಂದ ನಿಂತ ಮಹಿಳೆಯೊಬ್ಬಳು ಪಿಟೀಲುವಾದನ ಮಾಡುತ್ತಿದ್ದಾಳೆ. ಕುದುರೆಯ ಜಂವಿಯ ಕಮಾನಿನಿಂದ ಮೀಟುತ್ತಾ ಎಡಗೈ ಬೆರಳುಗಳಿಂದ ತಂತಿಗಳನ್ನು ಅದುಮಿ ಸ್ವರಗಳನ್ನು ಹೊರಡಿಸಿ ರಾಗ ನುಡಿಸುತ್ತಿರುವುದು, ಎದುರಿಗೆ ಒಬ್ಬ ಮಹಿಳೆ ತಾನಸಿನ ವಾದನ ಮಾಡುತ್ತಿದ್ದಾಳೆ. ಶ್ರೀ ಕೃಷ್ಣನ ಮೈ ಬಣ್ಣಕ್ಕೆ ತಕ್ಕಂತೆ ಕೆಳಗಡೆಗೆ ಎರಡು ಮಹಿಳೆಯರ ಮೈಬಣ್ಣ ಒಂದೇ ಮಾಡಿ ಬಣ್ಣದ ಸಂಯೋಜನೆ ಮೆರೆದಿದ್ದಾನೆ.

ಈ ಸಂಗೀತದ ವಾದನ ಆಲಿಸುತ್ತಿರುವ ಬಾಲಕೃಷ್ಣನ ಒಲವಿನ ನಾಲ್ಕು ಆಕಳುಗಳು ಕೂಡ ಕಿವಿಯನ್ನು ನಿಗರಿಸಿ ಕತ್ತನ್ನು ಮೇಲೆತ್ತಿ ಬಾಲವನ್ನು ಎತ್ತಿಹಿಡಿದು ಆ ರಾಗವನ್ನು ಆಲಿಸುವುದನ್ನು ಪ್ರಸ್ತುತ ಚಿತ್ರ ತೋರ್ಪಡಿಸುತ್ತದೆ.

ಬಾಲಕೃಷ್ಣನ ಮೈ ಬಣ್ಣದ ಸಂಕೇತ ಜುಟ್ಟದಲ್ಲಿ ಒಂದು ಅಲಂಕಾರಿಕ ವಸ್ತು ಇಟ್ಟು ಸಂಯೋಜಿಸಿದ್ದಾನೆ. ತಿಳಿನೀಲಿ, ಕೇಸರಿ, ದಟ್ಟ ಕಪ್ಪು ವರ್ಣದ ಆಧಾರಗಳಿಂದ ಚಿತ್ರಕ್ಕೆ ಗಟ್ಟಿತನ ಎದ್ದು ಕಾಣುತ್ತದೆ. ಕಣ್ಣುಗಳ ರಚನೆಯು ಮೌನಪರಗತ್ತು ಗೋಚರಿಸುತ್ತದೆ.

ಚಿತ್ರ ನಂ. ೨೪ ರಲ್ಲಿ ರಾಜಠೀವಿಯು ಪ್ರದರ್ಶಿಸುತ್ತದೆ. ದೊಡ್ಡ ಸಿಂಹಾಸನ ಅದರ ಮೇಲೆ ದಟ್ಟ ದೇಹದ ರಾಜಠೀವಿಯ ಅಗಲ ಮುಖ ಮೀಸೆ ಎಲ್ಲವನ್ನೂ ನೋಡಿದರೆ ಒಡೆಯರ ಅಥವಾ ತಂಜಾವೂರಿನ ರಾಜ ನನ್ನ ಭಾವಚಿತ್ರ ರಚಿಸಿರಿ ಎಂದು ಚಿತ್ರಕಲಾವಿದನೆದುರು ಕುಳಿತಂತೆ ಭಾಸವಾಗುತ್ತದೆ. ಆದರೆ ಕಲಾವಿದ ಆ ಭಾವಚಿತ್ರವನ್ನು ಕಲಾತ್ಮಕವಾಗಿ ಚಿತ್ರಿಸಿ ಕಲಾ ಪ್ರೌಢಿಮೆ ಮೆರೆದಿದ್ದಾನೆ. ಒಟ್ಟಾರೆ ನೆಳಲು ಬೆಳಕನ್ನು ತರಲು ಪ್ರಯತ್ನಿಸಿದ್ದಾನೆ. ರಾಜಾ ಎದುರಿಗೆ ತನ್ನ ಕಾರಭಾರಿಯನ್ನು ನಿಲ್ಲಿಸಿಕೊಂಡು ಅಧಿಕಾರವಾಣಿಯಿಂದ ಸೂಚಿಸುತ್ತಿದ್ದಾನೆ.


ಆ ಸಿಂಹಾಸನದ ಪಕ್ಕದಲ್ಲಿ ಆ ರಾಜಠೀವಿಗೆ ಸಾದೃಶ್ಯವಾಗುವಂತೆ ಖಡ್ಗ ಹಾಗೂ ಢಾಲುಗಳನ್ನು ಚಿತ್ರಿಸಿದ್ದಾನೆ. ಈ ಭಿತ್ತಿ ಚಿತ್ರಕ್ಕೆ ಕಮಾನು ರಚಿಸಿರುವುದು ಅದರ ಹೊರಗಡೆಗೆ ಅಲಂಕಾರಿಕ ನಕ್ಷೆ ರಚಿಸಿರುವುದು ಭಿತ್ತಿ ಚಿತ್ರದಂತೆ ಗೋಚರಿಸುತ್ತದೆ. ರಾಜನ ಪಟಗ ಅದರ ಮೇಲೆ ತುರ್ರ್ಯ ಜೋತಾಡುವ ಮುತ್ತಿನ

ಗೊಂಡೆ ಕೊರಳಲ್ಲಿ ದೊಡ್ಡ ಪದಕವಿರುವ ಹಾರ, ಬಿಳಿ ಅಂಗಿ, ಹಾಗೂ ಮೇಲು ಕೋಟು ಕೊರಳಲ್ಲಿ ಮುತ್ತಿನಹಾರ ಇವೆಲ್ಲವೂ ಕಲಾತ್ಮಕವಾಗಿವೆ.

ಹಿನ್ನೆಲೆ ತಿಳಿನೀಲಿ ಹಾಗೂ ಕೆಳಗೆ ತಿಳಿ ಕಂದು-ಬಣ್ಣದ ಭಾಗ ಚಿತ್ರಾಕೃತಿಯನ್ನು ಶಾಂತವನ್ನಾಗಿಸಿದೆ. ಚಿತ್ರಾಕೃತಿಯ ಮಧ್ಯದಲ್ಲಿ ಝುಮರಾ ಅಲಂಕಾರಮಯವಾಗಿದೆ. ಅಂಗಿಗೆ ಬಳಸಿದ ಬಿಳಿ ಬಣ್ಣವನ್ನೆ ಹಿನ್ನೆಲೆಯ ಅರಿವೇ ಪರದೆಯ ಮೇಲೆಯು ಬಳಸಿ ವರ್ಣ ಸಮತೋಲನ ಕಾಯ್ದುಕೊಂಡಿದ್ದಾರೆ. ಒಟ್ಟಾರೆ ಚಿತ್ರ ರಾಜ ದರ್ಭಾರದ ಕಲ್ಪನೆ ಕೊಡುತ್ತದೆ.

***

ಗ್ರಾಮೀಣಕಸೂತಿ ಕಲೆ



ಇದೇ ದೇಶೀಯ ಕಸೂತಿಯನ್ನೇ ಆಧರಿಸಿ ಹೊಸದೊಂದು ಕಸೂತಿ ಆವಿಷ್ಕರಿಸಿತು. ಆ ಕಸೂತಿ ಇಂದು ಪ್ರಖ್ಯಾತಿಯನ್ನು ಪಡೆದಿದೆ. ಇದು ಇಂದು ಎಲ್ಲಾ ಮನೆಗಳಲ್ಲಿ ಸರ್ವೇ ಸಾಮಾನ್ಯವಾಗಿದೆ.

ಶಾರ್ಟ್ ಆಂಡ್ ಲಾಂಗ್ ಸ್ಟಿಚ್ (ಚಿಕ್ಕ ದೊಡ್ಡ ಟಿಬ್ಬಿಗಳ ಕಸೂತಿ):– ಈ ಕಸೂತಿ ನೆಳಲು ಬೆಳಕಿನ ಪ್ರಭಾವದಿಂದ ತನ್ನ ಕ್ಷೇತ್ರವನ್ನು ಇನ್ನೂ ವ್ಯಾಪಿಸಿಕೊಳ್ಳಹತ್ತಿದೆ. ಧಾರವಾಡದ ಮರಾಠಾ ಕಾಲನಿಯಲ್ಲಿ ಕಳೆದ ಅರ್ಧ ಶತಮಾನದ ಹಿಂದೆ ಜೀವಿತಾವಸ್ಥೆಯ ಬಾಳ ಸಂಜೆಗಳನ್ನು ಶ್ರೀಮತಿ ರುದ್ರವ್ವ ಸಿದ್ರಾಮಯ್ಯ ಮಠದ ಅವರು ದೇಶೀಯ ಕಸೂತಿಯಿಂದಲೆ ಆಸಕ್ತಿ ಬೆಳೆಸಿ ಕೊಂಡವರು; ಮುಂದುವರಿದು ಮೆಂತೆ, ಗಂಟೆಹೆಣಿಕೆ, ಸಿಂಧಿ ಮೊದಲಾದ ಕಸೂತಿಗಳನ್ನು ಮಾಡುತ್ತಾ ಸಾದಾ ಬಟ್ಟೆಯ ಮೇಲೆ ಅತೀ ಸೂಕ್ಷ್ಮವಾದ ಸೂಜಿಯನ್ನು ಬಳಸಿ ತಿಳಿಯಾದ ಬಣ್ಣದ ಬಟ್ಟೆಯ ಮೇಲೆ ದಟ್ಟ ವರ್ಣಗಳ ದಾರಗಳನ್ನು ಬಳಸಿ ಮನಮೋಹಕವಾದ ಕಸೂತಿಗಳನ್ನು ನಿರ್ಮಿಸಹತ್ತಿದರು.

ದಿವಂಗತ ರುದ್ರವ್ವನವರ 'ಶಾರ್ಟ್ ಲಾಂಗ್ ಸ್ಟಿಚ್' ಕಸೂತಿಯಲ್ಲಿ ದೇವರ ದೇವತೆಯರ ಆಕಾರಗಳನ್ನು ಮೂಡಿಸಿರುವುದು ಧಾರ್ಮಿಕಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ; ಗಾತ್ರ ೨ x ೨ ೧/೨ ಅಡಿಗಳಾಗಿವೆ.

ಲಕ್ಷ್ಮಿ, ಗಣಪತಿ, ಸರಸ್ವತಿಯರ ಕಸೂತಿ ನೋಡಿದಾಗ ಇದರ ಚಿತ್ತಾರವನ್ನು ಚೆನ್ನಾಗಿ ಚಿತ್ರಬಲ್ಲವರ ಸಹಾಯದಿಂದ ಚಿತ್ರಿಸಿಕೊಂಡು ತದನಂತರ ತಾಳ್ಮೆಯಿಂದ ದಾರಗಳನ್ನು ತುಂಬಿದ್ದಾರೆ. ಲಕ್ಷ್ಮಿಗೆ ದಟ್ಟ ಕೆಂಪುವರ್ಣವನ್ನು ಬಳಸಿದ್ದಾಗಿದೆ. ಸರಸ್ವತಿಗೆ ತಿಳಿನೀಲಿ ಬಣ್ಣವನ್ನು ಬಳಸಿ ವರ್ಣ ಸಂಯೋಜನೆಯ ಪ್ರೌಢತೆಯನ್ನು ಮೆರೆದು ಲಕ್ಷ್ಮಿಯ ಚಂಚಲತೆ, ಸರಸ್ವತಿಯ ಶಾಂತ ಹಾಗೂ ವಿಶಾಲತೆಯ ಭಾವ ಅದರಲ್ಲಿ ಗೋಚರಿಸುತ್ತದೆ. ಮಧ್ಯದಲ್ಲಿ ಬಳಸಿದ ಗಣಪತಿಯ ಚಿತ್ರದಲ್ಲಿ ಕೇಸರಿ ಬಳಸಿರುವುದು ನೋಡಿದರೆ ತ್ಯಾಗದ ಪ್ರತೀಕ ಇದಾಗಿದೆ. ಎಲ್ಲಾ ಆಭರಣಗಳಿಗೆ ಸರಿಯಾಗಿ ಚಿತ್ರಿಸಿ ಸುವರ್ಣದ ಭಾವ ಕೊಡುವ ಹಳದಿ ಕೇಸರಿಯಿಂದ ಪೂರ್ಣಗೊಳಿಸಿದ್ದಾರೆ.

ರೇಖಾ ವಿನ್ಯಾಸ ಹಾಗೂ ನೆಳಲು ಬೆಳಕು:– ರುದ್ರವ್ವಳು ತೀಕ್ಷ್ಣವಾದ ರೇಖಾವಿನ್ಯಾಸದಿಂದ ಚಿತ್ರ ಚಿತ್ರಿಸಿಕೊಂಡು ನೆಳಲು ಬೆಳಕಿನ ಕಲ್ಪನೆ ಕೊಡುವ ಕಮಲಗಳ ನೋಡಿಸಿಕೊಳ್ಳುತ್ತವೆ. ಸರಸ್ವತಿ ಹಾಗೂ

ಲಕ್ಷ್ಮಿಯ ಸೀರೆಯ ಕಸೂತಿಯಲ್ಲಿ ಸುಂದರವಾದ ನೆಳಲಿನ ಬೆಳಕಿನ ಕಲ್ಪನೆಗಳು ಸುಂದರವಾಗಿ ಮೂಡಿವೆ. ಕಮಲದ ಹೂವುಗಳಲ್ಲಿ ನೆಳಲು ಬೆಳಕಿನ ಕಲ್ಪನೆ ಸ್ವಲ್ಪ ಅಸ್ತವ್ಯಸ್ತತೆ (ನೀಟಾಗದೇ) ಇರುವುದು ಕಂಡು ಬಂದಿದೆ. ಕಟಿ ಕಂಠಾಭರಣಗಳಲ್ಲಿ ಸೂಕ್ಷ್ಮತೆ ಮೆರೆದಿದ್ದಾರೆ. ಸರಸ್ವತಿ ತನ್ನ ಕೈಯಲ್ಲಿ ಹಿಡಿದಿರುವ ತಂಬೂರಿಯಲ್ಲಿ ನೆಳಲು ಬೆಳಕಿನ ಕಲ್ಪನೆಯನ್ನು ಚೆನ್ನಾಗಿ ಮೂಡಿಸಿದ್ದಾರೆ. ಈ ದೇವರ ಆಕಾರಗಳ ಕೈ ಬೆರಳು, ಕಾಲ್ಬೆರಳು ಹಾಗೂ ಮುಖದ ಭಾವದಲ್ಲಿ ಕಣ್ಣು ,ಮೂಗು, ತುಟಿಗಳನ್ನು ಚೆನ್ನಾಗಿ ಕಸೂತಿ ಮಾಡಿದ್ದು ತೀಕ್ಷ್ಣವಾದ ಭಾವ ಅದರಲ್ಲಿರುವುದನ್ನು ಕಾಣುತ್ತೇವೆ.

ಲಕ್ಷ್ಮಿ- ಸರಸ್ವತಿಯರ ಮಧ್ಯದಲ್ಲಿರುವ ಗಣಪತಿ, ಗಣಪತಿಯ ವಾಹನ ಇಲಿಯ ಚಿತ್ರ ವಾಸ್ತವಿಕತೆಯ ಪರಾಕಾಷ್ಠೆಯನ್ನು ತಲುಪಿದೆ. ಈ ಕಸೂತಿ ಕಲಾವಿದೆ ಚಿತ್ರವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾಳೆ. ದಟ್ಟ ವರ್ಣದ ಹಿನ್ನೆಲೆಗೆ ತಿಳಿಯಾದ ಬಣ್ಣಗಳ ಹೊರರೇಖೆಗಳನ್ನು ಹಾಗೂ ತಿಳಿಯಾದ ಹಿನ್ನೆಲೆಗೆ ದಟ್ಟವಾದ ಬಣ್ಣದ ಹೊರರೇಖೆಗಳನ್ನು ಹಾಕುತ್ತಾ ಕಸೂತಿಯನ್ನು ಪೂರ್ತಿಮಾಡಿದ್ದಾರೆ.

ದಟ್ಟವಾದ ಕಪ್ಪುಬಣ್ಣದ ದಾರವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಕೂದಲು ಹಾಗೂ ಕಣ್ಣುರೆಪ್ಪೆ, ಗುಡ್ಡೆಗಳಲ್ಲಿ ಕಪ್ಪು ಬಳಸಿದ್ದಕ್ಕೆ ದೇವರುಗಳ ತಲೆಯ ಮೇಲಿರುವ ಆಭರಣವಾದ ಕಿರೀಟ ಹಾಗೂ ಕಂಠಾಭರಣಗಳು ಎದ್ದು ಕಾಣುತ್ತವೆ. ೨ x ೩ ಗಾತ್ರದ ಕಸೂತಿ ಇದಾಗಿದೆ.

ಪ್ರಸ್ತುತ ಸುಂದರ ಕಲಾಕೃತಿ ನಿರ್ಮಿಸಲು ಅಧಿಕ ಸಮಯವನ್ನು ತೆಗೆದುಕೊಂಡಿರಲೇಬೇಕು. ಅನೇಕ ಜನ ಸಖಿಯರು ಸೇರಿಕೊಂಡು ಏಕಕಾಲಕ್ಕೆ ತಮ್ಮ ತಮ್ಮ ಕಸೂತಿಗಳನ್ನು ನಿರ್ಮಿಸಿಕೊಂಡಿರುವುದು ಈ ಕಲಾಕೃತಿ ನಿರ್ಮಾಣಕ್ಕೆ ತೊಡಗಿಸಿದ ತಾಳ್ಮೆಯಿಂದ ಖಚಿತಪಡುತ್ತದೆ. ಸಮೂಹ ಮಾಧ್ಯಮದಿಂದ ಸ್ನೇಹಸೌಹಾರ್ದತೆಯಿಂದ ಮಾತ್ರ ಇಂತಹ ಕೃತಿಗಳ ನಿರ್ಮಾಣವಾಗುತ್ತದೆ. ಕೃತಿನಿರ್ಮಿಸುವವನಲ್ಲಿ ತಾಳ್ಮೆಗುಣವನ್ನು ಬೆಳೆಸದೆ ಇರಲಾರವು.

ಈ ಶಾರ್ಟ್ ಅಂಡ್ ಲಾಂಗ್ ಸ್ಟೈಚ್ ಸ್ಟಿಚ್‌ದ ಕಸೂತಿಯನ್ನು ದಾರವಾಡದ ಶ್ರೀಮತಿ ಜಮುನಾ ಚೆನ್ನು, ಮಠದ ಪ್ರಕೃತಿಯ ಸುಂದರ ರೂಪಗಳನ್ನು ಹಾಗೂ ಪಕ್ಷಿ, ಹೂವು, ಬಳ್ಳಿಗಳನ್ನು ಚೆನ್ನಾಗಿ ಸಂಯೋಜಿಸಿ ಕಸೂತಿ ಹಾಕಿ ಸುಂದರ ಕಲಾಕೃತಿಗಳನ್ನು ದಟ್ಟವಾದ ಕಪ್ಪುಬಣ್ಣದ ಬಟ್ಟೆಯ ಮೇಲೆ ರಚಿಸಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಸರಕಾರದ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಇವರ ಪತಿಯವರಾದ ಶ್ರೀ ಚನ್ನು ಅವರು ಈ ಕಸೂತಿ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿ ಕಸೂತಿಕಲೆಯ ಮಹತ್ವವನ್ನು ದೆಹಲಿಯಲ್ಲಿ ಬಿತ್ತರಿಸಿದ್ದಾರೆ. ಶ್ರೀಮತಿ ಜಮುನಾ ಕಲಾ ಅಧ್ಯಯನ ಶಾಸ್ತ್ರೋಕ್ತವಾಗಿ ನಡೆಸದಿದ್ದರೂ ಕನ್ನಡನಾಡಿನ ಕಸೂತಿ ಕಲಾಕೃತಿಗಳನ್ನು ಸದಾ ಮಾಡಿ ನೋಡಿ ಆನಂದಿಸುತ್ತ ಜೀವನ ಸಾಗಿಸುತ್ತಿದ್ದಾರೆ. ಈ ಗುಬ್ಬಿ ಹೂಗಳ ಕೃತಿ ೨ x ೨ ಗಾತ್ರದ್ದಾಗಿದೆ. ದಟ್ಟ ಕಂದಿ ಅಥವಾ ಕಪ್ಪು ಬಟ್ಟೆಯ ಮೇಲೆ ಹೊಳಮಳ್ಳ ದಾರದ ಸಹಾಯದಿಂದ ಕಸೂತಿ ಹಾಕಿ ಕಸೂತಿ ಕಲಾಕೃತಿಗಳದ್ದೇ ಪ್ರದರ್ಶನ ಏರ್ಪಡಿಸಿ

ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿಸಿಕೊಂಡಿರುವುದನ್ನು ನೋಡಿದರೆ, ಸಂಪ್ರದಾಯಬದ್ಧವಾಗಿ ನಮ್ಮ ನಾಡಿನಲ್ಲಿ ನಡೆದ ಕಸೂತಿ ಕಲೆಯ ಸಂಪ್ರದಾಯವನ್ನು ಆಧುನಿಕ ಸಮಾಜ ಹಾಗೂ ಯುವ ಪೀಳಿಗೆ ಮಹತ್ವ ಕೊಡುತ್ತಿರುವುದು ಸೌಂದರ್ಯ ಪ್ರಜ್ಞೆಗೆ ಹಿಡಿದ ಕೈಗನ್ನಡಿಯಾಗಿದೆ.

ಇವರ ಕಸೂತಿ ಕಲಾಕೃತಿಗಳಲ್ಲಿ ಕರ್ನಾಟಕದ ದಾಸ್ಯಾಳ ಹೂವಿನ ಅದರಲ್ಲೂ ಕೆಂಪು ದಾಸ್ಯಾಳ ಹೂವಿನ ಹಾಗೂ ಗುಬ್ಬಿಗಳ ವರ್ಣ ಸ್ವಚ್ಛ ಹಾಗೂ ನೆಳಲು ಬೆಳಕಿನ ಕಲ್ಪನೆಯೊಂದಿಗೆ ಕಸೂತಿ ಹಾಕಲ್ಪಟ್ಟಿವೆ. ಎಲೆ ದೇಟುಗಳ ಮೇಲಿರುವ ನೆಳಲು ಬೆಳಕನ್ನು ನೋಡಿದರೆ ದಾರವನ್ನು ಕಸೂತಿಯಲ್ಲಿ ಬಳಸಿ ವರ್ಣ ಚಿತ್ರದ ಕಲ್ಪನೆ ಬರುವ ತೆರದಿ ಕೃತಿಗಳ ಸೃಷ್ಟಿಯಾಗಿದೆ. ಇದರಲ್ಲೆ 'ಲಾಂಗ್ ಬಟನ್ ಹೋಲ್ ಸ್ಟಿಚಸ್ ಎಂಬ ಉಬ್ಬು ಗಂಟುಗಳ ಹೆಣಿಕೆ ಇಲ್ಲಿ ಹೊಸ ಸಂಶೋಧನೆಯಾಗಿದೆ. ಸಿಂಧಿ ಕಸೂತಿಯು ಪ್ರಬಲವಾಗಿ ಬೆಳೆಯಹತ್ತಿದೆ.

ಕ್ರಾಸ್ ಸ್ಟಿಚ್ (ಕತ್ತರಿ ಹೆಣಿಕೆ):- ಮೆಂತೆ ಹೆಣಿಕೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ಬಹುಶಃ ದೊಡ್ಡ ನೂಲಿನ ತಟ್ಟನ್ನು ಅಂದರೆ ನಾರಿನ ಅಥವಾ ಸುತಳಿಯ ಮಾಧ್ಯಮದಿಂದ ರಚಿಸಿದ ತಟ್ಟನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ಕ್ರಾಸ್ ಸ್ಟಿಚ್ ಎಂಬ ಕತ್ತರಿ ಕಸೂತಿ ಹಾಕಿ ನೋಡಹತ್ತಿದರು. ಇಂತಹ ಸರಳ ಹಾಗೂ ಸುಂದರ ಕಸೂತಿಗೆ ಧಾರವಾಡದ ಹೊಸೆಲ್ಲಾಪಾರದ ಶ್ರೀ ವೆಂಕಟೇಶ ದೇವಸ್ಥಾನದ ಹತ್ತಿರ ವಾಸಿಸುತ್ತಿರುವ ಶ್ರೀಮತಿ ಲೀಲಾವತಿ ರಾಘವೇಂದ್ರರಾವ್ ದೇಶಪಾಂಡೆಯವರು ಕಳೆದ ಐವತ್ತು ವರ್ಷಗಳ ಹಿಂದೆ ತಯಾರಿಸಿದ ಈ ಕತ್ತರಿ ಹೆಣಿಕೆಯ ಕಸೂತಿಯನ್ನು ನೋಡಿರಿ.

ಇಲ್ಲಿ ಎಲ್ಲ ಹೆಣಿಕೆಗಳು ತಟ್ಟನ್ನು ಮೇಲ್ಗಡೆಗೆ ಕಾಣದಂತೆ ಕಾರ್ಯ ಮಾಡಿವೆ. ಪ್ರತಿಹಂತದಲ್ಲಿ ಕತ್ತರಿಯಾಗಿ ದಾರ ಬಂದಿದೆ. ತಪ್ಪಿಯೂ ಸಮಾಂತರವಾಗಿ ದಾರ ಬಂದಿಲ್ಲ. ದೊಡ್ಡ ತಟ್ಟಿನ ಮೇಲೆ ಭೂಮಿತಿ ಗಾತ್ರ, ಸ್ವಸ್ತಿಕ, ಪಾತರಗಿತ್ತಿಗಳು, ಚಿಗರಿಗಳು ಹಾಗೂ ಹೂವಿನ ಕುಂಡಗಳು ಚೆನ್ನಾಗಿ ಗೋಚರಿಸಿವೆ. ಪಾತರಗಿತ್ತಿಯ ದೇಹ, ಮೀಸೆ ಹಾಗೂ ಪರಿಖಿಗಳು ಚೆನ್ನಾಗಿ ಎರಡೇ ಬಣ್ಣಗಳಲ್ಲಿ ಸುಂದರವಾಗಿದೆ. ಚಿಗರಿ ಹಾಗೂ ಅದರ ಕಣ್ಣು ಜೊತೆಗೆ ನರ್ತಿಸುವ ಜಿಗರಿ ಹಾಗೂ ಹಿನ್ನೆಲೆ ದಟ್ಟ ಹಸಿರು ಬಣ್ಣದ ಹಿನ್ನೆಲೆ ಮುಂತಾದವುಗಳು ವರ್ಣ ಸಂಯೋಜನೆಯಿಂದೊಡಗೂಡಿದೆ. ೫ x ೭ ಗಾತ್ರದ್ದಾಗಿದೆ.

ಪ್ರಾಥಮಿಕ ವರ್ಣಗಳಾದ ನೀಲಿ, ಹಳದಿ, ಕೆಂಪು ಬಣ್ಣಗಳನ್ನು ಸಮರ್ಥವಾಗಿ ದುಡಿಸಿಕೊಂಡಿರುವುದು; ಅದರೊಂದಿಗೆ ಹಸಿರು, ಕೇಸರಿ, ದ್ವಿತೀಯ ವರ್ಣಗಳನ್ನು ಬಳಸಿರುವುದು ಬಣ್ಣದ ಮೇಲಿರುವ ಹಿಡಿತ, ಬಣ್ಣದ ಜ್ಞಾನವಿರುವುದು, ಅದರ ಜೊತೆಗೆ ಜಾನಪದೀಯ ಆಕಾರಗಳನ್ನು ಶಿಷ್ಟಕ್ಕೆ ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಈ ಕಸೂತಿ ಹೊಂದಿದ ಬಟ್ಟೆಯನ್ನು ಹಾಸಲು ಹೊದಿಯಲು ಅಲಂಕಾರಿಕ ಕಾರ್ಯಕ್ಕೆ ಉಪಯೋಗಿಸುತ್ತಾರೆ.

ಇದೇ ಆಧಾರದಿಂದ 'ಪರ್ಫೋರೇಟೆಡ್ ಬೋರ್ಡ್' ಎಂಬ ಗ್ರಾಫಿಕ್ ಬೋರ್ಡಗಳು ರಟ್ಟಿನ ಮೇಲೆ ನಿರ್ಮಾಣವಾದವು. ೧೯೨೫ – ೩೫ ರಲ್ಲಿ ಈ ತೂತುಗಳುಳ್ಳ ರಟ್ಟಿನ ಬೋರ್ಡಿನ ಆಧಾರದಿಂದ ಕ್ರಾಸ್ ಸ್ಟಿಚ್‌ಗಳನ್ನು ಮಾಡುವುದಲ್ಲದೆ, ಅನೇಕ ನೈಸರ್ಗಿಕ ಹಾಗೂ ಅಲಂಕಾರಿಕ ರೂಪಗಳನ್ನು ಭಾರತೀಯ ಕಲಾವಿದರುಗಳು ಕಸೂತಿಯಲ್ಲಿ ನಿರ್ಮಿಸಿದ್ದಾರೆ.

ಈ ತೆರನಾದ ಅನೇಕ ಗಟ್ಟಿಮುಟ್ಟಾದ ದಾರಗಳ ಅರಿವೆಗಳನ್ನು ಉಪಯೋಗಿಸಿ ಕ್ರಾಸ್ ಸ್ಟಿಚ್ ಮಾಡಿರುವುದು ಕಂಡು ಬರುತ್ತದೆ. ನಂತರ ತಟ್ಟಾಗಲಿ ಪ್ಲಾಸ್ಟಿಕ್ ದಾರವಾಗಲಿ ಕಾಣದ ಹಾಗೆ ಅರಿವೆ ಹೊಲಿಯುವುದು ವಿಶೇಷ.

ಮೆಂತೆ ಹೆಣಿಕೆ:– ಗುಳೇದ ಗುಡ್ಡದ ಶ್ರೀಮತಿ ಶಶಿಕಲಾ, ಮಹಾದೇವ, ಜಗತಾಪ ಅವರ ಪತ್ನಿ ಅಂದರೆ ಬಾಗಲಕೋಟದ ಯಲ್ಲೂಬಾಯಿ ಜಾಧವ ತನ್ನ ಬಾಲ್ಯಾವಸ್ಥೆಯಿಂದ ಹೆಣಿಕೆಯಲ್ಲಿ ಆಸಕ್ತಿ ಹೊಂದಿದವಳು. ಮೆಂತೆ, ಡಬಲ್ ಮೆಂತೆ ಕಸೂತಿ ಮಾಡುವುದೆಂದರೆ ಎಲ್ಲಿಲ್ಲದ ಆನಂದ.

ಪ್ರಸ್ತುತ ಚಿತ್ರಗಳನ್ನು ಮೆಂತೆ (ಮೇಟಿ) ಬಟ್ಟೆಯ ಮೇಲೆ ಚೆನ್ನಾಗಿ ಮೂಡಿಸಿಕೊಂಡು 'ಕತ್ತರಿ ಹೆಣಿಕೆ' ಹಾಕಿರುವುದನ್ನು ನಾವು ನೋಡಿದರೆ, ಈ ಮೊದಲು ತಟ್ಟಿನ ಮೇಲೆ ದಪ್ಪ ನೂಲಿನ ದಾರದಿಂದ ಕ್ರಾಸ್ ಸ್ಟಿಚ್ ಮಾಡಿ ಸಫಲ ಕಸೂತಿಯನ್ನು ನೋಡಿದರೆ ಆನಂದವೆನಿಸುತ್ತದೆ.

ಶ್ರೀಮತಿ ಜಗತಾಪ ಅವರು ಹಾಕಿದ 'ಬಲಮುರಿ ಸೊಂಡಿಲ ಗಣಪ' ಮಂಡೆಗಾಲಿಕ್ಕಿದ ಹಾಗೂ ಕಡಗೋಲು ಕೃಷ್ಣನ ಡಬಲ್ ಮೆಂತೆ ಹೆಣಿಕೆಗಳಲ್ಲಿ ದಟ್ಟಕಪ್ಪು ವರ್ಣವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಗಣಪತಿಯ ಎದುರಿಗೆ ಪೂಜಾ ಥಾಲಿ, ಗಂಟೆ, ತಂಬಿಗೆ, ದೀಪ, ಚೆನ್ನಾಗಿ ಮೂಡಿ ಬಂದಿದೆ. ಬಾಲಕೃಷ್ಣರ ಚಿತ್ರಗಳು ಹಾಗೂ ತಲೆಗೂದಲಿಗೆ ಬಳಸಿದ ಬೆಣ್ಣೆಯ ದಟ್ಟ ಬಣ್ಣ ಹಾಗೂ ಬೆಣ್ಣೆಗೆ ಬಳಸಿದ ಬಣ್ಣ ಬಹಳ ಚೆನ್ನಾಗಿ ಕಸೂತಿಯಾಗಿದೆ. ಕಡಗೋಲಿನಿಂದ ಬೆಣ್ಣೆಯ ಕಡೆಯುವ ಕೃಷ್ಣ, ಅಂಬೆಗಾಲಿಕ್ಕಿ ಬೆಣ್ಣೆ ತಿನ್ನುವ ಬಾಲಕೃಷ್ಣ ಎಲ್ಲವೂ ತಾಯಿಯಾಗುವ ಹಂಬಲವನ್ನು ವಿಘ್ನೇಶ್ವರನಲ್ಲಿ ಕೇಳಿದ ಹಾಗೆ ಭಾವ ಬಿತ್ತರಿಸುತ್ತವೆ.

ಕಮಲದ ಮೇಲೆ ಕುಳಿತ ಗಣಪತಿಯ ಸೊಂಡಿಲು ಬಲಬದಿಗೆ ಹೊರಳಿದ್ದು ನಾಲ್ಕು ಭುಜಗಳು. ಅದರಲ್ಲಿ ಬಲಗೈ ಆಶೀರ್ವಾದದ್ದು ಹಾಗೂ ಎಡಗೈಯಲ್ಲಿ ಮೋದಕವಿದ್ದರೆ ಇನ್ನೆರಡು ಕೈಗಳಲ್ಲಿ ಪರಶು ಅಂಕುಶಗಳಿರುವುದು ಕಂಡು ಬರುತ್ತದೆ.

ಇದೇ ತೆರನಾದ ದೇವಾನುದೇವತೆಯರಾದ ಶಿವ–ಪಾರ್ವತಿ, ಲಕ್ಷ್ಮಿ, ಅಂಬಾಭವಾನಿ, ತುಳಜಾಭವಾನಿ, ಶಿವಲಿಂಗ ಮುಂತಾದವುಗಳೊಂದಿಗೆ ಪ್ರಾಕೃತಿಕ ಸೌಂದರ್ಯವನ್ನು ಬಿಂಬಿಸುವ ಪಾತರಗಿತ್ತಿ, ನವಿಲು, ಪಾರಿವಾಳ, ಹೂವು ಬಳ್ಳಿಗಳನ್ನು ಈ ಡಬಲ್ ಮೆಂತೆದಲ್ಲಿ ಮಾಡಿದ್ದಾರೆ.

ಬಾರ್ಡರ್ ನಕ್ಷೆಗೆ ಬಣ್ಣದ ನಾಲ್ಕು ದಳದ ಹೂವು ಅವುಗಳ ಹೊಂದಾಣಿಕೆಗೆ ಬಳ್ಳಿ ಉತ್ತಮ ಸಂಯೋಜನೆಯಾಗಿದೆ.

ಧಾರವಾಡದ ದಿವಂಗತ ಶ್ರೀಮತಿ ರುದ್ರವ್ವ ಮಠದ ಅವರು ಕಳೆದ ಎಂಭತ್ತು ವರ್ಷಗಳ ಹಿಂದೆ ಮೆಂತೆ ಹೆಣಿಕೆಯಲ್ಲಿ ಚಿಗರಿ, ಹುಲಿ ಮುಂತಾದ ಪ್ರಾಣಿಗಳನ್ನು ಡಬಲ್ ಮೆಂತೆಯಲ್ಲಿ ಹೆಣೆದಿದ್ದು ನೋಡಿದರೆ ಪ್ರಾಣಿ ಪ್ರಪಂಚವನ್ನು ಪ್ರೀತಿಸುವುದು ತಿಳಿಯುತ್ತದೆ.

ಹೆಣಿಕೆಯಲ್ಲಿ ಚಿಗರಿಯ ಠೀವಿ ಹಾಗೂ ಅದರ ಕೋಡಿನಲ್ಲಿ ಕ್ರಾಸ್ ಸ್ಟಿಚ್, ಮೆಂತೆ ಹೆಣಿಕೆ ತನ್ನ ಅಲಂಕಾರವನ್ನು ಪ್ರದರ್ಶಿಸುತ್ತದೆ.

ಚಿಗರಿಯ ಕೆಳಭಾಗದಲ್ಲಿರುವ ಸಸಿ ಹಾಗೂ ಹುಲ್ಲಿನ ಗರಿಗಳು ಕಲಾ ಪ್ರೌಢಿಮೆ ಕಸೂತಿಯ ತಾಳ್ಮೆಗೆ ಹಿಡಿದ ಕೈಗನ್ನಡಿಯಾಗಿದೆ.

ಇನ್ನೊಂದು ಕಸೂತಿ ಹುಲಿಯನ್ನು ನೋಡಿದಾಗ ಹುಲಿಯ ಮೈ ಬಣ್ಣ ಹಾಗೂ ಬಾಲದ ಭಾಗದಲ್ಲಿ ನಂತರ ಸುಂದರವಾದ ಪ್ರಕೃತಿಯಲ್ಲಿ ವರ್ಣ ಸಂಯೋಜನೆ ಚೆನ್ನಾಗಿ ಮಾಡಿದ್ದಾರೆ. ಆಕಾಶದ ನೀಲಿಯಲ್ಲಿ ಜಾಂಬಳಿ ಬೆರೆತಿರುವುದು ಹಾಗೂ ಟೆಂಗಿನ ಗರಿಗಳ ಮಧ್ಯ ಆ ಬಣ್ಣ ಗೋಚರಿಸುತ್ತಿರುವುದು ನೋಡಲು ಬಲು ರಮ್ಯವೇ ಸರಿ. ಈ ಮೆಂತೆ ಕಸೂತಿಯಲ್ಲಿ ದಟ್ಟ ಹಸಿರು ಹಾಗೂ ಕರೆ ಬಣ್ಣದ ದಾರಗಳನ್ನು ಅವಶ್ಯವಿದ್ದಲ್ಲಿ ಚೆನ್ನಾಗಿ ಬಳಸಿಕೊಂಡಿದ್ದಾರೆ.

ಈ ರೀತಿಯ ಮೆಂತೆ ಹೆಣಿಕೆಯಲ್ಲಿ ಕೇವಲ ಹಿಂದೂಧರ್ಮದ ದೇವಿದೇವತೆಯರ ಚಿತ್ರಗಳಷ್ಟೇ ಮೂಡಿ ಬಂದಿಲ್ಲ. ಖುರಾನ್‌ದ ಕಲ್ಮಾಗಳ ಅಕ್ಷರಗಳನ್ನು ಕೂಡಾ ಈ ಕಸೂತಿ ಮೈಗೂಡಿಸಿಕೊಂಡಿದೆ. ಈ ಕಸೂತಿಯ ಪ್ರಭಾವ ಕ್ರೈಸ್ತ ಧರ್ಮದ ಏಸುಕ್ರಿಸ್ತನನ್ನು ಸಹಿತ ಇಂತಹ ಮೆಂತೆ ಕಸೂತಿಯಲ್ಲಿ ಮೂಡಿಸಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಈ ಕಸೂತಿ ಮೆಂತೆ ಕಸೂತಿ ಎಂಬ ದೇಶಿ ಹೆಸರಿನಿಂದ ಖ್ಯಾತಿ ಪಡೆದದ್ದಾಗಿದೆ.


ಇದನ್ನೆ ೧೯೯೬ ರಲ್ಲಿ ಗ್ರೇಟ್ ಬ್ರಿಟನ್‌ದವರು ಸರಳವಾಗಿ ಕಸೂತಿ ಹಾಕಲು ಬರುವ ಹಾಗೆ ರಟ್ಟನ್ನು ತಯಾರಿಸಿ 'ಸೆಲಿಬ್ರೆಶನ್ ಆಫ್ ಕ್ರಾಸ್ ಸ್ಟಿಚ್' ಎಂಬ ಪುಸ್ತಕವನ್ನು ಡೆವಿಡ್ ಅಂಡ್ ಚಾರ್ಲ್ಸ್ ಎಂಬುವವರು ಪ್ರಕಾಶಿಸಿದ್ದಾರೆ.

ಈ ಕ್ರಾಸ್ ಸ್ಟಿಚ್ ಕುರಿತು ಅನೇಕ ಪುಸ್ತಕಗಳು ಹೊರಬಂದಿರುವುದಕ್ಕೆ ಆ ಮೊದಲಿನ ಕತ್ತರಿ ಹೆಣಿಕೆಯೇ ದೇಶೀಯ ಮೆಂತೆ ಕಸೂತಿಯಾಗಿದೆ. ಇದುವೆ ನಂತರ ಕ್ರಾಸ್ ಸ್ಟಿಚ್ ಎಂಬ ಹೆಸರಿನಿಂದ ಖ್ಯಾತಿ ಪಡೆದಿದೆ.

ಸಿಂಧಿ ಹೆಣಿಕೆ:– ಬೆಳಗಾಂವೆ ಶ್ರೀಮತಿ ಮುಕ್ತಾ ಅಶೋಕ ಹೆಗಡೆಯವರು ಗುಳೇದಗುಡ್ಡದ ಲಕ್ಷ್ಮೀ ಕೊ–ಆಪ್ ಬ್ಯಾಂಕಿನಲ್ಲಿ ಉದ್ಯೋಗಿಗಳಾಗಿದ್ದರೂ ಸಹಿತ ತಮ್ಮ ಬಿಡುವಿನ ವೇಳೆಯಲ್ಲಿ 'ಸಿಂಧಿ ಕಸೂತಿಯನ್ನು' ಸತತವಾಗಿ ಹಾಕುತ್ತಾ ಅದರಲ್ಲಿ ಪ್ರೌಢಿಮೆ ಪಡೆದಿದ್ದಾರೆ. ಸಾದಾ ಬಟ್ಟೆಯ ಮೇಲೆ ಚಿತ್ತಾರ ಬಿಡಿಸಿಕೊಂಡು ಆ ಚಿತ್ತಾರಗಳಿಗೆ ಹೊರರೇಖೆಗಳನ್ನು ಒಂದೆಳೆ ಅಥವಾ ಎರಡೆಳೆಗಳ ಮುಖಾಂತರ ಹೆಣಿಕೆ ಹಾಕುವುದೇ ಸಿಂಧಿ ಕಸೂತಿ ಎಂದು ಹೆಸರು ಪಡೆದಿದೆ. ಕಾಶ್ಮೀರಿ ಕಸೂತಿ, ಬಟನ್ ಹೋಲ್, ಕಟ್ಟಿ ಹೊಲಿಗೆ, ಸರಪಳಿ ಹೊಲಿಗೆ, ಪ್ಯಾಟಿನ್ ಸ್ಟಿಚ್, ಗೋದಿ ಹೆಣಿಕೆ ಎಂಬ ಹೆಸರಿನಿಂದ ಬೇರೆ ಬೇರೆ ನಮೂನೆಯ ಕಸೂತಿಗಳನ್ನು ಹಾಕಬಹುದು ಎನ್ನುವ ಮುಕ್ತಾ ಅವರಿಗೆ ಅವರ ಅಜ್ಜಿಯವರಿಂದ ದಿವಂಗತ ಶ್ರೀಮತಿ ಗಂಗಮ್ಮಾ ವಿರೂಪಾಕ್ಷ ಅವರ ಪ್ರೇರಣೆಯಾಗಿದೆ. ಗಂಗಮ್ಮನವರು ನೇಯ್ಗೆ ಕಸೂತಿಯಲ್ಲಿ ಸಿದ್ಧಹಸ್ತರಿದ್ದರು. ಶ್ರೀಮತಿ ಮುಕ್ತಾ ಅವರು ಬಾಲ್ಯಾವಸ್ಥೆಯಿಂದ ನೇಯ್ಗೆಯಲ್ಲಿ ಆಸಕ್ತಿ ಹೊಂದಿರುವುದು ಅವರ ಅಜ್ಜಿಯವರು ಹಾಕುತ್ತಿರುವ ನೇಯ್ಗೆ ಕಸೂತಿಯಿಂದ ಮುಂದುವರಿದು ಮುಕ್ತಾ ಅವರು ಸಿಂಧಿ ಹಾಗೂ ಗುಜರಾಥಿ ಎಂಬ ನಾಮಾಂಕಿತ ಕಸೂತಿಯನ್ನು ಹಾಕುವುದರಲ್ಲಿ ಪರಿಣತಿ ಪಡೆದಿದ್ದಾರೆ. ಸಾಂಪ್ರದಾಯಿಕ ಕಸೂತಿಕಲೆಯು ತನ್ನ ತನವನ್ನು ತೊರೆದು ಹೊಸ ಪಂಥಗಳನ್ನು

ಹುಡುಕಿಕೊಂಡು ಹೋಗಿರುವ ಈ ಸಿಂಧಿ ಟಾಕಿ ಕಸೂತಿಯು ಧಾರವಾಡದ ಕಸೂತಿಯನ್ನು ಬುನಾದಿಯನ್ನಾಗಿಟ್ಟುಕೊಂಡು ಮುಂದುವರಿದಂತಿದೆ. ಸೀರೆ, ಟೇಬಲ್ ಕ್ಲಾಥ್, ಬಾಗಿಲ ಪರದೆ, ದಿಂಬಿನ ಕವರುಗಳು, ದುಬಟಿ, ಕೈಚೀಲ, ಏನೆಲ್ಲಾ ವಸ್ತುಗಳ ಮೇಲೆ ಬಣ್ಣದ ದಾರಗಳಿಂದ ಸಣ್ಣ ಸೂಜಿಯ ಮಾಧ್ಯಮದಿಂದ ಕೆಳಗಿನಿಂದ ಚುಚ್ಚಿ ಸೂಜಿಯನ್ನು ಮೇಲಕ್ಕೆ ತೆಗೆದುಕೊಂಡು ಅದಕ್ಕೆ ಸುತ್ತಿದ ದಾರವನ್ನು ಪದೇ ಪದೇ ಸುತ್ತುವುದರ ಮುಖಾಂತರ ಸರಪಳಿ ಕಸೂತಿ ನಿರ್ಮಾಣ. ಕ್ರಾಸ್, ಗೋದಿ, ಪಂಜಾಬಿ, ಸಿಂಧಿ, ಗುಜರಾತಿ, ಎಂಬ ಅನೇಕ ನಮೂನೆಯ ಕಸೂತಿಗಳನ್ನು ಹಾಕಿದ್ದಾರೆ.

ಬಟ್ಟೆಯ ಮೇಲೆ ಚಿತ್ರವನ್ನು ಕಾರ್ಬನ್ ಸಹಾಯದಿಂದ ಮೂಡಿಸಿಕೊಂಡು (ಚಿತ್ರಗಳ ಪುಸ್ತಕಗಳು ಮಾರ್ಕೆಟ್‌ನಲ್ಲಿ ಲಭ್ಯ) ಆ ಚಿತ್ರಗಳ ಮುಖಾಂತರ ಪೂರ್ತಿ ತುಂಬು ದಾರ ಹಾಕುವುದು, ಒಂದೆ ಎಳೆದಾರ ಹಾಕುವುದು, ಎರಡೆರಡು ಸಾಲುಗಳ ಮುಖಾಂತರ ಕಸೂತಿ ಹಾಕುವುದು ನೋಡಿದರೆ ಕೇವಲ ರೇಖಾ ವಿನ್ಯಾಸ ಪ್ರಧಾನವಾದ ಕಸೂತಿ ಇದಾಗಿದೆ. ಧಾರವಾಡದ ಕಸೂತಿಯನ್ನು ಹೋಲುತ್ತದೆ.



ಶ್ರೀಮತಿ ಮುಕ್ತಾ ಅವರಿಗೆ ಟೆಕ್ ಆಪ್ ಏಜೆನ್ಸಿ ೧೬೬, ನಾಗದೇವಿ ಸ್ಟ್ರೀಟ್, ಬಾಂಬೆ– ಇವರು ಮಾಡಿದ ಕಸೂತಿ ಪುಸ್ತಕ ಹೊಸ ಹೊಸ ನಮೂನೆಯ ಕಸೂತಿಗಳನ್ನು ಸೃಷ್ಟಿಸಲು ಸಹಾಯಕಾರಿಯಾಗಿದೆ.

ಸಾಂಪ್ರದಾಯಿಕ ಕಸೂತಿಗಳ ಆಧಾರದಿಂದ ಟೆಕ್ ಆಪ್ ಏಜೆನ್ಸಿಸ್ ಅವರು ಪುಸ್ತಕಗಳನ್ನು ಪ್ರಕಟಿಸಿ ಕಸೂತಿಕಲೆಯನ್ನು ಬೆಳೆಯಿಸಿ ಉಳಿಸಿಕೊಂಡು ಹೋಗುವಲ್ಲಿ ಸಹಾಯಕಾರಿಯಾಗಿದೆ. ಇವರು ನವ ದೆಹಲಿಯ ಮೊಡರ್ನ್ ಎಂಬ್ರಾಯಡರಿ ಸಿರಿಬ್, ಕಾಂತಾ ಕಲಾ ನಿಕೇತನ ಮುಂತಾದ ಪುಸ್ತಕಗಳನ್ನು, ಆಧರಿಸಿ ಹೊಸ ಹೊಸ ಕಸೂತಿಗಳನ್ನು ರಚಿಸಿದ್ದಾರೆ. ತಿಳಿ, ದಟ್ಟವಾದ ಬಣ್ಣದ ಬಟ್ಟೆಗಳ ಮೇಲೆ ವಿರುದ್ಧ ದಿಸೆಯಲ್ಲಿ ದಾರಗಳನ್ನು ಬಳಸಿದ್ದಾರೆ.

ಈ ಸಿಂಧಿ, ಕಸೂತಿಯಲ್ಲಿ ಹೂವು, ಎಲೆ, ಭೂಮಿತಿ ಆಕಾರಗಳು ಹಾಗೂ ಹೂವಿನ ಎಲೆಯ ದಳಗಳನ್ನು ದರಗಳ ಮಾಧ್ಯಮದಿಂದ ಸಮಾನ ಅಂತರದಿಂದ ಒಂದರಮೇಲೊಂದು ಎಳೆಗಳನ್ನು ಹಾಕಿ ಸುಂದರವಾದ ಕಸೂತಿ ಶೋಧಿಸಿದ್ದಾಗಿದೆ.

ಗಂಟು ಹೆಣಿಕೆ:– ಕಸೂತಿಯ ಅನೇಕ ಶೈಲಿಗಳಲ್ಲಿ ದಾರ ಸೂಜಿಯ ಮಾಧ್ಯಮದಿಂದ ಮೇಲ್ಗಡೆಗೆ

ಸೂಜಿ ಬಂದ ನಂತರ ಅದರ ಸಹಾಯದಿಂದ ಗಂಟುಗಳನ್ನು ಹಾಕಿದ್ದು ನೋಡಿದರೆ ಬಟ್ಟೆಯ ಮೇಲೆ ಮುತ್ತುಗಳನ್ನು ಹೊಂದಿಸಿದಂತೆ ಗೋಚರಿಸುತ್ತದೆ.

ಅತೀ ಸೂಕ್ಷ್ಮ ಗಂಟುಹೆಣಿಕೆ ಎಂದರೆ ಒಂದೆಳೆ ದಾರದಿಂದ ಮಾಡುತ್ತಾರೆ. ಹೆಚ್ಚು ದಪ್ಪ ಎಂದರೆ ಆರೆಳೆಯಿಂದಲೂ ಗಂಟು ಹೆಣಿಕೆಯ ಕಸೂತಿಯನ್ನು ಹಾಕುತ್ತಾರೆ.

ದಟ್ಟನೀಲಿ, ಕಂದು, ಕೆಂಪು, ಬಣ್ಣದ ಅರಿವೆಯ ಮೇಲೆ ಚಿತ್ರಕಲೆ ಬಲ್ಲವರಿಂದ ಮೇಣದ ಬಣ್ಣದ ಸಹಾಯದಿಂದ ಚಿತ್ತಾರ ಮೂಡಿಸಿಕೊಂಡು ಬಿಳಿ, ಹಳದಿ, ಕೇಸರಿ, ಒಂದೇ ತಿಳಿಯಾದ ಬಣ್ಣದಿಂದ ಗಂಟು ಹೆಣಿಕೆಯನ್ನು ಹಾಕುತ್ತಾರೆ. ದೂರದಿಂದ ನೋಡಿದಾಗ ಒಂದೇ ಬಣ್ಣದ ಹೊರರೇಖೆಗಳಂತೆ ಗೋಚರಿಸುತ್ತದೆ.

ಇಲ್ಲಿ ತೋರಿಸಿರುವ ಬಾಲಕೃಷ್ಣನ ಚಿತ್ತಾರ ಬೆಣ್ಣೆ ಕದಿಯಲು ಮುದ್ದು ಗಿಳಿಯೊಂದಿಗೆ ಯೋಜನೆ ಹಾಕುವ ಗಂಟು ಹೆಣಿಕೆಯ ಕಸೂತಿಯನ್ನು ಬಾದಾಮಿಯ ಶ್ರೀಮತಿ ಪೂರ್ಣಿಮಾ ಮಂಜುನಾಥ ಗೋಸಾವಿ ಎಂಬವರು ಬೇರೆ ಬೇರೆ ಬಣ್ಣದ ದಾರಗಳನ್ನು ಬಳಸಿ ತಯಾರಿಸಿದ್ದಾರೆ. ಟೇಬಲ್ ಕ್ಲಾಥ್, ಬಾಗಿಲ ಪರದೆ, ಪಿಲೋ ಕವರ್ಸ್‌ಗಳನ್ನು ಗಂಟು ಹೆಣಿಕೆಯಲ್ಲಿ ಏಕ ವರ್ಣ ಹಾಗೂ ಬಹುವರ್ಣಗಳಲ್ಲಿ ಕಸೂತಿ ಮಾಡಿ ತೋರಿಸಿದ್ದಾರೆ. ಗುಳೇದಗುಡ್ಡದ ಕೌಟುಂಬಿಕ ಸಲಹಾ ಕೇಂದ್ರದ ಸಲಹೆಗಾರ್ತಿ ಇವರಾಗಿದ್ದಾರೆ.


ಸೂಕ್ಷ್ಮ ಭಾಗದಲ್ಲಿ ಒಂದೆಳೆಯಿಂದ ಗಂಟುಗಳನ್ನು ಹಾಕುತ್ತ ಹೋಗಿ ಎಲ್ಲಿ ದೊಡ್ಡಭಾಗವಿದೆಯೋ, ದೊಡ್ಡಗಾತ್ರದ ನಕ್ಷೆ ಇದೆಯೋ, ಆ ಕಸೂತಿಯನ್ನು ಉಲ್ಲನ್ ದಾರದಿಂದಲೂ ಹಾಕುತ್ತಾರೆ.

ಇದರ ಉಲ್ಲನ್‌ದಾರದಲ್ಲಿ ತಯಾರಿಸಿದ 'ಪದ್ಮ ಸುಂದರಿ' ಎಂಬ ಬಾಗಿಲ ಪರದೆ 'ಸರೋವರದಲ್ಲಿ ದೇಟು, ಅದರ ಮೇಲೆ ಕಮಲ, ಅದರಲ್ಲಿ ಸರ್ವಾಂಗ ಸುಂದರಿ ಕುಳಿತಿರುವುದು' ನೋಡುಗರನ್ನು ಆಕರ್ಷಿಸುತ್ತದೆ.

ಚಾಕಲೇಟ್, ಹಾಗೂ ದಟ್ಟನೀಲಿ ಬಟ್ಟೆಯಲ್ಲಿ ಹಾಕಿದ ಸರಳ ಕೈ ಚಿತ್ರಗಳಂತೂ ಬಹಳ ಚೆನ್ನಾಗಿ ಗೋಚರಿಸುತ್ತವೆ.

ಈ ಬಾಲ ಕೃಷ್ಣನ ಕುಳಿತ ಭಂಗಿ ಅವನ ದಟ್ಟವರ್ಣದ ತಲೆ ಕೂದಲು, ತಿಲಕ, ಹಾಗೂ ನೆಲುವಿನ ಮೇಲಿನ ಬೆಣ್ಣೆಯ ಕುಡಿಕೆಗಳು – ನೋಡುಗರಿಗೆ ಆನಂದವನ್ನುಂಟು ಮಾಡುವ ಉತ್ತಮ ಸಂಯೋಜನೆ ಇದಾಗಿದೆ. ಎದುರಿಗೆ ಕೊಳಲು ಹಾಗೂ ಬೆಣ್ಣೆಯ ಗಡಿಗೆಯ ಮೇಲೆ ಗಿಳಿಯನ್ನು ಕಸೂತಿಯಲ್ಲಿ ತೋರಿಸಿದ್ದು ಕಲಾ ಪ್ರೌಢಿಮೆಯ ಸಂಕೇತವಾಗಿದೆ.

ಗಂಜಿನ ಕಟ್ಟಿನಲ್ಲಿ ಹಾಕುವ ಕಸೂತಿ:– (ಹಾಲುಮುತ್ತಿನ ಮಣಿಗಳಿಂದ ಕಸೂತಿ)







ಧಾರವಾಡದ ಮಾಳಾಪುರದಲ್ಲಿ ಶ್ರೀಮತಿ ಕಾಶಿಬಾಯಿ ಹಿರೇಮಠ ಕಳೆದ ಎಂಭತ್ತು ವರ್ಷಗಳ ಹಿಂದೆ ಚಿಕ್ಕ ಗಾತ್ರದ ಬಣ್ಣ ಬಣ್ಣದ ಮುತ್ತು , ಹೊಳಪುಳ್ಳ ದೊಡ್ಡ ಗಾತ್ರದ ಹಾಗೂ ಗಾಜಿನ ಕೊಳವೆ ನೂಲಿನ ಗೊಂಡೆಗಳ ಮಾಧ್ಯಮದಿಂದ ದೇವಾನುದೇವತೆಯರ ಹಾಗೂ ಭೂಮಿತಿ ಅಲಂಕಾರಿಕ ಆಕಾರಗಳನ್ನು ಹಾಗೂ ಪ್ರಕೃತಿಯಲ್ಲಿನ ಸುಂದರ ಪ್ರಾಣಿ, ಪಕ್ಷಿಗಳನ್ನು ಹಾಲು ಮುತ್ತಿನ ಮಣಿಯ ಕಸೂತಿ ಕಲೆಗೆ ಬಳಸಿದ್ದಾರೆ. ಅಷ್ಟಕೋನದ ಭೂಮಿತಿಯ ನಕ್ಷೆ ನೋಡಿದರೆ ದಟ್ಟನೀಲಿ ಹಳದಿ, ಕೆಂಪು ಮುತ್ತುಗಳನ್ನು ಬಳಸಿದ್ದು ಹಾಗೂ ಭೂಮಿತಿ ಅಲಂಕಾರ ರೂಪ ನಿಯಮಿತವಾಗಿರದೇ ಇದ್ದುದು ಜಾನಪದ ಶೈಲಿಯಾಗಿದೆ.

ಇದೇ ಗತ್ತಿನ ಜನಪದ ಕೃತಿ 'ಸಂಜೀವಿನಿ ಪರ್ವತವನ್ನು ಎತ್ತಿದ ಪ್ರಾಣದೇವರು (ಹನುಮಂತ) ಮುತ್ತಿನ ಕಸೂತಿ ಧಾರ್ಮಿಕ ಶ್ರೇಷ್ಠತೆಯ ಉತ್ತುಂಗ ಶಿಖರವಾಗಿದೆ. ೧ ೧/೨ x ೧ ೧/೪ ಗಾತ್ರದ್ದಿದೆ.

ಎಡಗೈಯಲ್ಲಿ ಪರ್ವತವಿದ್ದರೆ ಬಲಗೈಯಲ್ಲಿ ಗಧೆ ಇದೆ. ಬಾಲ ಕಲಾತ್ಮಕವಾಗಿ ಬಾಲಕ್ಕೆ ಗಂಟೆ ಗೋಚರಿಸದುತ್ತದೆ. ಅಕ್ಕ ಪಕ್ಕದಲ್ಲಿ ಹೂವಿನ ಗಿಡಗಳು, ಅಲಂಕಾರಿಕ ಕಂಬಗಳು, ಮಾವುಗಳನ್ನು ತಿನ್ನುತ್ತಿರುವ ಕೆಂಪು ಚುಂಚಿನ ಗಿಳಿಗಳು, ಕೆಳಗಡೆ ನಕ್ಷಾ ಪಟ್ಟಿ ಎಲ್ಲವೂ ಕಲಾತ್ಮಕವಾಗಿದೆ. ಹೊರಗಡೆಗೆ ಮುತ್ತನ್ನು ಹೆಣೆದುಕೊಂಡು ನಂತರ ಆ ಹೆಣಿಕೆಯನ್ನು ಒಂದೇ ಬಿಳಿ ಧಾತುವಿನ ಹಾಳೆಯ ಮೇಲೆ ದಾರದ ಸಹಾಯದಿಂದ ಅಥವಾ ಅಂಟಿನ ಸಹಯದಿಂದಲೋ ಅಂಟಿಸಿದ್ದಾರೆ. ಆ ಧಾತುವಿನ ಹೊಳಪು ಈ ಹಾಲು ಮುತ್ತಿನ ಮಣಿಗಳಿಗೆ ವಿಶೇಷ ಹೊಳಪನ್ನು ಕೊಡುತ್ತಿವೆ.

ದಿವಂಗತ ಶ್ರೀಮತಿ ಕಾಶೀಬಾಯಿ ಹಿರೇಮಠ ಅವರು ಗಾಜಿನ ಕಟ್ಟಿನಲ್ಲಿ ಸುರಕ್ಷಿತವಾಗಿ ಹೆಣೆದಿಟ್ಟ ಅನೇಕ ನಮೂನೆಯ ಕಸೂತಿಗಳು ಇಲ್ಲಿವೆ.





ಗುಂಡಿ(ಬಿರಡೆ) ಹಾಗೂ ಮುತ್ತಿನಿಂದ ಮಾಡಲ್ಪಟ್ಟ ಮೊಲ. ಇದು ನೋಡುಗರನ್ನು ಆನಂದದಲ್ಲಿ ಮುಳುಗಿಸುತ್ತದೆ. ಜೀವಂತ ಮೊಲವನ್ನು ಹಿಡಿದ ಆನಂದ ಈ ಕಸೂತಿಯಲ್ಲಿ ಅಡಗಿದೆ. ಅದರ ಕೆಳಗಡೆಗೆ ದಾರದಿಂದ ಎಲೆ ಬಳ್ಳಿಗಳನ್ನು ಮಾಡಲಾಗಿದೆ.

ಹಾಲು ಮುತ್ತಿನ ಮಣಿಗಳ ಅಲಂಕಾರಿಕ ಕೃತಿಗಳು ತ್ರಿಕೋನ, ಚೌರಸ, ಆಯತಾಕಾರ, ಷಷ್ಠಕೋನ, ಅಷ್ಟಕೊನಗಳಲ್ಲಿ ಅನೇಕ ಅಲಂಕಾರಿಕ ರೂಪಗಳನ್ನು ಈ ಕಸೂತಿಯಲ್ಲಿ ನಿರ್ಮಿಸಿದ್ದಾರೆ. ತೇರು, ಮುತ್ತಿನ ಬಳೆಗಳು ಇವುಗಳ ಹಿಂದುಗಡೆ ಹಾಕಲ್ಪಟ್ಟ ಬಣ್ಣದ ಬ್ಯಾಗಡಿ ಆ ಮುತ್ತಿನ ಮೇಲೆ ತನ್ನ ನೆರಳಿನ ಛಾಯೆಯನ್ನು ಬಿಡುವುದರ ಮೂಲಕ ಆ ಮುತ್ತುಗಳ ಅಲಂಕಾರವನ್ನು ಹೆಚ್ಚಿಸಿದೆ. ಸಣ್ಣ ತೂತಿರುವ ಸೂಕ್ಷ್ಮವಾದ ಮುತ್ತುಗಳನ್ನು ಸೂಕ್ಷ್ಮವಾದ ಸೂಜಿ ಹಾಗೂ ಗಟ್ಟಿ ತಿಳಿಯಾದ ದಾರದಿಂದ ಪೋಣಿಸುತ್ತಾ ಹೋಗಿ ಒಂದು ಉತ್ತಮವಾದ ಹಿನ್ನೆಲೆಯ ಮೇಲೆ ಈ ಕೃತಿಗಳನ್ನು ದಾರ ಅಥವಾ ಅಂದಿನಿಂದ ಕೂಡ್ರಿಸುವುದು ಕೂಡಾ ಒಂದು ಉತ್ತಮ ಕಲಾಕಾರ್ಯವಾಗಿದೆ.

ಈ ಕಲಾಕೃತಿಗಳು ಮನೆಗೆ ಬರುವ ಅತಿಥಿಗಳ ಆನಂದ ಹೆಚ್ಚಿಸದೆ ಇರಲಾರವು. ಹಾಗೂ ಮನೆ ಎಂಬ ವಾಸ್ತುಶಿಲ್ಪಕ್ಕೆ ಈ ಕಸೂತಿಗಳು ಕಳೆಕಟ್ಟುತ್ತವೆ. ಕಸೂತಿ ನಿರ್ಮಿಸಿದವಳಿಗಂತೂ ಧ್ಯಾನದ ಕಲ್ಪನೆಯಿಂದ ತಾಳ್ಮೆ ಶಕ್ತಿಯನ್ನು ಜಾಗ್ರತಗೊಳಿಸಿಕೊಂಡು ತನ್ನ ಬದುಕನ್ನು ಸಫಲವಾಗಿ ಬದುಕುತ್ತಾಳೆ.

ಟಿಕಳಿ ಹಾಗೂ ಮುತ್ತಿನಿಂದ ಕಸೂತಿ:- ಬಣ್ಣದ ಟಿಕಳಿಗಳನ್ನು ಉಪಯೋಗಿಸಿ ಹಿಂದು, ಇಸ್ಲಾಂ, ಕ್ರೈಸ್ತ ಎಲ್ಲ ಧರ್ಮೀಯರೂ ತಮ್ಮ ತಮ್ಮ ಧಾರ್ಮಿಕ ಸಂಕೇತಗಳನ್ನು ಹಾಗೂ ಪ್ರಾಕೃತಿಕ ಅಲಂಕಾರಿಕ ರೂಪಗಳನ್ನು ಟಿಕಳಿ ಹಾಗೂ ಮುತ್ತಿನ ಮಾಧ್ಯಮದಿಂದ ಅನೇಕ ಕಸೂತಿಗಳನ್ನು ನಿರ್ಮಿಸಿದ್ದಾರೆ. ಈ ಭಾರತೀಯ ಕನ್ನಡ ಕಸೂತಿಗಳು ಮಾನವಾಕಾರಗಳಿಗೆ ಮಹತ್ವ ಕೊಡದ ಇಸ್ಲಾಂ ಧರ್ಮದಲ್ಲಿ ತನ್ನ ಪ್ರಭಾವ ಬೀರಿ ಖುರಾನ್ ಓದುವವರು ಖುರಾನಿನ ಉಕ್ತಿಗಳನ್ನು ಹಾಗೂ ಕ್ರೈಸ್ತಧರ್ಮದ ಏಸುವನ್ನು ಅಥವಾ ಶಿಲುಬೆಯನ್ನು ಕಸೂತಿಯಲ್ಲಿ ಹಾಕಿರುವುದನ್ನು ನಾವು ಕಾಣುತ್ತೇವೆ. ಕಸೂತಿ ಕಲೆ ಸಮಾಜದ ಸುಧಾರಣಾ ಶುಭದಾಯಕ ಕಲೆಯಾಗಿದೆ. ಇಲ್ಲಿರುವ ಇಸ್ಲಾಂ ಕಸೂತಿಗಳಲ್ಲಿ ಗುಳೇದಗುಡ್ಡದ ಮಲಕವ್ವಾ, ಚೆನ್ನವ್ವಾ, ಚಾಂದಬೀಬಿ, ಬಿಬಿಜಾನ್, ಮುಂತಾದವರು, ಜುಲೇಖಾ, ಶಬಾನ ಮಜ್ಜಿಗೆಗೌಡರು ನಿಪುಣರಿದ್ದಾರೆ.

ಬಾಟಲಿಯಲ್ಲಿ ಚೆಂಡುಗಳನ್ನು ಇಳಿಸುವ ಕಸೂತಿ:- ಚಿಕ್ಕಬಾಯಿ ಇರುವ ಒಂದು ಬಾಟಲಿಯಲ್ಲಿ ಎರಡು ಅಥವಾ ಮೂರು ಕಸೂತಿಯ ದೊಡ್ಡ ಚೆಂಡುಗಳನ್ನು ಇಳಿಸಿದ್ದು ಶತಮಾನ ಗತಿಸಿದ ಮನೆಗಳಲ್ಲಿ ಅಲ್ಲಲ್ಲಿ ಕಾಣುತ್ತೇವೆ. ಈ ಬಾಟಲಿಯೊಳಗಿನ ಚೆಂಡುಗಳು ಚಿಕ್ಕ ಮಕ್ಕಳಿಗಂತೂ ಕುತೂಹಲವೇ ಸರಿ.


ಎರಡು ಚೆಂಡುಗಳಿದ್ದರೆ ಈ ಸಂಕೀರ್ಣವಾದ ದೊಡ್ಡ ಜಗತ್ತನ್ನು ಚಿಕ್ಕಬಾಯಿ ಇರುವ ಬಾಟಲಿಗೆ ಹೋಲಿಸಿದರೆ ಇಲ್ಲಿ ಹರಿ ಹರ ಎಲ್ಲರೂ ಏಕರೂಪದಿಂದ ಅನ್ಯೋನ್ಯವಾಗಿ ಬಾಳಿರಿ ಎಂಬ ಸಾಂಕೇತಿಕ ಪ್ರತಿಮೆಯಾಗುತ್ತವೆ.

ಮೂರು ಚೆಂಡುಗಳನ್ನು ಇಳಿಸಿದ್ದು ಆ ಚೆಂಡುಗಳ ಮೇಲೆ ಬಳಸಿದ ಬಣ್ಣದ ದಾರಗಳು 'ಸತ್ಯಂ ಶಿವಂ ಸುಂದರಂ' ದ ಸಂಕೇತಗಳಾಗಿವೆ. ಅಲ್ಲದೆ ಬ್ರಹ್ಮ, ವಿಷ್ಣು, ಮಹೇಶ್ವರನ ಸಂಕೇತವೂ ಹೌದು.

ಚೆಂಡನ್ನು ಹೇಗೆ ಇರಿಸುವುದು: ಮೊದಲು ಎರಡು ಅರ್ಧ ವರ್ತುಳದ ಕಸೂತಿಯ ಭಾಗಗಳನ್ನು ಹೆಣೆದು ನಂತರ ಸ್ವಲ್ಪ ಬಾಯಿ ಬಿಟ್ಟು ಉಳಿದೆಲ್ಲಾ ಭಾಗ ಹೊಲಿದು ಬರಿ ಚೀಲಗಳನ್ನು ಬಾಟಲಿಯಲ್ಲಿ ನಿರಿಗೆ ರೂಪದಲ್ಲಿ ಮಡಿಚಿ ಬಾಟಲಿಗೆ ಇಳಿಸಿ, ಅದರ ಬಾಯಿಯನ್ನು ತಂತಿಗಳ ಮಾಧ್ಯಮದಿಂದ

ಬಾಟಲಿಯ ಒಳಗೆ ಸ್ವಲ್ಪ ತೆಗೆಯಿಸಿ ಅರಳೆಯನ್ನು ಸ್ವಲ್ಪ ಸ್ವಲ್ಪ ಸೇರಿಸಿ ಅದು ದುಂಡಾದ ನಂತರ ಬಾಯಿಗೆ ಕಟ್ಟಿರುವ ದಾರಗಳನ್ನು ಕಾಲಿನ ಹೆಬ್ಬೆರಳಿನಿಂದ ಹಿಡಿದಿಟ್ಟು ಬಿಡಿಸಿ ಕಗ್ಗಂಟುಗಳನ್ನು ಹಾಕಿ ಒಳಗಡೆಗೆ ಚಿಮಟಗಿಯಿಂದ ದಾರ ಕತ್ತರಿಸಿ ಒಳಗೆ ಬಿಡುವುದು. ಒಂದರ ಮೇಲೊಂದು ಚೆಂಡುಗಳನ್ನು ಇದೇರೀತಿ ಇಳಿಸುತ್ತಾರೆ.

ಕಂಬಳಿಯ ಮೇಲೆ ಕಸೂತಿ:– ದೇಶಿ ಕಸೂತಿಯ ಹಾಗೂ ಗುಳೇದಗುಡ್ಡದ ಖಣಗಳ ಮೇಲಿರುವ ಸುಂದರ ಚಿತ್ತಾರಗಳು ರೈತಾಪಿ ಜನರ ಮನ ಕದಡಿದವು. ನಗರಗಳು ಗ್ರಾಮಗಳಲ್ಲಿ ಜೀವಿಸುವ ಕೃಷಿಕನ ಆಧಾರದ ಮೇಲೆ ಆಹಾರ ಎನ್ನುವ ಅವಶ್ಯಕ ವಸ್ತುವನ್ನು ಪೂರೈಸಿಕೊಂಡವು. ಕೃಷಿಕನ ರಕ್ಷಣೆಯ ವಸ್ತು ಕಂಬಳಿ. ಆ ಕಂಬಳಿಯು ಬರಿ ಕಪ್ಪುವರ್ಣದ್ದೇಕೆ ಎಂಬ ಭಾವನೆ ಕೃಷಿಕನ ಅರ್ಧಾಂಗಿನಿಯದಾಗಿರಲೇ ಬೇಕು. ಆ ಭಾವನೆಯೇ ಶೃಂಗಾರದ ಸೌಂದರ್ಯ ಪ್ರಜ್ಞೆಯ ಮೊಳಕೆ ಒಡೆದು ಕಂಬಳಿಯ ಕಸೂತಿಯಾಗಿ ಮಾರ್ಪಟ್ಟಿತು.



ಕೃಷಿ ಪ್ರಧಾನವಾದ ಕುಟುಂಬದಲ್ಲಿ ಜನಿಸಿದ ಈರವ್ವ ದಾರವಾಡದ ಕಾಮನ ಕಟ್ಟಿಗೌಡರ ಓಣಿಯಲ್ಲಿ ಜೀವಿಸುತ್ತಿದ್ದಳು. ದಿವಂಗತ ಈರವ್ವ ತಮ್ಮ ಬಿಡುವಿನ ವೇಳೆಯಲ್ಲಿ ಕಸೂತಿ ಹಾಕುವ ಹವ್ಯಾಸವನ್ನು ಬೆಳೆಸಿಕೊಂಡು ಬಂದರು. ಬಾಲ್ಯಾವಸ್ಥೆಯಲ್ಲಿ ನೇಯ್ಗೆಯ ಬಟ್ಟೆಯ ತುಂಡುಗಳ ಮೇಲೆ ಸಾದಾ ದಾರದಿಂದ ನಕ್ಷೆಗಳನ್ನು ಹಾಕುವುದನ್ನು ರೂಢಿಸಿಕೊಂಡವಳು.

ಆ ನಕ್ಷೆಗಳು ಮುದ್ದು ಮಕ್ಕಳ ಹಾಗೂ ತಾಯಂದಿರ ಹಾಗೂ ರೈತರ ಮನಸ್ಸನ್ನು ಸೂರೆಗೊಂಡವು. ಚಿಕ್ಕಮಕ್ಕಳ ಉಡುಪುಗಳ ಮೇಲೆ ರೇಷ್ಮೆದಾರದಿಂದ ನಕ್ಷೆಗಳನ್ನು ಹಾಕಿ ಕೊಡಹತ್ತಿದರು. ಅನೇಕ ತಾಯಂದಿರಿಗೆ ಕಸೂತಿ ಹಾಕಿಕೊಟ್ಟರು.

ಮಕ್ಕಳು, ಸ್ತ್ರೀಯರಷ್ಟೇ ಏಕೆ ನಕ್ಷೆಯ ಆನಂದ ಅನುಭವಿಸುವದೆಂದು ದೇಶಕ್ಕೆ ಅನ್ನ ನೀಡುವ ರೈತನನ್ನು ಅಲಂಕಾರ ಮಾಡಿ ನೋಡುವ ಹವ್ಯಾಸದಿಂದ ಧಾರವಾಡದ ದಿವಂಗತ ಶ್ರೀಮತಿ ಈರವ್ವಾ ಪಾಟೀಲ ಅವರು ಕಂಬಳಿಗಳ ಮೇಲೆ ಕಸೂತಿಯನ್ನು ಮುಂದುವರಿಸಿದರು. ಪ್ರಸ್ತುತ ಚಿತ್ರದಲ್ಲಿ ಕಂಬಳಿ ಕಸೂತಿಯನ್ನು ನೋಡಿ ಆನಂದಿಸಬಹುದು.

ಪ್ರಕೃತಿಯ ಅಲಂಕಾರಿಕ ರೂಪಗಳನ್ನು ಹಾಗೂ ಗುಳೇದಗುಡ್ಡದ ಖಣಗಳನ್ನು ನೋಡಿ ಪ್ರಭಾವಿತಳಾದ ಈರಮ್ಮ ಕಸೂತಿ ಕೃತಿಗಳನ್ನು ನಿರ್ಮಿಸಿಕೊಟ್ಟು ಜನರ ಪ್ರೀತಿಗೆ ಪಾತ್ರಳಾಗಿದ್ದಾಳೆ.

ಈ ಕಸೂತಿಗಳಲ್ಲಿ ದಂಡೆಗೆ ದಡಿ ನಕ್ಷೆಯಲ್ಲಿ ಹೂವಿನ ಬಾರ್ಡರ್ ನಕ್ಷೆಗೆ ಬಳಸಿದ ಬಣ್ಣಗಳ ದಾರಗಳನ್ನು ನೋಡಿದಾಗ ಸ್ವಲ್ಪ ಅಂತರದವರೆಗೆ ಒಂದು ಬಣ್ಣ ಬಳಸಿದರೆ ಮತ್ತೊಂದು ಸ್ವಲ್ಪ ಅಂತರದವರೆಗೆ ಮತ್ತೊಂದು ವರ್ಣವನ್ನು ಬಳಸಿದ್ದಾರೆ. ಇದು ಜಾನಪದ ಗತ್ತಿನ ವರ್ಣ ಸಂಯೋಜನೆಯಾಗಿದೆ.

ಕಂಬಳಿ ಕಸೂತಿಯಲ್ಲಿ ಪಕ್ಷಿಗಳ ಸಾಲು, ತೇರುಗಳು, ಮನೆಗಳು ಈಶ್ವರಲಿಂಗ, ತೇರುಗಳ ಕಳಸ, ಚಿಗರಿ, ಎತ್ತುಗಳು, ಹಗ್ಗದಾಟದ ಹುಡುಗಿ, ಬೇರೆ ಬೇರೆ ತರಹದ ಹೂವುಗಳನ್ನು ಸುಂದರ ವರ್ಣಗಳಿಂದ ಕಂಬಳಿಯ ಮೇಲೆ ಹಾಕುತ್ತಾರೆ.

***

ನಯನ ಮನೋಹರ ನಕ್ಷೆಯ ಬಾಗಿಲುವಾಡಗಳು

ಕಟ್ಟಿಗೆಯ ಕಲಾತ್ಮಕ ಕೃತಿಗಳಿವು.

ಅಲ್ಲಿಂದಲೇ ಆನಂದಿಸಿ ಆಗಮಿಸಿ ಅತಿಥಿಗಳೆ.

ನಮ್ಮ ದೇಶದ ಬಹುಭಾಗದಲ್ಲಿ ವಾಸ್ತುಶಿಲ್ಪಗಳಾದ ಮನೆ, ಮಠ, ಮಂದಿರಗಳ ಮಹಾದ್ವಾರಗಳನ್ನು ನೋಡಿದಾಗ ಕುವೆಂಪುರವರ ಕವನ ನೆನಪಿಗೆ ಬರುತ್ತದೆ.

ಬಾಗಿಲಲಿ ಕೈ ಮುಗಿದು ಒಳಗೆ ಬಾ ಯಾತ್ರಿಕನೆ,

ಶಿಲೆಯಲ್ಲ ಈ ದೇಗುಲ ಕಲೆಯ ಬಲೆಯು.

ಕರ್ನಾಟಕದಲ್ಲಿ ಶತ ಶತಮಾನಗಳ ಪೂರ್ವದ ಮನೆಗಳನ್ನು ವೀಕ್ಷಿಸಿದಾಗ ಮನೆಯ ಕಟ್ಟಡಕ್ಕೆ ಕಲೆಯನ್ನು ಹೇರಳವಾಗಿ ಬಳಸಿಕೊಂಡಿದ್ದಾರೆ. ಅದರಲ್ಲಿಯೂ ಕಟ್ಟಿಗೆಯಲ್ಲಿ ಡಿಝಾಯಿನ್‌ಗಳನ್ನು ನಿರ್ಮಿಸಿ ದಾಖಲೆ ಮಾಡಿದ್ದಾರೆ. ಮನೆಗಳ ಮುಖ್ಯ ಮಹಾದ್ವಾರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಟ್ಟಿಗೆಯ ಕಲಾತ್ಮಕ ಕೃತಿಗಳ ನಿರ್ಮಾಣವಾಗಿವೆ. ಈ ಕಾರ್ಯವನ್ನು ವಿಶ್ವಕರ್ಮ ಪಂಥದವರು ಹಾಗೂ ಇತರರು ಕೂಡಿ ನಿರ್ಮಿಸಿರಲೇಬೇಕು. ಪ್ರಸ್ತುತ ಬಾಗಿಲು ಚೌಕಟ್ಟುಗಳ ನಕ್ಷೆಗಳನ್ನು ಕರ್ನಾಟಕದ ಉತ್ತರ ಭಾಗದಲ್ಲಿರುವ ಗುಳೇದಗುಡ್ಡ ಊರಿನ ಕೆಲ ಮನೆಯ ಬಾಗಿಲುಗಳು ಇವಾಗಿವೆ.

ಅತಿಥಿಗಳ ಸ್ವಾಗತಕ್ಕಾಗಿ ಕಲೆ ಮೈ ತಳೆದು ಮಹಾದ್ವಾರದಲ್ಲಿ ನಿಂತಂತಿದೆ. ಈ ಬಾಗಿಲುಗಳು ಕಡತದ ಬಾಗಿಲು, ಜವಾರಿ ಬಾಗಿಲು ಎಂಬ ಹೆಸರಿನಿಂದ ಖ್ಯಾತಿ ಪಡೆದಿದೆ. ಇವುಗಳ ಗಾತ್ರ ಅತೀ ಕಡಿಮೆ ಎಂದರೆ, ೫ x ೪ ದಪ್ಪನೆಯ ಕಟ್ಟಿಗೆಯಲ್ಲಿ ಹಣೆಪಟ್ಟಿ ೯x ೪ ಗಾತ್ರ: ಹೆಚ್ಚಿಗೆ ಎಂದರೆ ಆಯುವಾಸ್ತುಶಿಲ್ಪವನ್ನು ಅವಲಂಬಿಸಿ ಮಾಡಿದ್ದಾರೆ.

ಇವುಗಳಲ್ಲಿ ಕೆತ್ತಲ್ಪಟ್ಟ ನಕ್ಷೆಯ ಮುಖ್ಯವಾದ ಭಾಗಗಳೆಂದರೆ, ಗಾಲಿಸುಳಿ, ಗೋನಿ, ಚಕ್ರದ ಹೂವು, ಉತ್ತರಾಸ ಪಟ್ಟಿ, ಕಾಲ್ಪನಿಕ ಪ್ರಾಣಿಗಳು, ಜ್ಯಾಮಿತಿಯ ನಕ್ಷೆ, ಸರಪಳಿ, ಹಗ್ಗ, ತಳಕುಗಳು, ಪ್ರಾಣಿ ಪಕ್ಷಿಗಳ ಅಲಂಕಾರಿಕ ರೂಪಗಳನ್ನು ನೋಡಿದರೆ ಶಿಷ್ಟ ನಕ್ಷೆಯ ತತ್ವಗಳಾದ ರಿಪಿಟೇಶನ್ ರೇಡಿಯೇಶನ್, ರಿದಮ್, ಬ್ಯಾಲನ್ಸ್, ಓವರ್ ಲ್ಯಾಪಿಂಗ್, ಇಂಟರ್ ಲ್ಯಾಪಿಂಗ್‌ಗಳನ್ನು ಮೀರಿಸುತ್ತವೆ. ಈ ಕೆತ್ತನೆಯ ಚಿತ್ತಾರಗಳು ಸದಾ ನೋಡಿಸಿಕೊಳ್ಳುತ್ತವೆ.

ಗಾಲಿಸುಳಿ ಎನ್ನುವ ನಕ್ಷೆಯ ರೂಪದಲ್ಲಿ ದುಂಡನೆಯ ಗಾತ್ರದಲ್ಲಿ ಕೆತ್ತಿದ ನಕ್ಷೆಗಳು ಟ್ರೆಸ್ ಮಾಧ್ಯಮದಿಂದ ಮೂಡಿಸಿಕೊಂಡಂತೆ ಕಂಡರೂ, ಅವುಗಳು ಸ್ವತಃ ಕೈಯಿಂದ ದೃಷ್ಟಿಗೋಚರ ಪ್ರೌಢಿಮೆಯಿಂದ ನಿರ್ಮಿತವಾದವುಗಳಾಗಿವೆ. ಮಧ್ಯದಲ್ಲಿ ಚಕ್ರದ ಹೂವು ಸುಂದರವಾದ ಅನೇಕ ಪಕಳೆಗಳಿಂದ ಕೂಡಿಕೊಂಡು ಮೂಡಿರುತ್ತದೆ.

ಗೊನಿ ಎಂಬ ರೂಪ ದ್ರಾಕ್ಷಿಯ ಗೊನಿಗಳಂತೆ ಗೋಚರಿಸುತ್ತವೆ. ಮಾಮಿಡಿ ಸೀತಾಫಲ ಹಣ್ಣಿನಂತೆಯು ಕಾಣುತ್ತದೆ. ಹಣೆ ಪಟ್ಟಿಯ ಮೇಲೆ ಸರಳ ಹಸ್ತ ಚಿತ್ರಕಲೆಯ ಅನೇಕ ಭಾಗಗಳನ್ನು ಕೆತ್ತಿದಂತೆ ಕಾಣುತ್ತವೆ.

ಕೆಲಬಾಗಿಲುಗಳ ಹಣೆಪಟ್ಟಿಯ ಎಡ ಬಲಕ್ಕೆ ಕುದುರೆಯ ಮುಖದ ಭಾಗವನ್ನು ಎದೆಯತನಕ ಮೂರ್ತಿ ಶಿಲ್ಪದಲ್ಲಿ ಬಾಗಿಲವಾಡ ಬಿಟ್ಟು ಹೊರಗಡೆ ಬರುವ ಹಾಗೆ ಕೆತ್ತಿದ್ದಾರೆ. ಆ ಕುದುರೆಗೆ ಮಗಡ(ಲಗಾಮ) ಹಾಗೂ ತಲೆಯ ಮೇಲೆ ತುರಾಯಿಗಳಿಂದ ಅಲಂಕರಿಸಿದ ಕುದುರೆಯ ಶಿಲ್ಪ ಇದಾಗಿದೆ. ಮಧ್ಯದಲ್ಲಿರುವ ಹೂವಿನ, ಎಡ ಬಲಕ್ಕೆ ಬಾತುಕೋಳಿಗಳು, ಅಲಂಕಾರ ಶೈಲಿಯಲ್ಲಿ ಅದರ ಪಕ್ಕಗಳು ಹಾಗೂ ಹಿಂದಿನ ಪುಟ್ಟ ಮುಂದಿನ ಚೊಂಚು ಇವೆಲ್ಲವುಗಳನ್ನು ಉಬ್ಬು ಶಿಲ್ಪಗಳನ್ನಾಗಿ ಕೆತ್ತಿದ್ದಾರೆ.

ಚಿತ್ರದಲ್ಲಿ ತೋರಿಸಲ್ಪಟ್ಟ ಬಾಗಿಲ ಚೌಕಟ್ಟುಗಳು ಗುಳೇದಗುಡ್ಡದ ಶ್ರೀ ಮುಚುಮದಾರ, ಶ್ರೀಬೂಬ, ಶ್ರೀ ಬನ್ನಿಗಿಡದ ಬೆಡಗಿ ಅವರುಗಳಾಗಿವೆ. ಇದೇ ರೀತಿಯ ನಕ್ಷೆಗಳನ್ನು ಶ್ರೀ ಠಾಕುಸಾ ಪವಾರ ರಾಧಾಕೃಷ್ಣ ಪಂಚಾಯತಿವಾಡ, ಶ್ರೀ ಸಾವಳಗಿಮಠ, ಶ್ರೀ ಬಸವಪ್ರಭು, ಗಂಗಾವತಿ, ಶ್ರೀ ತಿಪ್ಪಾ ಮುಂತಾದವರ ಮನೆಯ ಬಾಗಿಲುವಾಡಗಳಲ್ಲಿ ಕಾಣಸಿಗುತ್ತವೆ.

ಈ ಭಾಗದಲ್ಲಿ ಚೌಸಪ್ಪಿ ಮನೆಗಳು ಎಂಬ ಹೆಸರಿನಿಂದ ಖ್ಯಾತಿ ಪಡೆದ ವಿಶೇಷ ಶೈಲಿಯ ಮನೆಗಳು ಗೋಚರಿಸುತ್ತಿವೆ. ಇಂಥಹ ಮನೆಗಳ ಬಾಗಿಲ ಚೌಕಟ್ಟುಗಳು ಮಾತ್ರಾ ಕಲಾತ್ಮಕವಾಗಿರದೇ ಒಳಗೆ ಪ್ರವೇಶಿಸಿದರೆ ಅಲ್ಲಿ ಚೌಕಾಕಾರದ ಬಯಲು ಅದರ ಸುತ್ತಲೂ ಕಂಬಗಳಿಂದ ಅಲಂಕೃತ ಪ್ರದಕ್ಷಿಣಾರ್ಥ ಪಥ ಸರಳವಾಗಿ ಅಡ್ಡಾಡಲು, ಚೌರಸಾಕಾರದ ನಾಲ್ಕು ಭುಜಗಳಿಗೆ ಒಂದೊಂದು ಮನೆಗಳು ಆ ಮನೆಗಳ ಎದುರುಗಡೆಯ ಪಥದ ಮೇಲ್ಛಾವಣಿ ಹಾಗೂ ಎದುರುಗಡೆಯ ಕುಂಭಗಳು ಆಸ್ಟಪೇಲಿ, ಸೂಕ್ಷ್ಮ ನಕ್ಷೆಯಿಂದ ಕೂಡಿವೆ. ಮೇಲ್ಛಾವಣಿಯ ತೊಲಿಗಳು ವಿಶೇಷ ದುಂಡನೆಯ ಅಲಂಕಾರಿಕ ಶೈಲಿಯ ಭಾಗಗಳು ಕಾಣುತ್ತವೆ. ಆ ಕಂಬಗಳ ಮಧ್ಯದಲ್ಲಿ ಚಿತ್ರಫಲಕಗಳನ್ನು ನೇತು ಹಾಕಲು ವ್ಯವಸ್ಥೆ ಇದೆ. ಆ ಚಿತ್ರಗಳು ಒಂದು ಹಲಗೆಯ ಮೇಲೆ ಓರೆಯಾಗಿ ವ್ಯವಸ್ಥಿತವಾಗಿ ಕೂಡ್ರುವಂತೆ ಕಂಬಗಳ ಮೇಲೆ ಸುತ್ತಲೂ ಕಟ್ಟಿಗೆಯ ಫಲಕ ಹೊಂದಿಸಿದ್ದಾರೆ. ಅವುಗಳ ಮೇಲೆ ಚಿತ್ರಫಲಕಗಳು, ಜಾನಪದ ಶಿಲ್ಪಗಳಾದ ಮಣ್ಣೆತ್ತು, ಗುಳ್ಳವ್ವಾ ಆಟಿಗೆಯ ಸಾಮಾನುಗಳನ್ನು ಇಡುತ್ತಾರೆ.

ಇಲ್ಲಿ ಬಳಸಿದ ಕಟ್ಟಿಗೆಯೆಂದರೆ ಹೆಚ್ಚಾಗಿ ಸಾಗವಾನಿ ಹಾಗೂ ಕರಿಮತ್ತಿ, ಕರೆ ಸೀನಂ, ಕಟ್ಟಿಗೆಯನ್ನು ಬಳಸಿದ್ದಾರೆ. ಗುಳೇದಗುಡ್ಡದಲ್ಲಿ ಚೌಸಪ್ಪಿ ಮನೆಗಳೆಂದರೆ, ಬನ್ನಿಗಿಡದ ಜಿಡಗಿ, ಬಸವಪ್ರಭು, ಗಂಗಾವತಿ, ಗುರುಸಿದ್ದೇಶ್ವರ ಮಠದ ಅಂಗನವಾಡಿ ಶಾಲೆ ಮುಂತಾದವುಗಳಾಗಿವೆ. ಈ ಕಟ್ಟಿಗೆಯ ಕಲೆಗೆ ಪ್ರತಿವರ್ಷ ಪಾರದರ್ಶಕ ತೈಲಗಳಾದ ಅಗಸಿ ಎಣ್ಣೆಯ ವಾರನೀಸ ಹಚ್ಚಿ ರಕ್ಷಿಸುತ್ತಾ ಬಂದಿದ್ದಾರೆ.

ಸದ್ಯ ಇಂತಹ ಬಾಗಿಲು ಚೌಕಟ್ಟುಗಳನ್ನು ಕೆತ್ತುವವರಲ್ಲಿ ಕೋಟೆಕಲ್ಲಿನ ಈರಪ್ಪಾ ಯಮನಪ್ಪಾ ಬಡಿಗೇರ, ಹಾಗೂ ಯಮನಪ್ಪಾ ಈರಪ್ಪಾ ಬಡಿಗೇರ ಮುಂತಾದವರು ಸಿದ್ಧಹಸ್ತರು. ಈ ಕಲೆಗೆ ಪರಿಶ್ರಮಕ್ಕೆ ತಕ್ಕಂತೆ ಕೂಲಿ ಸಿಗುವುದಿಲ್ಲ. ಅಲ್ಲದೇ ಇಂತಹ ಬಾಗಿಲುವಾಡಗಳ ಕಲಾ ಪ್ರೇಮಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಕೊರಗು ಈ ಕಟ್ಟಿಗೆಯ ಶಿಲ್ಪಿಗಳಾಗಿದೆ.

ಈ ಶಿಲ್ಪವನ್ನೇ ಹೋಲುವ ಇವುಗಳಿಗಿಂತ ಉಚ್ಚ ಮಟ್ಟದ ಕಟ್ಟಿಗೆಯ ಶಿಲ್ಪವನ್ನು ಬಾಗಲಕೋಟೆಯ ಕೆಲ ಮನೆಗಳ ಮಹಾದ್ವಾರದ ಮೇಲಿನ ಮಹಡಿಯ ಮುಂಭಾಗವನ್ನು ಪೂರ್ತಿ ಕಟ್ಟಿಗೆಯ ಕಲಾತ್ಮಕ ಕುಸುರಿನ ನಕ್ಷೆಯಲ್ಲಿ ನಿರ್ಮಿಸಿದ್ದಾರೆ. ಇವುಗಳ ನಿರ್ಮಾಣ ಕೂಡಾ ಶತಮಾನಗಳ ಪೂರ್ವಾರ್ಧದ್ದೇ ಆಗಿರಬೇಕು. ಅಷ್ಟ ಪೇಲಿ ಕಂಬಗಳು ಕೆಳಗಡೆ ಕಲಾತ್ಮಕ ಸಿಂಹಗಳು, ಈ ಕೇಸರಿಗಳ ಕೇಶರಾಶಿಗಳಲ್ಲಿ ಕಟ್ಟಿಗೆಯ ಕಲೆಯ ಸೂಕ್ಷ್ಮತೆಯನ್ನು ಮೆರೆದಿವೆ. ಕಟ್ಟಿಗೆಯ ಅಲಂಕಾರಿಕ ಮಂಟಪಗಳು ಹಾಗೂ ಹೂವು, ಬಳ್ಳಿಗಳು ಎಲ್ಲರ ಗಮನ ಸೆಳೆಯುತ್ತವೆ.

ಈ ಜನಪದ ಜಗತ್ತಿನ ಜನಪ್ರಿಯವಾದ ಕಟ್ಟಿಗೆಯ ಶಿಲ್ಪಕಲೆ ಕೇವಲ, 'ಕಲೆಗಾಗಿ ಕಲೆ' ಪಂಥದಲ್ಲಿ ಉಳಿಯದೇ ವಾಣಿಜ್ಯ ಸ್ವರೂಪವನ್ನು ಪಡೆದು ಖ್ಯಾತಿ ಮೆರೆದಿದೆ. ಆದರೆ ಇಂದು ಈ ಕಲೆ ಅನಾಥವಾಗುತ್ತಿದೆ. ಭಾರತದ ಕರಕುಶಲ ಅಭಿವೃದ್ಧಿ ಮಂಡಳಗಳು ಲಲಿತಕಲಾ ಅಕಾಡೆಮಿಗಳು ಮುಂತಾದ ಸಂಸ್ಥೆಗಳು ಪ್ರೋತ್ಸಾಹಿಸಬೇಕು.

ಸರಕಾರ ತನ್ನ ಕಛೇರಿಗಳ ಮಹಾದ್ವಾರಗಳನ್ನು, ಮಠ ಮಂದಿರಗಳ ಮುಖ್ಯಸ್ಥರು ಈ ಕಲೆಯನ್ನು ಉಳಿಸಿ ಬೆಳೆಸಬೇಕು. ದೇಶದ ಶ್ರೀಮಂತವರ್ಗ ತಮ್ಮ ವಾಸ್ತುಶಿಲ್ಪವನ್ನು ನಿರ್ಮಿಸುವಾಗ ಇಂತಹ ಕಟ್ಟಿಗೆ ಕಲೆಯಿಂದ ಅಲಂಕೃತಗೊಳಿಸಿ ತಮ್ಮ ಶ್ರೀಮಂತಿಕೆಯ ಹೊಳಪು ಸದಾ ಹೊಳೆಯುವಂತೆ ನೋಡಿಕೊಳ್ಳಬೇಕು.

***

ಹುರುಪಿನ ಹೋಳಿ ಹಬ್ಬ

ಹೊಸ ವರ್ಷಕ್ಕೆ ನಾಂದಿ ಹೋಳಿ ಹಬ್ಬ

ಹೋಳಿ ಹಬ್ಬ

ನಮ್ಮ ಭವ್ಯ ಭಾರತದೇಶ ಹಬ್ಬಗಳನ್ನಾಚರಿಸುವ ದೇಶವಾಗಿದೆ. ಹುಣ್ಣಿಮೆ ಅಮಾವಾಸ್ಯೆಗಳ ಮುಖಾಂತರ ಪೃಥ್ವಿ ತನ್ನ ಚಲನೆಯನ್ನು ತೋರಿದರೆ; ಹಾಲು ಚೆಲ್ಲಿದಂತಿರುವ ತಂಪಾದ ಬೆಳದಿಂಗಳಿನ ಪ್ರತಿ ಹುಣ್ಣಿಮೆಗೊಂದು ಹಬ್ಬವನ್ನಾಚರಿಸುತ್ತಾ ಜೀವನ ಚಕ್ರ ನೂಕುವ ನಾವು ಭಾಗ್ಯಶಾಲಿಗಳು.

ಋತುಗಳ ರಾಜ ವಸಂತ ತಾ ಬಂದಾ ಎನ್ನುವ ಹಾಗೆ ವಸಂತ ಬಾನಿನ ಫಾಲ್ಗುಣ – ಚೈತ್ರ ಮಾಸದ ಪೂರ್ಣಿಮೆಯಂದು ಆಚರಿಸುವ ಈ ಹೋಳಿ ಹಬ್ಬ ಹೊಸ ವರ್ಷದ ಪ್ರಾರಂಭ ವಸಂತೋತ್ಸವವೆನ್ನಬಹುದು. ಪ್ರಕೃತಿಯಲ್ಲಿ ಬೆಚ್ಚನೆಯ ವಾತಾವರಣ, ಅದೇ ಹಳೆಯ ಭವ್ಯ ಬೇರುಗಳು: ಹೊಸ ಚಿಗುರುಗಳು, ತಂಪಾದ ಸುವಾಸನೆಯುಕ್ತ ಹೂವುಗಳು: ಝೇಂಕಾರ ಮಾಡುವ ದುಂಬಿಗಳ ನಿನಾದ ಎಲ್ಲವೂ ಹೊಸತು ಹೊಸತೆನ್ನಿಸುತ್ತದೆ.

ನಮ್ಮ ದೇಶದ ಪುರಾಣಗಳಲ್ಲಿ ಹೋಳಿ ಹಬ್ಬ ಕುರಿತು ಅನೇಕ ದಂತಕಥೆಗಳಿವೆ, ಉತ್ತರ ಭಾರತದಲ್ಲಿ ಹೊಲಿಕಾ ದಹನ ಶಿವನ ಮದುವೆಯ ಮೆರವಣಿಗೆಯ ಸಂಭ್ರಮ, ಬಂಗಾಲ ಮತ್ತು ಓರಿಸ್ಸಾದಲ್ಲಿ ಶ್ರೀಕೃಷ್ಣನ ಮೂರ್ತಿಯ ಮೆರವಣಿಗೆಯನ್ನು ಮಾಡಿದರೆ, ಉತ್ತರ ಪ್ರದೇಶದಲ್ಲಿ ಕೃಷಿಕರು ಅಗ್ನಿದೇವನಿಗೆ ಆಹಾರಧಾನ್ಯ ಅರ್ಪಿಸುವ ಹಬ್ಬವನ್ನಾಗಿ ಆಚರಿಸುತ್ತಾರೆ.

ಬಂಗಾಳದಲ್ಲಿಯು ಬಾಲಕೃಷ್ಣನ ಮೂರ್ತಿಯ ಮೆರವಣಿಗೆಯನ್ನು ಡೋಲ್ ಯಾತ್ರಾ ಎಂದೂ: ಮಥುರೆಯಲ್ಲಿ ಶ್ರೀಕೃಷ್ಣರಾಧೇಯರು ಸಂತಸಪಡುವ ಹಬ್ಬವನ್ನಾಗಿ ಜನರು ಪರಸ್ಪರ ಬಣ್ಣಗಳನ್ನೆರಚಿಕೊಂಡು ಸಿಹಿ ಹಂಚಿ ಆಚರಿಸುತ್ತಾರೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಹೋಳಿ ಹುಣ್ಣಿಮೆಯನ್ನು ಕಾಮದಹನವೆಂದು ಆಚರಿಸುತ್ತಾರೆ. ಶಿವನ ತಪಸ್ಸನ್ನು ಭಂಗಮಾಡಿದ ಕಾಮ ಮತ್ತು ರತಿಯನ್ನು ದಹಿಸಿರುವ ಹಬ್ಬವೇ ಕಾಮ ದಹನವೆಂದು ಆಚರಿಸುತ್ತಾರೆ. ದಕ್ಷಿಣ ಭಾರತದ ಕರ್ನಾಟಕದ ಕೆಲ ಗ್ರಾಮಾಂತರ ಪ್ರದೇಶಗಳಲ್ಲಿ ಹೋಳಿ ಹಬ್ಬವನ್ನು ಅತೀ ವಿಜೃಂಭಣೆಯಿಂದ ಆಚರಿಸುತ್ತಾರೆ. ಪ್ರಸ್ತುತ ವಿವರಣೆ ಹೊಸ ಜಿಲ್ಲೆ ಬಾಗಲಕೋಟೆಯ, ಬಾದಾಮಿ ತಾಲೂಕಿನ ಗುಳೇದಗುಡ್ಡದ್ದಾಗಿದೆ.

ಹೋಳಿ ಹುಣ್ಣಿಮೆಯ ದಿನ ರಾತ್ರಿ ಸುಂದರ ಶಾಮಿಯಾನ (ಮಂಟಪದಲ್ಲಿ) ಕೂಟ, ಕೂಟಗಳಲ್ಲಿ ರತಿ ಮತ್ತು ಸುಂದರವಾದ ಕಾಮನ ಮೂರ್ತಿಗಳನ್ನು ಕೂಡ್ರಿಸುತ್ತಾರೆ. ಈ ಸುಂದರ ಕಾಮನ ಮೂರ್ತಿಗೆ ನೆದರು ಹತ್ತದಿರಲೆಂದು, ವಿಕೃತ ಕಾಮದಿಂದ ಮುಕ್ತಿ ಪಡೆಯಲೆಂದು ಬೂದಗಾಮನ ಆ ಮೂರ್ತಿ ಶಿಲ್ಪವನ್ನು ನಿರ್ಮಿಸುತ್ತಾರೆ. ಈ ಬೂದಗಾಮನ ಸಂಕೇತ ಮಾನವನ ದೈಹಿಕ ಹಾಗೂ ಸಾಮಾಜಿಕ ವಿಕಾರಗಳ ಸಂಕೇತವೇ ಆಗಿದೆ. ಈ ಎಲ್ಲಾ ವಿಕಾರಗಳನ್ನು ದಹಿಸಿ ಕಾಮಾದಿ ಮೇಲೆ ಹಿಡಿತ ಸಾಧಿಸಿ

ಜಿತೇಂದ್ರಿಯನಾಗಿರು ಎಂದು ಹೇಳುವುದಕ್ಕಾಗಿ; ಏಡ್ಸ್ ರೋಗದ ಪ್ರಚಾರಕ್ಕೆ ಬರುವ ಗೊಂಬೆಯಂತೆ ಬೂದಗಾಮ ಬಂದು ನೀತಿ ಬೋಧಿಸಿ ಹೋಗುತ್ತಾನೆ. ಅರ್ಥಾತ್ ಎಂದೇ ರಾತ್ರಿ ಆ ನನ್ನ ಬೂದಗಾಮನನ್ನು ಅವನ ಸುತ್ತಲೂ ಕಟ್ಟಿಗೆಗಳನ್ನಿಟ್ಟು ರತಿ ಮತ್ತು ಕಾಮದ ಮೂರ್ತಿಗಳನ್ನು ಅದರಲ್ಲಿಟ್ಟು ಸುಟ್ಟು ಬಿಡುತ್ತಾರೆ. ಕಟ್ಟಿಗೆಯಲ್ಲಿ ನಿರ್ಮಿಸಿ ಬಣ್ಣಗಳಿಂದ ಅಲಂಕರಿಸಿದ ಸುಂದರ ಮೂರ್ತಿಗಳನ್ನು ಸುರಕ್ಷಿತವಾಗಿ ತೆಗೆದಿಡುತ್ತಾರೆ. ಇದೇ ಹುಣ್ಣಿಮೆಯಂದೇ ಪ್ರತಿ ಕುಟುಂಬದವರು ತಮ್ಮ ತಮ್ಮ ಮನೆಗಳೆದುರಿಗೆ ಕುಳ್ಳನ್ನು ಒಟ್ಟಿ ಅದರ ಮಧ್ಯದಲ್ಲಿ ಬಂದು ದಂಡಿಗೆ ಧನುಶ್ಯಾಧಾರಿಯಾದ ಮನ್ಮಥ ಚಿತ್ರವನ್ನು ಸಿಗಿಸಿ ಉರಿ ಹಚ್ಚುತ್ತಾ ಕಾಮನ ದಹನ ಮಾಡಿ ಆ ಬೆಂಕಿಯಲ್ಲಿ ಹೋಳಿಗೆ ಬೆಚ್ಚನೆ ಮಾಡಿ ಎಲ್ಲರಿಗೂ ಹಂಚುತ್ತಾರೆ.

ಸಾರ್ವಜನಿಕ ಕಾಮನನ್ನು ಸುಟ್ಟ ಬೆಂಕಿಯನ್ನು ಮನೆಗೆ ತಂದು ಅದರಲ್ಲಿ ಕಡಲೆಗಳನ್ನು ಸುಟ್ಟು ಮನೆಮಂದಿ ಎಲ್ಲ ತಿನ್ನುತ್ತಾರೆ. ಅದೇ ಬೆಂಕಿಯಿಂದ ದೀಪ ಒಲೆ ಹೊತ್ತಿಸುತ್ತಾರೆ. ಪವಿತ್ರ ಹಾಗೂ ಆನಂದದಾಯಕ ಜೀವನ ಸಾಗಿಸಲು ಆ ಅಗ್ನಿ ಉಪಯೋಗವಾಗುತ್ತದೆ.

ಹೋಳಿ ಹುಣ್ಣಿಮೆ ಮರುದಿವಸ ನಡೆಯುವ ಬಣ್ಣದಾಟ ಅತೀ ಆನಂದದಾಯಕವಾಗಿರುತ್ತದೆ. ಅನೇಕ ಹಲಗೆಗಳನ್ನು ಹೆಗಲಿಗೆ ಏರಿಸಿ, ಎಲ್ಲರೂ ತಮ್ಮ ಬೇಧ ಭಾವಗಳನ್ನು ಮರೆತು ಒಬ್ಬರಿಗೊಬ್ಬರು ಬಣ್ಣ ಹಚ್ಚುತ್ತಾ, ಹುಡಿ ಬಣ್ಣಗಳನ್ನು ಎರಚುತ್ತಾ, ಹೋಳಿ ಹಾಡುಗಳನ್ನು ಹಾಡುತ್ತಾ ಕುಣಿದಾಡಿ ಹೋಳಿಗೆ ಎಂಬ ಸಿಹಿ ಊಟ ಮಾಡುತ್ತಾರೆ.

ಸಂಜೆ ಬಣ್ಣದಾಟದ ಮುಕ್ತಾಯ ಹೆಣಗಳ ಸೋಗಿನಿಂದ ಮುಗಿಯುತ್ತದೆ. ಈ ಆನಂದ ಜೀವನದ ಕೊನೆಯ ಘಳಿಗೆ ಸಾವೆಂಬುದೊಂದಿದೆ. ಅದನ್ನರಿತು ನೀನು ಜೀವನ ಮಾಡು ಎಂಬುದರ ಸಂಕೇತವಾಗಿಯು ಹಾಗೂ ಸಾವಿಗೆ ಹೆದರದೆ ಒಳ್ಳೆಯ ವ್ಯಕ್ತಿಯಾಗಿ ನೀ ಬಾಳೆಂದು ಆದೇಶಗಳನ್ನು ಕೊಡಲು ಅನೇಕ ಹೆಣಗಳು ಬರುತ್ತವೆ.

ಭೂಮಂಡಲವೇ ಒಂದು ರಂಗಮಂಚವಾಗಿ ಜನರೆಲ್ಲಾ ಪಾತ್ರಧಾರಿಗಳಾದಂತೆ ಭಾಸವಾಗುತ್ತದೆ. ಪುರುಷರು, ಸ್ತ್ರೀಯರ ವೇಷ ಧರಿಸಿ ಸಾವಿನ ದು:ಖದ ಘಳಿಗೆಗಳನ್ನು ದಾರಿಯುದ್ದಕ್ಕೂ ಪ್ರದರ್ಶಿಸುತ್ತಾ ಜನರನ್ನು ಹಾಸ್ಯ ಆನಂದದಲ್ಲಿ ಮುಳುಗಿಸಿ ಜೀವನದ ಅಂತಿಮಯಾತ್ರೆಯ ನೆನಪನ್ನು ತಂದು ಕೊಡುತ್ತಾರೆ.

ಹೋಳಿ ಹಬ್ಬ ನಮ್ಮ ಭವ್ಯ ಭಾರತದ ಸಾಂಸ್ಕೃತಿಕ ವೈಭವದ ಹಾಗೂ ಆಧ್ಯಾತ್ಮ ದರ್ಶನದ ಪ್ರತೀಕವಾಗಿದೆ. ಹೋಳಿ ಹಬ್ಬ ಜಾತಿ ಭೇದಗಳನ್ನು ಮರೆಯಿಸುವ, ಮಧುರ ಬಾಂಧವ್ಯವನ್ನು ಬೆಳೆಯಿಸುವ ಪವಿತ್ರ ಹಬ್ಬ ಇದಾಗಿದೆ. ಆಧುನಿಕತೆಯ ಆಕ್ರಮಣದಿಂದ ಇದನ್ನು ಕಾಪಾಡಿಕೊಂಡು ಹೋಗುವಂತಾಗಬೇಕು.

***

ಶುಭವಾಗಲಿ

ಸ್ವಭಾವ ಸಹಜ ಮನಸ್ಸು, ತನ್ನ ಮುಗ್ಧ ಭೂಮಿಕೆಯಲ್ಲಿ ಹಲವಾರು ಸುಂದರ ಚಿತ್ತಾರಗಳನ್ನು ನಿರಂತರ ಹಾಸುಹೊಕ್ಕಾಗಿ ನೇಯ್ದುಕೊಳ್ಳುತ್ತಿರುತ್ತದೆ ; ಅಮೂರ್ತವಾದ ಇಂಥ ಕಲ್ಪನೆಯನ್ನು ತಾನಿಚ್ಚಿಸಿದ ವಸ್ತುವಿನ ಅಥವಾ ಆವರಣದಲ್ಲಿ ಮೂರ್ತರೂಪಕ್ಕೆ ತರಲು ಸದಾ ಪ್ರಯತ್ನಶೀಲವಾಗಿರುತ್ತದೆ. ಆಸ್ಪದ ದೊರೆತ ತಕ್ಷಣವೇ ಅಭಿವ್ಯಕ್ತಿಗೊಳಿಸಿ ಹಗುರಗೊಳ್ಳುತ್ತದೆ, ಆನಂದಗೊಳ್ಳುತ್ತದೆ.

ಜನಪದ ಮನಸ್ಸು ಇದಕ್ಕಿಂತ ಭಿನ್ನವೇನಲ್ಲ ತನ್ನೆಲ್ಲ ಸುಂದರ ಕಲ್ಪನೆಗಳನ್ನು, ಭಿತ್ತಿಚಿತ್ರಗಳಾಗಿ, ಕಲಾಕೃತಿಗಳಾಗಿ, ಕಸೂತಿ ಕಲೆಯಾಗಿ ಕಡೆದು ನಿಲ್ಲಿಸುತ್ತದೆ.

ಕುಸುರಿ ಕೆಲಸದ ಬಾಗಿಲು ವಾಡಗಳು, ಗಾಜಿನ ಚಿತ್ತಾರಗಳು, ಚಂದ್ರಕಾಳಿ ಸೀರೆ, ಶೆಟಿಗೆವ್ವ ಪೂಜೆ, ಒಂದೇ ಎರಡೆ, ಜನಪದರದೇ ಒಂದು ಲೋಕ ಆ ಸುಂದರ ಲೋಕದ ದರ್ಶನ ನೀಡುವುದು ಈ ಕೃತಿಯ ಆಶಯವಾಗಿದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು